ಗುರುವಾರ, ನವೆಂಬರ್ 28, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 329 | ಪುಟ 14
www.prajavani.net
prajavani.net prajavani prajavani prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸ್ಪರ್ಧಾ ವಾಣಿ
ಪರಿಶಿಷ್ಟ ಪಂಗಡಗಳ ರಾಷ್ಟ್ರೀಯ ಆಯೋಗದ ಕುರಿತ ಮಾಹಿತಿ

ಕರ್ನಾಟಕ ಚಿನ್ನದ ಹೊಳಪು
'ಮೀಸಲಾತಿಗಾಗಿ ಮತಾಂತರ: ವಂಚನೆ' 13
ಪೋಡಿಗೆ ಸಾಕು ಮೂರೇ ದಾಖಲೆ 8

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
80,234	24,274	₹79,980 (ಬೆಂಗಳೂರು)	₹ 94,500 (ಬೆಂಗಳೂರು)	84.40

ಬಿಜೆಪಿ ನೇತೃತ್ವದ ಸರ್ಕಾರದಲ್ಲಿ 2,001, ಕಾಂಗ್ರೆಸ್ ಅವಧಿಯಲ್ಲಿ 1,404

ವಕ್ಫ್ ಆಸ್ತಿ: ನೋಟಿಸ್ ಸರಮಾಲೆ

• ಜಯಸಿಂಹ ಆರ್.

ಬೆಂಗಳೂರು: ವಕ್ಫ್ ಆಸ್ತಿಗಳ ಒತ್ತುವರಿ ತೆರವು ಮತ್ತು ಮರುವಶಕ್ಕೆ ಸಂಬಂಧಿಸಿದಂತೆ 2008ರಿಂದ 2024ರವರೆಗೆ ರಾಜ್ಯದಾದ್ಯಂತ ಒಟ್ಟು 3,519 ರೈತರು ಮತ್ತು ಭೂಮಾಲೀಕರಿಗೆ ನೋಟಿಸ್ ನೀಡಲಾಗಿದೆ. ಇದರಲ್ಲಿ ಅತಿಹೆಚ್ಚು 2,001 ನೋಟಿಸ್‌ಗಳನ್ನು ಬಿಜೆಪಿ ನೇತೃತ್ವದ ಸರ್ಕಾರದ ಅವಧಿಯಲ್ಲೇ ನೀಡಲಾಗಿದೆ. ಕಾಂಗ್ರೆಸ್ ನೇತೃತ್ವದ ಸರ್ಕಾರದ ಅವಧಿಯಲ್ಲಿ ಈವರೆಗೆ 1,404 ನೋಟಿಸ್‌ಗಳನ್ನು ನೀಡಲಾಗಿದೆ.

ಬಿ.ಎಸ್.ಯಡಿಯೂರಪ್ಪ ನೇತೃತ್ವದಲ್ಲಿ ಬಿಜೆಪಿ 2008ರಲ್ಲಿ ಅಧಿಕಾರಕ್ಕೆ ಬಂದಿತ್ತು. ರಚನೆಯಾದ ಕೆಲವೇ ದಿನಗಳಲ್ಲಿ ವಕ್ಫ್ ಆಸ್ತಿ ಅಕ್ರಮ ಪರಭಾರೆ ಮತ್ತು ಒತ್ತುವರಿ ತೆರವು ಕಾರ್ಯಾಚರಣೆ ಆರಂಭಿಸಿದ್ದ ಸರ್ಕಾರ, ನೋಟಿಸ್ ನೀಡುವ ಪ್ರಕ್ರಿಯೆಯನ್ನು ಮುಖ್ಯಮಂತ್ರಿಯವರ ತವರು ಜಿಲ್ಲೆ ಶಿವಮೊಗ್ಗದಿಂದಲೇ ಆರಂಭಿಸಿತ್ತು.

ವಕ್ಫ್ ಆಸ್ತಿಗಳ ಅಕ್ರಮ ಪರಭಾರೆ ಮತ್ತು ಒತ್ತುವರಿಗೆ ಸಂಬಂಧಿಸಿದಂತೆ ಅನ್ವರ್ ಮಾಣಿಪ್ಪಾಡಿ ಸಮಿತಿಯ ವರದಿ ಸಲ್ಲಿಕೆಯಾದ ನಂತರ ಈ ಪ್ರಕ್ರಿಯೆಯನ್ನು ಚುರುಕುಗೊಳಿಸಿತ್ತು.

2013ರ ಮೇನಲ್ಲಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಬಂದ ನಂತರ ನೋಟಿಸ್ ನೀಡುವ ಪ್ರಕ್ರಿಯೆ ನಿಂತಿತ್ತು.

9ನೇ ಪುಟ ನೋಡಿ

ಯಾವ ಜಿಲ್ಲೆಗೆ, ಯಾರಿಂದ ಎಷ್ಟು ನೋಟಿಸ್...



ವಕ್ಫ್‌ಗೆ ಒತ್ತುವರಿ ತೆರವು ಅಧಿಕಾರ: ರಿಜಿಜು

ಕಿರಣ್ ರಿಜಿಜು

ನವದೆಹಲಿ: ಕರ್ನಾಟಕದ 869 ಸೇರಿದಂತೆ ದೇಶದ 58,929 ವಕ್ಫ್ ಆಸ್ತಿಗಳು ಒತ್ತುವರಿಯಾಗಿವೆ ಎಂದು ಕೇಂದ್ರ ಸರ್ಕಾರವು ಲೋಕಸಭೆಗೆ ಮಾಹಿತಿ ನೀಡಿದೆ.

ಹಾವೇರಿ ಸಂಸದ ಬಸವರಾಜ ಬೊಮ್ಮಾಯಿ ಬುಧವಾರ ಕೇಳಿರುವ ಪ್ರಶ್ನೆಗೆ ಲಿಖಿತ ಉತ್ತರ ನೀಡಿರುವ ಅಲ್ಪಸಂಖ್ಯಾತ ಕಲ್ಯಾಣ ಸಚಿವ ಕಿರಣ್ ರಿಜಿಜು, 'ಒತ್ತುವರಿ ಬಗ್ಗೆ ರಾಜ್ಯ ವಕ್ಫ್ ಮಂಡಳಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರಿಗೆ ಕ್ರಮ ಕೈಗೊಳ್ಳುವ ಅಧಿಕಾರ ಇದೆ. ಒತ್ತುವರಿ ಬಗ್ಗೆ ದೂರುಗಳು ಬಂದರೆ ಕೇಂದ್ರ ಸರ್ಕಾರವು ಅಗತ್ಯ ಕ್ರಮ ಕೈಗೊಳ್ಳುವಂತೆ ಸಂಬಂಧಿತ ರಾಜ್ಯ ಸರ್ಕಾರಗಳಿಗೆ ನಿರ್ದೇಶನ ನೀಡುತ್ತದೆ' ಎಂದು ತಿಳಿಸಿದ್ದಾರೆ.

ವಕ್ಫ್ ಕಾಯ್ದೆಯ ಸೆಕ್ಷನ್ 54 ಮತ್ತು 55ರ ಪ್ರಕಾರ, ರಾಜ್ಯ ವಕ್ಫ್ ಮಂಡಳಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯು ವಕ್ಫ್ ಆಸ್ತಿಗಳ ಅನಧಿಕೃತ ಒತ್ತುವರಿ ಮತ್ತು ಅತಿಕ್ರಮಣದ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವ ಅಧಿಕಾರ ಹೊಂದಿದ್ದಾರೆ ಎಂದು ರಿಜಿಜು ತಿಳಿಸಿದ್ದಾರೆ.

ಕೇಂದ್ರ ಸರ್ಕಾರವು ವಕ್ಫ್ ಕಾಯ್ದೆಯ ಸೆಕ್ಷನ್ 56ರ ಅಡಿಯಲ್ಲಿ ವಕ್ಫ್ ಆಸ್ತಿಗಳ ಲೀಸ್ ರೂಲ್ಸ್ 2014 ಅನ್ನು ರೂಪಿಸಿದೆ. ಇದು ವಕ್ಫ್ ಆಸ್ತಿಗಳನ್ನು ಗುತ್ತಿಗೆಗೆ ನೀಡಲು ರಾಜ್ಯ ವಕ್ಫ್ ಮಂಡಳಿಗಳಿಗೆ ಅಧಿಕಾರ ನೀಡುತ್ತದೆ ಎಂದು ಅವರು ಹೇಳಿದ್ದಾರೆ.

ಚಂಡಮಾರುತ ಬಂಗಾಳಕೊಲ್ಲಿಯ ನೈರುತ್ಯ ಭಾಗದಲ್ಲಿ ಉಂಟಾಗಿರುವ ವಾಯುಭಾರ ಕುಸಿತದಿಂದ ಪುದುಚೇರಿಯ ಕಡಲ ತೀರದಲ್ಲಿ ಅಲೆಗಳ ಅಬ್ಬರ ಹೆಚ್ಚಿದ್ದು ಬುಧವಾರ ಸಮುದ್ರ ಕಂಡ ಬಗೆ ಇದು. ಚಂಡಮಾರುತ 'ಫೆಂಗಲ್'ದ ವೇಗ ಹೆಚ್ಚಿದ್ದು, ಪುದುಚೇರಿ ಅಭಿಮುಖವಾಗಿ ಧಾವಿಸುತ್ತಿದೆ –ಪಿಟಿಐ ಚಿತ್ರ

ಸಂಪುಟ ಪುನಾರಚನೆ ಚರ್ಚೆ ಮುನ್ನೆಲೆಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರದ ಸಚಿವ ಸಂಪುಟ ಪುನಾರಚನೆಯ ಚರ್ಚೆ ಮತ್ತೆ ಮುನ್ನೆಲೆಗೆ ಬಂದಿದೆ.

ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು, ತಮ್ಮ ಪಕ್ಷದ ನಾಯಕರು ಅಧಿಕಾರ ತ್ಯಾಗ ಮಾಡಿದ ವಿಷಯ ಪ್ರಸ್ತಾಪಿಸಿ, 'ಸಚಿವರು ತ್ಯಾಗಕ್ಕೆ ಸಿದ್ಧರಾಗಬೇಕು' ಎಂದು ಪ್ರಾಸಂಗಿಕವಾಗಿ ಮಂಗಳವಾರ ಹೇಳಿದ್ದರು.

ಅದಕ್ಕೆ ಪ್ರತಿಕ್ರಿಯೆ ಎಂಬಂತೆ ಕೆಲವರು ಸಚಿವರು ಸಂಪುಟ ಪುನಾರಚನೆ ಅಥವಾ ವಿಸ್ತರಣೆ ಕುರಿತು ಬುಧವಾರ ಮಾತನಾಡಿದ್ದಾರೆ. 'ತ್ಯಾಗ'ಕ್ಕೂ ಸಿದ್ಧ ಎಂದೂ ಹೇಳಿದ್ದಾರೆ.

ಲೋಕೋಪಯೋಗಿ ಇಲಾಖೆ ಸಚಿವ ಸತೀಶ ಜಾರಕಿಹೊಳಿ, 'ಸಚಿವ ಸಂಪುಟ ಪುನಾರಚನೆಯ ಕುರಿತೂ ಮಾತುಗಳಿವೆ. ದೆಹಲಿಯಿಂದ ಪಟ್ಟಿ ಬಂದರೆ ಎಲ್ಲರೂ ಬದಲಾಗಬೇಕು. ಪಟ್ಟಿಯಲ್ಲಿ ಹೆಸರು ಇಲ್ಲದಿದ್ದರೆ ಮನೆ ಖಾಲಿ ಮಾಡಿಕೊಂಡು ಹೋಗಬೇಕು. ಕೆಲವರನ್ನು ಸಚಿವ ಸ್ಥಾನದಿಂದ ತೆಗೆಯಬಹುದು. ಇನ್ನೂ ಕೆಲವರ ಖಾತೆಯನ್ನು ಬದಲಿಸುತ್ತಾರೆ ಎಂಬ ಮಾಹಿತಿ ಇದೆ. ನಾನು ಯಾವ ಖಾತೆಯನ್ನೂ ಕೇಳಿಲ್ಲ. ಖಾತೆ ಬದಲಿಸುವುದು ಬಿಡುವುದು ವರಿಷ್ಠರಿಗೆ ಬಿಟ್ಟ ವಿಚಾರ. ಎಲ್ಲದಕ್ಕೂ ಸಿದ್ಧ' ಎಂದರು.

'ಸಂಪುಟ ಪುನಾರಚನೆ ಮಾಡಬಹುದು, ಮಾಡದೇ ಇರಲೂಬಹುದು. ಎಲ್ಲವೂ ಹೈಕಮಾಂಡ್ ನಿರ್ಧಾರಕ್ಕೆ ಬಿಟ್ಟಿದ್ದು. ಸಿದ್ದರಾಮಯ್ಯ ಅವರಿಗೆ ಎರಡು ವರ್ಷ ಅವಧಿ ಎಂದು ಯಾರೂ ಹೇಳಿಲ್ಲ. ಅವರಿಗೆ ಎಲ್ಲ ಶಾಸಕರ ಬೆಂಬಲವಿದೆ' ಎಂದು ಹೇಳಿದರು

8ನೇ ಪುಟ ನೋಡಿ

ಸರ್ಕಾರಿ ನೌಕರರಿಗೆ ಶೇ 2.25 ತುಟ್ಟಿಭತ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರಿ ನೌಕರರು ಹಾಗೂ ನಿವೃತ್ತರ ತುಟ್ಟಿಭತ್ಯೆಯನ್ನು ಆಗಸ್ಟ್ 1ರಿಂದ ಪೂರ್ವಾನ್ವಯವಾಗುವಂತೆ ಶೇ 2.25ರಷ್ಟು ಹೆಚ್ಚಳ ಮಾಡಲಾಗಿದೆ.

ನೌಕರರು ತಮ್ಮ ಮೂಲ ವೇತನದ ಶೇ 8.50ರಷ್ಟು ತುಟ್ಟಿಭತ್ಯೆ ಪಡೆಯುತ್ತಿದ್ದು, ಆರ್ಥಿಕ ಇಲಾಖೆಯ ಹೊಸ ಆದೇಶದಿಂದಾಗಿ ಒಟ್ಟು ತುಟ್ಟಿಭತ್ಯೆ ಪ್ರಮಾಣ ಶೇ 10.75ಕ್ಕೆ ಏರಿಕೆಯಾಗಿದೆ.

ರಾಜ್ಯದ ಸುಮಾರು 5.20 ಲಕ್ಷ ಸರ್ಕಾರಿ ನೌಕರರು, ನಿಗಮ, ಮಂಡಳಿ, ಅನುದಾನಿತ ಸಂಸ್ಥೆಗಳ 3 ಲಕ್ಷ ಸಿಬ್ಬಂದಿ, 4.50 ಲಕ್ಷ ನಿವೃತ್ತ ನೌಕರರಿಗೆ ಇದು ಅನ್ವಯವಾಗಲಿದೆ. ಏಳನೇ ವೇತನ ಆಯೋಗದ ಶಿಫಾರಸಿನಂತೆ ಇದೇ ಆ.1ರಿಂದ ಪರಿಷ್ಕೃತ ವೇತನ ಶ್ರೇಣಿ ಜಾರಿ ಗೊಳಿಸಲಾಗಿತ್ತು. ಶೇಕಡ 31ರಷ್ಟು ತುಟ್ಟಿಭತ್ಯೆಯನ್ನು ಮೂಲವೇತನದಲ್ಲಿ ವಿಲೀನಗೊಳಿಸಿ,ಶೇ27.50ರಷ್ಟು ಫಿಟ್‌ಮೆಂಟ್ ನೀಡಲಾಗಿತ್ತು.

300ಕ್ಕೂ ಅಧಿಕ ಮಂದಿಯ ಜೀವ ಉಳಿಸಿದ 'ಟೆನೆಕ್ಟ್ ಪ್ಲಸ್'

ಬೆಳಕಾದ 'ಹೃದಯ ಜ್ಯೋತಿ'

ಚಿಕಿತ್ಸೆ ಹಾಗೂ ಆಸ್ಪತ್ರೆಗಳ ವಿವರ

5,989	3,738	86	10
ಯೋಜನೆಯಡಿ ಪತ್ತೆಯಾದ ತೀವ್ರ ಹೃದಯಾಘಾತ ಪ್ರಕರಣ	ಆ್ಯಂಜಿಯೋಪ್ಲಾಸ್ಟಿ, ಸ್ಟೆಂಟ್ ಅಳವಡಿಕೆಯಂತಹ ಚಿಕಿತ್ಸೆ	ಚಿಕಿತ್ಸೆಗೆ ಗುರುತಿಸಲಾದ ಸ್ಪೋಕ್ ಆಸ್ಪತ್ರೆಗಳು	ತೃತೀಯ ಹಂತದ ಚಿಕಿತ್ಸೆ ಒದಗಿಸುವ ಆಸ್ಪತ್ರೆಗಳು

• ವರುಣ ಹೆಗಡೆ

ಬೆಂಗಳೂರು: ತೀವ್ರ ಹೃದಯಾಘಾತಕ್ಕೆ ಒಳಗಾದವರಿಗೆ 'ಪುನೀತ್ ರಾಜ್‌ಕುಮಾರ್ ಹೃದಯ ಜ್ಯೋತಿ ಯೋಜನೆ'ಯಡಿ ದುಬಾರಿ ಮೊತ್ತದ ಚುಚ್ಚುಮದ್ದನ್ನು ಆರೋಗ್ಯ ಇಲಾಖೆ ಉಚಿತವಾಗಿ ಒದಗಿಸುತ್ತಿದ್ದು, ಕಳೆದ ಒಂದೇ ತಿಂಗಳಲ್ಲಿ 'ಟೆನೆಕ್ಟ್ ಪ್ಲಸ್' ಚುಚ್ಚುಮದ್ದಿನ ನೆರವಿನಿಂದ 348 ಮಂದಿ ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಹೃದಯಾಘಾತದಿಂದ ನಿಧನರಾಗುವವರ ಸಂಖ್ಯೆ ಇತ್ತೀಚೆಗೆ ಹೆಚ್ಚಳವಾಗುತ್ತಿದೆ. ಆರೋಗ್ಯವಂತ ವ್ಯಕ್ತಿಗಳು ಸಹ 30-40 ವರ್ಷಗಳ ವಯಸ್ಸಿನ ಆಸುಪಾಸಿನಲ್ಲಿಯೇ ಜೀವ ಕಳೆದುಕೊಳ್ಳುತ್ತಿರುವ ಪ್ರಕರಣಗಳು ವರದಿಯಾಗುತ್ತಿವೆ. ವ್ಯಕ್ತಿಗೆ ಹೃದಯಾಘಾತ ಸಂಭವಿಸಿದ ನಂತರದ ಒಂದು ಗಂಟೆ ಜೀವ ಉಳಿಸುವ ಅಮೂಲ್ಯ ಸಮಯವಾಗಿರುತ್ತದೆ. ಆದ್ದರಿಂದ ಈ ಅವಧಿಯಲ್ಲಿ ತಾಲ್ಲೂಕು ಮಟ್ಟದಲ್ಲಿಯೇ ಚಿಕಿತ್ಸೆ ಒದಗಿಸಲು ಪುನೀತ್ ರಾಜ್‌ಕುಮಾರ್ ಅವರ ಸ್ಮರಣಾರ್ಥ 2023ರ ಮಾರ್ಚ್‌ನಲ್ಲಿ ಮೊದಲ ಹಂತದಲ್ಲಿ ಯೋಜನೆಯನ್ನು ಪ್ರಾರಂಭಿಸಲಾಗಿತ್ತು. 2024ರ ಮಾರ್ಚ್‌ನಲ್ಲಿ ಎರಡನೇ ಹಂತದಲ್ಲಿ ರಾಜ್ಯದಾದ್ಯಂತ ಯೋಜನೆಯನ್ನು ವಿಸ್ತರಿಸಲಾಗಿದೆ. ಆರೋಗ್ಯ ಇಲಾಖೆ ಮಾಹಿತಿ ಪ್ರಕಾರ ಈ ಮೊದಲು ರಾಜ್ಯದಲ್ಲಿ ಪ್ರತಿ ವರ್ಷ ಸುಮಾರು 96 ಸಾವಿರ ಮಂದಿ ಹೃದಯಾಘಾತದಿಂದ ಮೃತಪಡುತ್ತಿದ್ದಾರೆ.

> **ಹೃದಯಾಘಾತಕ್ಕೆ ಒಳಗಾದವರಿಗೆ ತ್ವರಿತ ಚಿಕಿತ್ಸೆ ಒದಗಿಸುವ ಉದ್ದೇಶದಿಂದ ಈ ಯೋಜನೆ ಪ್ರಾರಂಭಿಸಿದ್ದೇವೆ. ಇದರಿಂದ ಹಲವರ ಜೀವ ಉಳಿಸಲು ಸಾಧ್ಯವಾಗಿದೆ**
> **ದಿನೇಶ್ ಗುಂಡೂರಾವ್,** ಆರೋಗ್ಯ ಸಚಿವ

9ನೇ ಪುಟ ನೋಡಿ

ಬಿಜೆಪಿಗೆ 'ಮಹಾ' ಸಿ.ಎಂ ಪಟ್ಟ

ಮೋದಿ, ಶಾ ನಿರ್ಧಾರಕ್ಕೆ ಬದ್ಧ –ಶಿಂದೆ • ನ.30 ರಂದು ಪ್ರಮಾಣ ಸಾಧ್ಯತೆ

ಪ್ರಜಾವಾಣಿ ವಾರ್ತೆ/ಪಿಟಿಐ

ಮುಂಬೈ: ಮಹಾರಾಷ್ಟ್ರದ ನೂತನ ಮುಖ್ಯಮಂತ್ರಿ ಪಟ್ಟ ಬಿಜೆಪಿ ಪಾಲಾಗುವುದು ಬಹುತೇಕ ಖಚಿತವಾಗಿದೆ.

ಬಿಜೆಪಿ ನಾಯಕ ದೇವೇಂದ್ರ ಫಡಣವೀಸ್, ಶಿವಸೇನಾದ ಏಕನಾಥ ಶಿಂದೆ ಹಾಗೂ ಎನ್‌ಸಿಪಿಯ ಅಜಿತ್ ಪವಾರ್ ಅವರು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ನವದೆಹಲಿಯಲ್ಲಿ ಗುರುವಾರ ಭೇಟಿ ಮಾಡಲಿದ್ದು, ಮುಖ್ಯಮಂತ್ರಿ ಅಭ್ಯರ್ಥಿ ಕುರಿತು ಅಂತಿಮ ನಿರ್ಧಾರ ಹೊರಬೀಳಲಿದೆ.

ಒಬ್ಬರು ಮುಖ್ಯಮಂತ್ರಿ ಹಾಗೂ ಇಬ್ಬರು ಉಪಮುಖ್ಯಮಂತ್ರಿ ಸೂತ್ರದಡಿ ಅಧಿಕಾರ ಹಂಚಿಕೆಯಾಗುವ ನಿರೀಕ್ಷೆ ಇದೆ.

ಇನ್ನೊಂದೆಡೆ, 'ನೂತನ ಸರ್ಕಾರದ ಪ್ರಮಾಣ ವಚನ ಸಮಾರಂಭ ನವೆಂಬರ್ 30 ಅಥವಾ ಡಿಸೆಂಬರ್ 1ರಂದು ನಡೆಯುವ ಸಾಧ್ಯತೆ ಇದೆ' ಎಂದು ಅಜಿತ್ ಪವಾರ್ ಬುಧವಾರ ಹೇಳಿದ್ದಾರೆ.

ಅಡ್ಡಿ ನಿವಾರಣೆ: ಮತ್ತೊಂದು ಮಹತ್ವದ ಬೆಳವಣಿಗೆಯಲ್ಲಿ, 'ಮಹಾರಾಷ್ಟ್ರದ ಮುಂದಿನ ಮುಖ್ಯಮಂತ್ರಿ ಯಾರಾಗಬೇಕು ಎಂಬ ಕುರಿತು ಪ್ರಧಾನಿ ನರೇಂದ್ರ ಮೋದಿ ಹಾಗೂ ಕೇಂದ್ರ ಗೃಹ ಸಚಿವ ಅಮಿತ್ ಶಾ ಕೈಗೊಳ್ಳುವ ನಿರ್ಧಾರಕ್ಕೆ ನಾನು ಬದ್ಧನಾಗಿರುತ್ತೇನೆ' ಎಂದು ಶಿವಸೇನಾ ಮುಖ್ಯಸ್ಥ ಏಕನಾಥ ಶಿಂದೆ ಘೋಷಿಸಿದ್ದಾರೆ.

> **ಮುಂದಿನ ಮುಖ್ಯಮಂತ್ರಿ ಕುರಿತು ಬಿಜೆಪಿಯ ನಿರ್ಧಾರಕ್ಕೆ ಶಿವಸೇನಾ ಸಂಪೂರ್ಣ ಬೆಂಬಲ ನೀಡಲಿದೆ. ನಮ್ಮಿಂದ 'ಸ್ಪೀಡ್ ಬ್ರೇಕರ್' ಇರುವುದಿಲ್ಲ**
> **ಏಕನಾಥ ಶಿಂದೆ,** ಮಹಾರಾಷ್ಟ್ರದ ಉಸ್ತುವಾರಿ ಮುಖ್ಯಮಂತ್ರಿ

> **ಸಿ.ಎಂ ಅಭ್ಯರ್ಥಿ ವಿಚಾರವಾಗಿ ಸೃಷ್ಟಿಯಾಗಿದ್ದ ಊಹಾಪೋಹಗಳಿಗೆ ಶಿಂದೆ ತೆರೆ ಎಳೆದಿದ್ದಾರೆ. ಈ ಕುರಿತು ಎನ್‌ಡಿಎ ನಾಯಕರು ತೀರ್ಮಾನ ತೆಗೆದುಕೊಳ್ಳುವರು**
> **ದೇವೇಂದ್ರ ಫಡಣವೀಸ್**, ಬಿಜೆಪಿ ನಾಯಕ

ಪ್ರಮುಖ ಅಂಶಗಳು

- ಶಿಂದೆ ನಿರ್ಧಾರವನ್ನು ಬಿಜೆಪಿಯ ರಾಜ್ಯ ಘಟಕದ ಅಧ್ಯಕ್ಷ ಚಂದ್ರಶೇಖರ್ ಬಾವಂಕುಲೆ ಹಾಗೂ ನಾಯಕ ಸುಧೀರ್ ಮುಂಗಂಟಿವಾರ್ ಸ್ವಾಗತಿಸಿದ್ದಾರೆ
- ನೂತನ ಸಂಪುಟದಲ್ಲಿ ಉಪಮುಖ್ಯಮಂತ್ರಿಯಾಗುವುದಕ್ಕೆ ಶಿಂದೆ ಒಪ್ಪಿಗೆ ನೀಡಿದ್ದಾರೆ ಎಂದು ಮೂಲಗಳು ಹೇಳಿವೆ
- ಸರ್ಕಾರ ರಚನೆ ಪ್ರಕ್ರಿಯೆ ದೆಹಲಿಯಲ್ಲಿ ಗುರುವಾರ ಅಂತಿಮ ನಿರೀಕ್ಷೆ

8ನೇ ಪುಟ ನೋಡಿ

ಮಧ್ಯಪ್ರದೇಶ: ದಲಿತ ಯುವಕನಿಗೆ ಥಳಿಸಿ ಹತ್ಯೆ

ಶಿವಪುರಿ (ಮಧ್ಯಪ್ರದೇಶ) (ಪಿಟಿಐ): ಜಮೀನು ವ್ಯಾಜ್ಯಕ್ಕೆ ಸಂಬಂಧಿಸಿ, ದಲಿತ ಯುವಕನನ್ನು ಮಧ್ಯ ಪ್ರದೇಶದ ಶಿವಪುರಿ ಜಿಲ್ಲೆಯಲ್ಲಿ ಥಳಿಸಿ ಹತ್ಯೆ ಮಾಡಲಾಗಿದೆ.

ಮೃತ ಯುವಕನನ್ನು ನಾರದ್ ಜಾಟವ್ (30) ಎಂದು ಗುರುತಿಸಲಾಗಿದೆ. ಈ ಸಂಬಂಧ ಗ್ರಾಮದ ಸರಪಂಚ, ಆತನ ಹೆಂಡತಿ, ಮಕ್ಕಳು ಸೇರಿದಂತೆ 8 ಮಂದಿ ವಿರುದ್ಧ ಕೊಲೆ ಪ್ರಕರಣ ದಾಖಲಾಗಿದೆ. ಆರೋಪಿಗಳು ತಲೆ ಮರೆಸಿಕೊಂಡಿದ್ದು, ಪತ್ತೆಗೆ ಕಾರ್ಯಾಚರಣೆ ಆರಂಭಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಘಟನೆಯ ವಿವರ: ಶಿವಪುರಿ ಜಿಲ್ಲೆಯ ಇಂದರ್‌ಗಢ ಗ್ರಾಮದ ಸರಪಂಚ ಪದಂ ಧಾಕಡ್, ತಮ್ಮ ಹೋಟೆಲ್‌ಗೆ ಜಾಟವ್ ಅವರ ಜಮೀನಿನ ಮೂಲಕವೇ ರಸ್ತೆ ನಿರ್ಮಿಸಿಕೊಂಡಿದ್ದರು. ಇದನ್ನು ಜಾಟವ್ ಹಾಗೂ ಅವರ ಮಾವ ಪ್ರಶ್ನಿಸಿದ್ದರು. ನಂತರ, ಧಾಕಡ್ ಅವರ ಹೋಟೆಲ್‌ಗೆ ನೀರು ಸರಬರಾಜು ಮಾಡುತ್ತಿದ್ದ ಪೈಪ್ ಅನ್ನು ತುಂಡರಿಸಿದ್ದರು. ಇದರಿಂದ ಕುಪಿತರಾದ ಧಾಕಡ್, ಸಹಚರರೊಂದಿಗೆ ತೆರಳಿ ಜಾಟವ್ ಅವರಿಗೆ ದೊಣ್ಣೆಯಿಂದ ಥಳಿಸಿದ್ದಾರೆ ಎಂದು ಕೊತ್ವಾಲಿ ಠಾಣೆಯ ಪ್ರಭಾರ ಉಸ್ತುವಾರಿ ಕೃಪಾಲ್ ಸಿಂಗ್ ರಾಥೋಡ್ ತಿಳಿಸಿದ್ದಾರೆ. ಮಧ್ಯಪ್ರದೇಶದ ಮಾಜಿ ಮುಖ್ಯಮಂತ್ರಿ ಕಮಲ್‌ನಾಥ್ ಅವರು ಈ ಹತ್ಯೆಯನ್ನು ಖಂಡಿಸಿದ್ದಾರೆ.

'ಬಿಜೆಪಿ ಆಡಳಿತದಲ್ಲಿ ದಲಿತರು ಹಾಗೂ ಬುಡಕಟ್ಟು ಜನರ ಮೇಲೆ ದೌರ್ಜನ್ಯ ನಡೆಯುತ್ತಿರುವ ಪ್ರಕರಣಗಳು ಹೆಚ್ಚಾಗಿವೆ. ರಾಜ್ಯದಲ್ಲಿ ದಲಿತರ ಮೇಲೆ ಪ್ರತಿದಿನವೂ ದೌರ್ಜನ್ಯ ನಡೆಯುತ್ತಿವೆ' ಎಂದು ಆರೋಪಿಸಿದ್ದಾರೆ.

> **ದಲಿತ ಯುವಕನನ್ನು ಥಳಿಸಿ ಹತ್ಯೆ ಮಾಡಲಾಗಿದೆ. ಮಧ್ಯ ಪ್ರದೇಶದಲ್ಲಿ ದಲಿತರು ಸುರಕ್ಷಿತವಾಗಿಲ್ಲ ಎಂಬುದನ್ನು ಇದು ಮತ್ತೆ ರುಜುವಾತು ಮಾಡಿದೆ**
> **ಕಮಲ್‌ನಾಥ್** ಮಧ್ಯಪ್ರದೇಶ ಮಾಜಿ ಸಿ.ಎಂ

ಚಿನಕುರುಳಿ

ಪ್ರಕಾಶ್ ಶೆಟ್ಟಿ

ಕೃಷ್ಣದಾಸ್ ಬಂಧನ: ಬಾಂಗ್ಲಾದಲ್ಲಿ ಉದ್ವಿಗ್ನ ಸ್ಥಿತಿ 07

ಒಳಪುಟಗಳಲ್ಲಿ

ಬಾಲ್ಯ ವಿವಾಹ: ಪೋಷಕರನ್ನು ಹೊಣೆಯಾಗಿಸಿ 9
ಲೆಬನಾನ್‌ನಲ್ಲಿ ಇಸ್ರೇಲ್–ಹಿಜ್ಬುಲ್ಲಾ ಕದನ ವಿರಾಮ ಜಾರಿ 12
ತೊಗರಿ, ಉದ್ದು ದರ ಸ್ಥಿರ 12

‘ಕಡಲೆಕಾಯಿ ಪರಿಷೆ 3 ದಿನಕ್ಕೆ ಸೀಮಿತಗೊಳಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬಸವನಗುಡಿಯಲ್ಲಿ ನಡೆಯುತ್ತಿರುವ ಕಡಲೆಕಾಯಿ ಪರಿಷೆಯನ್ನು ಮೂರು ದಿನಕ್ಕೆ ಸೀಮಿತಗೊಳಿಸಬೇಕು’ ಎಂದು ಹೆರಿಟೇಜ್ ಬಸವನಗುಡಿ ರೆಸಿಡೆಂಟ್ಸ್ ವೆಲ್ಫೇರ್ ಫೋರಂನ ಪ್ರಧಾನ ಕಾರ್ಯದರ್ಶಿ ಗುರುಪ್ರಸಾದ್ ರೊಟ್ಟಿ ಅವರು ಪೊಲೀಸ್ ಕಮಿಷನರ್ ಅವರಿಗೆ ಪತ್ರ ಬರೆದಿದ್ದಾರೆ.

ಹಿಂದೆ ಮೂರು ದಿನಗಳಿಗೆ ಸೀಮಿತವಾಗಿ ಪರಿಷೆ ನಡೆಯುತ್ತಿತ್ತು. ಈ ವರ್ಷ ಐದು ದಿನ ಕಳೆದರೂ ಪರಿಷೆ ಮುಗಿಯುವ ಸೂಚನೆ ಕಾಣುತ್ತಿಲ್ಲ. ಪರಿಷೆಗೆ ಬಂದವರು ಅಲ್ಲಲ್ಲಿ ಕಸ ಹಾಕಿದ್ದು, ಸ್ಥಳೀಯರಿಗೆ ತೊಂದರೆಯಾಗುತ್ತಿದೆ. ಇಲ್ಲಿನ ನಿವಾಸಿಗಳು ಮತ್ತು ಹಿರಿಯ ನಾಗರಿಕರ ಹಿತದೃಷ್ಟಿಯಿಂದ ಕೂಡಲೇ ತ್ಯಾಜ್ಯ ವಿಲೇವಾರಿ ಮಾಡಬೇಕು ಎಂದು ಪೊಲೀಸ್ ಕಮಿಷನರ್ ಬಿ. ದಯಾನಂದ ಅವರಿಗೆ ಬರೆದ ಪತ್ರದಲ್ಲಿ ರೊಟ್ಟಿ ಮನವಿ ಮಾಡಿದ್ದಾರೆ.

ಪರಿಷೆಯಲ್ಲಿ ಉತ್ಪತ್ತಿಯಾಗುತ್ತಿರುವ ತ್ಯಾಜ್ಯವನ್ನು ಸರಿಯಾಗಿ ವಿಲೇವಾರಿ ಮಾಡುತ್ತಿಲ್ಲ. ಮನೆಗಳ ಮುಂದೆಯೇ ಮೂತ್ರ ವಿಸರ್ಜನೆಯನ್ನೂ ಮಾಡಲಾಗುತ್ತಿದೆ. ಇದರಿಂದ ಈ ಪ್ರದೇಶದಲ್ಲಿ ಸಾಂಕ್ರಾಮಿಕ ರೋಗಗಳು ಹರಡುವ ಅಪಾಯವಿದೆ ಎಂದು ದೂರಿದ್ದಾರೆ.

ಬಸವನಗುಡಿ ಕಡಲೆಕಾಯಿ ಪರಿಷೆ ನಡೆಯುವ ಸ್ಥಳದಲ್ಲಿ ಬಿದ್ದಿರುವ ತ್ಯಾಜ್ಯ

ಯಶವಂತಪುರ-ವಿಜಯಪುರ ವಿಶೇಷ ರೈಲು ಅವಧಿ ವಿಸ್ತರಣೆ

ಬೆಂಗಳೂರು: ಯಶವಂತಪುರ-ವಿಜಯಪುರ ನಿಲ್ದಾಣಗಳ ನಡುವೆ ಪ್ರತಿದಿನ ಸಂಚರಿಸುವ ವಿಶೇಷ ಎಕ್ಸ್‌ಪ್ರೆಸ್ ರೈಲುಗಳ ಅವಧಿಯನ್ನು ಆರು ತಿಂಗಳು ವಿಸ್ತರಣೆ ಮಾಡಲಾಗಿದೆ.

ಯಶವಂತಪುರ- ವಿಜಯಪುರ ಎಕ್ಸ್‌ಪ್ರೆಸ್ ವಿಶೇಷ ರೈಲುಗಳನ್ನು ಡಿಸೆಂಬರ್ 31ರವರೆಗೆ ಓಡಿಸಲು ಹಿಂದೆ ನಿರ್ಧರಿಸಲಾಗಿತ್ತು. ಅದನ್ನು 2025ರ ಜೂನ್ 30ರವರೆಗೆ ವಿಸ್ತರಿಸಲಾಗಿದೆ. ವಿಜಯಪುರ-ಯಶವಂತಪುರ ಎಕ್ಸ್‌ಪ್ರೆಸ್ ವಿಶೇಷ ರೈಲು ಸಂಚಾರ 2025ರ ಜನವರಿ 1ರವರೆಗೆ ನಿಗದಿಯಾಗಿತ್ತು. ಅದನ್ನು ಜುಲೈ 1ರವರೆಗೆ ವಿಸ್ತರಿಸಲಾಗಿದೆ ಎಂದು ನೈರುತ್ಯ ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ.

ಆರ್‌ಬಿಐ190 ರಸಪ್ರಶ್ನೆ ಸ್ಪರ್ಧೆಯಲ್ಲಿ 2ನೇ ಸ್ಥಾನ

ರಾಷ್ಟ್ರಮಟ್ಟಕ್ಕೆ ಪಿಇಎಸ್ ಆಯ್ಕೆ

ಬೆಂಗಳೂರು: ಭಾರತೀಯ ರಿಸರ್ವ್ ಬ್ಯಾಂಕ್ ಆಯೋಜಿಸಿರುವ ಆರ್‌ಬಿಐ190 ರಸಪ್ರಶ್ನೆಯಲ್ಲಿ ವಲಯಮಟ್ಟದಲ್ಲಿ ಪಿಇಎಸ್ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಎರಡನೇ ಸ್ಥಾನ ಪಡೆದು ರಾಷ್ಟ್ರಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ಕೊಚ್ಚಿಯಲ್ಲಿ ನಡೆದ ವಲಯಮಟ್ಟದ ಸ್ಪರ್ಧೆಯಲ್ಲಿ ಪಿಇಎಸ್ ವಿಶ್ವ ವಿದ್ಯಾಲಯದ ಎಲೆಕ್ಟ್ರಾನಿಕ್ ಸಿಟಿ ಕ್ಯಾಂಪಸ್‌ನ ಎ1 ಆ್ಯಂಡ್ ಎ01 ಎಂಜಿನಿಯರಿಂಗ್ 3ನೇ ಸೆಮಿಸ್ಟರ್‌ನ ಭಾರ್ಗವ ರಾಮ ಶರ್ಮಾ ಮತ್ತು ಕಂಪ್ಯೂಟರ್ ಸೈನ್ಸ್‌ನ ದಿವ್ಯಾಂಶ್ ಶರ್ಮಾ ಉತ್ತಮ ಸಾಧನೆ ತೋರಿ ₹ 4 ಲಕ್ಷ ಬಹುಮಾನ ಪಡೆದರು. ಡಿಸೆಂಬರ್ 6ರಂದು ಮುಂಬೈಯಲ್ಲಿ ನಡೆಯಲಿರುವ ಫೈನಲ್ ಸ್ಪರ್ಧೆಗೆ ಆಯ್ಕೆಯಾದರು.

ಆರ್‌ಬಿಐ190 ರಸಪ್ರಶ್ನೆ ಕಾರ್ಯಕ್ರಮದ ಪ್ರಾಥಮಿಕ ಸುತ್ತಿನಲ್ಲಿ 20,000 ತಂಡಗಳೊಂದಿಗೆ ಆನ್‌ಲೈನ್‌ನಲ್ಲಿ ಸ್ಪರ್ಧೆ ನಡೆಯಿತು. ಅದರಲ್ಲಿ 90 ಸ್ಪರ್ಧಿಗಳು ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿದ್ದರು. ಬೆಂಗಳೂರಿನಲ್ಲಿ ನಡೆದಿದ್ದ ರಾಜ್ಯಮಟ್ಟದ ಸ್ಪರ್ಧೆಯಲ್ಲಿ ಮೊದಲ ಸ್ಥಾನ ಪಡೆದಿದ್ದ ಭಾರ್ಗವ ಮತ್ತು ದಿವ್ಯಾಂಶ್ ₹ 2 ಲಕ್ಷ ಬಹುಮಾನ ಗೆದ್ದಿದ್ದರು. ವಲಯ ಮಟ್ಟಕ್ಕೆ ಆಯ್ಕೆಯಾಗಿದ್ದರು ಎಂದು ಪಿಇಎಸ್ ವಿಶ್ವವಿದ್ಯಾಲಯದ ಕುಲಾಧಿಪತಿ ಎಂ. ಆರ್. ದೊರೆಸ್ವಾಮಿ ತಿಳಿಸಿದ್ದಾರೆ.

ಭಾರತೀಯ ರಿಸರ್ವ್ ಬ್ಯಾಂಕ್ ಆಯೋಜಿಸಿರುವ ಆರ್‌ಬಿಐ190 ರಸಪ್ರಶ್ನೆಯಲ್ಲಿ ವಲಯಮಟ್ಟದಲ್ಲಿ ಪಿಇಎಸ್ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಾದ ಭಾರ್ಗವ ರಾಮ ಶರ್ಮಾ ಮತ್ತು ದಿವ್ಯಾಂಶ್ ಶರ್ಮಾ ದ್ವಿತೀಯ ಸ್ಥಾನ ಪಡೆದಿದ್ದು, ₹ 4 ಲಕ್ಷ ನಗದು ಬಹುಮಾನ ಪಡೆದರು

ವಿದ್ಯಾರ್ಥಿಗೆ ರ‍್ಯಾಗಿಂಗ್

ಸುರತ್ಕಲ್ (ದಕ್ಷಿಣ ಕನ್ನಡ): ಮುಕ್ಕದ ಶ್ರೀನಿವಾಸ ಕಾಲೇಜಿನಲ್ಲಿ ಮೊದಲನೇ ವರ್ಷದ ಕ್ಲಿನಿಕಲ್ ಸೈಕಾಲಜಿ ಕಲಿಯುತ್ತಿರುವ ವಿದ್ಯಾರ್ಥಿಗೆ (19 ವರ್ಷ) ಹಿರಿಯ ವಿದ್ಯಾರ್ಥಿಗಳು ಸೇರಿಕೊಂಡು ರ‍್ಯಾಗಿಂಗ್ ನಡೆಸಿದ ಬಗ್ಗೆ ಸುರತ್ಕಲ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಜನಪದ ಸ್ಪರ್ಧೆಗೆ ಅರ್ಜಿ ಆಹ್ವಾನ

ಬೆಂಗಳೂರು: ಇನ್ಫೊಸಿಸ್ ಪ್ರತಿಷ್ಠಾನ ಮತ್ತು ಭಾರತೀಯ ವಿದ್ಯಾಭವನ 2025ರ ಜನವರಿ 24ರಿಂದ 26ರವರೆಗೆ ಚಿತ್ರಕಲಾ ಪರಿಷತ್ತಿನಲ್ಲಿ ಜನಪದ ಮತ್ತು ಆದಿವಾಸಿ ಕಲೆ, ಕಲಾವಿದರನ್ನು ಕೇಂದ್ರವಾಗಿರಿಸಿ ಏರ್ಪಡಿಸಿರುವ ಕಲಾಯಾತ್ರೆ ನಿಮಿತ್ತ ಶಾಲಾ-ಕಾಲೇಜು ವಿದ್ಯಾರ್ಥಿಗಳಿಗೆ ವಿವಿಧ ಸ್ಪರ್ಧೆ ಏರ್ಪಡಿಸಲಾಗಿದೆ.

8-12ನೇ ತರಗತಿವರೆಗೆ ಕಿರಿಯ ವಿಭಾಗ, ಪದವಿ, ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಹಿರಿಯ ವಿಭಾಗ, ಅಧ್ಯಾಪಕರು ಮತ್ತು ಸಾರ್ವಜನಿಕರಿಗೆ ಸಾಮಾನ್ಯ ವಿಭಾಗದಲ್ಲಿ ಸ್ಪರ್ಧೆ ನಡೆಯಲಿದೆ. ಜನಪದ, ಆದಿವಾಸಿ ನೃತ್ಯ, ವಾದ್ಯ, ಹಾಡುಗಾರಿಕೆ ಸ್ಪರ್ಧೆ ನಡೆಯಲಿದೆ. ವಿಜೇತರಿಗೆ ₹1 ಲಕ್ಷ, ₹75 ಸಾವಿರ, ₹50 ಸಾವಿರ ಬಹುಮಾನ ಇದೆ. ಆಸಕ್ತರು ತಮ್ಮ ಕಲಾ ಪ್ರದರ್ಶನದ ವಿಡಿಯೊ, ವಿವರಗಳನ್ನು ಡಿ.10ರ ಒಳಗೆ ರೇಸ್‌ಕೋರ್ಸ್ ರಸ್ತೆಯ ಭಾರತೀಯ ವಿದ್ಯಾಭವನಕ್ಕೆ ತಲುಪಿಸಬೇಕು. ಮಾಹಿತಿಗೆ 9845625899 ಸಂಪರ್ಕಿಸಿ ಎಂದು ವಿದ್ಯಾಭವನದ ನಿರ್ದೇಶಕರು ತಿಳಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

‘ಭ್ರಷ್ಟಾಚಾರಕ್ಕೆ ಕಡಿವಾಣ’

ಬೆಂಗಳೂರು: ‘ಸಾರ್ವಜನಿಕ ಗ್ರಂಥಾಲಯ ಇಲಾಖೆ ಆಯುಕ್ತರು ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಿದ್ದಾರೆ. ಹಿಂದಿನ ನಿರ್ದೇಶಕರು ಸರ್ಕಾರದ ಆದೇಶ ಲೆಕ್ಕಿಸದೇ ಮುಚ್ಚಳಿಕೆ ಇಲ್ಲದೆ ವ್ಯವಹರಿಸುತ್ತಿದ್ದರು. ವ್ಯವಸ್ಥೆ ಸರಿಪಡಿಸುತ್ತಿರುವ ಆಯುಕ್ತರ ವಿರುದ್ಧ ಆರೋಪ ಸಲ್ಲದು’ ಎಂದು ಕರ್ನಾಟಕ ಕನ್ನಡ ಬರಹಗಾರರ, ಪ್ರಕಾಶಕರ ಸಂಘದ ಅಧ್ಯಕ್ಷ ನಿಡಸಾಲೆ ಪುಟ್ಟಸ್ವಾಮಯ್ಯ ತಿಳಿಸಿದ್ದಾರೆ.

‘ಮುಚ್ಚಳಿಕೆ ಪ್ರಸ್ತಾಪ 2005ರ ಸರ್ಕಾರಿ ಆದೇಶದಲ್ಲಿಯೇ ಇದೆ. ಲೇಖಕ, ಪ್ರಕಾಶಕರು ತಪ್ಪೇ ಮಾಡದಿದ್ದರೆ ₹100 ಮೊತ್ತದ ಸ್ಟ್ಯಾಂಪ್ ಪೇಪರ್‌ನಲ್ಲಿ ಮುಚ್ಚಳಿಕೆ ಬರೆದು ಕೊಡಲು ಆಗುವ ತೊಂದರೆಯಾದರೂ ಏನು’ ಎಂದು ಪ್ರಶ್ನಿಸಿದ್ದಾರೆ.

‘ಮುಚ್ಚಳಿಕೆ ವಿರುದ್ಧ ಹೋರಾಟ ನಡೆಸುವ ಬದಲು, ಪುಸ್ತಕ ಖರೀದಿಗೆ ಹಣ ಮಂಜೂರು ಮಾಡಲು ಸರ್ಕಾರದ ಮೇಲೆ ಒತ್ತಡ ಹೇರಲಿ’ ಎಂದಿದ್ದಾರೆ.

ಕಥಾ ಸಂಕಲನ ಆಹ್ವಾನ

ಬೆಂಗಳೂರು: ಬಿ.ಎಂ.ಶ್ರೀ ಪ್ರತಿಷ್ಠಾನದಲ್ಲಿ ಎಸ್.ವಿ.ಶ್ರೀನಿವಾಸರಾವ್ ಅವರು ಸ್ಥಾಪಿಸಿರುವ ಸಾರಂಗಿ ವೆಂಕಟರಾಮಯ್ಯ-ಪುಟ್ಟಚ್ಚಮ್ಮ ದತ್ತಿ ನಿಧಿಯಿಂದ 2023ನೇ ಸಾಲಿನ ಕಥಾ ಸಂಕಲನಗಳನ್ನು ಆಹ್ವಾನಿಸಲಾಗಿದೆ.

ಈ ವರ್ಷ ಪ್ರಥಮ ಮುದ್ರಣವಾಗಿ ಪ್ರಕಟಗೊಂಡಿರುವ ಕಥಾ ಸಂಕಲನದ ಮೂರು ಪ್ರತಿಗಳನ್ನು ಡಿ.5ರೊಳಗೆ ತಲುಪಿಸಬೇಕು. ಪ್ರಶಸ್ತಿ ₹3 ಸಾವಿರ ನಗದು, ಅಭಿನಂದನಾ ಪತ್ರ ಒಳಗೊಂಡಿದೆ. ಗರಿಷ್ಠ 2 ಕೃತಿ ಪ್ರಕಟಿಸಿರುವ ಉದಯೋನ್ಮುಖ ಸಾಹಿತಿಗಳಿಗೆ ಮಾತ್ರ ಸ್ಪರ್ಧೆ ಮೀಸಲಾಗಿದೆ ಎಂದು ಬಿ.ಎಂ.ಶ್ರೀ ಪ್ರತಿಷ್ಠಾನದ ಗೌರವ ಕಾರ್ಯದರ್ಶಿ ಶಾಂತರಾಜು ತಿಳಿಸಿದ್ದಾರೆ.

ತರಬೇತಿ ಕಾರ್ಯಾಗಾರ

ಬೆಂಗಳೂರು: ನಗರದ ದುರ್ಗಾ ಪರಮೇಶ್ವರಿ ಎಜುಕೇಶನ್ ಟ್ರಸ್ಟ್‌ನ ಜೆ.ಎಸ್ ಪದವಿ ಕಾಲೇಜು ವತಿಯಿಂದ ‘ಆಂಬಿಶನ್ ಇಂಕ್’ ಸಹಯೋಗದೊಂದಿಗೆ ಬಿ.ಕಾಂ ವಿದ್ಯಾರ್ಥಿಗಳಿಗೆ ‘ಮೌಲ್ಯಾಧಾರಿತ ರುಜುವಾತು’ ಕಾರ್ಯಕ್ರಮ ನಡೆಯಿತು.

ಕೌಶಲ, ತಾಂತ್ರಿಕತೆ, ಬೌದ್ಧಿಕ ಸಾಮರ್ಥ್ಯ ವೃದ್ಧಿ ಕುರಿತು ತರಬೇತಿ ನೀಡಲಾಯಿತು. ವಿದ್ಯಾರ್ಥಿಗಳು ಇ-ಕಾಮರ್ಸ್, ವಾಣಿಜ್ಯ ನಗರ, ಸ್ಟಾರ್ ಬಕ್ಸ್, ಕಾರು ಶೋರೂಮ್‌ಗಳು, ಉನ್ನತ ದರ್ಜೆಯ ನಗರಗಳ ಮಾದರಿಗಳ ಪ್ರಾತ್ಯಕ್ಷಿಕೆ ಪ್ರದರ್ಶಿಸಿದರು.

ವಿದ್ಯಾಸಂಸ್ಥೆಯ ಸಂಸ್ಥಾಪಕ ಪ್ರೊ.ಜಯರಾಮ ಶೆಟ್ಟಿ, ಪ್ರಭಾರ ಪ್ರಾಂಶುಪಾಲೆ ಪ್ರತಿಭಾ ಕಳಸ್, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮಂಜೇಶ್ ಹಾಜರಿದ್ದರು. ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ ವಿತರಿಸಲಾಯಿತು.

ನಗರದಲ್ಲಿ ಇಂದು

ವೀಣಾ ವಾದನ: ಮಾಲಾ ವೆಂಕಟೇಶ್, ಸ್ಫೂರ್ತಿ ಗುರುಪ್ರಸಾದ್, ಆಯೋಜನೆ ಹಾಗೂ ಸ್ಥಳ:ನಂಜನಗೂಡು ರಾಘವೇಂದ್ರ ಸ್ವಾಮಿಗಳ ಮಠ, 11ನೇ ಮುಖ್ಯರಸ್ತೆ, 45ನೇ ಅಡ್ಡರಸ್ತೆ, ಜಯನಗರ ಐದನೆ ಬಡಾವಣೆ, ಸಂಜೆ 5.30

ಡಾ.ಶಿವಕುಮಾರ ಮಹಾ ಶಿವಯೋಗಿ ಪ್ರತಿಮೆ ಉದ್ಘಾಟನೆ: ಡಿ.ಕೆ. ಸುರೇಶ್, ಮುಖ್ಯ ಅತಿಥಿ: ಡಾಲಿ ಧನಂಜಯ್, ಸ್ಥಳ: ಗ್ರೀನ್‌ವ್ಯಾಲಿ ಸ್ಕೂಲ್ ಬಳಿ, ಚುಂಚಘಟ್ಟ ಮುಖ್ಯರಸ್ತೆ, ಸಂಜೆ 6

24ನೇ ಕಾರ್ತಿಕ ಸಂಗೀತೋತ್ಸವ: ಸಂಗೀತ ಕಛೇರಿ: ಅರ್ಚನಾ, ಸಮನ್ವಿ, ಕೃತಿಕ್ ಕೌಶಿಕ್, ಕೌಶಿಕ್ ಶ್ರೀಧರ್, ಆಯೋಜನೆ: ನಾದರಂಜಿನಿ ಸಂಗೀತ ಸಭಾ, ಸ್ಥಳ: ಧಾರಿಣಿ ಮಹಿಳಾ ಸಂಘ, ಬಸವೇಶ್ವರನಗರ, ಸಂಜೆ 6

‘ಅದ್ಯ ವಚನಕಾರ; ಜೇಡರ ದಾಸಿಮಯ್ಯ’ ವಿಷಯದ ಬಗ್ಗೆ ಉಪನ್ಯಾಸ: ಸುಜಾತಾ ಲಕ್ಷ್ಮೀಪುರ, ಮುಖ್ಯ ಅತಿಥಿ: ಎಂ.ಸಿ. ನರೇಂದ್ರ, ಅಧ್ಯಕ್ಷತೆ: ಜಗದೀಶ ರೆಡ್ಡಿ, ಆಯೋಜನೆ ಹಾಗೂ ಸ್ಥಳ: ಕನ್ನಡ ಯುವಜನ ಸಂಘ, ಹೊಂಬೇಗೌಡ ನಗರ, ಸಂಜೆ 6.30

ಹರಿದಾಸ ವೈಭವ ಗಾಯನ: ರೇಖಾ ಭಟ್, ಸಹಕಾರ: ಅಮಿತ್ ಶರ್ಮಾ, ಸರ್ವೋತ್ತಮ, ಆಯೋಜನೆ ಹಾಗೂ ಸ್ಥಳ: ನಂಜನಗೂಡುರಾಘವೇಂದ್ರ ಸ್ವಾಮಿಗಳ ಮಠ, ಒಂದನೇ ಮುಖ್ಯರಸ್ತೆ, ಪವಮಾನಪುರ, ಸಂಜೆ 7

ಪ್ರಜಾವಾಣಿ ಕ್ಲಾಸಿಫೈಡ್ಸ್ — ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

BUSINESS

Business Offers

Finance

NRI'S INVESTMENT And Finance Available On Low Interest Against Properties,Land& Building,Sites,Flats, Converted& Agriculture Lands Call:7204995189

MSME LOANS:WE arrange msme business loans against your existing or new businesses also.Contact: 7204995189

PERSONAL

Change of Name

CHANGE OF NAME
I, PREM SAI UPENDRA PATNAIK, residing at Godrej Woodsman Estate, Flat No. 1303, Tower 5, A Wing, 13th Floor, Hebbal, Bengaluru-560024, have changed my name to PREM SAI PATNAIK vide affidavit dated 27-11-2024, before notary D. Sarala Kumari, Bengaluru. Henceforth I shall be called as PREM SAI PATNAIK only

I, MALLIGA W/o.Peter Satyaraj R/a#21 2nd`Square Sri_Rama Temple_Street Murphy_Town, Ulsoor Bangalore 560008 declared that MALLIGA and JULIET FRANCINA both`Name rerers_to one and_the_same person, i.e.myself only. Henceforth i known as MALLIGA vide`affidavit dated:26.11.2024 before`Notary AR.MuneerAhmed Bangalore

CHANGE OF NAME
I, SHALAM SOLOMON BABU Residing at # 17, Flat No. 103, Sree Rama Classic Apartment, Lakshmamma Layout, Banaswadi, Bangalore-560043 have changed my name to ATHOTA SHALAM vide affidavit dated 27.11.2024 before Notary Y.R. Chandrasekar, Bangalore.

I, SUSHMA.V.A R/at No. 25, 5th Cross, Maruthi Layout, Shankarmutt, Basaveshwaranagar, Bengaluru- 560079 have changed my name to SUSHMA ALVA vide affidavit dated: 25/11/2024 Before Notary B.Prasanna Bangalore.

I, LAKSHAMMA have changed my name as LAKSHMAMMA NARAYANAPPA Vide affidavit dated 26/11/2024 before Notary Mohammed Hussain K, Bangalore

DH Classifieds | ಪ್ರಜಾವಾಣಿ
REAL ESTATE
BOOK YOUR REAL ESTATE ADS IN DH ALL KARNATAKA + PRAJAVANI BENGALURU CITY ON SATURDAY + SUNDAY
@ 2481/-* FOR 15 WORDS
www.dhclassifieds.com
BOOK NOW
Book your ad with us now! For more details contact:
9845114560 | 9901641752
*Conditions apply

ಕ್ಲಾಸಿಫೈಡ್ಸ್ — ADMISSION CORNER

Community Centre (R) - 1956
COMMUNITY INSTITUTE OF MANAGEMENT STUDIES [CIMS]
Affiliated to BENGALURU CITY UNIVERSITY,
Approved by AICTE, New Delhi
#2/1, Natabhairava Shri V Vajramuni Road, 9th Cross, 9th Main, 2nd Block, Jayanagar, Bengaluru - 560011.
LOCATED IN PRIME LOCATION
NEAR ASHOKA PILLAR, JAYANAGAR, BENGALURU
ADMISSIONS FOR MBA & MCA 2024
MBA MCA
PGCET CODE:
MBA - B153 / MCA – C528
Admission Queries Contact:
8884401104 / 9731022994 / 080 26577851
Website: www.cimsbschool.org
Email: cimsadmissions01@gmail.com

ಕ್ಲಾಸಿಫೈಡ್ಸ್ — CONNECT

Free Entry
ಬೆಂಗಳೂರು ಆರ್ಟ್ಸ್ ಅಂಡ್ ಕ್ರಾಫ್ಟ್ಸ್ ಮೇಳ
Bangalore Arts and Crafts Mela
Enrich your Shopping Excellence
Art, Craft & Handlooms Exhibition
22nd Nov to 1st Dec 2024
Timings: 10:30 AM - 7:00 PM – 10 Days Exhibition
Contact : 6364685716 / 9036658774
Organized By Grand Flea Market
Karnataka Chitrakala Parishath
Kumara Krupa Road, Near Shivananda Circle
Bengaluru -560 001.
The Magic Show Live
30th Nov 2024 | 5 pm - 7 pm
The Djembe Show Live
1st Dec 2024 | 5 pm - 6.30 pm
Indian folk Band — Entry Free
HANDLOOMS | HOME DECOR | HANDICRAFTS | CLOTHING | JEWELLERY | 100+ STALLS | LIVE PERFORMANCE & MORE



ನೈರುತ್ಯ ರೈಲ್ವೆ

ಇ-ಪ್ರೊಕ್ಯೂರ್‌ಮೆಂಟ್ ಟೆಂಡರು ಸೂಚನೆ ಸಂ.: HE-15-2024-25

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ-ಟೆಂಡರ್‌ಗಳನ್ನು (ಐಆರ್‌ಇಪಿಎಸ್) ಆಹ್ವಾನಿಸಿದ್ದಾರೆ:

ಕ್ರಸಂ.	ಕಾಮಗಾರಿಯ ವಿವರ	ಅಂದಾಜು ಮೌಲ್ಯ
1	ಹುಬ್ಬಳ್ಳಿ ನಿಲ್ದಾಣದ ವ್ಯಾಪ್ತಿಯಲ್ಲಿ ಬರುವ ಕ್ಯಾಸಲ್‌ರಾಕ್ ನಿಲ್ದಾಣ ಹಾಗೂ ಕರಂಝೋಲ್ ನಿಲ್ದಾಣಗಳ ನಡುವೆ ಎಲೆಕ್ಟ್ರಿಕಲ್ ಎಲ್‌ಟಿ ಕೇಬಲ್ ಸಂಪರ್ಕದ ವ್ಯವಸ್ಥೆ.	ರೂ. 49,59,066/-
2	ಹುಬ್ಬಳ್ಳಿ ನಿಲ್ದಾಣದ ವ್ಯಾಪ್ತಿಯಲ್ಲಿ ಬರುವ ಸೋನಾಲಿಯಂ ನಿಲ್ದಾಣ ಹಾಗೂ ದೂಧ್‌ಸಾಗರ್ ನಿಲ್ದಾಣಗಳ ನಡುವೆ ಶಿಥಿಲಗೊಂಡ ಹಾಗೂ ಸೇವೆಗೆ ಯೋಗ್ಯವಲ್ಲದ ಎಲ್‌ಟಿ ಕೇಬಲ್‌ಗಳ ಬದಲಾವಣೆ ಹಾಗೂ ಅದಕ್ಕೆ ಸಂಬಂಧಿಸಿದ ಕೆಲಸಗಳು.	ರೂ. 21,46,301/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 20.12.2024, 11:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ವರಿಷ್ಠ ವಿಭಾಗೀಯ ಎಲೆಕ್ಟ್ರಿಕಲ್ ಇಂಜಿನಿಯರ್/ಸಾಮಾನ್ಯ/ ಹುಬ್ಬಳ್ಳಿ

PUB/592/AAMO/PRB/SWR/2024-25

South Western Railway - SWR | SWRRLY | SWRRLY

E-AUCTION SALE NOTICE

MINERAL ENTERPRISES PRIVATE LIMITED hereby announces the E-Auction No. MSTC/BLR/ MINERAL ENTERPRISES PRIVATE LIMITED /1/BENGALURU / 24-25 / 39648 through MSTC Limited (A Govt. Of India Enterprise) for sale of Iron Ore Fines of 5,89,247 Metric Tonnes (approx.)

Material Location.	Quantity, Date and Time of Auction
ML No.2346, Bedarabommanahalli Village (Bheemasamudra) Chitradurga-577501, Karnataka	5,89,247 MT (approx.) 04.12.2024 between 2 pm to 4 p.m.

The material is auctioned on
“AS IS WHERE IS AND NO COMPLAINT BASIS”

For Registration, Participation and any further details Visit https://www.mstcecommerce.com /www.mstcindia.co.in or Contact MSTC Bangalore office: Shri Tejas V. 080-22260054/22266417/22379145 - 9980147110

SAI — ಭಾರತೀಯ ಕ್ರೀಡಾ ಪ್ರಾಧಿಕಾರ

ನೇಮಕಾತಿ ಕೋಶ
ಪ್ರಧಾನ ಕಚೇರಿ, ಗೇಟ್-10
ಜವಾಹರಲಾಲ್ ನೆಹರು ಸ್ಟೇಡಿಯಂ ಕಾಂಪ್ಲೆಕ್ಸ್
ಲೋಧಿ ರಸ್ತೆ, ನವದೆಹಲಿ-110003

ಫೈಲ್ ನಂ. 01-04001(02)/5/2023-ಹೆಚ್‌ಒ-ಪರ್ಸನಲ್ ಡಿವಿಜನ್ ದಿನಾಂಕ: 18.11.2024

ಭಾರತೀಯ ಕ್ರೀಡಾ ಪ್ರಾಧಿಕಾರ ಇವರು, ಬಾಣಸಿಗ ಹುದ್ದೆಗೆ ಗುತ್ತಿಗೆ ಆಧಾರದಲ್ಲಿ ನೇಮಕಾತಿ ಮಾಡಿಕೊಳ್ಳಲು ಅರ್ಜಿಗಳನ್ನು ಆಹ್ವಾನಿಸಿದ್ದಾರೆ.

ಯುವಜನ ವ್ಯವಹಾರ ಮತ್ತು ಕ್ರೀಡಾ ಸಚಿವಾಲಯದ ಅಡಿಯಲ್ಲಿನ ಸ್ವಾಯುತ್ತ ಸಂಸ್ಥೆಯಾಗಿರುವ ಭಾರತೀಯ ಕ್ರೀಡಾ ಪ್ರಾಧಿಕಾರ (ಎಸ್‌ಎಐ) ಇವರು, ಬಾಣಸಿಗ ಹುದ್ದೆಗಾಗಿ ಗರಿಷ್ಠ 4 ವರ್ಷಗಳ ಅವಧಿಗೆ ಗುತ್ತಿಗೆ ಆಧಾರದಲ್ಲಿ ನೇಮಕಾತಿ ಮಾಡಿಕೊಳ್ಳಲು ಅರ್ಹ, ವಿದ್ಯಾರ್ಹತೆಯುಳ್ಳ ಮತ್ತು ಉತ್ಸಾಹಿ ಭಾರತೀಯ ನಾಗರಿಕರಿಂದ ಆನ್‌ಲೈನ್ ಅರ್ಜಿಗಳನ್ನು ಆಹ್ವಾನಿಸಿದ್ದಾರೆ. ಹುದ್ದೆಯ ವಿವರ ಹಾಗೂ ಇನ್ನಿತರ ವಿವರಗಳು ಭಾರತೀಯ ಕ್ರೀಡಾ ಪ್ರಾಧಿಕಾರದ http://sportsauthorityofindia.nic.in ವೆಬ್‌ಸೈಟ್‌ನಲ್ಲಿ ಲಭ್ಯವಿರುತ್ತದೆ. ಆನ್‌ಲೈನ್ ಅರ್ಜಿ ಸಲ್ಲಿಕೆಗಾಗಿನ ಸಮಯಸೂಚಿ ಕೆಳಗಿನಂತಿರುತ್ತದೆ:

1) ಆನ್‌ಲೈನ್ ನೋಂದಣಿ ಆರಂಭಿಕ ದಿನಾಂಕ – 20.11.2024 (ಬೆಳಗ್ಗೆ 10:00 ಗಂಟೆ)
2) ಆನ್‌ಲೈನ್ ಅರ್ಜಿ ಸಲ್ಲಿಕೆಗೆ ಕೊನೆಯ ದಿನಾಂಕ – 05.12.2024 (ಸಂಜೆ 05:00 ಗಂಟೆ)

ಸಹಾಯಕ ನಿರ್ದೇಶಕರು
ನೇಮಕಾತಿ ಕೋಶ
ಭಾರತೀಯ ಕ್ರೀಡಾ ಪ್ರಾಧಿಕಾರದ ಪ್ರಧಾನ ಕಚೇರಿ

CBC 47103/12/0014/2425

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ
(ಸಿಐಎನ್:ಯು40109ಕೆಎ1999ಎಸ್‌ಜಿಸಿ025521)

ಸಂ: ಅ.ಇಂ(ವಿ)/ಪ್ರ(ನಿ)/ಬೆಂ.ಮ.ಕ್ಷೇ.ವ.(ದ)/ಕಾ.ನಿ.ಇಂ(ವಿ)/ಕಿ.ಇಂ(ವಿ)-1/ಕ/2024-25/6145-49 ದಿನಾಂಕ: 26.11.2024

ಟೆಂಡರ್ ಪ್ರಕಟಣೆ
(ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ)

ಕವಿಪ್ರನಿನಿಯು ಬಿಡ್ ವಿಚಾರಣೆ ಸಂಖ್ಯೆ: ಕವಿಪ್ರನಿನಿ/ಅ.ಇಂ/ಪ್ರ(ನಿ)/ಬೆಂ.ಮ.ಕ್ಷೇ.ವ.(ದ)/ಕಾ.ನಿ.ಇಂ(ವಿ)/ಸ.ಕಾ.ಇಂ(1)/ಕಿ.ಇಂ-1/24-25/ಇ.ಪಿ.ಆರ್-60 ದಿನಾಂಕ:20.11.2024 ರ ಅನ್ವಯ “ಬೆಂ.ಮ.ಕ್ಷೇ.ವ.(ದ) ಅಡಿಯಲ್ಲಿ ಬರುವ ವಿವಿಧ ಉಪಕೇಂದ್ರಗಳಿಗೆ 1Cx1000 sqmm 11ಕೆ.ವಿ ಭೂಗತ ಕೇಬಲ್ ಸರಬರಾಜು ಮಾಡಲು” ಬಿಡ್‌ಗಳನ್ನು ಆಹ್ವಾನಿಸಿದೆ.

ಟೆಂಡರ್‌ಗೆ ಸಂಬಂಧಿಸಿದ ವಿವರವಾದ ಪ್ರಕಟಣೆಯನ್ನು ಕವಿಪ್ರನಿನಿ ವೆಬ್‌ಸೈಟ್ https://kptcl.karnataka.gov.inಗೆ ಹೈಪರ್‌ಲಿಂಕ್ E Procurement KPTCL ನಲ್ಲಿ ಅಥವಾ ವೆಬ್‌ಸೈಟ್ https://kppp.karnataka.gov.in ನಲ್ಲಿ ದಿನಾಂಕ: 28.11.2024 ರ ನಂತರ ಲಾಗಿನ್ ಮಾಡುವ ಮೂಲಕ ಪಡೆಯಬಹುದು. ಹೆಚ್ಚಿನ ವಿವರಗಳನ್ನು ಕೆಳಸಹಿದಾರರ ಕಛೇರಿಯಿಂದ ಪಡೆಯಬಹುದಾಗಿದೆ.

ಸಹಿ/- ಅಧೀಕ್ಷಕ ಇಂಜಿನಿಯರ್(ವಿ),
ಪ್ರಸರಣ (ನಿರ್ವಹಣೆ), ಬೆಂ.ಮ.ಕ್ಷೇ.ವ ದಕ್ಷಿಣ ವೃತ್ತ, ಕವಿಪ್ರನಿನಿ,
ಆನಂದ್‌ರಾವ್ ವೃತ್ತ, ಬೆಂಗಳೂರು-09

ನೈರುತ್ಯ ರೈಲ್ವೆ

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಟೆಂಡರು ಸೂಚನೆ ಸಂ.: HE-TRD-2024-25-OT-34 ದಿನಾಂಕ: 21.11.2024

ಕಾಮಗಾರಿಯ ವಿವರ	ಅಂದಾಜು ಮೌಲ್ಯ
ಹುಬ್ಬಳ್ಳಿಯಲ್ಲಿರುವ ಟ್ರ್ಯಾಕ್ಷನ್ ಸಬ್ ಸ್ಟೇಷನ್‌ನಲ್ಲಿ 110ಕೆವಿ / 25 ಕೆವಿ ಹೆಚ್ಚುವರಿ ಟ್ರ್ಯಾಕ್ಷನ್ ಟ್ರಾನ್ಸ್‌ಫಾರ್ಮರುಗಳ ವಿನ್ಯಾಸ, ಪೂರೈಕೆ, ಅಳವಡಿಕೆ, ಪರಿಶೀಲನೆ ಮತ್ತು ಕಾರ್ಯಾರಂಭಗೊಳಿಸುವಿಕೆ.	ರೂ. 1,37,10,110.44/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 16.12.2024, 15:00 ಗಂಟೆಯವರೆಗೆ

ಟೆಂಡರು ಸೂಚನೆ ಸಂ.: HE-TRD-2024-25-OT-31 ದಿನಾಂಕ: 21.11.2024

ಕಾಮಗಾರಿಯ ವಿವರ	ಅಂದಾಜು ಮೌಲ್ಯ
ಹಿಟ್ನಾಳ್ (ಹೆಚ್‌ಟಿಎನ್‌ಎಲ್), ಹಳ್ಳಿಗುಡಿ (ಹೆಚ್‌ಎಜಿ) ಮತ್ತು ಸಿಸ್ವಿನಹಳ್ಳಿ (ಎಸ್‌ವಿಹೆಚ್‌ಇ) ರೈಲ್ವೆ ನಿಲ್ದಾಣಗಳಲ್ಲಿ ಎಫ್‌ಓಬಿ ಗಳ ವ್ಯವಸ್ಥೆಗಾಗಿ ಓಹೆಚ್‌ಇ ಮೇಲಿನ ಮಾರ್ಪಾಡು ಕೆಲಸಗಳು.	ರೂ. 39,26,982.00

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 20.12.2024, 11:00 ಗಂಟೆಯವರೆಗೆ

ಟೆಂಡರು ಸೂಚನೆ ಸಂ.: HE-TRD-2024-25-OT-30 ದಿನಾಂಕ: 21.11.2024

ಕಾಮಗಾರಿಯ ವಿವರ	ಅಂದಾಜು ಮೌಲ್ಯ
ಹುಬ್ಬಳ್ಳಿ ವಿಭಾಗದಲ್ಲಿ ಬರುವ ಸಾವಣೂರು, ಖಾನಾಪುರ, ಹಿಟ್ನಾಳ್ ಹಾಲ್ಟ್, ಅಣ್ಣಿಗೇರಿ, ಇಬ್ರಾಹಿಮಪುರ, ಹೊಂಬಾಳ, ಲಖಿಮಪುರ, ಗಿಣಿಗೇರ ಮತ್ತು ಬನ್ನಿಕೊಪ್ಪ ರೈಲ್ವೆ ನಿಲ್ದಾಣಗಳಲ್ಲಿ ಉನ್ನತ ಎತ್ತರದ ಪ್ಲಾಟ್‌ಫಾರ್ಮ್‌ನ ವ್ಯವಸ್ಥೆ / ವಿಸ್ತರಣೆಗೆ ಸಂಬಂಧಿಸಿದಂತೆ ಓಹೆಚ್‌ಇ ಮೇಲಿನ ಮಾರ್ಪಾಡು ಕೆಲಸಗಳು.	ರೂ. 4,17,02,881.20

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 16.12.2024, 15:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ವರಿಷ್ಠ ವಿಭಾಗೀಯ ಎಲೆಕ್ಟ್ರಿಕಲ್ ಇಂಜಿನಿಯರ್/ ಟ್ರ್ಯಾಕ್ಷನ್ ವಿನಿಯೋಗ/ಹುಬ್ಬಳ್ಳಿ

PUB/598/AAMO/PRB/SWR/2024-25

South Western Railway - SWR | SWRRLY | SWRRLY

ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರ

ಎಸ್.ಎನ್. ಕಾಂಪ್ಲೆಕ್ಸ್, ಮೊದಲನೇ ಮಹಡಿ, ನಗರ ಪೊಲೀಸ್ ಠಾಣೆ ಎದುರು, ‘ಡಿ’ ಕ್ರಾಸ್, ದೊಡ್ಡಬಳ್ಳಾಪುರ- 561203, ದೂ: 080-29562046

ಸಂಖ್ಯೆ: DPA/TP/SF-LAO/27/2024-25 ದಿನಾಂಕ: 27.11.2024

ಪ್ರಕಟಣೆ

ದೊಡ್ಡಬಳ್ಳಾಪುರ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ಈ ಕೆಳಕಂಡ ಅರ್ಜಿದಾರರು ಪ್ರಸ್ತಾಪಿತ ಪ್ರದೇಶದಲ್ಲಿ 'Educational Institutions (ಶೈಕ್ಷಣಿಕ)' ಉದ್ದೇಶದ ವಸತಿಯೇತರ ಏಕ ನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲು ಕೋರಿರುತ್ತಾರೆ. ಸದರಿ ಜಮೀನು ಬೆಂಗಳೂರು ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸರ್ಕಾರದಿಂದ ಅನುಮೋದನೆಗೊಂಡಿರುವ ಮಹಾಯೋಜನೆ-2021 ರಲ್ಲಿ ವ್ಯವಸಾಯ ಭೂ ಉಪಯೋಗ ವಲಯದಲ್ಲಿದ್ದು, ವಲಯ ನಿಯಮಾವಳಿಗಳ ಅನುಸಾರ ವಿಶೇಷ ಸಂದರ್ಭದಲ್ಲಿ ವ್ಯವಸಾಯ ವಲಯದಲ್ಲಿ Educational Institutions ಉದ್ದೇಶಕ್ಕೆ ಅನುಮತಿ ನೀಡಲು ಅವಕಾಶ ಕಲ್ಪಿಸಲಾಗಿರುತ್ತದೆ. ಪ್ರಶ್ನಿತ ಜಮೀನು 'Educational Institutions (ಶೈಕ್ಷಣಿಕ)' ಉದ್ದೇಶಕ್ಕೆ ಭೂ ಪರಿವರ್ತನೆಯಾಗಿ, Educational Institutions (ಶೈಕ್ಷಣಿಕ)' ಉದ್ದೇಶದ ವಸತಿಯೇತರ ಏಕ ನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲು ಕೋರಿರುವ ಜಮೀನಿನ ವಿವರಗಳನ್ನು ಈ ಕೆಳಕಂಡಂತೆ ನೀಡಲಾಗಿದೆ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು, ಹೋಬಳಿ, ಗ್ರಾಮ	ಸ.ರ್ವೆ ನಂ.	ವಿಸ್ತೀರ್ಣ ಎ-ಗು	ಏಕ ನಿವೇಶನ ವಿನ್ಯಾಸ ನಕ್ಷೆಗೆ ಕೋರಿರುವ ಉದ್ದೇಶ
1	ಶ್ರೀ ತನುಶ್ ಎನ್. ರಾಜು ಪರ ಮೈನರ್ ಗಾರ್ಡಿಯನ್ ಬಿ.ಎಲ್.ನವೀನ್ ಬಿನ್ ಎಲ್.ಕೆ. ರಾಜು	ಬೆಂಗಳೂರು ನಗರ ಜಿಲ್ಲೆ, ಯಲಹಂಕ ತಾಲ್ಲೂಕು, ಹೆಸರಘಟ್ಟ-2 ಹೋಬಳಿ, ಅರಕೆರೆ ಗ್ರಾಮ	244	1-24	Educational Institutions (ಶೈಕ್ಷಣಿಕ)

ಸದರಿ ಪ್ರಸ್ತಾವನೆಯ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದಲ್ಲಿ ಈ ಪ್ರಕಟಣೆ ದಿನಾಂಕದಿಂದ ಹದಿನೈದು ದಿನದೊಳಗಾಗಿ ಲಿಖಿತವಾಗಿ ಈ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ಅವಧಿ ಮುಗಿದ ನಂತರ ಸಲ್ಲಿಸುವ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಸಹಿ/- ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿಗಳು,
ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರ, ದೊಡ್ಡಬಳ್ಳಾಪುರ.

ಬಿಡಿಎನಲ್ಲಿ ಆನ್‌ಲೈನ್ ಮೂಲಕ ಅನಮತಿ ಪಡೆಯುವ ವ್ಯವಸ್ಥೆ ಇಲ್ಲದೇ ನಿವೇಶನದಾರರ ಪರದಾಟ

ಕಟ್ಟಡ ನಕ್ಷೆ ಅನುಮೋದನೆ: ತಪ್ಪದ ಅಲೆದಾಟ

• ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿ ಕಟ್ಟಡ ನಕ್ಷೆಗೆ ಅನುಮೋದನೆ ಪಡೆಯುವ ವ್ಯವಸ್ಥೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ (ಬಿಡಿಎ) ಇನ್ನೂ ಜಾರಿಯಾಗಿಲ್ಲ. ಹೀಗಾಗಿ ನಿವೇಶನದಾರರು ಕಚೇರಿಗಳಿಗೆ ಅಲೆದಾಡಿ ಸುಸ್ತಾಗುತ್ತಿದ್ದಾರೆ.

ನಿವೇಶನದಾರರು ಮನೆ ನಿರ್ಮಿಸಲು ಕಟ್ಟಡ ನಕ್ಷೆಗೆ ಬಿಡಿಎ ಮಂಜೂರಾತಿ ನೀಡಬೇಕು. 'ಕಟ್ಟಡ ನಕ್ಷೆ' ತಯಾರಿಸಿಕೊಂಡು ಅನುಮೋದನೆಗೆ ಅರ್ಜಿಸಲ್ಲಿಸಲು ಬಿಡಿಎ ವಲಯ ಕಚೇರಿಗಳಿಗೆ ತೆರಳಬೇಕು. ಅಧಿಕಾರಿಗಳು ಇದ್ದರೆ ಅದೇ ದಿನ, ಇಲ್ಲದೇ ಇದ್ದರೆ ಮತ್ತೊಂದು ದಿನ ಅರ್ಜಿ ಸಲ್ಲಿಸಲು ಹೋಗಬೇಕು. ಅರ್ಜಿ ಸಲ್ಲಿಸಿದ ನಂತರ ಯಾವಾಗ ಅನುಮತಿ ಸಿಗುತ್ತದೆ? ಎಂದು ತಿಂಗಳುಗಟ್ಟಲೆ ಕಾಯಬೇಕು.

ಇದು ಸರ್ ಎಂ.ವಿಶ್ವೇಶ್ವರಯ್ಯ ಬಡಾವಣೆ, ನಾಡಪ್ರಭು ಕೆಂಪೇಗೌಡ ಬಡಾವಣೆ, ಅರ್ಕಾವತಿ ಬಡಾವಣೆ ಸಹಿತ ಬಿಡಿಎ ನಿರ್ಮಿಸಿರುವ ಎಲ್ಲ ಬಡಾವಣೆಗಳಲ್ಲಿ ಮನೆ ನಿರ್ಮಿಸುವವರ ಗೋಳು ಆಗಿದೆ.

ಮುಖ್ಯಾಂಶಗಳು

- ವಲಯ ಕಚೇರಿಗಳಿಗೆ ಪದೇ ಪದೇ ಹೋಗಬೇಕಾದ ಸ್ಥಿತಿ
- ಮೂರು ವಾರಗಳಲ್ಲಿ ಅನುಮತಿಸಿಗುವಂತಿರಬೇಕು
- ಪ್ರತ್ಯೇಕ ವಿಭಾಗ ತೆರೆದಾದರೂ ಸಮಸ್ಯೆ ಬಗೆಹರಿಸಲಿ

ಅರ್ಜಿ ಸಲ್ಲಿಸುವುದು, ಅನುಮೋದನೆ ಪಡೆಯುವುದು ಸೇರಿದಂತೆ ಎಲ್ಲವನ್ನೂ ಶೀಘ್ರದಲ್ಲಿ ಆನ್‌ಲೈನ್ ಪ್ಲ್ಯಾಟ್‌ಫಾರ್ಮ್‌ಗೆ ತರಲಾಗುವುದು
ಎನ್. ಜಯರಾಂ, ಬಿಡಿಎ ಆಯುಕ್ತ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಕೇಂದ್ರ ಕಚೇರಿ

'ಬಡಾವಣೆಯನ್ನು ಬಿಡಿಎ ನಿರ್ಮಿಸಿರುವುದರಿಂದ, ಅದೇ ಮಾತ್ರ ಸಂಸ್ಥೆ. ಹಾಗಾಗಿ ದಾಖಲೆಗಳು ಸರಿ ಇರುತ್ತವೆ. ಆದರೂ ಕಟ್ಟಡ ನಿರ್ಮಾಣಕ್ಕೆ ಅನುಮತಿ ಸಿಗಲು ತಿಂಗಳುಗಟ್ಟಲೆ ಕಾಯಬೇಕು. ಹೀಗಾದರೆ ಮನೆ ಕಟ್ಟುವುದು ಹೇಗೆ' ಎಂದು ಸರ್ ಎಂ. ವಿಶ್ವೇಶ್ವರಯ್ಯ ಬಿಡಿಎ ಲೇಔಟ್‌ನ ನಿವೇಶನದಾರರ ಸಂಘದ ಅಧ್ಯಕ್ಷ ಡಿ.ಎಸ್.ಗೌಡ ವಿಷಾದಿಸಿದರು.

'ವಿಶ್ವೇಶ್ವರಯ್ಯ ಬಡಾವಣೆಯಲ್ಲಿ ಎಲ್ಲ ನಿವೇಶನಗಳು ಹಂಚಿಕೆಯಾಗಿವೆ. ಇಲ್ಲಿ ಏನೂ ಫಾಯಿದೆ ಇಲ್ಲ ಎಂದೋ ಯಾರೂ ಇತ್ತ ಗಮನಹರಿಸುತ್ತಿಲ್ಲ. ಇರುವ ಒಬ್ಬ ಕಾರ್ಯಪಾಲಕ ಎಂಜಿನಿಯರ್, ಇಬ್ಬರು ಸಹಾಯಕ ಎಂಜಿನಿಯರ್‌ಗಳು ಸಭೆ ಇನ್ನಿತರ ಕೆಲಸಗಳಲ್ಲಿ ನಿರತರಾಗಿರುತ್ತಾರೆ' ಎಂಬುದು ಅವರ ದೂರು.

'ನಗರಾಭಿವೃದ್ಧಿ ಇಲಾಖೆ ಅಡಿಯಲ್ಲಿಯೇ ಬಿಬಿಎಂಪಿ ಮತ್ತು ಬಿಡಿಎಗಳಿವೆ. ಬಿಬಿಎಂಪಿಯಲ್ಲಿ ಆನ್‌ಲೈನ್ ವ್ಯವಸ್ಥೆ ಇದೆ. ಬಿಡಿಎಯಲ್ಲಿ ಏಕೆ ಮಾಡುತ್ತಿಲ್ಲ ಎಂದು ಗೊತ್ತಾಗುತ್ತಿಲ್ಲ. ಆಫ್‌ಲೈನ್ ಪ್ರಕ್ರಿಯೆಯು ಭ್ರಷ್ಟಾಚಾರಕ್ಕೆ ಹೆಚ್ಚು ಕಾರಣವಾಗುತ್ತಿದೆ. ಕಚೇರಿ ಸಿಬ್ಬಂದಿ, ಭೂಮಾಪಕರು, ಎಂಜಿನಿಯರ್‌ಗಳು ಹತ್ತಾರು ನೆಪ ಹೇಳುತ್ತಾರೆ. ಭೂಮಾಪಕರೂ ವೇಶನದ ಅಳತೆಗೆ ಸತಾಯಿಸುತ್ತಾರೆ. ಅವರು ಹೇಳಿದ ಸಿವಿಲ್ ಎಂಜಿನಿಯರ್ ಅಥವಾ ವಾಸ್ತುಶಿಲ್ಪಗಾರರಿಂದಲೇ 'ಪ್ಲ್ಯಾನ್' ಸಿದ್ಧವಾಗಬೇಕು. ಇಲ್ಲದೇ ಇದ್ದರೆ ಅದು ಸರಿ ಇಲ್ಲ, ಇದು ಸರಿ ಇಲ್ಲ ಎಂದು ಅಲೆದಾಡಿಸುತ್ತಾರೆ' ಎಂದು ನಿವೇಶನದಾರರು ದೂರಿದರು.

'ಮನೆ ನಕ್ಷೆ ಅನುಮೋದನೆ ಪ್ರಕ್ರಿಯೆಯನ್ನು ಸಂಪೂರ್ಣವಾಗಿ ಆನ್‌ಲೈನ್ ವ್ಯಾಪ್ತಿಗೆ ತಂದು ಜನಸ್ನೇಹಿಯಾಗಿ ಬಿಡಿಎ ರೂಪಿಸಬೇಕು. ಇತ್ತೀಚೆಗೆ ಬಿಬಿಎಂಪಿ ಜಾರಿಗೊಳಿಸಿರುವ 'ನಂಬಿಕೆ ನಕ್ಷೆ' ಮಾದರಿಯನ್ನು ಪರಿಚಯಿಸಬೇಕು' ಎಂದು ನಾಡಪ್ರಭು ಕೆಂಪೇಗೌಡ ಬಡಾವಣೆ ಮುಕ್ತ-ವೇದಿಕೆಯ ಕಾರ್ಯದರ್ಶಿ ಅಶೋಕ್ ಒತ್ತಾಯಿಸಿದರು.

'ನಾವು ಈ ಬಗ್ಗೆ ಎರಡು ವರ್ಷಗಳಿಂದ ಬಿಡಿಎ ಆಯುಕ್ತರ ಗಮನಕ್ಕೆ ತಂದಿದ್ದೇವೆ. ಆನ್‌ಲೈನ್ ಮಾಡುತ್ತೇವೆ ಎಂದು ಅಧ್ಯಕ್ಷರು ಹೋದಲ್ಲಿ ಬಂದಲ್ಲಿ ಹೇಳುತ್ತಿದ್ದಾರೆ. ಆದರೆ, ಆಗುತ್ತಿಲ್ಲ. ಆನ್‌ಲೈನ್ ವ್ಯವಸ್ಥೆ ಜೊತೆಗೆ ಸಕಾಲದಡಿ ತರಬೇಕು. ಆಗಷ್ಟೇ ಮನೆ ಕಟ್ಟಲು ನಿವೇಶನದಾರರಿಗೆ ಅನುಕೂಲ' ಎಂದು ಮುಕ್ತ ವೇದಿಕೆಯ ಜಂಟಿ ಕಾರ್ಯದರ್ಶಿ ಸೂರ್ಯಕಿರಣ್ ಅಭಿಪ್ರಾಯಪಟ್ಟರು.

ವಾರ್ಡ್‌ಗಳಿಗೆ ನೋಡಲ್ ಅಧಿಕಾರಿ ನೇಮಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿಯ ಎಲ್ಲಾ ವಾರ್ಡ್‌ಗಳಲ್ಲಿರುವ ಸಾರ್ವಜನಿಕರ ಕುಂದುಕೊರತೆಗಳನ್ನು ನಿವಾರಿಸುವ ಸಲುವಾಗಿ ಪ್ರತಿ ವಾರ್ಡ್‌ಗೆ ಒಬ್ಬ ಅಧಿಕಾರಿಯನ್ನು ನೋಡಲ್ ಅಧಿಕಾರಿಯಾಗಿ ನೇಮಿಸಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಸುತ್ತೋಲೆ ಹೊರಡಿಸಿದ್ದಾರೆ .

ನೋಡಲ್ ಅಧಿಕಾರಿ, ತಮಗೆ ನಿಯೋಜಿಸಿರುವ ವಾರ್ಡ್‌ನಲ್ಲಿ ಕಡ್ಡಾಯವಾಗಿ ಪ್ರತಿ ಬುಧವಾರ ಕಚೇರಿಯ ಅವಧಿಯಲ್ಲಿ ಹಾಜರಿರಬೇಕು. ಸಾರ್ವಜನಿಕರೊಂದಿಗೆ ಸಭೆ ನಡೆಸಿ, ಅವರ ದೂರು, ಸಮಸ್ಯೆಗಳನ್ನು ಆಲಿಸಬೇಕು. ಇತರೆ ಅಧಿಕಾರಿಗಳ ಸಹಯೋಗದೊಂದಿಗೆ ಸಮಸ್ಯೆಯನ್ನು ಇತ್ಯರ್ಥಪಡಿಸಬೇಕು ಎಂದು ಸುತ್ತೋಲೆಯಲ್ಲಿ ಸೂಚಿಸಲಾಗಿದೆ.

ಸಭೆ ನಡೆಯುವ ಕುರಿತು ಪ್ರಚಾರ ಮಾಡಬೇಕು. ಜಲಮಂಡಳಿ, ಬೆಸ್ಕಾಂ ಸೇರಿದಂತೆ ಇತರೆ ಇಲಾಖೆಗಳಿಗೆ ಸಂಬಂಧಿಸಿದ ದೂರುಗಳಿದ್ದರೆ, ಆಯಾ ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಿ, ಸಮಸ್ಯೆಯನ್ನು ವಾರ್ಡ್ ಹಂತದಲ್ಲಿಯೇ ಪರಿಹರಿಸಬೇಕು. ಅಲ್ಲಿ ಬಗೆಹರಿಸಲಾಗದ ಸಮಸ್ಯೆಗಳನ್ನು ವಲಯ ಮಟ್ಟದಲ್ಲಿ ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳಲು ಸಂಬಂಧಪಟ್ಟ ಮೇಲಧಿಕಾರಿಗಳಿಗೆ ಸೂಕ್ತ ಪ್ರಸ್ತಾವವನ್ನು ಸಲ್ಲಿಸಬೇಕು ಎಂದು ತಿಳಿಸಲಾಗಿದೆ.

ಸಭೆಗೆ ಆಯುಕ್ತರ ಭೇಟಿ: ವಾರ್ಡ್‌ಗಳಲ್ಲಿ ಪ್ರತಿ ಬುಧವಾರ ನಡೆಯುವ ಸಭೆಗೆ ಆಯಾ ವಲಯ ಆಯುಕ್ತರು ಭೇಟಿ ನೀಡಬೇಕು. ಇದಕ್ಕಾಗಿ ವೇಳಾಪಟ್ಟಿ ಸಿದ್ಧಪಡಿಸಿಕೊಳ್ಳಬೇಕು. ಸಭೆಯಲ್ಲಿ ಸಾರ್ವಜನಿಕರ ಕುಂದುಕೊರತೆ ಆಲಿಸಿ, ಅಗತ್ಯ ಕ್ರಮ ಕೈಗೊಳ್ಳುವಂತೆ ಸುತ್ತೋಲೆಯಲ್ಲಿ ವಿವರಿಸಲಾಗಿದೆ.

ಜಾಲತಾಣದಲ್ಲಿ ಅಧಿಕಾರಿಗಳ ಪಟ್ಟಿ: ಪ್ರತಿ ವಾರ್ಡ್‌ಗೆ ನಿಯೋಜಿಸಿರುವ ನೋಡಲ್ ಅಧಿಕಾರಿಯ ಹೆಸರು, ವಾರ್ಡ್ ಹೆಸರು, ಹುದ್ದೆ ಹಾಗೂ ದೂರವಾಣಿ ಸಂಖ್ಯೆಯುಳ್ಳ ಪಟ್ಟಿಯನ್ನು ಪಾಲಿಕೆಯ ವೆಬ್‌ಸೈಟ್ bbmp.gov.in/home ನಲ್ಲಿ ಅಪ್ಲೋಡ್ ಮಾಡಲಾಗಿದೆ.

ಬೈಯಪ್ಪನಹಳ್ಳಿ ಠಾಣೆ ಪೊಲೀಸರ ಕಾರ್ಯಾಚರಣೆ • ಲಕ್ಷಾಂತರ ಮೌಲ್ಯದ ಮೊಬೈಲ್‌ಗಳು ವಶ

'ಬೆಡ್‌ಶೀಟ್ ಗ್ಯಾಂಗ್'ನ 8 ಮಂದಿ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಡ್‌ಶೀಟ್‌ಗಳನ್ನು ಅಡ್ಡ ಇಟ್ಟು ಮೊಬೈಲ್ ಅಂಗಡಿ ಸೇರಿದಂತೆ ವಿವಿಧೆಡೆ ಕಳ್ಳತನ ಮಾಡುತ್ತಿದ್ದ ಬಿಹಾರದ 'ಬೆಡ್‌ಶೀಟ್ ಗ್ಯಾಂಗ್'ನ ಎಂಟು ಮಂದಿಯನ್ನು ಬೈಯಪ್ಪನಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಬಿಹಾರದ ಪೂರ್ವ ಚಂಪಾರಣ್ ಜಿಲ್ಲೆಯ ಇಮ್ತಿಯಾಜ್ ಆಲಂ(30), ಜಾವೇದ್ ಆಲಂ(32), ಪವನ್ ಷಾ(29), ಮುನೀಲ್ ಕುಮಾರ್(30), ರಿಜ್ವಾನ್ ದೇವನ್(32), ಸಲೀಂ ಆಲಂ(30), ರಾಮೇಶ್ವರ ಗಿರಿ(40) ಹಾಗೂ ಸೂರಜ್ ಕುಮಾರ್(34) ಬಂಧಿತರು.

'ಆರೋಪಿಗಳಿಂದ ಲಕ್ಷಾಂತರ ರೂಪಾಯಿ ಮೌಲ್ಯದ ಮೊಬೈಲ್‌ಗಳನ್ನು ವಶಕ್ಕೆ ಪಡೆಯಲಾಗಿದೆ' ಎಂದು ಪೊಲೀಸರು ಹೇಳಿದರು.

ನಾಗವಾರಪಾಳ್ಯದ ಸ್ಯಾಮ್‌ಸಂಗ್ ಶೋರೂಂಗೆ ಇತ್ತೀಚೆಗೆ ನುಗ್ಗಿದ್ದ ಆರೋಪಿಗಳು ₹22 ಲಕ್ಷ ಮೌಲ್ಯದ ಮೊಬೈಲ್‌ಗಳನ್ನು ಕದ್ದು ಪರಾರಿ ಆಗಿದ್ದರು. ಕಳ್ಳರ ಕೃತ್ಯ ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿತ್ತು. ಅದನ್ನು ಆಧರಿಸಿ ಆರೋಪಿಗಳನ್ನು ಬಂಧಿಸಲಾಯಿತು ಎಂದು ಪೊಲೀಸರು ತಿಳಿಸಿದರು.

ಎಂಟು ಮಂದಿ ಆರೋಪಿಗಳು 15 ದಿನಗಳ ಹಿಂದೆ ನಗರಕ್ಕೆ ಬಂದಿದ್ದರು. ಎಲ್ಲೆಂದರಲ್ಲಿ ಆಶ್ರಯ ಪಡೆಯುತ್ತಿದ್ದರು. ಹಗಲು ವೇಳೆಯಲ್ಲಿ ಮೊಬೈಲ್ ಅಂಗಡಿ ಗುರುತಿಸಿಕೊಳ್ಳುತ್ತಿದ್ದರು. ನಂತರ, ಗ್ರಾಹಕರ ಸೋಗಿನಲ್ಲಿ ಹೋಗುತ್ತಿದ್ದು, ಅಲ್ಲಿನ ವಸ್ತುಗಳನ್ನು ಎಲ್ಲೆಲ್ಲಿ ಇಟ್ಟಿದ್ದಾರೆ ಎಂಬುದನ್ನು ತಿಳಿದುಕೊಳ್ಳುತ್ತಿದ್ದರು ಎಂದು ಪೊಲೀಸರು ತಿಳಿಸಿದರು.

'ತಡರಾತ್ರಿ ಮುಖಕ್ಕೆ ಮಾಸ್ಕ್ ಹಾಗೂ ತಲೆಗೆ ಟೋಪಿ ಹಾಕಿಕೊಂಡು ಅಂಗಡಿ ಬಳಿ ಹೋಗುತ್ತಿದ್ದರು. ಬಳಿಕ ಆರೋಪಿಗಳ ಪೈಕಿ ಮೂವರು ಅಂಗಡಿ ಮುಂದೆ ಬೆಡ್‌ಶೀಟ್ ಅಡ್ಡವಾಗಿ ಹಿಡಿದುಕೊಳ್ಳುತ್ತಿದ್ದರು. ಇತರರು ಅಂಗಡಿಯ ರೋಲಿಂಗ್ ಶೆಟರ್ ತೆಗೆದು ಒಳಕ್ಕೆ ಹೋಗುತ್ತಿದ್ದರು. ಕೃತ್ಯ ಎಸಗಿದ ನಂತರ ಆರೋಪಿಗಳು ಹೊರಕ್ಕೆ ಬರುತ್ತಿದ್ದರು. ನಂತರ, ಎಲ್ಲರೂ ಮುಖಕ್ಕೆ ಬೆಡ್‌ಶೀಟ್ ಸುತ್ತಿಕೊಂಡು ಸ್ಥಳದಿಂದ ಪರಾರಿ ಆಗುತ್ತಿದ್ದರು' ಎಂದು ಪೊಲೀಸರು ಹೇಳಿದರು.

ಆರೋಪಿಗಳ ಪೈಕಿ ಒಬ್ಬ ವ್ಯಕ್ತಿ ಬಿಹಾರದ ಮೂಲಕ ನೇಪಾಳಕ್ಕೆ ತೆರಳಿ ಕದ್ದ ಮೊಬೈಲ್ ಫೋನ್‌ಗಳನ್ನು ಮಾರಾಟ ಮಾಡಿದ್ದ ಎಂಬುದು ತನಿಖೆಯಿಂದ ಗೊತ್ತಾಗಿದೆ. ಈ ಹಿಂದೆ ಆರೋಪಿಗಳು ಉಡುಪಿ, ಉತ್ತರ ಕನ್ನಡ ಜಿಲ್ಲೆಯ ಕೆಲವು ಠಾಣೆಗಳ ವ್ಯಾಪ್ತಿಯಲ್ಲಿ ಕಳ್ಳತನ ಮಾಡಿರುವುದು ಬೆರಳಚ್ಚು ಮುದ್ರೆಯಿಂದ ಗೊತ್ತಾಗಿದೆ ಎಂದು ಪೊಲೀಸರು ಹೇಳಿದರು.

ಇಮ್ತಿಯಾಜ್ ಆಲಂ | ಪವನ್ ಷಾ | ರಾಜೇಶ್ವರ ಗಿರಿ | ಸಲೀಂ ಆಲಂ

ಜಾವೇದ್ ಆಲಂ | ಮುನೀಲ್ ಕುಮಾರ್ | ರಿಜ್ವಾನ್ ದೇವನ್ | ಸೂರಜ್ ಕುಮಾರ್

ಬ್ಯಾಂಕ್, 2 ಶಾಲೆಗಳಿಗೆ ಹುಸಿ ಬಾಂಬ್ ಬೆದರಿಕೆ

ಅಪರಾಧ ಸುದ್ದಿ

ಬೆಂಗಳೂರು: ನಗರದ ಶಾಲಾ–ಕಾಲೇಜುಗಳು, ಹೋಟೆಲ್ ಹಾಗೂ ಬ್ಯಾಂಕ್‌ಗಳಿಗೆ ಬರುತ್ತಿರುವ ಹುಸಿ ಬೆದರಿಕೆಯ ಇ-ಮೇಲ್ ಹಾವಳಿ ಮುಂದುವರೆದಿದ್ದು, ಮಂಗಳವಾರ ಮತ್ತು ಬುಧವಾರ ಇದೇ ರೀತಿಯ ಮೂರು ಇ–ಮೇಲ್‌ಗಳು ಬಂದಿದ್ದವು. ಕೆಲಕಾಲ ಆತಂಕಕ್ಕೆ ಕಾರಣವಾಗಿತ್ತು.

ಮಹಾತ್ಮ ಗಾಂಧಿ ರಸ್ತೆಯ ಎಚ್‌ಎಸ್‌ಬಿಸಿ ಬ್ಯಾಂಕ್ ಶಾಖೆಯ ಇ–ಮೇಲ್‌ಗೆ ಬುಧವಾರ ಬಾಂಬ್ ಬೆದರಿಕೆಯ ಸಂದೇಶ ಬಂದಿತ್ತು. ಇ–ಮೇಲ್ ಗಮನಿಸಿದ್ದ ಬ್ಯಾಂಕ್ ಅಧಿಕಾರಿಯೊಬ್ಬರು, ಗ್ರಾಹಕರು ಹಾಗೂ ಸಿಬ್ಬಂದಿಯನ್ನು ಹೊರಗೆ ಕಳುಹಿಸಿದ್ದರು. ಅಕ್ಕಪಕ್ಕದ ಮಳಿಗೆಯವರಿಗೂ ಮಾಹಿತಿ ನೀಡಿದ್ದರು. ಅಲ್ಲದೇ ಪೊಲೀಸ್ ಸಹಾಯವಾಣಿಗೂ ಕರೆ ಮಾಡಿ ಮಾಹಿತಿ ನೀಡಿದ್ದರು. ಹಲಸೂರು ಠಾಣೆಯ ಪೊಲೀಸರು ಸ್ಥಳಕ್ಕೆ ಬಂದು ಪರಿಶೀಲನೆ ನಡೆಸಿದರು.

'ಬುಧವಾರ ಮಧ್ಯಾಹ್ನ 2 ಗಂಟೆ ಸುಮಾರಿಗೆ ಇ–ಮೇಲ್ ಬಂದಿತ್ತು' ಎಂದು ಪೊಲೀಸರು ಹೇಳಿದರು.

ಇದೇ ಮಾದರಿಯ ಇ–ಮೇಲ್ ಕಬ್ಬನ್ ಪಾರ್ಕ್ ಪೊಲೀಸ್ ಠಾಣಾ ವ್ಯಾಪ್ತಿಯ ರೆಸ್ಸಿಡೆನ್ಸಿ ರಸ್ತೆಯಲ್ಲಿರುವ ಬಿಷಪ್ ಕಾಟನ್ ಬಾಲಕ ಹಾಗೂ ಬಾಲಕಿಯರ ಶಾಲೆಗಳಿಗೂ ಮಂಗಳವಾರ ಬಂದಿತ್ತು.

'ಕಳೆದ ಬಾರಿಯಂತೆ ಇದು ಹುಸಿ ಸಂದೇಶ ಅಲ್ಲ. ಶಾಲಾ ಆವರಣದಲ್ಲಿ ಇಟ್ಟಿರುವ ಬಾಂಬ್ ಬೆಳಿಗ್ಗೆ 11ರ ಸುಮಾರಿಗೆ ಸ್ಫೋಟಗೊಳ್ಳಲಿದೆ. ಎಲ್ಲರನ್ನೂ ಹೊರಕ್ಕೆ ಕಳುಹಿಸಿ ಎಂಬುದಾಗಿ ಬರೆಯಲಾಗಿತ್ತು' ಎಂದು ಪೊಲೀಸರು ಹೇಳಿದರು. ಈ ಹಿಂದೆಯೂ ಈ ಶಾಲೆಗಳಿಗೆ ಬೆದರಿಕೆ ಹಾಕಲಾಗಿತ್ತು.

'ಮೂರೂ ಸ್ಥಳಗಳಿಗೆ ಬಾಂಬ್ ನಿಷ್ಕ್ರಿಯ ದಳ, ಬಾಂಬ್ ತಪಾಸಣೆ ದಳ ಹಾಗೂ ಅಗ್ನಿಶಾಮಕ ದಳದ ಸಿಬ್ಬಂದಿ ತೆರಳಿ ಪರಿಶೀಲನೆ ನಡೆಸಿದರು. ಯಾವುದೇ ಸ್ಫೋಟಕ ವಸ್ತುಗಳಾಗಲಿ, ರಾಸಾಯನಿಕ ಪದಾರ್ಥಗಳಾಗಲಿ ಪತ್ತೆ ಆಗಿಲ್ಲ. ಇದೊಂದು ಹುಸಿ ಬಾಂಬ್ ಬೆದರಿಕೆ ಎಂಬುದು ದೃಢವಾಯಿತು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಕಿರುಕುಳ ಆರೋಪಿ ಬಂಧನ

ಬೆಂಗಳೂರು: ರಸ್ತೆ ಬದಿಯಲ್ಲಿ ನಿಂತಿದ್ದ ಯುವತಿಗೆ ಕಿರುಕುಳ ನೀಡಿದ್ದ ಆರೋಪಿಯನ್ನು ರಾಮಮೂರ್ತಿನಗರ ಠಾಣೆ ಪೊಲೀಸರು ಬುಧವಾರ ಬಂಧಿಸಿದ್ದಾರೆ.

ವಿಲ್ಸನ್ ಗಾರ್ಡನ್ ನಿವಾಸಿ ಪ್ರೇಮ್(22) ಬಂಧಿತ.

ಆರೋಪಿ ನವೆಂಬರ್ 11ರಂದು ರಾತ್ರಿ 8 ಗಂಟೆ ಸುಮಾರಿಗೆ ರಾಮಮೂರ್ತಿನಗರದ ಮುಖ್ಯರಸ್ತೆಯ ಬದಿಯಲ್ಲಿ ನಿಂತಿದ್ದ ಯುವತಿಯ ಪೃಷ್ಠಕ್ಕೆ ಹೊಡೆದು ಪರಾರಿಯಾಗಿದ್ದ ಎಂದು ಪೊಲೀಸರು ಹೇಳಿದರು.

ಆರೋಪಿ ರ‍್ಯಾಪಿಡೊ ಬೈಕ್ ಚಾಲನೆ ಮಾಡುತ್ತಿದ್ದ. ಅಂದು ರಾತ್ರಿ 8 ಗಂಟೆ ಸುಮಾರಿಗೆ ರಾಮಮೂರ್ತಿ ನಗರಕ್ಕೆ ಗ್ರಾಹಕರೊಬ್ಬರನ್ನು ಕರೆತಂದಿದ್ದ. ಗ್ರಾಹಕರನ್ನು ಇಳಿಸಿ ತೆರಳುವಾಗ ರಸ್ತೆ ಬದಿಯಲ್ಲಿ ನಿಂತಿದ್ದ ಯುವತಿಯ ಹಿಂಭಾಗಕ್ಕೆ ಹೊಡೆದು ಪರಾರಿಯಾಗಿದ್ದ. ನೊಂದ ಯುವತಿ, ಪೊಲೀಸ್ ಠಾಣೆಗೆ ದೂರು ನೀಡಿದ್ದರು. ಪ್ರಕರಣ ದಾಖಲಿಸಿಕೊಂಡು ಕಾರ್ಯಾಚರಣೆ ನಡೆಸಿದ ಪೊಲೀಸರು, ಘಟನಾ ಸ್ಥಳದ ಆಸುಪಾಸಿನ ಸಿ.ಸಿ.ಟಿ.ವಿ. ಕ್ಯಾಮೆರಾ ದೃಶ್ಯಾವಳಿ ಪರಿಶೀಲಿಸಿ ಆರೋಪಿಯನ್ನು ಬಂಧಿಸಿದ್ದಾರೆ.

ನಗರದ ವಿಭೂತಿಪುರ ಮಠದಲ್ಲಿ ನಡೆದ ಸಮಾರಂಭದಲ್ಲಿ ಸಂಶೋಧಕ ಎಂ.ಜಿ. ನಾಗರಾಜ ಅವರಿಗೆ 'ಸುವರ್ಣಶ್ರೀ ರಾಷ್ಟ್ರೀಯ ಪ್ರಶಸ್ತಿ' ಪ್ರದಾನ ಮಾಡಲಾಯಿತು.ಮಹಾಂತಲಿಂಗ ಶಿವಾಚಾರ್ಯ ಸ್ವಾಮೀಜಿ, ನೊಣವಿನಕರೆ, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಡಿ.ಕೆ. ಮೋಹನ್, ಬಿಬಿಎಂಪಿ ಮಾಜಿ ಸದಸ್ಯೆ ಗೀತಾ ವಿವೇಕಾನಂದ ಬಾಬು, ಯುವ ಮುಖಂಡ ಮಹೇಂದ್ರ ಮೋದಿ ಹಾಜರಿದ್ದರು

ಪಾದಚಾರಿ ಮಾರ್ಗ ಅತಿಕ್ರಮಣ ತೆರವಿಗೆ ಆಗ್ರಹ

ಪೀಣ್ಯ ದಾಸರಹಳ್ಳಿ: 'ಬಾಗಲಗುಂಟೆ ವಾರ್ಡ್‌ನ ಎಂಇಐ ಬಡಾವಣೆಯ ರಸ್ತೆಯ ಪಾದಚಾರಿ ಮಾರ್ಗವನ್ನು ವ್ಯಾಪಾರಿಗಳು ಅತಿಕ್ರಮಿಸಿಕೊಂಡಿದ್ದಾರೆ' ಎಂದು ಎಂಇಐ ಬಡಾವಣೆಯ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಮುಖಂಡ ಲಕ್ಷ್ಮಣ್ ಗೌಡ ದೂರಿದರು.

'ಸ್ವಯಂ ಪ್ರೇರಿತವಾಗಿ ತೆರವುಗೊಳಿಸಲು, ಕ್ಷೇಮಾಭಿವೃದ್ಧಿ ಸಂಘದವರೆಲ್ಲ ಸೇರಿ ಮಾಲೀಕರಿಗೆ ಮನವಿ ಮಾಡಿದರೂ, ಅವರು ಉದ್ಧಟತನದಿಂದ ವರ್ತಿಸುತ್ತಾರೆ. ಬಿಬಿಎಂಪಿಯವರು ತಕ್ಷಣವೇ, ಒತ್ತುವರಿದಾರರಿಗೆ ನೋಟಿಸ್ ನೀಡಿ, ಕ್ರಮ ಜರುಗಿಸಬೇಕು ಎಂದು ಒತ್ತಾಯಿಸಿದ್ದಾರೆ.

ನಿಧನ ವಾರ್ತೆ

ಕೆ.ಎಲ್. ರಾಜೇಂದ್ರ

ಬೆಂಗಳೂರು: ಛಾಯಾಗ್ರಾಹಕ ಕೆ.ಎಲ್. ರಾಜೇಂದ್ರ (77) ಅವರು ಬುಧವಾರ ನಿಧನರಾಗಿದ್ದಾರೆ.

ಜಯನಗರದ ನಿವಾಸಿಯಾಗಿದ್ದ ಅವರು,ವಯೋಸಹಜ ಅನಾರೋಗ್ಯ ಸಮಸ್ಯೆ ಎದುರಿಸುತ್ತಿದ್ದರು. ಮೃತರಿಗೆ ಪತ್ನಿ, ಪುತ್ರಿ ಹಾಗೂ ಪುತ್ರ ಇದ್ದಾರೆ. ಟಿ.ಆರ್. ಮಿಲ್ ರುದ್ರಭೂಮಿಯಲ್ಲಿ ಅವರ ಅಂತ್ಯಕ್ರಿಯೆ ನಡೆಯಿತು.

ಸನ್ನಿಧಿ ಫೋಟೊ ಸ್ಟುಡಿಯೊ ಸ್ಥಾಪಿಸಿದ್ದ ಅವರು, ನೂರಾರು ಮಂದಿಗೆ ತರಬೇತಿಯ ಜತೆಗೆ ಉದ್ಯೋಗ ನೀಡಿದ್ದರು. ದಕ್ಷಿಣ ಭಾರತ ಛಾಯಾಗ್ರಾಹಕರ ಸಂಘದ ಅಧ್ಯಕ್ಷರಾಗಿ, ಕರ್ನಾಟಕ ಛಾಯಾಗ್ರಾಹಕರ ಸಂಘದ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸಿದ್ದರು.

ರಾಜ್‌ಕುಮಾರ್ ಚಿತ್ರಗಳಲ್ಲಿ ಛಾಯಾಗ್ರಾಹಕರಾಗಿ ಕೆಲಸ ಮಾಡಿದ್ದರು. 'ನಮ್ಮ ಸಂಸಾರ', 'ಕಸ್ತೂರಿ ನಿವಾಸ', 'ಧೂಮಕೇತು', 'ಕುಲಗೌರವ', 'ಭಾಗ್ಯದ ಬಾಗಿಲು' ಮುಂತಾದ ಚಿತ್ರಗಳಲ್ಲಿ ನಟಿಸಿದ್ದರು.

ರಾಮಕೃಷ್ಣ ಜಾಮೀನು ಅರ್ಜಿ ವಜಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಕಲಿ ದಾಖಲೆ ಸೃಷ್ಟಿಸಿ ಠೇವಣಿದಾರರಿಗೆ ₹1,544 ಕೋಟಿ ವಂಚಿಸಿದ ಆರೋಪಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ 31 ತಿಂಗಳಿಂದ ಜೈಲಿನಲ್ಲಿರುವ 'ಶ್ರೀ ಗುರು ರಾಘವೇಂದ್ರ ಸಹಕಾರ ಬ್ಯಾಂಕ್ ನಿಯಮಿತ' ಮತ್ತು 'ಶ್ರೀ ಗುರು ಸಾರ್ವಭೌಮ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿಮಿಟೆಡ್' ಅಧ್ಯಕ್ಷ ಕೆ.ರಾಮಕೃಷ್ಣ ಅವರು ಸಲ್ಲಿಸಿದ್ದ ಜಾಮೀನು ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿದೆ.

ಈ ಕುರಿತ ಕ್ರಿಮಿನಲ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಚ್.ಪಿ.ಸಂದೇಶ್ ಅವರಿದ್ದ ಏಕಸದಸ್ಯ ನ್ಯಾಯಪೀಠ, 'ಆರೋಪಿಯು ಬಿಎನ್‌ಎಸ್‌ಎಸ್ ಕಾಯ್ದೆ–2023ರ (ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ) ಕಲಂ 479ರ ಅಡಿಯಲ್ಲಿ ಪರಿಹಾರ ಪಡೆಯಲು ಸಾಧ್ಯವಿಲ್ಲ' ಎಂದು ಸ್ಪಷ್ಟಪಡಿಸಿದೆ.

'ಅರ್ಜಿದಾರ ಕೆ.ರಾಮಕೃಷ್ಣ ಅವರ ವಿರುದ್ಧ ಪಿಎಂಎಲ್ ಕಾಯ್ದೆ-2002, ಭಾರತೀಯ ದಂಡ ಸಂಹಿತೆ-1860 ಮತ್ತು ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿನ ಹೂಡಿಕೆದಾರರ ಹಿತರಕ್ಷಣಾ ಕಾಯ್ದೆ–2005ರ ಅಡಿಯಲ್ಲಿನ ವಿವಿಧ ಕಲಂಗಳ ಅನುಸಾರ ಪ್ರತ್ಯೇಕವಾಗಿ ಒಂದಕ್ಕಿಂತ ಹೆಚ್ಚು ಅಪರಾಧ ಪ್ರಕರಣಗಳು ದಾಖಲಾಗಿವೆ. ಅಂತೆಯೇ ₹1,544 ಕೋಟಿ ದುರ್ಬಳಕೆ ಮಾಡಿಕೊಂಡ ಆಪಾದನೆಯೂ ಇವರ ಮೇಲಿದೆ' ಎಂದು ನ್ಯಾಯಪೀಠ ಅಭಿಪ್ರಾಯ ಪಟ್ಟಿದೆ.

'ನ್ಯಾಯಾಂಗ ಬಂಧನಕ್ಕೆ ಒಳಗಾಗಿ ಎರಡು ವರ್ಷ ಏಳು ತಿಂಗಳು ಕಳೆದಿರುವ ಕಾರಣ; ನನಗೆ ಬಿಎನ್‌ಎಸ್‌ಎಸ್ ಕಲಂ 479(1) ಅನ್ನು ಆಧರಿಸಿ ಜಾಮೀನು ನೀಡಬೇಕೆಂಬ ಅರ್ಜಿದಾರರ ಮನವಿಯನ್ನು ಒಪ್ಪಲಾಗದು. ಭವಿಷ್ಯದಲ್ಲಿ ಅಪರಾಧಿಗೆ ವಿಧಿಸಬಹುದಾದ ಗರಿಷ್ಠ ಜೈಲು ಶಿಕ್ಷಾ ಅವಧಿಯ ಅರ್ಧಕ್ಕಿಂತಲೂ ಹೆಚ್ಚು ಅವಧಿಯವರೆಗೆ ಒಬ್ಬ ವ್ಯಕ್ತಿಯನ್ನು ಬಂಧನದಲ್ಲಿ ಮುಂದುವರಿಸಲು ಬಿಎನ್‌ಎಸ್‌ಎಸ್ ಕಾಯ್ದೆಯ ಕಲಂ 479(1)ರಲ್ಲಿ ನ್ಯಾಯಾಲಯಕ್ಕೆ ಅಧಿಕಾರ ನೀಡಲಾಗಿದೆ' ಎಂದು ನ್ಯಾಯಪೀಠ ತನ್ನ ಆದೇಶದಲ್ಲಿ ವಿವರಿಸಿದೆ.

ಅರ್ಜಿದಾರರು, ಜಾಮೀನು ಕೋರಿ ಮೂರನೇ ಬಾರಿಗೆ ಹೈಕೋರ್ಟ್ ಮೆಟ್ಟಿಲೇರಿದ್ದರು. ಪ್ರತಿವಾದಿ ಜಾರಿ ನಿರ್ದೇಶನಾಲಯ (ಇ.ಡಿ) ಪರ ವಿಶೇಷ ಪ್ರಾಸಿಕ್ಯೂಟರ್ ಎಂ. ಉನ್ನಿಕೃಷ್ಣನ್ ಅವರು ವಾದ ಮಂಡಿಸಿದರು.

ಕೊಲೆ ಪ್ರಕರಣ: 3 ತಂಡ ರಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಂದಿರಾನಗರದ ಎರಡನೇ ಹಂತದ ರಾಯಲ್ ಲಿವಿಂಗ್ ಲಾಡ್ಜ್‌ನಲ್ಲಿ ನಡೆದಿದ್ದ ಅಸ್ಸಾಂ ಮೂಲದ ಮಾಯಾ ಗೊಗೋಯಿ(19) ಕೊಲೆ ಪ್ರಕರಣದ ಆರೋಪಿ ಪತ್ತೆಗೆ ಮೂರು ವಿಶೇಷ ಪೊಲೀಸ್ ತಂಡ ರಚಿಸಲಾಗಿದೆ.

ಕೃತ್ಯ ಎಸಗಿದ ಬಳಿಕ ಆರೋಪಿ ಆರವ್ ಹಾರ್ನಿ ಕೇರಳಕ್ಕೆ ಪರಾರಿ ಆಗಿರುವ ಮಾಹಿತಿ ಇದ್ದು, ಆತನ ಮೊಬೈಲ್ ನೆಟ್‌ವರ್ಕ್, ಸಿ.ಸಿ. ಟಿ.ವಿ ಕ್ಯಾಮೆರಾಗಳನ್ನು ಆಧರಿಸಿ ಕಾರ್ಯಾಚರಣೆ ನಡೆಯುತ್ತಿದೆ ಎಂದು ಪೊಲೀಸರು ತಿಳಿಸಿದರು.

ಕೃತ್ಯ ಎಸಗಿದ ಆರೋಪಿ, ಹೋಟೆಲ್‌ನಿಂದ ಸುಮಾರು ದೂರ ಹೋಗುತ್ತಿದ್ದಂತೆ ಮೊಬೈಲ್ ಸ್ವಿಚ್ ಆಫ್ ಮಾಡಿಕೊಂಡು ಕ್ಯಾಬ್‌ನಲ್ಲಿ ಪರಾರಿ ಆಗಿದ್ದಾನೆ. ಕ್ಯಾಬ್ ಸಂಚರಿಸಿರುವ ಮಾರ್ಗದಲ್ಲಿ ಅಳವಡಿಸಲಾಗಿರುವ ಸಿ.ಸಿ.ಟಿ.ವಿ. ಕ್ಯಾಮೆರಾಗಳ ದೃಶ್ಯಾವಳಿ ಪರಿಶೀಲಿಸಲಾಗುತ್ತಿದೆ ಎಂದು ಮಾಹಿತಿ ನೀಡಿದರು.

ಕ್ಯಾಬ್ ಚಾಲಕನ ಹೇಳಿಕೆ ಹಾಗೂ ಆರವ್‌ನ ಮೊಬೈಲ್ ಕರೆಗಳ ಮಾಹಿತಿ ಆಧರಿಸಿ ತನಿಖೆ ನಡೆಸಿದಾಗ ಆರೋಪಿಯು ಕೇರಳಕ್ಕೆ ಪರಾರಿಯಾಗಿರುವ ಸುಳಿವು ಸಿಕ್ಕಿದೆ. ಈ ಸುಳಿವು ಆಧರಿಸಿ ಒಂದು ತಂಡ ಕೇರಳಕ್ಕೆ ತೆರಳಿದೆ. ಮತ್ತೊಂದು ತಂಡ ಮಹಾರಾಷ್ಟ್ರಕ್ಕೆ, ಇನ್ನೊಂದು ತಂಡ ನಗರದಲ್ಲೇ ಕಾರ್ಯಾಚರಣೆ ನಡೆಸುತ್ತಿದೆ ಎಂದು ಪೊಲೀಸರು ತಿಳಿಸಿದರು.

ಬೆಂಗಳೂರು ವೈದ್ಯಕೀಯ ಕಾಲೇಜಿನಲ್ಲಿ ಸಮಸ್ಯೆ

ವಿದ್ಯುತ್ ವ್ಯತ್ಯಯ: ಶಸ್ತ್ರಚಿಕಿತ್ಸೆ ಮುಂದೂಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯಡಿ (ಬಿಎಂಸಿಆರ್‌ಐ) ಕಾರ್ಯ ನಿರ್ವಹಿಸುತ್ತಿರುವ ಪ್ರಧಾನ ಮಂತ್ರಿ ಸ್ವಾಸ್ಥ್ಯ ಸುರಕ್ಷಾ ಯೋಜನೆ (ಪಿಎಂಎಸ್‌ಎಸ್‌ವೈ) ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ವಿದ್ಯುತ್ ವೋಲ್ಟೇಜ್ ಏರುಪೇರಿನಿಂದ ಸಮಸ್ಯೆಯಾಗಿದ್ದು, ತುರ್ತು ಹೊರತುಪಡಿಸಿ ಇತರೆ ಶಸ್ತ್ರಚಿಕಿತ್ಸೆಗಳನ್ನು ಮುಂದೂಡಲಾಗಿದೆ.

ಆಸ್ಪತ್ರೆಯು 200 ಹಾಸಿಗೆಗಳನ್ನು ಹೊಂದಿದೆ. ಒಮ್ಮೆಗೆ ಆರು ಶಸ್ತ್ರ ಚಿಕಿತ್ಸೆ ನಡೆಸುವ ಶಸ್ತ್ರಚಿಕಿತ್ಸಾ ಕೊಠಡಿಗಳನ್ನು ಒಳಗೊಂಡಿದ್ದು, ನಿತ್ಯ 30-40 ಶಸ್ತ್ರಚಿಕಿತ್ಸೆಗಳನ್ನು ನಡೆಸಲಾಗುತ್ತಿತ್ತು. ವಿದ್ಯುತ್ ವೋಲ್ಟೇಜ್ ಏರುಪೇರಿನಿಂದ ಕೇಂದ್ರೀಕೃತ ಹವಾನಿಯಂತ್ರಿತ (ಎಸಿ) ವ್ಯವಸ್ಥೆಯಲ್ಲಿ ಸಮಸ್ಯೆ ಕಾಣಿಸಿಕೊಂಡು, ಉಪಕರಣಗಳಿಗೆ ಹಾನಿಯಾಗಿದೆ. ನಾಲ್ಕು ದಿನಗಳಿಂದ ಹವಾ ನಿಯಂತ್ರಣ ವ್ಯವಸ್ಥೆ ಸ್ಥಗಿತವಾಗಿದ್ದರಿಂದ ಶಸ್ತ್ರಚಿಕಿತ್ಸೆಗಳನ್ನು ಮುಂದೂಡಲಾಗಿದೆ. ತುರ್ತು ಶಸ್ತ್ರಚಿಕಿತ್ಸೆ ಗಳನ್ನು ನಡೆಸಲಾಗುತ್ತಿದೆ.

'ಪಿಎಂಎಸ್‌ಎಸ್‌ವೈ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ವಿದ್ಯುತ್ ವೋಲ್ಟೇಜ್ ಏರುಪೇರಿನಿಂದ ಶಸ್ತ್ರಚಿಕಿತ್ಸೆಗೆ ಸಮಸ್ಯೆಯಾಯಿತು. ಕೇಂದ್ರೀಕೃತ ಹವಾನಿಯಂತ್ರಿತ ವ್ಯವಸ್ಥೆಯ ದುರಸ್ತಿ ಕಾರ್ಯ ವೇಗವಾಗಿ ನಡೆಯುತ್ತಿದ್ದು, ಒಂದೆರೆಡು ದಿನಗಳಲ್ಲಿ ಪೂರ್ಣಗೊಳ್ಳಲಿದೆ. ನಂತರ ಆಸ್ಪತ್ರೆಯ ವೇಳಾಪಟ್ಟಿಯಂತೆ ಶಸ್ತ್ರಚಿಕಿತ್ಸೆಗಳನ್ನು ನಡೆಸಲಾಗುತ್ತದೆ' ಎಂದು ಬಿಎಂಸಿಆರ್‌ಐ ಡೀನ್ ಡಾ.ರಮೇಶ್ ಕೃಷ್ಣ ತಿಳಿಸಿದ್ದಾರೆ.

'ತಾಂತ್ರಿಕ ಸಮಸ್ಯೆಯಿಂದ ಆಯ್ದ ಶಸ್ತ್ರಚಿಕಿತ್ಸೆಗಳನ್ನು ಮಾತ್ರ ಮುಂದೂಡಲಾಗಿದೆ. ಆದರೆ, ತುರ್ತು ಶಸ್ತ್ರಚಿಕಿತ್ಸೆಯಲ್ಲಿ ಯಾವುದೇ ಸಮಸ್ಯೆಯಾಗಿಲ್ಲ. ಮುಂದೆ ಈ ರೀತಿಯ ಸಮಸ್ಯೆ ಆಗದಂತೆ ಕ್ರಮ ಕೈಗೊಳ್ಳಲಾಗುವುದು' ಎಂದು ಭರವಸೆ ನೀಡಿದ್ದಾರೆ.

ಪಿಎಂಎಸ್‌ಎಸ್‌ವೈ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ

ನೀರಿನ ಟ್ಯಾಂಕರ್ ಚಾಲಕರ ವಿರುದ್ಧ 262 ಪ್ರಕರಣ

ಬೆಂಗಳೂರು: ಸಂಚಾರ ನಿಯಮ ಉಲ್ಲಂಘಿಸುತ್ತಿದ್ದ ನೀರಿನ ಟ್ಯಾಂಕರ್ ಚಾಲಕರ ವಿರುದ್ಧ ಸಂಚಾರ ಪೂರ್ವ ವಿಭಾಗದ ಪೊಲೀಸರು 262 ಪ್ರಕರಣ ದಾಖಲಿಸಿದ್ದಾರೆ.

ಏಕಮುಖ ರಸ್ತೆಯಲ್ಲಿ ಚಾಲನೆ ಮಾಡುತ್ತಿದ್ದ ಟ್ಯಾಂಕರ್ ಚಾಲಕರ ವಿರುದ್ಧ 148 ಹಾಗೂ ಕರ್ಕಶ ಹಾರ್ನ್ ಮಾಡುತ್ತಿದ್ದ ಚಾಲಕರ ವಿರುದ್ಧ 54 ಪ್ರಕರಣ ದಾಖಲಿಸಲಾಗಿದೆ ಎಂದು ಡಿಸಿಪಿ (ಸಂಚಾರ) ಕುಲದೀಪ್ ಕುಮಾರ್ ಆರ್. ಜೈನ್ ತಿಳಿಸಿದ್ದಾರೆ.

₹1 ಲಕ್ಷ ದಂಡ ಸಂಗ್ರಹಿಸಲಾಗಿದೆ. ಸಂಚಾರ ನಿಯಮಗಳನ್ನು ಕಡ್ಡಾಯವಾಗಿ ಪಾಲನೆ ಮತ್ತು ನಿಯಮಗಳ ಮಹತ್ವದ ಬಗ್ಗೆ ಅರಿವು ಮೂಡಿಸಲಾಯಿತು. ಮುಂದಿನ ದಿನಗಳಲ್ಲೂ ಈ ರೀತಿಯ ಕಾರ್ಯಾಚರಣೆ ನಡೆಸಲಾಗುವುದು ಎಂದು ತಿಳಿಸಿದ್ದಾರೆ.

SBI ಭಾರತೀಯ ಸ್ಟೇಟ್ ಬ್ಯಾಂಕ್, ಪ್ರಾದೇಶಿಕ ವ್ಯವಹಾರ ಕಚೇರಿ – 02
ಬಾಣಸವಾಡಿ, ನಂ.253, 4ನೇ ಮಹಡಿ, ಡಾಲ್ಫಿನ್ ಮ್ಯಾನ್ಷನ್, ಹೆಣ್ಣೂರು ರಸ್ತೆ
ಹೆಣ್ಣೂರು ಬಸ್ ಡಿಪೋ ಎದುರು, ಎಚ್ ಬಿಆರ್ ಲೇಔಟ್, ಬೆಂಗಳೂರು – 560043
ದೂರವಾಣಿ: 080–25944208 /25944212

ಗುತ್ತಿಗೆಗೆ ಅಗತ್ಯವಿರುವ ಆವರಣ

ಎಸ್‌ಬಿಐ ಪರವಾಗಿ ಪ್ರಾದೇಶಿಕ ವ್ಯವಸ್ಥಾಪಕರು, ಆರ್ ಬಿಒ–02, ಬಾಣಸವಾಡಿಯವರು, **ಎಸ್‌ಬಿಐ ಕಲ್ಕೆರೆ ಶಾಖೆಗೆ** ಮುಖ್ಯ ರಸ್ತೆಯಲ್ಲಿ ನೆಲಮಹಡಿಯಲ್ಲಿ ಇರುವ **ಸುಮಾರು 232 ಚದರ ಮೀಟರ್ (2500 ಚದರ ಅಡಿ +/– 25%)** ಕಾರ್ಪೆಟ್ ಪ್ರದೇಶವನ್ನು ಹೊಂದಿರುವ ವಾಣಿಜ್ಯ / ಕಚೇರಿ ಬಳಕೆಗಾಗಿ ಗುತ್ತಿಗೆ ಆಧಾರದ ಮೇಲೆ ಆವರಣಕ್ಕಾಗಿ ಮಾಲೀಕರು / ಪವರ್ ಆಫ್ ಅಟಾರ್ನಿ ಮಾಲೀಕರಿಂದ ಅರ್ಜಿಗಳನ್ನು ಆಹ್ವಾನಿಸಿದ್ದಾರೆ.
ವಿವರವಾದ ನಿಯತಾಂಕಗಳು, ಸಲ್ಲಿಕೆಗಳ ಸ್ಥಳ, ಷರತ್ತುಗಳ ನಿಯಮಗಳು ಮತ್ತು ಬೆಲೆ ಬಿಡ್ ಅನ್ನು ಒಳಗೊಂಡ ತಾಂತ್ರಿಕ ಬಿಡ್ ಗಳನ್ನು ಸಲ್ಲಿಸುವ ನಮೂನೆಯನ್ನು ಎಸ್‌ಬಿಐ ವೆಬ್ ಸೈಟ್ www.sbi.co.in ನ SBI in the news / Procurement News ಅಡಿಯಲ್ಲಿ 28.11.2024 ರಿಂದ 19.12.2024 ರವರೆಗೆ ಡೌನ್ ಲೋಡ್ ಮಾಡಬಹುದು. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ 19.12.2024 3.00 ಗಂಟೆಗೆ ಒಳಗಾಗಿ ಅಥವಾ ಅದಕ್ಕೂ ಮುಂಚಿತವಾಗಿ. ದಲ್ಲಾಳಿಗಳಿಗೆ ಅವಕಾಶ ನೀಡಲಾಗುವುದಿಲ್ಲ.

ಸಹಿ/–
ಪ್ರಾದೇಶಿಕ ವ್ಯವಸ್ಥಾಪಕರು
ಪ್ರಾದೇಶಿಕ ವ್ಯವಹಾರ ಕಚೇರಿ–02
ಬಾಣಸವಾಡಿ

ಸ್ಥಳ: ಬೆಂಗಳೂರು
ದಿನಾಂಕ: 28.11.2024

SBI ಭಾರತೀಯ ಸ್ಟೇಟ್ ಬ್ಯಾಂಕ್, ಪ್ರಾದೇಶಿಕ ವ್ಯವಹಾರ ಕಚೇರಿ – 02
ಬಾಣಸವಾಡಿ, ನಂ.253, 4ನೇ ಮಹಡಿ, ಡಾಲ್ಫಿನ್ ಮ್ಯಾನ್ಷನ್, ಹೆಣ್ಣೂರು ರಸ್ತೆ
ಹೆಣ್ಣೂರು ಬಸ್ ಡಿಪೋ ಎದುರು, ಎಚ್ ಬಿಆರ್ ಲೇಔಟ್, ಬೆಂಗಳೂರು – 560043
ದೂರವಾಣಿ: 080–25944208 /25944212

ಗುತ್ತಿಗೆಗೆ ಅಗತ್ಯವಿರುವ ಆವರಣ

ಎಸ್‌ಬಿಐ ಪರವಾಗಿ ಪ್ರಾದೇಶಿಕ ವ್ಯವಸ್ಥಾಪಕರು, ಆರ್ ಬಿಒ–02, ಬಾಣಸವಾಡಿಯವರು, **ಎಸ್‌ಬಿಐ ಬೂದಿಗೆರೆ ಕ್ರಾಸ್ ಶಾಖೆಗೆ** ಮುಖ್ಯ ರಸ್ತೆಯಲ್ಲಿ ನೆಲಮಹಡಿಯಲ್ಲಿ ಇರುವ **ಸುಮಾರು 232 ಚದರ ಮೀಟರ್ (2500 ಚದರ ಅಡಿ +/– 25%)** ಕಾರ್ಪೆಟ್ ಪ್ರದೇಶವನ್ನು ಹೊಂದಿರುವ ವಾಣಿಜ್ಯ / ಕಚೇರಿ ಬಳಕೆಗಾಗಿ ಗುತ್ತಿಗೆ ಆಧಾರದ ಮೇಲೆ ಆವರಣಕ್ಕಾಗಿ ಮಾಲೀಕರು / ಪವರ್ ಆಫ್ ಅಟಾರ್ನಿ ಮಾಲೀಕರಿಂದ ಅರ್ಜಿಗಳನ್ನು ಆಹ್ವಾನಿಸಿದ್ದಾರೆ.
ವಿವರವಾದ ನಿಯತಾಂಕಗಳು, ಸಲ್ಲಿಕೆಗಳ ಸ್ಥಳ, ಷರತ್ತುಗಳ ನಿಯಮಗಳು ಮತ್ತು ಬೆಲೆ ಬಿಡ್ ಅನ್ನು ಒಳಗೊಂಡ ತಾಂತ್ರಿಕ ಬಿಡ್ ಗಳನ್ನು ಸಲ್ಲಿಸುವ ನಮೂನೆಯನ್ನು ಎಸ್‌ಬಿಐ ವೆಬ್ ಸೈಟ್ www.sbi.co.in ನ SBI in the news / Procurement News ಅಡಿಯಲ್ಲಿ 28.11.2024 ರಿಂದ 19.12.2024 ರವರೆಗೆ ಡೌನ್ ಲೋಡ್ ಮಾಡಬಹುದು. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ 19.12.2024 3.00 ಗಂಟೆಗೆ ಒಳಗಾಗಿ ಅಥವಾ ಅದಕ್ಕೂ ಮುಂಚಿತವಾಗಿ. ದಲ್ಲಾಳಿಗಳಿಗೆ ಅವಕಾಶ ನೀಡಲಾಗುವುದಿಲ್ಲ.

ಸಹಿ/–
ಪ್ರಾದೇಶಿಕ ವ್ಯವಸ್ಥಾಪಕರು
ಪ್ರಾದೇಶಿಕ ವ್ಯವಹಾರ ಕಚೇರಿ–02
ಬಾಣಸವಾಡಿ

ಸ್ಥಳ: ಬೆಂಗಳೂರು
ದಿನಾಂಕ: 28.11.2024

SBI ಭಾರತೀಯ ಸ್ಟೇಟ್ ಬ್ಯಾಂಕ್, ಪ್ರಾದೇಶಿಕ ವ್ಯವಹಾರ ಕಚೇರಿ – 02
ಬಾಣಸವಾಡಿ, ನಂ.253, 4ನೇ ಮಹಡಿ, ಡಾಲ್ಫಿನ್ ಮ್ಯಾನ್ಷನ್, ಹೆಣ್ಣೂರು ರಸ್ತೆ
ಹೆಣ್ಣೂರು ಬಸ್ ಡಿಪೋ ಎದುರು, ಎಚ್ ಬಿಆರ್ ಲೇಔಟ್, ಬೆಂಗಳೂರು – 560043
ದೂರವಾಣಿ: 080–25944208 /25944212

ಗುತ್ತಿಗೆಗೆ ಅಗತ್ಯವಿರುವ ಆವರಣ

ಎಸ್‌ಬಿಐ ಪರವಾಗಿ ಪ್ರಾದೇಶಿಕ ವ್ಯವಸ್ಥಾಪಕರು, ಆರ್ ಬಿಒ–02, ಬಾಣಸವಾಡಿಯವರು, **ಎಸ್‌ಬಿಐ ಬಿಳೇಶಿವಲೆ ಮುಖ್ಯ ರಸ್ತೆ ಶಾಖೆಗೆ** ಮುಖ್ಯ ರಸ್ತೆಯಲ್ಲಿ ನೆಲಮಹಡಿಯಲ್ಲಿ ಇರುವ **ಸುಮಾರು 232 ಚದರ ಮೀಟರ್ (2500 ಚದರ ಅಡಿ +/– 25%)** ಕಾರ್ಪೆಟ್ ಪ್ರದೇಶವನ್ನು ಹೊಂದಿರುವ ವಾಣಿಜ್ಯ / ಕಚೇರಿ ಬಳಕೆಗಾಗಿ ಗುತ್ತಿಗೆ ಆಧಾರದ ಮೇಲೆ ಆವರಣಕ್ಕಾಗಿ ಮಾಲೀಕರು / ಪವರ್ ಆಫ್ ಅಟಾರ್ನಿ ಮಾಲೀಕರಿಂದ ಅರ್ಜಿಗಳನ್ನು ಆಹ್ವಾನಿಸಿದ್ದಾರೆ.
ವಿವರವಾದ ನಿಯತಾಂಕಗಳು, ಸಲ್ಲಿಕೆಗಳ ಸ್ಥಳ, ಷರತ್ತುಗಳ ನಿಯಮಗಳು ಮತ್ತು ಬೆಲೆ ಬಿಡ್ ಅನ್ನು ಒಳಗೊಂಡ ತಾಂತ್ರಿಕ ಬಿಡ್ ಗಳನ್ನು ಸಲ್ಲಿಸುವ ನಮೂನೆಯನ್ನು ಎಸ್‌ಬಿಐ ವೆಬ್ ಸೈಟ್ www.sbi.co.in ನ SBI in the news / Procurement News ಅಡಿಯಲ್ಲಿ 28.11.2024 ರಿಂದ 19.12.2024 ರವರೆಗೆ ಡೌನ್ ಲೋಡ್ ಮಾಡಬಹುದು. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ 19.12.2024 3.00 ಗಂಟೆಗೆ ಒಳಗಾಗಿ ಅಥವಾ ಅದಕ್ಕೂ ಮುಂಚಿತವಾಗಿ. ದಲ್ಲಾಳಿಗಳಿಗೆ ಅವಕಾಶ ನೀಡಲಾಗುವುದಿಲ್ಲ.

ಸಹಿ/–
ಪ್ರಾದೇಶಿಕ ವ್ಯವಸ್ಥಾಪಕರು
ಪ್ರಾದೇಶಿಕ ವ್ಯವಹಾರ ಕಚೇರಿ–02
ಬಾಣಸವಾಡಿ

ಸ್ಥಳ: ಬೆಂಗಳೂರು
ದಿನಾಂಕ: 28.11.2024

‘ಅಧಿಕ ಬಡ್ಡಿ ಆಮಿಷ ವಂಚನೆ’

ಪ್ರಜಾವಾಣಿ ವಾರ್ತೆ

ಅಹಮದಾಬಾದ್: ಅಧಿಕ ಬಡ್ಡಿ ಆಮಿಷವೊಡ್ಡಿ ಭಾರಿ ಹಣ ಹೂಡಿಕೆ ಮಾಡಿಸಿಕೊಂಡು ವಂಚಿಸಿದ ಹಗರಣವನ್ನು ಗುಜರಾತ್‌ನ ಸಬರ್‌ಕಾಂತಾ ಜಿಲ್ಲೆಯಲ್ಲಿ ಸಿಐಡಿ ಪೊಲೀಸರು ಪತ್ತೆ ಮಾಡಿದ್ದಾರೆ. ವಹಿವಾಟಿನ ಮೊತ್ತ ₹6000 ಕೋಟಿಗೂ ಅಧಿಕ ಎಂಬ ಅಂದಾಜಿದೆ.

ಹಗರಣದ ಸೂತ್ರಧಾರಿ ಎನ್ನಲಾದ ಬಿಜೆಪಿ ಸದಸ್ಯನೊಬ್ಬ ಸದ್ಯ ತಲೆಮರೆಸಿಕೊಂಡಿದ್ದಾನೆ. ಕನಿಷ್ಠ ಏಳು ಜಿಲ್ಲೆಗಳಲ್ಲಿ ಈ ಹಗರಣ ವ್ಯಾಪಿಸಿದೆ. ಅಧಿಕ ಬಡ್ಡಿಯನ್ನು ನೀಡುವ ಆಮಿಷವೊಡ್ಡಿ ಹೂಡಿಕೆ ಆಕರ್ಷಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಅನಾಮಧೇಯ ದೂರು ಆಧರಿಸಿ ಬಿಝಡ್ ಇಂಟರ್‌ನ್ಯಾಷನಲ್ ಬ್ರೋಕಿಂಗ್ ಪ್ರೈವೇಟ್ ಲಿಮಿಟೆಡ್‌ನ ವಿವಿಧ ಕಚೇರಿಗಳ ಮೇಲೆ ದಾಳಿ ನಡೆಸಲಾಯಿತು ಎಂದು ತಿಳಿಸಿದ್ದಾರೆ.

ಹೆಚ್ಚಿದ ವಾಹನ ದಟ್ಟಣೆಯಲ್ಲಿ ಜಿಪಿಎಸ್ ಟ್ರ್ಯಾಕಿಂಗ್ ಸಿಸ್ಟಂ ಮೂಲಕ ನೈಜ ಸಮಯದ ಗುರುತು

ಬಿಎಂಟಿಸಿ: ಚಾಲನಾ ಅವಧಿ ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ವಾಹನ ದಟ್ಟಣೆಗೆ ಅನುಗುಣವಾಗಿ ಬಸ್ ಟ್ರಿಪ್‌ಗಳ ಅವಧಿಯನ್ನು ಬಿಎಂಟಿಸಿ ಹೆಚ್ಚಿಸಿದೆ. ನಿಗದಿತ ಮಾರ್ಗಗಳಲ್ಲಿ ಗುರಿ ತಲುಪಲು ಬಸ್ ಸಂಚಾರಕ್ಕೆ ಎಷ್ಟು ಸಮಯ ಹಿಡಿಯುತ್ತದೆ ಎಂಬುದನ್ನು ವೈಜ್ಞಾನಿಕವಾಗಿ ಕಂಡುಕೊಂಡು, ಅವಧಿ ಬದಲಾವಣೆ ಮಾಡಿದೆ.

ಬಿಎಂಟಿಸಿ ಬಸ್‌ಗಳ 5,300 ಅನುಸೂಚಿಗಳು (ಮಾರ್ಗ) ಇದ್ದು, ಅದರಲ್ಲಿ ಅಧಿಕ ದಟ್ಟಣೆ ಇರುವ 2000 ಅನುಸೂಚಿಗಳಲ್ಲಿ ನಾಲ್ಕು ತಿಂಗಳುಗಳಿಂದ ಅವಧಿ ಹೆಚ್ಚಿಸುವ ಪ್ರಕ್ರಿಯೆ ನಡೆಯುತ್ತಿದೆ. ಸಮಯಕ್ಕೆ ಸರಿಯಾಗಿ ಟ್ರಿಪ್ ಮುಗಿಸಬೇಕಾದ ಆತುರದಲ್ಲಿ ಅಪಘಾತಗಳು ಉಂಟಾಗುವುದು, ನಡುವೆ ಟ್ರಿಪ್ ಕಡಿತಗೊಳಿಸುವುದು ಸೇರಿದಂತೆ ಹಲವು ಸಮಸ್ಯೆಗಳಿಗೆ ಈ ಬದಲಾವಣೆಯಿಂದ ಪರಿಹಾರ ದೊರಕಲಿದೆ.

ಬಿಎಂಟಿಸಿ ಬಸ್‌ಗಳು 60 ಸಾವಿರ ಟ್ರಿಪ್ (ಸುತ್ತುವಳಿ) ನಡೆಸುತ್ತಿದ್ದು, ಚಾಲನಾ ಅವಧಿ ವಿಸ್ತರಣೆಯಿಂದ ಶೇ 10ರಷ್ಟು ಟ್ರಿಪ್‌ಗಳು ಕಡಿಮೆಯಾಗಲಿವೆ.

‘25–30 ವರ್ಷಗಳ ಹಿಂದೆ ಸಮಯ ನಿಗದಿ ಮಾಡುವಾಗ ಇಷ್ಟು ವಾಹನದಟ್ಟಣೆ ಇರಲಿಲ್ಲ. ವರ್ಷದಿಂದ ವರ್ಷಕ್ಕೆ ದಟ್ಟಣೆ ಹೆಚ್ಚುತ್ತಾ ಬಂದಿದೆ. ಹಿಂದೆ 45–50 ನಿಮಿಷದಲ್ಲಿ ಕ್ರಮಿಸಬಹುದಾಗಿದ್ದ ಪ್ರದೇಶಗಳಿಗೆ ತಲುಪಲು ಈಗ 1 ಗಂಟೆ 15 ನಿಮಿಷ ಬೇಕಾಗುತ್ತದೆ. ಇದನ್ನೆಲ್ಲ ಗಮನದಲ್ಲಿಟ್ಟು ಬದಲಾವಣೆ ಮಾಡಲಾಗಿದೆ’ ಎಂದು ಬಿಎಂಟಿಸಿ ಮುಖ್ಯ ಸಂಚಾರ ವ್ಯವಸ್ಥಾಪಕ ಪ್ರಭಾಕರ ರೆಡ್ಡಿ ಮಾಹಿತಿ ನೀಡಿದರು.

‘ಬಸ್‌ಗಳಲ್ಲಿ ಜಿಪಿಎಸ್ ಟ್ರ್ಯಾಕಿಂಗ್ ಸಿಸ್ಟಂ ಅಳವಡಿಸಿದ ಮೇಲೆ ಎವಿಎಲ್‌ಎಸ್ (ಅಟೊಮೆಟಿಕ್ ವೆಹಿಕಲ್ ಲೊಕೇಶನ್ ಸಿಸ್ಟಂ) ಮೂಲಕಾ ಡೇಟಾ ಸಿಗುತ್ತಿದೆ. ‘ಎ’ ಕೇಂದ್ರದಿಂದ ‘ಬಿ’ ಕೇಂದ್ರಕ್ಕೆ ತಲುಪಲು ಎಷ್ಟು ಸಮಯ ಹಿಡಿಯಿತು ಎಂಬುದು ದಾಖಲಾಗುತ್ತಿದೆ. ದಟ್ಟಣೆ ಸಮಯದಲ್ಲಿ ಎಷ್ಟು ಸಮಯ ಹಿಡಿಯಿತು? ದಟ್ಟಣೆ ಇಲ್ಲದ ಸಮಯದಲ್ಲಿ ಎಷ್ಟು ಸಮಯ ಹಿಡಿಯಿತು ಎಂಬ ನೈಜ ಸಮಯದ ವೈಜ್ಞಾನಿಕ ಮಾಹಿತಿ ದಾಖಲಾಗಿದೆ. ಒಂದು ತಿಂಗಳ ಸರಾಸರಿಯನ್ನು ಆಧರಿಸಿ ಫಾರ್ಮ್ 4ರಲ್ಲಿ ನೀಡಲಾಗುವ ಚಾಲನಾ ಅವಧಿಯನ್ನು ಹೆಚ್ಚಿಸಲಾಗಿದೆ’ ಎಂದು ವಿವರಿಸಿದರು.

ಚಾಲಕರಿಗೆ 8 ಗಂಟೆಯ ಪಾಳಿ ಇರುತ್ತದೆ. ಅದರಲ್ಲಿ ಇಷ್ಟು ಟ್ರಿಪ್‌ಗಳನ್ನು ಮಾಡಬೇಕು ಎಂದಿರುತ್ತದೆ. ಆದರೆ, ನಿಗದಿಪಡಿಸಿದ ಟ್ರಿಪ್ ಮಾಡಲಾಗದೇ ಇದ್ದಾಗ ಚಾಲಕರು ಒತ್ತಡಕ್ಕೆ ಸಿಲುಕುತ್ತಾರೆ. ಮಧ್ಯದಲ್ಲಿ ಟ್ರಿಪ್‌ಗಳನ್ನು ಕಡಿತಗೊಳಿಸುತ್ತಾರೆ. ಅನಧಿಕೃತವಾಗಿ ಕಡಿತಗೊಳಿಸಿದಾಗ, ಪ್ರಯಾಣಿಕರಿಗೂ ತೊಂದರೆಯಾಗುತ್ತದೆ. ಕೆಲವು ಬಾರಿ ಬಸ್ ನಿಲ್ದಾಣಕ್ಕೆ ಬಂದು ಸಮಯ ಹೊಂದಾಣಿಕೆಗಾಗಿ ತಕ್ಷಣ ಹೊರಡಬೇಕಾಗುತ್ತದೆ. ಒಂದು ಬಸ್ ಮೆಜೆಸ್ಟಿಕ್‌ನಿಂದ ಜಯನಗರಕ್ಕೆ ಒಂದು ಪಾಳಿಯಲ್ಲಿ 8 ಟ್ರಿಪ್ ಮಾಡುತ್ತಿದ್ದರೆ, ಇನ್ನು ಮುಂದೆ ಸರಾಸರಿ 6 ಟ್ರಿಪ್ ಇರಲಿದೆ. ಇದು ಚಾಲಕರ ಮತ್ತು ನಿರ್ವಾಹಕರ ಒತ್ತಡ ಕಡಿಮೆಗೊಳಿಸಲಿದೆ ಎಂದು ಬಿಎಂಟಿಸಿ ಅಧಿಕಾರಿಗಳು ಮಾಹಿತಿ ನೀಡಿದರು.

ಚಾಲನಾ ಅವಧಿ ವಿಸ್ತರಿತ ಕೆಲವು ಮಾರ್ಗಗಳು

ಎಲ್ಲಿಂದ	ಎಲ್ಲಿಗೆ	ದೂರ (ಕಿ.ಮೀ)	ಹಿಂದಿನ ಅವಧಿ	ಪರಿಷ್ಕೃತ ಅವಧಿ
ಶಿವಾಜಿನಗರ ಬಸ್ ನಿಲ್ದಾಣ	ಬನಶಂಕರಿ ನಿಲ್ದಾಣ	12.5	45 ನಿಮಿಷ	1 ಗಂಟೆ
ಕೆಂಪೇಗೌಡ ಬಸ್ ನಿಲ್ದಾಣ	ಉತ್ತರಹಳ್ಳಿ	15.8	55 ನಿಮಿಷ	1.15 ಗಂಟೆ
ಕೆ.ಆರ್. ಮಾರುಕಟ್ಟೆ	ಜಾಲಹಳ್ಳಿ ಕ್ರಾಸ್	22.5	1.25 ಗಂಟೆ	1.40 ಗಂಟೆ
ಎಲೆಕ್ಟ್ರಾನಿಕ್ ಸಿಟಿ	ಕೆಂಗೇರಿ	29.6	1.40 ಗಂಟೆ	2 ಗಂಟೆ
ಕೆಂಗೇರಿ	ದ್ವಾರಕಾನಗರ	28.8	1.30 ಗಂಟೆ	1. 50 ಗಂಟೆ

ಸುದ್ದಿ 2 ನಿಮಿಷ

‘ಅದಾನಿ ವಿರುದ್ಧದ ಪ್ರಕರಣ ಆರೋಪಪಟ್ಟಿಯಲ್ಲಿ ವಿವರ ಇಲ್ಲ’

ನವದೆಹಲಿ: ‘ಅಮೆರಿಕ ಕೋರ್ಟ್‌ನಲ್ಲಿರುವ ಅದಾನಿ ಪ್ರಕರಣದ ಆರೋಪಪಟ್ಟಿಯಲ್ಲಿ ಯಾರು ಲಂಚ ನೀಡಿದರು ಎಂಬ ವಿವರವೇ ಇಲ್ಲ’ ಎಂದು ಮಾಜಿ ಅಟಾರ್ನಿ ಜನರಲ್ ಮುಕುಲ್ ರೋಹಟಗಿ ತಿಳಿಸಿದ್ದಾರೆ.

ಅದಾನಿ ಸಮೂಹದ ಸ್ಥಾಪಕ ಅಧ್ಯಕ್ಷ ಗೌತಮ್ ಅದಾನಿ, ಅವರ ಅಣ್ಣನ ಮಗ ಸಾಗರ್ ಅದಾನಿ ವಿರುದ್ಧದ ಲಂಚದ ಪ್ರಕರಣದಲ್ಲಿ ಅಮೆರಿಕದ ವಿದೇಶಿ ಭ್ರಷ್ಟಾಚಾರ ಚಟುವಟಿಕೆ ತಡೆ ಕಾಯ್ದೆ (ಎಫ್‌ಸಿಪಿಎ) ಉಲ್ಲಂಘಿಸಿದ ಆರೋಪವೇ ಇಲ್ಲ ಎಂದಿದ್ದಾರೆ.

ಸೋಲಾರ್ ಇಂಧನ ಒಪ್ಪಂದದಲ್ಲಿ ಅದಾನಿ ಭಾರತದ ಅಧಿಕಾರಿಗಳಿಗೆ ಲಂಚ ನೀಡಿದ್ದಾರೆ ಎಂಬ ಆರೋಪವಿದೆ. ಆದರೆ, ಯಾವ ಸ್ವರೂಪದಲ್ಲಿ ಲಂಚ ನೀಡಿದರು ಎಂಬ ಉಲ್ಲೇಖವಿಲ್ಲ ಎಂದಿದ್ದಾರೆ.

‘ಯಾರಿಗೆ, ಯಾವ ಸ್ವರೂಪದಲ್ಲಿ ನೀಡಲಾಯಿತು, ಅವರು ಯಾವ ಇಲಾಖೆಗೆ ಸೇರಿದವರು ಎಂಬ ಸ್ಪಷ್ಟ ವಿವರವೇ ಆರೋಪಪಟ್ಟಿಯಲ್ಲಿ ಇಲ್ಲ’ ಎಂದಿದ್ದಾರೆ. ಈ ದೋಷರೋಪಕ್ಕೆ ಆಧಾರವೇನು ಎಂದೂ ಪ್ರಶ್ನಿಸಿದ್ದಾರೆ.

ಕಾಂಗ್ರೆಸ್ ಟೀಕೆ: ಅದಾನಿ ವಿರುದ್ಧದ ಲಂಚ ಆರೋಪದ ಕುರಿತು ವಕೀಲರಾದ ಮಹೇಶ್ ಜೇಠ್ಮಲಾನಿ ಮತ್ತು ಮುಕುಲ್ ರೋಹಟಗಿ ಅವರ ಹೇಳಿಕೆಗಳು ಆರೋಪಗಳ ಗಂಭೀರತೆ ದುರ್ಬಲಗೊಳಿಸುವ ಪ್ರಯತ್ನ ಎಂದು ಕಾಂಗ್ರೆಸ್ ಟೀಕಿಸಿದೆ.

ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂವಹನಗಳ ಉಸ್ತುವಾರಿ) ಜೈರಾಮ್ ರಮೇಶ್ ಅವರು, ‘ಈ ಕ್ಷಣವನ್ನು ಇತಿಹಾಸವು ಕ್ಷಮಿಸುವುದಿಲ್ಲ ಅಥವಾ ಮರೆಯುವುದಿಲ್ಲ’ ಎಂದು ಪ್ರತಿಪಾದಿಸಿದ್ದಾರೆ.

ಮುಕುಲ್ ರೋಹಟಗಿ

ಮುಡಾ: ಇ.ಡಿ ವಿಚಾರಣೆಗೆ ಗಂಗರಾಜು ಹಾಜರು

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪತ್ನಿಗೆ ಮುಡಾ ನಿವೇಶನ ಹಂಚಿಕೆ ಪ್ರಕರಣದಲ್ಲಿ ಮಾಹಿತಿ ಹಕ್ಕು ಕಾರ್ಯಕರ್ತ ಗಂಗರಾಜು ಅವರು ಬುಧವಾರ ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳ ಎದುರು ವಿಚಾರಣೆಗೆ ಹಾಜರಾಗಿ, ದಾಖಲೆಗಳನ್ನು ನೀಡಿದ್ದಾರೆ. ಮೈಸೂರಿನ ಗಂಗರಾಜು ಅವರು ಸಿದ್ದರಾಮಯ್ಯ ವಿರುದ್ಧ ಇ.ಡಿಗೆ ದೂರು ನೀಡಿದ್ದರು. ಇ.ಡಿಯು ಗಂಗರಾಜು ಅವರನ್ನು ಈಗಾಗಲೇ ಒಂದು ಬಾರಿ ವಿಚಾರಣೆ ನಡೆಸಿ, ಮಾಹಿತಿ ಕಲೆ ಹಾಕಿತ್ತು. ಮತ್ತೆ ವಿಚಾರಣೆಗೆ ಹಾಜರಾಗುವಂತೆ ಸಮನ್ಸ್ ನೀಡಿತ್ತು.

ಶಾಂತಿನಗರದಲ್ಲಿನ ಇ.ಡಿ ಪ್ರಾದೇಶಿಕ ಕಚೇರಿಗೆ ಬಂದಿದ್ದ ಗಂಗರಾಜು ಅವರು, ಹಲವು ತಾಸು ವಿಚಾರಣೆ ಎದುರಿಸಿದರು. ನಿವೇಶನ ಹಂಚಿಕೆಗೆ ಸಂಬಂಧಿಸಿದಂತೆ ಇ.ಡಿ ಅಧಿಕಾರಿಗಳಿಗೆ ನೂರಾರು ಪುಟಗಳ ದಾಖಲೆಗಳನ್ನು ಸಲ್ಲಿಸಿದರು. ಅಧಿಕಾರಿಗಳು ಕೇಳಿದ ಹಲವು ಮಾಹಿತಿಗಳನ್ನು ವಿವರಿಸಿದರು ಎಂದು ಮೂಲಗಳು ಹೇಳಿವೆ.

ಚಿತ್ತಾಪಹಾರಿ ಟೋರಾಟೋರಿ

ಬಸವನಗುಡಿಯಲ್ಲಿ ನಡೆಯುತ್ತಿರುವ ಕಡಲೆ ಕಾಯಿ ಪರಿಷೆಯಲ್ಲಿ ಬುಧವಾರ ಟೋರಾಟೋರಿ ಆಟಿಕೆಯಲ್ಲಿ ಕುಳಿತು ಜನರು ಸಂಭ್ರಮಿಸಿದರು
ಪ್ರಜಾವಾಣಿ ಚಿತ್ರ: ಎಂ.ಎಸ್.ಮಂಜುನಾಥ್

ಶಿವಗಂಗೆಯಲ್ಲಿ 3ನೇ ಚಿರತೆ ಸೆರೆ

ಪ್ರಜಾವಾಣಿ ವಾರ್ತೆ

ದಾಬಸ್ ಪೇಟೆ: ಶಿವಗಂಗೆ ಬೆಟ್ಟದ ತಪ್ಪಲಲ್ಲಿರುವ ಕಾಡಿನಲ್ಲಿ ಅರಣ್ಯ ಇಲಾಖೆ ಇಟ್ಟಿದ್ದ ಬೋನಿನಲ್ಲಿ ಬುಧವಾರ ಮತ್ತೊಂದು ಚಿರತೆ ಸೆರೆಯಾಗಿದೆ.

‘ಶಿವಗಂಗೆ ಬೆಟ್ಟದ ಹಿಂಬದಿಯ ಹುಣಸೇಹಳ್ಳ ಸಮೀಪ ಇಟ್ಟಿದ್ದ ಬೋನಿನಲ್ಲಿ ಸಂಜೆ 4.30ರ ಸಮಯದಲ್ಲಿ ಚಿರತೆ ಸೆರೆಯಾಗಿದೆ. ಇದು ಸುಮಾರು ಎಂಟು ವರ್ಷ ವಯಸ್ಸಿನ ಗಂಡು ಚಿರತೆ’ ಎಂದು ಅರಣ್ಯ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ಮೂರು ದಿನಗಳಲ್ಲಿ ಸೆರೆಯಾಗಿರುವ ಮೂರನೇ ಚಿರತೆ ಇದು. ಅರಣ್ಯ ಇಲಾಖೆ ಸಿಬ್ಬಂದಿ ಚಿರತೆ ಹಿಡಿಯುವ ಕಾರ್ಯಾಚರಣೆಯನ್ನು ಮುಂದುವರಿಸಿದ್ದಾರೆ. ಈವರೆಗೆ ಎರಡು ಗಂಡು ಮತ್ತು ಒಂದು ಹೆಣ್ಣು ಚಿರತೆ ಸೆರೆಸಿಕ್ಕಿವೆ. ಈ ಚಿರತೆಯನ್ನು ಅರಣ್ಯ ಇಲಾಖೆ ಸಿಬ್ಬಂದಿ ಬನ್ನೇರುಘಟ್ಟ ಜೈವಿಕ ಉದ್ಯಾನಕ್ಕೆ ರವಾನಿಸಿದ್ದಾರೆ. ಈಗ ಸೆರೆ ಸಿಕ್ಕಿರುವ ಚಿರತೆಯ ಕೂದಲು, ಜೊಲ್ಲನ್ನು ಪರೀಕ್ಷೆಗಾಗಿ ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಈವರೆಗೂ 3 ಚಿರತೆಗಳು ಸೆರೆ ಸಿಕ್ಕಿದ್ದರೂ, ನ.18ರಂದು ಕಂಬಾಳು ಗೊಲ್ಲರಹಟ್ಟಿಯ ಕರಿಯಮ್ಮ ಅವರನ್ನು ಕೊಂದ ಚಿರತೆ ಯಾವುದು ಎಂಬುದು ಇನ್ನೂ ಪತ್ತೆಯಾಗಿಲ್ಲ. ಆ ಚಿರತೆ ಯಾವುದು ಎಂದು ಪತ್ತೆಯಾಗುವವರೆಗೂ ಕಾರ್ಯಾಚರಣೆ ಮುಂದುವರಿಯುತ್ತದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕರಿಯಮ್ಮ ಅವರನ್ನು ಕೊಂದ ಘಟನೆಯ ನಂತರ, ಶಿವಗಂಗೆ ಬೆಟ್ಟದ ತಪ್ಪಲಿನ ಅರಣ್ಯ ವ್ಯಾಪ್ತಿಯಲ್ಲಿ ಚಿರತೆ ಹಿಡಿಯಲು ಅರಣ್ಯ ಅಧಿಕಾರಿಗಳು ಒಂಬತ್ತು ಬೋನುಗಳನ್ನು ಇರಿಸಿದ್ದರು. ಅರಣ್ಯ ಸಿಬ್ಬಂದಿ ನಿರಂತರವಾಗಿ ಕಾರ್ಯಾಚರಣೆ ನಡೆಸುತ್ತಿದ್ದಾರೆ.

ಕೆರೆಪಾಳ್ಯದಲ್ಲಿ ಕಂಡ ಚಿರತೆ

ಸೋಂಪುರ ಹೋಬಳಿಯ ನರಸೀಪುರ ಪಂಚಾಯಿತಿ ವ್ಯಾಪ್ತಿಯ ಹೆಗ್ಗುಂದ ಬೆಟ್ಟಕ್ಕೆ ಹೊಂದಿಕೊಂಡಿರುವ ಕೆರೆಪಾಳ್ಯ ಗ್ರಾಮದ ಬಂಡೆಯ ಮೇಲೆ ಬುಧವಾರ ಸಂಜೆ ಮತ್ತೊಂದು ಚಿರತೆ ಕಾಣಿಸಿಕೊಂಡಿದೆ.

ಗ್ರಾಮದ ವೆಂಕಟೇಶ್ ಎಂಬುವವರು ಹೊಲಕ್ಕೆ ಹೋಗಿ ಬರುವಾಗ ಬಂಡೆಯ ಮೇಲೆ ಚಿರತೆ ಮಲಗಿದ್ದನ್ನು ಕಂಡು, ಮೊಬೈಲ್‌ನಲ್ಲಿ ಫೋಟೊ ಸೆರೆ ಹಿಡಿದಿದ್ದಾರೆ.

‘ನಮ್ಮ ಮನೆಯ ಬಳಿ ಏಳೆಂಟು ಬೀದಿ ನಾಯಿಗಳು ಇದ್ದವು. 15 ದಿನಗಳಿಂದ ಮೂರು ನಾಯಿಗಳು ಕಾಣುತ್ತಿಲ್ಲ. ಕೆಲ ದಿನಗಳ ಹಿಂದೆ ಮನೆಯ ಪಕ್ಕದಲ್ಲಿ ನಾಯಿಯೊಂದರ ರುಂಡ ಬಿದ್ದಿತ್ತು. ಚಿರತೆ ದಾಳಿಯಿಂದ ನಾಯಿಗಳು ಸತ್ತಿರಬಹುದು ಎಂಬ ಅನುಮಾನ ಮೂಡಿದೆ’ ಎಂದು ರಮೇಶ್ ಹೇಳಿದರು.

‘ಕಂಬಾಳು ಗೊಲ್ಲರಹಟ್ಟಿಯಲ್ಲಿ ನಡೆಯುತ್ತಿರುವ ಕಾರ್ಯಾಚರಣೆ ಮುಗಿದ ಮೇಲೆ, ಈ ಭಾಗದಲ್ಲಿ ಬೋನು ಇಟ್ಟು ಚಿರತೆ ಹಿಡಿಯಲಾಗುವುದು’ ಎಂದು ಅರಣ್ಯ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

‘ಬೆಳಗಾವಿ ಚಲೋ’ ಡಿ.9ಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಗಳಲ್ಲಿ ಕರ್ತವ್ಯ ನಿರ್ವಹಿಸುವ ಕಾರ್ಮಿಕರ 38 ತಿಂಗಳ ಹಿಂಬಾಕಿ ಮೊತ್ತ ಬಿಡುಗಡೆ, ವೇತನ ಹೆಚ್ಚಳ ಸೇರಿ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಡಿ.9ರಂದು ‘ಬೆಳಗಾವಿ ಚಲೊ’ ನಡೆಸಲು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಗಳ ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿ ನಿರ್ಧರಿಸಿದೆ.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕೆಎಸ್‌ಆರ್‌ಟಿಸಿ ಸ್ಟಾಫ್ ಆ್ಯಂಡ್ ವರ್ಕರ್ಸ್ ಫೆಡರೇಶನ್ ಅಧ್ಯಕ್ಷ ಎಚ್.ವಿ. ಅನಂತಸುಬ್ಬರಾವ್, ‘ಸರ್ಕಾರದಿಂದ ನಮ್ಮ ಬೇಡಿಕೆಗಳಿಗೆ ಸ್ಪಂದನೆ ದೊರೆಯದಿರುವುದರಿಂದ ನ.22ರಿಂದ ಜಂಟಿ ಕ್ರಿಯಾ ಸಮಿತಿಯ ಸಭೆ ನಡೆಸಿ, ಬೆಳಗಾವಿ ಚಲೊ ಹಮ್ಮಿಕೊಳ್ಳಲು ನಿರ್ಧರಿಸಲಾಗಿದೆ. ನಮ್ಮ ಬೇಡಿಕೆಗಳಿಗೆ ಸರ್ಕಾರ ಸ್ಪಂದಿಸದಿದ್ದರೆ ಡಿ.31ರಿಂದ ಸಾರಿಗೆ ನೌಕರರ ಮುಷ್ಕರ ನಡೆಸಲಾಗುತ್ತದೆ’ ಎಂದರು.

ಕಾವೇರಿ ನೀರು ಸಂಪರ್ಕ ಅಭಿಯಾನ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕಾವೇರಿ ಐದನೇ ಹಂತದ ಯೋಜನೆಯಡಿ ಹೊಸದಾಗಿ ಕುಡಿಯುವ ನೀರಿನ ಸಂಪರ್ಕ ನೀಡುವುದಕ್ಕಾಗಿ ಜಲಮಂಡಳಿಯಿಂದ ‘ಮನೆ ಮನೆಗೂ ಕಾವೇರಿ ನೀರು-ಸಂಪರ್ಕ ಅಭಿಯಾನ’ವನ್ನು ಬುಧವಾರದಿಂದ ಆರಂಭಿಸಲಾಗಿದೆ’ ಎಂದು ಜಲಮಂಡಳಿ ಅಧ್ಯಕ್ಷ ರಾಮ್‌ಪ್ರಸಾತ್ ಮನೋಹರ್ ತಿಳಿಸಿದ್ದಾರೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ(ಬಿಬಿಎಂಪಿ) ವ್ಯಾಪ್ತಿಯ 110 ಹಳ್ಳಿಗಳಾದ್ಯಂತ ನಡೆಯಲಿರುವ ಈ ಅಭಿಯಾನದಲ್ಲಿ ಸಾರ್ವಜನಿಕರು ಪಾಲ್ಗೊಂಡು, ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು. ಸ್ಥಳದಲ್ಲೇ ಆನ್‌ಲೈನ್ ಮೂಲಕ ನಿಗದಿತ ಶುಲ್ಕ ಪಾವತಿಸಿ, ನೀರಿನ ಸಂಪರ್ಕ ಪಡೆಯುವಂತೆ ಅವರು ಮನವಿ ಮಾಡಿದ್ದಾರೆ.

‘ಕಾವೇರಿ ನೀರಿನ ಸಂಪರ್ಕಕ್ಕೆ ಸಂಬಂಧಿಸಿದಂತೆ ಕೆಲವು ಕಡೆಗಳಲ್ಲಿ ಮಧ್ಯವರ್ತಿಗಳ ಹಸ್ತಕ್ಷೇಪದ ಬಗ್ಗೆ ದೂರುಗಳು ಕೇಳಿಬಂದಿದ್ದವು. ಕೆಲವು ಗ್ರಾಹಕರು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವ ಕುರಿತು ಗೊಂದಲಗಳಿರುವ ಬಗ್ಗೆಯೂ ಮಂಡಳಿಯ ಗಮನಸೆಳೆದಿದ್ದರು. ಈ ಎಲ್ಲ ಅಂಶಗಳನ್ನು ಗಮನದಲ್ಲಿಟ್ಟುಕೊಂಡು, ನೀರಿನ ಸಂಪರ್ಕ ಪಡೆಯುವ ವ್ಯವಸ್ಥೆಯನ್ನು ಸರಳಗೊಳಿಸಿ, ಜನರ ಮನೆ ಬಾಗಿಲಿಗೆ ತೆರಳಿ ಕಾವೇರಿ ನೀರಿನ ಸಂಪರ್ಕ ನೀಡುವುದಕ್ಕಾಗಿ ಈ ಅಭಿಯಾನದ ಕೈಗೊಳ್ಳಲಾಗುತ್ತಿದೆ’ ಎಂದು ಅವರು ತಿಳಿಸಿದ್ದಾರೆ.

‘ಸದ್ಯ ಎಂಟು ಹಳ್ಳಿಗಳನ್ನು ಹೊರತುಪಡಿಸಿ ಉಳಿದ ಎಲ್ಲಾ ಹಳ್ಳಿಗಳಿಗೂ ಕಾವೇರಿ ನೀರು ತಲುಪಿದೆ. ಮುಂದೆ ಸಂಪರ್ಕ ಪಡೆಯುವ ಗ್ರಾಹಕರಿಗೂ ಶೀಘ್ರ ನೀರು ಸರಬರಾಜು ಮಾಡಲಾಗುವುದು’ ಎಂದು ರಾಮ್‌ಪ್ರಸಾತ್ ಹೇಳಿದ್ದಾರೆ.

ಅರ್ಜಿ ಸಲ್ಲಿಕೆ ಪ್ರಕ್ರಿಯೆ: ‘ಆನ್‌ಲೈನ್‌ನಲ್ಲಿ ಸಲ್ಲಿಸಿದ ಅರ್ಜಿಯನ್ನು ಪರಿಶೀಲಿಸಿದ ನಂತರ, ನೀರಿನ ಸಂಪರ್ಕಕ್ಕೆ ನಿಗದಿಪಡಿಸಿರುವ ಶುಲ್ಕದ ಬಗ್ಗೆ ಅರ್ಜಿದಾರರಿಗೆ ಮಾಹಿತಿ ನೀಡಲಾಗುತ್ತದೆ. ಆ ಶುಲ್ಕವನ್ನು ಆರ್‌ಟಿಜಿಎಸ್ ಅಥವಾ ಎನ್‌ಇಎಫ್‌ಟಿ ಅಥವಾ ಡಿ.ಡಿ. ಮೂಲಕ ಪಾವತಿಸಬೇಕು. ಯಾವ ಕಾರಣಕ್ಕೂ ನಗದು ನೀಡಬಾರದು. ಶುಲ್ಕವನ್ನು ಜಲಮಂಡಳಿಯ ಅಧಿಕೃತ ಖಾತೆಗೇ ಪಾವತಿಸಬೇಕು’ ಎಂದು ಮನವಿ ಮಾಡಿದ್ದಾರೆ.

‘ಆಡುನುಡಿಯಾಗಿ ಉಳಿಯಲಿರುವ ಕನ್ನಡ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಲಿಷ್ಠ ಭಾಷೆಗಳು ಕನ್ನಡದ ಮೇಲೆ ಬುಲ್ಡೋಜರ್ ಓಡಿಸುತ್ತಿವೆ. ಇನ್ನು 100 ವರ್ಷ ಆಗುವ ಹೊತ್ತಿಗೆ ಕನ್ನಡವು ಆಡುಭಾಷೆಯಾಗಿ ಮಾತ್ರ ಉಳಿಯಲಿದೆ ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಆತಂಕ ವ್ಯಕ್ತಪಡಿಸಿದರು.

ಕರ್ನಾಟಕ ಲೇಖಕಿಯರ ಸಂಘ, ಸುರಾನಾ ಕಾಲೇಜಿನ ಕನ್ನಡ ವಿಭಾಗ ಬುಧವಾರ ಹಮ್ಮಿಕೊಂಡಿದ್ದ ಕರ್ನಾಟಕ ರಾಜ್ಯೋತ್ಸವ ಮತ್ತು ‘ಇಂದಿರಾ ರತ್ನ’ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

1,439 ಕನ್ನಡ ಶಾಲೆಗಳಲ್ಲಿ ಶಿಕ್ಷಣ ಸಚಿವರು ಇಂಗ್ಲಿಷ್ ಮಾಧ್ಯಮ ಆರಂಭಿಸಿದರು. ಕನ್ನಡ ಮಾಧ್ಯಮದ ಶಿಕ್ಷಕರಿಂದ ಮಕ್ಕಳು ಎಷ್ಟು ಇಂಗ್ಲಿಷ್ ಕಲಿತರು ಎಂಬುದು ಗೊತ್ತಿಲ್ಲ. ಆದರೆ, 439 ಕನ್ನಡ ಶಾಲೆಗಳು ಮುಚ್ಚಿಹೋದವು. ಕನ್ನಡದ ಬೆಳವಣಿಗೆ ಶೇ 3.7 ಪ್ರಮಾಣದಲ್ಲಿದ್ದರೆ, ಹಿಂದಿ ಬೆಳವಣಿಗೆ ಶೇ 65ರಷ್ಟಿದೆ. ಖಾಸಗಿ ಶಿಕ್ಷಣ ಸಂಸ್ಥೆಗಳು ಕನ್ನಡವನ್ನು ಹೊರಹಾಕಲು ಕಾದು ಕುಳಿತಿವೆ ಎಂದು ಎಚ್ಚರಿಸಿದರು.

ತಮಿಳು, ತೆಲುಗು, ಮಲಯಾಳ ಸಹಿತ ದಕ್ಷಿಣದ ಭಾಷೆಗಳಿಂದ ಕನ್ನಡಕ್ಕೆ ಕೊಡುಗೆ ಕಡಿಮೆ. ಇಂಥ ಸಮಯದಲ್ಲಿ ತಮಿಳು ಮತ್ತು ಕನ್ನಡದ ನಡುವೆ ಸೇತುವೆಯಂತೆ ಮಲರ್ ವಿಳಿ ಕೆಲಸ ಮಾಡಿದ್ದಾರೆ ಎಂದು ತಿಳಿಸಿದರು.

ಪ್ರಶಸ್ತಿ ಸ್ವೀಕರಿಸಿದ ಪ್ರೆಸಿಡೆನ್ಸಿ ವಿಶ್ವವಿದ್ಯಾಲಯದ ಕನ್ನಡ ಪ್ರಾಧ್ಯಾಪಕಿ ಮಲರ್ ವಿಳಿ ಕೆ. ಮಾತನಾಡಿ, ‘ಬೇರೆ ಭಾಷೆಗಳಲ್ಲಿ ಏನೂ ಇಲ್ಲ ಎಂದು ಯಾವುದೇ ಭಾಷಿಗರು ತಿಳಿದುಕೊಳ್ಳುವುದು ತಪ್ಪು’ ಎಂದರು.

ಸುರಾನಾ ಕಾಲೇಜಿನ ಪ್ರಾಂಶುಪಾಲರಾದ ವೀಣಾ ಕೆ.ಎನ್. ಉದ್ಘಾಟಿಸಿದರು. ಜನಪದ ಗಾಯಕಿ ಸವಿತಕ್ಕ, ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷೆ ಎಚ್.ಎಲ್. ಪುಷ್ಪಾ, ಕಾರ್ಯದರ್ಶಿ ಭಾರತಿ ಹೆಗಡೆ, ಖಜಾಂಚಿ ಮಂಜುಳಾ ಶಿವಾನಂದ, ಸಹ ಕಾರ್ಯದರ್ಶಿ ಸುಮಾ ಸತೀಶ್, ಪ್ರಾಧ್ಯಾಪಕಿ ವತ್ಸಲಾ ಮೋಹನ್ ಭಾಗವಹಿಸಿದ್ದರು.

ಕರ್ನಾಟಕ ಲೇಖಕಿಯರ ಸಂಘದ ವತಿಯಿಂದ ಅನುವಾದಕಿ, ಕನ್ನಡ ಉಪನ್ಯಾಸಕಿ ಮಲರ್ ವಿಳಿ ಅವರಿಗೆ ‘ಇಂದಿರಾ ರತ್ನ’ ಪ್ರಶಸ್ತಿಯನ್ನು ಬುಧವಾರ ಪ್ರದಾನ ಮಾಡಲಾಯಿತು ಪ್ರಜಾವಾಣಿ ಚಿತ್ರ



ವಿಜಯಪುರ ಜಿಲ್ಲೆಯ ಸಿಂದಗಿಯ ಸಾರಂಗಮಠದಲ್ಲಿ ಚೆನ್ನವೀರಸ್ವಾಮೀಜಿ ಪ್ರತಿಷ್ಠಾನವು ಲಿಂಗೈಕ್ಯ ಎನ್‌.ಚೆನ್ನಯ್ಯಸ್ವಾಮಿ ಮತ್ತು ಲಿಂಗೈಕ್ಯ ಶಾರದಾದೇವಿ ಜನಕಲ್ಯಾಣ ಫೌಂಡೇಶನ್‌ನಿಂದ ನೀಡುವ ₹1 ಲಕ್ಷ ಮೊತ್ತದ ಶಿವಯೋಗಿ ಶಿವಾಚಾರ್ಯ ರಾಷ್ಟ್ರೀಯ ಪ್ರಶಸ್ತಿಯನ್ನು ಬೆಂಗಳೂರಿನ ಸಂಸ್ಕೃತ ವಿಶ್ವವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕ ಡಾ.ಸಿ.ಶಿವಕುಮಾರಸ್ವಾಮಿ ಅವರಿಗೆ ಉಜ್ಜಯಿನಿ ಪೀಠದ ಸದ್ಧರ್ಮ ಸಿಂಹಾಸನಾಧೀಶ್ವರ ಸಿದ್ಧಲಿಂಗರಾಜ ದೇಶಿಕೇಂದ್ರ ಶಿವಾಚಾರ್ಯ ಭಗವತ್ಪಾದಂಗಳವರು ಪ್ರದಾನ ಮಾಡಿದರು. ಶಾಸಕ ಅಶೋಕ ಮನಗೂಳಿ, ಅಶೋಕ ವಾರದ, ಪ್ರತಿಷ್ಠಾನದ ಅಧ್ಯಕ್ಷ ಪ್ರಭು ಸಾರಂಗದೇವ ಶಿವಾಚಾರ್ಯ ಸ್ವಾಮೀಜಿ ಇದ್ದಾರೆ

ಬಿಬಿಎಂಪಿ ಅಧಿಕಾರಿಗಳ ಮನೆಯಲ್ಲಿ ಶೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ಪಶ್ಚಿಮ ವಲಯದ ಕಲ್ಯಾಣ ವಿಭಾಗದ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ಅಕ್ರಮ ಪ್ರಕರಣಕ್ಕೆ ಸಂಬಂಧಿಸಿದಂತೆ ಲೋಕಾಯುಕ್ತ ಪೊಲೀಸರು ಪಾಲಿಕೆಯ ಇಬ್ಬರು ಅಧಿಕಾರಿಗಳ ಮನೆ ಮೇಲೆ ದಾಳಿ ಮಾಡಿ, ಶೋಧ ನಡೆಸಿದ್ದಾರೆ.

ಬಿಬಿಎಂಪಿಯ ಕಲ್ಯಾಣಾಧಿಕಾರಿ (ಪಶ್ಚಿಮ ವಲಯ) ಲಲಿತಾ ಅವರ ದೇವಯ್ಯ ಪಾರ್ಕ್ ನಿವಾಸ ಮತ್ತು ಉಪ ಹಣಕಾಸು ನಿಯಂತ್ರಕ ಸತ್ಯಮೂರ್ತಿ ಅವರ ವೈಯಾಲಿಕಾವಲ್ ನಿವಾಸದ ಮೇಲೆ ಲೋಕಾಯುಕ್ತ ಪೊಲೀಸರು ಬುಧವಾರ ಬೆಳಗ್ಗೆಯೇ ದಾಳಿ ನಡೆಸಿದ್ದಾರೆ. ಜತೆಗೆ ಈ ಇಬ್ಬರು ಅಧಿಕಾರಿಗಳಿಗೆ ಸಂಬಂಧಿಸಿದ ಇನ್ನೂ ಆರು ಸ್ಥಳಗಳಲ್ಲಿ ಶೋಧ ಕಾರ್ಯ ನಡೆದಿದೆ.

ಕಲ್ಯಾಣ ಕಾರ್ಯಕ್ರಮಗಳ ಫಲಾನುಭವಿಗಳ ಹಣವನ್ನು ವಿವಿಧ ಸೊಸೈಟಿಗಳಿಗೆ ವರ್ಗಾಯಿಸಿಕೊಂಡಿರುವ ಸಂಬಂಧ ಲೋಕಾಯುಕ್ತದಲ್ಲಿ ದೂರು ದಾಖಲಾಗಿತ್ತು. ಶೋಧದ ವೇಳೆ ಬ್ಯಾಂಕ್ ಖಾತೆಗಳು, ಖಾತೆಗಳಿಗೆ ಹಣ ವರ್ಗಾವಣೆ ಮತ್ತು ವಿವಿಧ ಹೂಡಿಕೆಗಳಿಗೆ ಸಂಬಂಧಿಸಿದ ಹಲವು ದಾಖಲೆಗಳನ್ನು ವಶಕ್ಕೆ ಪಡೆಯಲಾಗಿದೆ ಎಂದು ಮೂಲಗಳು ಮಾಹಿತಿ ನೀಡಿವೆ.

ಪರಿಸರ ಬರಹಗಾರ ಶಿವನಾಂದ ಕಳವೆ ಪ್ರತಿಪಾದನೆ

‘ಕೃಷಿ ಗೆಜೆಟಿಯರ್ ಬೇಕಿದೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕರ್ನಾಟಕದ ಇನ್ನೂರು ವರ್ಷಗಳ ಹಿಂದಿನ ಕೃಷಿಯ ವಿದ್ಯಮಾನಗಳು ದಾಖಲಾಗಿವೆ. ವರ್ತಮಾನದ ವಿಚಾರಗಳು ದಾಖಲಾಗುತ್ತಿಲ್ಲ. ಕನ್ನಡ ಪುಸ್ತಕ ಪ್ರಾಧಿಕಾರ ಇಂಥ ದಾಖಲೀಕರಣದ ಬಗ್ಗೆ ಗಮನ ಹರಿಸಬೇಕು’ ಎಂದು ಪರಿಸರ ಬರಹಗಾರ ಶಿವಾನಂದ ಕಳವೆ ಸಲಹೆ ನೀಡಿದರು.

ನಗರದಲ್ಲಿ ಕನ್ನಡ ಪುಸ್ತಕ ಪ್ರಾಧಿಕಾರ ಬುಧವಾರ ಆಯೋಜಿಸಿದ್ದ ‘ಅಂಗಳದಲ್ಲಿ ತಿಂಗಳ ಪುಸ್ತಕ’ ಕಾರ್ಯಕ್ರಮದ ಉದ್ಘಾಟನೆ ಮತ್ತು ಕರ್ನಾಟಕ ಸುವರ್ಣ ಸಂಭ್ರಮ–50 ರ ಸಂಪುಟಗಳ ಪರಿಚಯ’ ಕಾರ್ಯಕ್ರಮದಲ್ಲಿ ತಾವು ಸಂಪಾದಿಸಿದ ಕೃಷಿ, ತೋಟಗಾರಿಕೆ ಸಂಪುಟವನ್ನು ಪರಿಚಯಿಸುವಾಗ ಈ ಸಲಹೆ ನೀಡಿದರು.

‘1897ರಲ್ಲಿ ಬರಗಾಲದಲ್ಲಿ ಜನ ಏನೇನು ತಿನ್ನುತ್ತಿದ್ದರು ಎಂಬುದು ಮೈಸೂರು ಗೆಜೆಟಿಯರ್‌ನಲ್ಲಿ ದಾಖಲಾಗಿದೆ. ಆದರೆ, 2016ರ ಬರಗಾಲದಲ್ಲಿ ಕರ್ನಾಟಕದಲ್ಲಿ ಏನಾಯಿತು ಎಂಬ ದಾಖಲಾತಿಯಿಲ್ಲ. ಕರ್ನಾಟಕಕ್ಕೆ ಒಂದು ಕೃಷಿ ಗೆಜೆಟಿಯರ್ ಅಗತ್ಯವಿದೆ’ ಎಂದು ಪ್ರತಿಪಾದಿಸಿದರು.

ಸಮಾರಂಭದಲ್ಲಿ ‘ಕಲೆ’ ಸಂಪುಟ ಕುರಿತು ಕೆ.ವಿ. ಸುಬ್ರಹ್ಮಣ್ಯಂ, ‘ಸಾಹಿತ್ಯ’ ಸಂಪುಟದ ಬಗ್ಗೆ ಲಕ್ಷ್ಮಣ ಕೊಡಸೆ, ‘ವಿಜ್ಞಾನ-ತಂತ್ರಜ್ಞಾನ-ಕೈಗಾರಿಕೆ’ ಸಂಪುಟದ ಕುರಿತು ಇಂಡಸ್ ಕೆ. ಜಯರಾಂ ಅವರು ಪರಿಚಯಿಸಿದರು. ಸುವರ್ಣ ಸಂಭ್ರಮ ಸಂಪುಟ ಸ್ಮರಣ ಸಂಚಿಕೆ ರೂಪಗೊಂಡ ಬಗೆಯನ್ನು ಕೃತಿಯ ಸಂಪಾದಕ ಬಿ.ಎಸ್. ವಿದ್ಯಾರಣ್ಯ ವಿವರಿಸಿದರು.

ಕಾರ್ಯಕ್ರಮದಲ್ಲಿ ಐದು ಸಂಪುಟಗಳ ಸಂಪಾದಕರನ್ನು ಸನ್ಮಾನಿಸಲಾಯಿತು.

‘ಅಂಗಳದಲ್ಲಿ ತಿಂಗಳ ಪುಸ್ತಕ’ ಕಾರ್ಯಕ್ರಮದಲ್ಲಿ ಕರ್ನಾಟಕ ಸುವರ್ಣ ಸಂಭ್ರಮ–50ರ ಸಂಪುಟಗಳ ಸಂಪಾದಕರಾದ (ಕುಳಿತವರು ಎಡದಿಂದ) ಲಕ್ಷ್ಮಣ ಕೊಡಸೆ, ಶಿವಾನಂದ ಕಳವೆ, ಬಿ.ಎಸ್‌.ವಿದ್ಯಾರಣ್ಯ, ಕೆ.ವಿ.ಸುಬ್ರಹ್ಮಣ್ಯಂ ಮತ್ತು ಇಂಡಸ್ ಕೆ.ಜಯರಾಂ ಅವರನ್ನು ಸನ್ಮಾನಿಸಲಾಯಿತು. (ನಿಂತವರು ಎಡದಿಂದ) ಪ್ರಾಧಿಕಾರದ ಸಹಾಯಕ ನಿರ್ದೇಶಕಿ ಸೌಭಾಗ್ಯ, ಆಡಳಿತಾಧಿಕಾರಿ ಕೆ.ಬಿ ಕಿರಣ್ ಸಿಂಗ್, ಸದಸ್ಯ ನೀರಗುಡಿ, ಬಂಜಾರ ಸಂಸ್ಕೃತಿ ಮತ್ತು ಭಾಷಾ ಅಕಾಡೆಮಿ ಅಧ್ಯಕ್ಷ ಎ.ಆರ್‌.ಗೋವಿಂದಸ್ವಾಮಿ, ಕರ್ನಾಟಕ ಲಲಿತ ಕಲಾ ಅಕಾಡೆಮಿ ಅಧ್ಯಕ್ಷ ಪ.ಸ.ಕುಮಾರ್, ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಮಾನಸ, ಸದಸ್ಯ ಕುಶಾಲ ಮತ್ತು ಶಿಲ್ಪಕಲಾ ಅಕಾಡೆಮಿ ಅಧ್ಯಕ್ಷ ರಮೇಶ್ ಪಾಲ್ಗೊಂಡಿದ್ದರು ಪ್ರಜಾವಾಣಿ ಚಿತ್ರ

> **ಪುಸ್ತಕ ಹಿಡಿಯುವ ಕೈಗಳನ್ನು ಮೊಬೈಲ್‌ಗಳು ಆಕ್ರಮಿಸಿವೆ. ಆ ಕೈಗಳಲ್ಲಿ ಮತ್ತೆ ಪುಸ್ತಕ ಹಿಡಿಯುವಂತಾಗಬೇಕು**
> **ಮಾನಸ,** ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ

ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಪ್ರಯುಕ್ತ ರಥಯಾತ್ರೆ

ರಾಜಧಾನಿಯಲ್ಲಿ ‘ಕನ್ನಡ ಜ್ಯೋತಿ ರಥ’ ಸಂಚಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಂಡ್ಯದಲ್ಲಿ ನಡೆಯಲಿರುವ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ‘ಕನ್ನಡ ಜ್ಯೋತಿ ರಥ’ವು ನಗರದಲ್ಲಿ ಬುಧವಾರ ಸಂಚಾರ ಪ್ರಾರಂಭಿಸಿದೆ.

ತುಮಕೂರು ಮುಖ್ಯರಸ್ತೆಯ ನಾಗಸಂದ್ರ ಮೆಟ್ರೊ ರೈಲು ನಿಲ್ದಾಣದ ಬಳಿ ರಥವನ್ನು ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಜಿಲ್ಲಾಡಳಿತ ಹಾಗೂ ಸ್ಥಳೀಯ ತಾಲ್ಲೂಕು ಆಡಳಿತದ ವತಿಯಿಂದ ಅದ್ದೂರಿಯಾಗಿ ಸ್ವಾಗತಿಸಲಾಯಿತು. ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಎಂ.ಪ್ರಕಾಶಮೂರ್ತಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಆರ್.ಚಂದ್ರಶೇಖರ್, ಉಪ ತಹಶೀಲ್ದಾರರಾದ ವೆಂಕಟೇಶುಲು, ನಂದೀಶ್ ಅವರು ನೆಲಮಂಗಲದಿಂದ ಬಂದ ಕನ್ನಡ ಜ್ಯೋತಿ ರಥವನ್ನು ಬರಮಾಡಿಕೊಂಡರು.

ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಪದಾಧಿಕಾರಿಗಳು, ವಿವಿಧ ಕನ್ನಡ ಪರ ಸಂಘಟನೆಗಳ ಪ್ರತಿನಿಧಿಗಳು, ಶಾಲಾ–ಕಾಲೇಜು ವಿದ್ಯಾರ್ಥಿಗಳು ಜಾನಪದ ಕಲಾ ತಂಡಗಳ ಜತೆಗೆ ರಥಯಾತ್ರೆಯಲ್ಲಿ ಹೆಜ್ಜೆ ಹಾಕಿದರು. ಡಿ. 20, 21 ಮತ್ತು 22ರಂದು ಸಾಹಿತ್ಯ ಸಮ್ಮೇಳನ ನಡೆಯಲಿದೆ. ಈ ಸಮ್ಮೇಳನದ ಅಂಗವಾಗಿ ಕನ್ನಡ ಜ್ಯೋತಿಯನ್ನು ಹೊತ್ತ ‘ಕನ್ನಡ ರಥ’ ರಾಜ್ಯದ ವಿವಿಧೆಡೆ ಸಂಚರಿಸುತ್ತಿದೆ. ಭುವನೇಶ್ವರಿಯ ದೇವಿ ದೇವಾಲಯ ಇರುವ ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರದ ಭುವನಗಿರಿಯಿಂದ ಈ ರಥ ಸಂಚಾರ ಪ್ರಾರಂಭವಾಗಿದೆ.

ಕಸಾಪ ಕೇಂದ್ರ ಕಚೇರಿಯಲ್ಲಿ ಮಹೇಶ ಜೋಶಿ ನೇತೃತ್ವದಲ್ಲಿ ಪದಾಧಿಕಾರಿಗಳು ಕನ್ನಡ ರಥವನ್ನು ಸ್ವಾಗತಿಸಿದರು

‘ಸಾಹಿತ್ಯ ಸಮ್ಮೇಳನ: ಕಲ್ಯಾಣ ಕರ್ನಾಟಕದವರಿಗೆ ಆದ್ಯತೆ ನೀಡಿ’

ಬೆಂಗಳೂರು: ಮಂಡ್ಯದಲ್ಲಿ ನಡೆಯುವ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಕಲ್ಯಾಣ ಕರ್ನಾಟಕದ ಸಾಹಿತಿಗಳು, ಕಲಾವಿದರಿಗೆ ಆದ್ಯತೆ ನೀಡುವಂತೆ ಕಲ್ಯಾಣ ಕರ್ನಾಟಕ ನಿವಾಸಿಗಳ ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಸಂಘವು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ಅವರಿಗೆ ಮನವಿ ಮಾಡಿದೆ.

ಈ ಬಗ್ಗೆ ಸಂಘದ ಅಧ್ಯಕ್ಷ ಸಿ.ಎನ್. ಭಂಡಾರೆ ಪತ್ರ ಬರೆದಿದ್ದು, ‘ಕಲ್ಯಾಣ ಕರ್ನಾಟಕ ಕೇವಲ ಅಭಿವೃದ್ಧಿ ದೃಷ್ಟಿಯಿಂದಷ್ಟೇ ಹಿಂದುಳಿದಿಲ್ಲ, ಸಾಂಸ್ಕೃತಿಕ, ಸಾಹಿತ್ಯಿಕ ಕ್ಷೇತ್ರದಲ್ಲಿಯೂ ಉಪೇಕ್ಷೆಯಿಂದ ಕಾಣಲಾಗುತ್ತಿದೆ. ಡಿ.ಎಂ. ನಂಜುಂಡಪ್ಪ ವರದಿಯಲ್ಲಿ ಸಾಂಸ್ಕೃತಿಕ ಬೆಳವಣಿಗೆಯು ಅಭಿವೃದ್ಧಿಯ ಒಂದು ಭಾಗವೆಂದು ಹೇಳಲಾಗಿದೆ. ಆದ್ದರಿಂದ ಕಲ್ಯಾಣ ಕರ್ನಾಟಕದ ಸಾಹಿತಿಗಳಿಗೆ, ಕಲಾವಿದರಿಗೆ ಹೆಚ್ಚಿನ ಆದ್ಯತೆ ನೀಡಿ, ಪ್ರಾದೇಶಿಕ ಸಮತೋಲನ ಕಾಯ್ದುಕೊಳ್ಳ ಬೇಕು’ ಎಂದಿದ್ದಾರೆ. ‘ಈ ಹಿಂದೆ ನಡೆದ ಸಮ್ಮೇಳನಗಳಲ್ಲಿ ಕಲ್ಯಾಣ ಕರ್ನಾ ಟಕದ ಸಾಹಿತಿಗಳಿಗೆ, ಕಲಾವಿದರಿಗೆ ಪ್ರಾಶಸ್ತ್ಯ ನೀಡಿರಲಿಲ್ಲ’ ಎಂದು ತಿಳಿಸಿದ್ದಾರೆ.

ಕಸಾಪ ಕೇಂದ್ರ ಕಚೇರಿಗೆ ಭೇಟಿ

ಚಾಮರಾಜಪೇಟೆಯಲ್ಲಿರುವ ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ಕೇಂದ್ರ ಕಚೇರಿಯಲ್ಲಿ ಕಸಾಪ ಅಧ್ಯಕ್ಷ ಮಹೇಶ ಜೋಶಿ ಅವರು ಕನ್ನಡ ರಥವನ್ನು ಸ್ವಾಗತಿಸಿದರು. ಗೌರವ ಕಾರ್ಯದರ್ಶಿ ಪದ್ಮಿನಿ ನಾಗರಾಜು, ಗೌರವ ಕೋಶಾಧ್ಯಕ್ಷ ಬಿ.ಎಂ.ಪಟೇಲ್ ಪಾಂಡು ಸೇರಿದಂತೆ ಕಸಾಪ ಪದಾಧಿಕಾರಿಗಳು, ಸಿಬ್ಬಂದಿ ಮತ್ತು ಕನ್ನಡಿಗರು ಪಾಲ್ಗೊಂಡಿದ್ದರು.

ಈ ವೇಳೆ ಮಾತನಾಡಿದ ಮಹೇಶ ಜೋಶಿ, ‘ಕನ್ನಡ ರಥ ಸಂಚರಿಸಿದಲ್ಲೆಲ್ಲ ಕನ್ನಡಿಗರು ಅಪಾರ ಸಂಖ್ಯೆಯಲ್ಲಿ ನೆರೆದು ಸ್ವಾಗತವನ್ನು ಕೋರಿದ್ದಾರೆ. ಇದು ಸ್ವಾಭಿಮಾನ ತುಂಬುವಲ್ಲಿ ಮತ್ತು ಮಂಡ್ಯದಲ್ಲಿ ನಡೆಯಲಿರುವ ಸಾಹಿತ್ಯ ಸಮ್ಮೇಳನದ ಬಗ್ಗೆ ಆಸಕ್ತಿ ಮೂಡಿಸುವಲ್ಲಿ ಯಶಸ್ವಿಯಾಗಿದೆ’ ಎಂದರು.

ಅಪಹರಣಗೊಂಡ ಶಿಶು ಮರಳಿ ತಾಯಿ ಮಡಿಲಿಗೆ

ಪ್ರಜಾವಾಣಿ ವಾರ್ತೆ

ಕಲಬುರಗಿ: ಜಿಮ್ಸ್ ಆಸ್ಪತ್ರೆಯ ತಾಯಿ ಮತ್ತು ಮಕ್ಕಳ ಚಿಕಿತ್ಸಾ ವಿಭಾಗದಿಂದ ನವಜಾತ ಗಂಡು ಶಿಶುವನ್ನು ಅಪಹರಿಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಮೂವರು ಮಹಿಳೆಯರನ್ನು ಬುಧವಾರ ಬಂಧಿಸಿರುವ ಪೊಲೀಸರು, ಮಗುವನ್ನು ಸುರಕ್ಷಿತವಾಗಿ ತಾಯಿಯ ಮಡಿಲಿಗೆ ಒಪ್ಪಿಸಿದರು.

ಚಿತ್ತಾಪುರ ತಾಲ್ಲೂಕಿನ ರಾವೂರ ಗ್ರಾಮದ ರಾಮಕೃಷ್ಣ ಸಗರ ಹಾಗೂ ಕಸ್ತೂರಿ ದಂಪತಿಗೆ ಸೇರಿದ ಒಂದು ದಿನದ ಮಗುವನ್ನು ಸೋಮವಾರ ಅಪಹರಿಸಲಾಗಿತ್ತು.

‘ಎಂಎಸ್‌ಕೆ ಮಿಲ್ ಬಡಾವಣೆಯ ಉಮೇರಾ ಆವೇಜ್ ಶೇಖ್ (30), ನಸ್ರೀನ್ ಬಾನು ಅಬ್ದುಲ್ ರಹೀಮ್ (32) ಹಾಗೂ ಫಾತಿಮಾ ಫಯಾಜ್ ಶೇಖ್ (35) ಬಂಧಿತ ಆರೋಪಿಗಳು. ಈ ಮೂವರು ನರ್ಸ್ ಸೋಗಿನಲ್ಲಿ ಆಸ್ಪತ್ರೆಗೆ ಬಂದು ಮಗುವನ್ನು ಅಪಹರಿಸಿದ್ದರು. ಅಪಹರಣಕ್ಕೆ ಹಣ ನೀಡಿದ್ದ ಮಹಿಳೆಯನ್ನೂ (ಖೈರುನ್) ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ’ ಎಂದು ಪೊಲೀಸ್ ಕಮಿಷನರ್ ಶರಣಪ್ಪ ಎಸ್.ಡಿ. ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

‘ಆರೋಪಿಗಳ ಸಂಬಂಧಿಕರೊಬ್ಬರಿಗೆ ಮಕ್ಕಳಾಗಿರಲಿಲ್ಲ. ದತ್ತು ಮಾರ್ಗಸೂಚಿ ಅನ್ವಯ ಗಂಡು ಮಗು ಪಡೆಯಲು ಆಗಿರಲಿಲ್ಲ. ಹೀಗಾಗಿ ಮಗು ಕದಿಯಲು ಆರೋಪಿಗಳೊಂದಿಗೆ ₹50 ಸಾವಿರಕ್ಕೆ ಒಪ್ಪಂದ ಮಾಡಿಕೊಂಡು ಮುಂಗಡವಾಗಿ ₹25 ಸಾವಿರ ನೀಡಿದ್ದರು. ಅಪಹರಣಕ್ಕೆ ಒತ್ತಡ ಹೆಚ್ಚಾಗಿದ್ದರಿಂದ ಭಾನುವಾರ (ನ.24) ರಾತ್ರಿ ಮಗು ಅಪಹರಣಕ್ಕೆ ಯತ್ನಿಸಿದ ಆರೋಪಿಗಳು ವಿಫಲವಾದರು. ಮರುದಿನ (ನ.25) ಮಧ್ಯಾಹ್ನ ನರ್ಸ್ ಸೋಗಿನಲ್ಲಿ ಆಸ್ಪತ್ರೆಗೆ ಬಂದು, ಬಾಣಂತಿಯ ಸಂಬಂಧಿಕರ ಗಮನವನ್ನು ಬೇರೆಡೆ ಸೆಳೆದು ಮಗುವನ್ನು ಅಪಹರಿಸಿದ್ದರು’ ಎಂದರು.

‘ಸಿಸಿಟಿವಿ ಕ್ಯಾಮೆರಾ ದೃಶ್ಯಗಳನ್ನು ಪರಿಶೀಲಿಸಿ, ಆಟೊ ಚಾಲಕರು, ನೀಡಿದ ಮಾಹಿತಿ ಆಧರಿಸಿ, ಆರೋಪಿಗಳನ್ನು ಬಂಧಿಸಿದ್ದೇವೆ’ ಎಂದು ತಿಳಿಸಿದರು.

ಆಸಿಡ್ ದಾಳಿ: 10 ವರ್ಷ ಜೈಲು ಶಿಕ್ಷೆ

ಹಾವೇರಿ: ಮಹಿಳೆಯೊಬ್ಬರ ಮೇಲೆ ಆಸಿಡ್ ಎರಚಿದ್ದ ಪ್ರಕರಣದ ಅಪರಾಧಿ ಪ್ರಸಾದ ಉರುಫ್ ಪ್ರಶಾಂತ ಚಿಕ್ಕಳ್ಳಿ ಎಂಬಾತನಿಗೆ 10 ವರ್ಷ ಜೈಲು ಶಿಕ್ಷೆ ಮತ್ತು ₹1.70 ಲಕ್ಷ ದಂಡ ವಿಧಿಸಿ ಜಿಲ್ಲಾ ಸೆಷನ್ಸ್ ನ್ಯಾಯಾಲಯ ಆದೇಶ ಹೊರಡಿಸಿದೆ.

2020ರ ಜನವರಿ 28ರಂದು ದಾಖಲಾಗಿದ್ದ ಪ್ರಕರಣದ ವಿಚಾರಣೆಯನ್ನು ನ್ಯಾಯಾಧೀಶರಾದ ನಿಂಗೌಡ ಪಾಟೀಲ ನಡೆಸಿದರು. ಹಾವೇರಿಯ ಜೈ ಕರ್ನಾಟಕ ಎಂಜಿನಿಯರಿಂಗ್ ವರ್ಕ್ಸ್ ಅಂಗಡಿಯ ಮುಂದೆ ಹೊರಟಿದ್ದ ಮಹಿಳೆ ಮೇಲೆ ಆಸಿಡ್ ಎರಚಿ ಕೊಲೆಗೆ ಯತ್ನಿಸಲಾಗಿತ್ತು. ತೀವ್ರ ಗಾಯಗೊಂಡಿದ್ದ ಮಹಿಳೆ, ಹಾವೇರಿ ಮಹಿಳಾ ಠಾಣೆಗೆ ದೂರು ನೀಡಿದ್ದರು.

ಕ್ರೈಸ್ತ ಧರ್ಮಕ್ಷೇತ್ರದ ಅಮೃತ ಮಹೋತ್ಸವದಲ್ಲಿ ಸಿ.ಎಂ ಹೇಳಿಕೆ

‘ನಾನು ಯಾರನ್ನೂ ಓಲೈಸಲ್ಲ, ಪ್ರೀತಿಸುವೆ’

ಪ್ರಜಾವಾಣಿ ವಾರ್ತೆ

ಬಳ್ಳಾರಿ: ‘ಸಿದ್ದರಾಮಯ್ಯ ಓಲೈಕೆ ರಾಜಕಾರಣ ಮಾಡುತ್ತಾರೆ ಎಂದು ನನ್ನ ವಿರುದ್ಧ ಆರೋಪಿಸಲಾಗುತ್ತದೆ. ಆದರೆ, ನಾನು ಯಾರನ್ನೂ ಓಲೈಸಲ್ಲ. ಎಲ್ಲ ಧರ್ಮವನ್ನೂ ಪ್ರೀತಿಸುತ್ತೇನೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಬಳ್ಳಾರಿಯಲ್ಲಿ ಬುಧವಾರ ಕ್ರೈಸ್ತ ಧರ್ಮಕ್ಷೇತ್ರದ (ಡಯಾಸಿಸ್) ಅಮೃತ ಮಹೋತ್ಸವದಲ್ಲಿ ಮಾತನಾಡಿದ ಅವರು, ‘ಸಿದ್ದರಾಮಯ್ಯ ಮುಸ್ಲಿಮರು, ಕ್ರೈಸ್ತರನ್ನು ಓಲೈಸುತ್ತಾರೆ. ಹಿಂದೂಗಳನ್ನು ವಿರೋಧಿಸುತ್ತಾರೆ ಎಂದು ಹೇಳಲಾಗುತ್ತದೆ. ನಾನು ಹಿಂದೂಗಳನ್ನು ಪ್ರೀತಿಸುತ್ತೇನೆ. ಹಾಗೆಯೇ ಮುಸ್ಲಿಂ, ಕ್ರೈಸ್ತ, ಜೈನ, ಬೌದ್ಧರನ್ನೂ ಪ್ರೀತಿಸುತ್ತೇನೆ’ ಎಂದರು.

‘ಜಾತ್ಯತೀತ ತತ್ವ ಬಿಟ್ಟು ನಾವು ಬದುಕಲು ಆಗದು ಎಂದು ಸುಪ್ರೀಂ ಕೋರ್ಟ್ ಹೇಳಿದೆ. ನಾವೆಲ್ಲರೂ ಜಾತ್ಯತೀತರು. ಅದೇ ಸಂವಿಧಾನದ ಆಶಯ ಕೂಡ. ಸಂವಿಧಾನ ತಿಳಿಯದವರು ಸಮಾಜ ಒಡೆಯುತ್ತಾರೆ. ಸಂವಿಧಾನ ತಿಳಿದಿದ್ದರೆ ಸಮಾಜ ಒಡೆಯುವ ಕೆಲಸ ಮಾಡುತ್ತಿರಲಿಲ್ಲ. ಅದಕ್ಕೆ ನಾವೆಲ್ಲರೂ ಸಂವಿಧಾನದ ಪೀಠಿಕೆ ಓದಿಕೊಳ್ಳಬೇಕು’ ಎಂದು ಅವರು ಹೇಳಿದರು.

‘ಮನುಷ್ಯ ದ್ವೇಷಿ, ಧರ್ಮ ದ್ರೋಹಿಗಳ ಬಗ್ಗೆ ಎಚ್ಚರ ಇರಬೇಕು. ಭಾರತ ಬಹುತ್ವದ ದೇಶ. ಸರ್ವಧರ್ಮ ಸಮನ್ವಯ ಮತ್ತು ಸಹಿಷ್ಣುತೆ ದೇಶದ ಮಣ್ಣಿನ ಗುಣ. ಇದನ್ನು ಕಾಪಾಡುವುದೇ ಪ್ರತಿಯೊಬ್ಬ ಭಾರತೀಯರ ಕರ್ತವ್ಯ’ ಎಂದರು.

ಬಳ್ಳಾರಿಯಲ್ಲಿ ಬುಧವಾರ ನಡೆದ ಕ್ರೈಸ್ತ ಧರ್ಮಕ್ಷೇತ್ರದ ಅಮೃತ ಮಹೋತ್ಸವದಲ್ಲಿ ಜಮಾತ್–ಇ–ಇಸ್ಲಾಮಿ ಹಿಂದ್‌ನ ಡಾ. ಬೆಳಗಾವಿ ಮೊಹಮದ್ ಸಾದ್, ಮೂಡಬಿದರೆಯ ಜೈನ ಮಹಾ ಸಂಸ್ಥಾನದ ಚಾರುಕೀರ್ತಿ ಭಟ್ಟಾರಕರು, ಬಳ್ಳಾರಿ ಧರ್ಮ ಕ್ಷೇತ್ರದ ಬಿಷಪ್ ಹೆನ್ರಿ ಡಿಸೋಜಾ, ಮುಖ್ಯಮಂತ್ರಿ ಸಿದ್ದರಾಮಯ್ಯ, ಕ್ರೈಸ್ತ ಮಹಾಧರ್ಮಗುರು ಪೀಟರ್ ಮಚಾಡೊ, ಕೊಟ್ಟೂರು ಸಂಸ್ಥಾನ ಮಠದ ಕೊಟ್ಟೂರು ಬಸವಲಿಂಗ ಮಹಾ ಸ್ವಾಮೀಜಿ, ಬಳ್ಳಾರಿಯ ಕಲ್ಯಾಣ ಮಠದ ಸ್ವಾಮೀಜಿ, ಸಚಿವ ಕೆ.ಜೆ ಜಾರ್ಜ್, ಶಾಸಕ ನಾಗೇಂದ್ರ ಭಾಗವಹಿಸಿದ್ದರು

ಭ್ರಷ್ಟಾಚಾರ ತಡೆಗೆ ಚೀನಾ ಮಾದರಿ ಶಿಕ್ಷೆ ಅಗತ್ಯ: ನ್ಯಾ. ಸಂತೋಷ ಹೆಗ್ಡೆ

ಪ್ರಜಾವಾಣಿ ವಾರ್ತೆ

ಲಿಂಗಸುಗೂರು (ರಾಯಚೂರು ಜಿಲ್ಲೆ): ‘ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ. ಭ್ರಷ್ಟಾಚಾರ, ಅತ್ಯಾಚಾರದಂಥ ಕೃತ್ಯಗಳನ್ನು ತಡೆಯಲು ಚೀನಾ ಸೇರಿ ವಿದೇಶಗಳಲ್ಲಿ ವಿಧಿಸುವ ಕಠಿಣ ಶಿಕ್ಷಾ ಪದ್ಧತಿ ಅಗತ್ಯವಿದೆ. ಅಂದಾಗ ಮಾತ್ರ ಹೀನಾಯ ಕೃತ್ಯಗಳನ್ನು ತಡೆಯಲು ಸಾಧ್ಯ’ ಎಂದು ಸುಪ್ರೀಂಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಎನ್. ಸಂತೋಷ ಹೆಗ್ಡೆ ಹೇಳಿದರು.

ಸುದ್ದಿಗಾರರೊಂದಿಗೆ ಬುಧವಾರ ಮಾತನಾಡಿದ ಅವರು, ‘ಭ್ರಷ್ಟಾಚಾರ ಸೇರಿ ಸಮಾಜ ವಿರೋಧಿ ಕೃತ್ಯಗಳು ದಿನದಿಂದ ದಿನಕ್ಕೆ ಹೆಚ್ಚುತ್ತಿವೆ. ದೇಶದಲ್ಲಿ ಈಗಿರುವ ವಿಚಾರಣೆ ಪದ್ಧತಿ, ಶಿಕ್ಷೆಗಳಿಗೆ ಬೆಲೆಯೇ ಇಲ್ಲದಂತಾಗಿದೆ. ಶಿಕ್ಷೆಗಿಂತ ಮಾನಸಿಕ ಬದಲಾವಣೆಗೆ ಆದ್ಯತೆ ನೀಡುತ್ತಿರುವುದೇ ತಪ್ಪಾಗುತ್ತಿದೆ. ಗಲ್ಲು ಶಿಕ್ಷೆಯಂಥ ಕಠಿಣ ಶಿಕ್ಷೆ ವಿಧಿಸುವ ಮಾನದಂಡದಿಂದ ಭ್ರಷ್ಟಾಚಾರ ಮತ್ತು ಸಮಾಜ ವಿರೋಧಿ ಕೃತ್ಯಗಳನ್ನು ತಡೆಯಬಹುದು’ ಎಂದು ಅಭಿಪ್ರಾಯಪಟ್ಟರು.

‘ರಾಷ್ಟ್ರಪಿತ ಮಹಾತ್ಮ ಗಾಂಧಿ ಜೈಲಿಗೆ ಹೋಗಿ ಬಂದು ಆದರ್ಶ ವ್ಯಕ್ತಿಯಾಗಿಲ್ಲವೇ; ನಾವು ಕೂಡ ಜೈಲಿಗೆ ಹೋಗಿ ಬರುವುದರಲ್ಲಿ ತಪ್ಪೇನಿದೆ ಎಂಬ ಅಹಂಭಾವ ರಾಜಕಾರಣಿಗಳಲ್ಲಿ ಮನೆ ಮಾಡಿದೆ. ಸಾಮಾಜಿಕ, ಧಾರ್ಮಿಕ, ರಾಜಕೀಯ ನೈತಿಕ ಮೌಲ್ಯಗಳು ಕುಸಿದಿವೆ. ಜೈಲಿನಿಂದ ಬಿಡುಗಡೆಯಾಗಿ ಬರುವವರ ಭವ್ಯ ಮೆರವಣಿಗೆ ಮಾಡುತ್ತಿರುವುದು ನೋವಿನ ಸಂಗತಿ’ ಎಂದು ಕಳವಳ ವ್ಯಕ್ತಪಡಿಸಿದರು.

ರೈಲು ಗಾಲಿ ಕಾರ್ಖಾನೆ
ಯಲಹಂಕ, ಬೆಂಗಳೂರು - 560 064
ವೆಬ್‌ಸೈಟ್: www.rwf.indianrailways.gov.in
ಇ- ಮೇಲ್: smm.rwfblr@gmail.com

ಟೆಂಡರ್ ಸಂಖ್ಯೆ: ಆರ್‌ಡಬ್ಲ್ಯೂಎಫ್/ ಎಸ್/14/2024-25
ದಿನಾಂಕ: 26/11/2024

ಭಾರತದ ರಾಷ್ಟ್ರಪತಿಗಳ ಪರವಾಗಿ ಪ್ರಧಾನ ಮುಖ್ಯ ಸಾಮಗ್ರಿ ಪ್ರಬಂಧಕರು ಈ ಕೆಳಕಂಡ ಕೆಲಸಗಳಿಗಾಗಿ ತಯಾರಕರು/ಅಧಿಕೃತ ವಿತರಕರಿಂದ ಆನ್‌ಲೈನ್ ವೆಬ್‌ಸೈಟ್ http:// www.ireps.gov.in ಮೂಲಕ ಎಲೆಕ್ಟ್ರಾನಿಕ್ ಓಪನ್ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ

ಟೆಂಡರ್ ಸಂಖ್ಯೆ: P2245941. 1). ಐಟಂ ವಿವರಣೆ ಸಂಕ್ಷಿಪ್ತವಾಗಿ: ಫೇಸ್ ಮಿಲ್ಲಿಂಗ್ ಕಟ್ಟರ್ RH M40 SP15 315 MM RZ=18. ಪ್ರಮಾಣ: 4 ಜೊತೆ. 2).ಐಟಂ ವಿವರಣೆ ಸಂಕ್ಷಿಪ್ತವಾಗಿ: ಫೇಸ್ ಮಿಲ್ಲಿಂಗ್ ಕಟ್ಟರ್ LH M40 SP15 315 MM LZ=18. ಪ್ರಮಾಣ: 4 ಜೊತೆ. ಕೊನೆಯ ದಿನಾಂಕ ಮತ್ತು ಸಮಯ: 18/12/2024, ಬೆಳಗ್ಗೆ 14.00ರ ವರೆಗೆ.

ಈ ಟೆಂಡರ್‌ನ್ನು ನಮ್ಮ ಅಂತರ್ಜಾಲ www.rwf.indianrailways.gov.in ಅಥವಾ www.ireps.gov.in ನಲ್ಲಿ ವೀಕ್ಷಿಸಬಹುದು. ಟೆಂಡರ್ ದಾಸ್ತವೇಜು (ದಾಖಲಾತಿಗಳು) ಮತ್ತು ತಿದ್ದುಪಡಿಗಳು ಇದ್ದಲ್ಲಿ ಪೋರ್ಟಲ್ ನಲ್ಲಿ ಮಾತ್ರ ಲಭ್ಯ.

ಪ್ರಧಾನ ಮುಖ್ಯ ಸಾಮಗ್ರಿ ಪ್ರಬಂಧಕರು

ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್
ಕಾರ್ಯಪಾಲಕ ಅಭಿಯಂತರವರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ಗ್ರಾಮಾಂತರ, ಆನಂದರಾವ್ ವೃತ್ತ, ಬೆಂಗಳೂರು – 560009

ಸಂ: ಕಾ.ಪಾ.ಅ/ಪಂರಾಇವಿ/ಬೆಂ.ಗ್ರಾಂ/ಟೆಂ–20/ತಾಂ.ಶಾ/2024–25 ದಿನಾಂಕ: 25.11.2024

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂ: 20/2024–25
(ಕೆ.ಪಿ.ಪಿ ಪೋರ್ಟಲ್ ಮುಖಾಂತರ)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಐಟಂವಾರು ಟೆಂಡರ್‌ನ್ನು ನಾಲ್ಕನೇ ದರ್ಜೆ ಮೇಲ್ಪಟ್ಟ ಗುತ್ತಿಗೆದಾರರಿಂದ ಜಿಲ್ಲಾ ಪಂಚಾಯತ್ ವಿವಿಧ ಲೆಕ್ಕ ಶೀರ್ಷಿಕೆಯಡಿ ಅನುಮೋದನೆಗೊಂಡಿರುವ ಕಾಮಗಾರಿಗಳಿಗೆ ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ಗ್ರಾಮಾಂತರ ಇವರು ಅಲ್ಪಾವಧಿ ಟೆಂಡರ್ ಆಹ್ವಾನಿಸಿರುತ್ತಾರೆ. ಸದರಿ ಕಾಮಗಾರಿಗಳಿಗೆ ಭರ್ತಿಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **04–12–2024 ಸಂಜೆ 5.00 ಗಂಟೆಯವರೆಗೆ** ನಿಗಧಿಪಡಿಸಲಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಕಛೇರಿಯ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ ಹಾಗೂ ಟೆಂಡರ್ ವಿವರಗಳನ್ನು **https://kppp.karnataka.gov.in** ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿರುತ್ತದೆ.

ಸಹಿ/– ಕಾರ್ಯಪಾಲಕ ಅಭಿಯಂತರರು,
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ,
ಬೆಂಗಳೂರು ಗ್ರಾಮಾಂತರ, ಬೆಂಗಳೂರು

DIPR/CP/3456/SPAN/2024-25

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ
ನಂ.49, “ಪರಿಸರ ಭವನ”, 1 ರಿಂದ 5ನೇ ಅಂತಸ್ತು, ಚರ್ಚ್ ಸ್ಟ್ರೀಟ್, ಬೆಂಗಳೂರು–560 001, ಕರ್ನಾಟಕ, ಭಾರತ
ಫೋನ್: 25581383, 25589112, 25586520, ಫ್ಯಾಕ್ಸ್: 080–25586321
ಈ-ಮೇಲ್: ho@kspcb.gov.in ವೆಬ್‌ಸೈಟ್ : https://kspcb.karnataka.gov.in.

ಸಂಖ್ಯೆ: ಮಾನಿಮಂ/86/ಬಿಎಲ್‌ಡಿ/2023/2024–25/3522 ದಿನಾಂಕ: 22.11.2024

ಟೆಂಡರ್‌ಗಾಗಿ ಆಹ್ವಾನ ಪ್ರಕಟಣೆ – 1ನೇ ಕರೆ
(ಜಿಒಕೆ ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರಂ www.kppp.karnataka.gov.in ಮೂಲಕ)

ಸದಸ್ಯ ಕಾರ್ಯದರ್ಶಿಗಳು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಇವರು ಅರ್ಹ ಟೆಂಡರ್‌ದಾರರಿಂದ ಈ ಕೆಳಕಂಡ ಕಾಮಗಾರಿಗಾಗಿ ಜಿಒಕೆ ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರಂ www.kppp.karnataka.gov.in ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕಾಮಗಾರಿಯ ಹೆಸರು:– ಬೆಂಗಳೂರಿನ ಎಸ್.ಜಿ.ಹಳ್ಳಿಯಲ್ಲಿರುವ ನಿಸರ್ಗ ಭವನದ ವಿದ್ಯುತ್‌ನ ವಾರ್ಷಿಕ ನಿರ್ವಹಣೆ ಗುತ್ತಿಗೆ. ಕಾಮಗಾರಿಯ ಅಂದಾಜು ಮೌಲ್ಯ: **ರೂ.21.65 ಲಕ್ಷಗಳು**. ಟೆಂಡರ್ ವೆಚ್ಚ, ಇಎಂಡಿ, ಸೇರಿದಂತೆ ಇತರೆ ಎಲ್ಲಾ ಪಾವತಿಗಳನ್ನು ಇ–ಪಾವತಿ ಮೂಲಕ ಮಾತ್ರ ಮಾಡತಕ್ಕದ್ದು.

ಹೆಚ್ಚಿನ ವಿವರಗಳಿಗೆ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್: https://kppp.karnataka.gov.in ಸಂಪರ್ಕಿಸಬಹುದು.

ಸಹಿ/–
ಮುಖ್ಯ ಪರಿಸರ ಅಧಿಕಾರಿ–2, ಕರಾಮಾನಿಮಂ

ವಾಸಾಸಂಇ/ವಾಪ್ರ/3448/ಎಂಎಎ/2024–25

ನಮ್ಮೆಲ್ಲರ ಚಿತ್ತ, ನೈಸರ್ಗಿಕ ಸಂಪನ್ಮೂಲಗಳ ಮಿತ ಬಳಕೆಯತ್ತ;
ತ್ಯಾಜ್ಯ ಉತ್ಪಾದನೆಯನ್ನು ತಗ್ಗಿಸಿ.

ತುಮಕೂರು ಮಹಾನಗರಪಾಲಿಕೆ, ತುಮಕೂರು
ವೆಬ್‌ಸೈಟ್ : www.tumkurucity.mrc.gov.in
ಇಮೇಲ್: ka.tumkuru.cc@gmail.com, itstaff_ulb_tumkur@yahoo.com
ದೂರವಾಣಿ : 2278480, ಫ್ಯಾಕ್ಸ್ 2275106, ಸಾರ್ವಜನಿಕ : 0816–2271200, 2272200

ಸಂಖ್ಯೆ:ತುಮಪಾ/ಆಶಾ/ಸಿಆರ್–8/2024–25 ದಿನಾಂಕ: 25–11–2024

ಟೆಂಡರ್ ಪ್ರಕಟಣೆ
(ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಆದ್ಯಾದೇಶ 1999–2000ರ ಪ್ರಕಾರ ಆಕ್ಟ್ 2000ರ ನಿಯಮದಂತೆ ಈ ಕೆಳಕಂಡ ವಿವಿಧ ಕಾಮಗಾರಿಗೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್‌ನ ಇ–ಪ್ರಕ್ಯೂರ್‌ಮೆಂಟ್ ಮುಖಾಂತರ ಈ ಕೆಳಕಂಡ ಸಹಿ ಮಾಡಿರುವವರು ಅಲ್ಪಾವಧಿ ಟೆಂಡರ್ ಆಹ್ವಾನಿಸಿದ್ದು, ಸದರಿ ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವವರು ಮಾಹಿತಿಯನ್ನು **kppp.gov.in** ನಲ್ಲಿ ಪಡೆಯಬಹುದಾಗಿದೆ. ಹೆಚ್ಚಿನ ವಿವರಗಳಿಗೆ ಪಾಲಿಕೆಯ ಆರೋಗ್ಯ ಶಾಖೆಯಿಂದ ಮಾಹಿತಿಯನ್ನು ಪಡೆಯಬಹುದಾಗಿದೆ.

ಕ್ರ. ಸಂ.	ಕಾಮಗಾರಿಯ ಹೆಸರು	ಅಂದಾಜು ಮೊತ್ತ (ಲಕ್ಷಗಳಲ್ಲಿ)	ಇ.ಎಮ್.ಡಿ ಮೊತ್ತ (ರೂ. ಗಳಲ್ಲಿ)
1	ತುಮಕೂರು ಮಹಾನಗರ ಪಾಲಿಕೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪೌರಕಾರ್ಮಿಕರು, ಘನತ್ಯಾಜ್ಯ ವಾಹನ ಚಾಲಕರು, ಹೆಲ್ಪರ್ಸ್, ಲೋಡರ್ಸ್, ಕ್ಲೀನರ್ಸ್‌ಗಳಿಗೆ ಬೆಳಗಿನ ಉಪಹಾರ ಸರಬರಾಜು ಮಾಡುವ ಕಾಮಗಾರಿ	112.16	As per KPPP portal

ಅಲ್ಪಾವಧಿ ಟೆಂಡರ್ ಷೆಡ್ಯೂಲ್ ದಿನಾಂಕಗಳು ಈ ಕೆಳಕಂಡಂತಿದೆ :

1. ಟೆಂಡರ್ ದಾಖಲೆಗಳು ಚಾಲ್ತಿಗೆ ಬರುವ **ದಿನಾಂಕ: 26.11.2024 ರಿಂದ 10.12.2024** ರವರೆಗೆ.
2. ಟೆಂಡರ್ ಸಲ್ಲಿಸುವ ಕೊನೆಯ **ದಿನಾಂಕ: 10.12.2024 ರಂದು ಸಾಯಂಕಾಲ 4.30 ಗಂಟೆ**ವರೆಗೆ.
3. ತಾಂತ್ರಿಕ ಬಿಡ್ನ್ನು ತೆರೆಯುವ **ದಿನಾಂಕ: 11.12.2024 ಸಾಯಂಕಾಲ 4.45 ಗಂಟೆಗೆ**.

ಸಹಿ/– ಕಾರ್ಯಪಾಲಕ ಅಭಿಯಂತರರು
ತುಮಕೂರು ಮಹಾನಗರ ಪಾಲಿಕೆ
ತುಮಕೂರು.

DIPR/TUM/RO-93/24-25/Oysters

ಕರ್ನಾಟಕ ಸರಕಾರ, ಜಿಲ್ಲಾಧಿಕಾರಿಗಳ ಕಾರ್ಯಾಲಯ
(ಜಿಲ್ಲಾ ನಗರಾಭಿವೃದ್ಧಿ ಕೋಶ ಹಾವೇರಿ ಜಿಲ್ಲೆ, ಹಾವೇರಿ)
☎ : 08375–249097 e-mail: eedudchaver@gmail.com

ನಂ. ಜಿನಕೋ./ಇಂ./ಪಾ.ತ್ಯಾ./75/2023–24 ದಿನಾಂಕ: 27–11–2024

ಅಲ್ಪಾವಧಿ ಮರು ಟೆಂಡರ ಪ್ರಕಟಣೆ

ಈ ಮೂಲಕ ಗುತ್ತಿಗೆದಾರರಿಗೆ ತಿಳಿಯಪಡಿಸುವದೇನೆಂದರೆ ಇಂಡೆಂಟ್ ಸಂಖ್ಯೆ: **DMA/OW/Work Indent/4888/CALL-3** ಟೆಂಡರನ್ನು ಆಹ್ವಾನಿಸಿದ್ದು, ಇಚ್ಛೆಯುಳ್ಳ ಅರ್ಹ ಗುತ್ತಿಗೆದಾರರು ಇ–ಪ್ರಕ್ಯೂರಮೆಂಟ್ ಪೋರ್ಟಲ್ ಮುಖಾಂತರ ಟೆಂಡರನಲ್ಲಿ ಭಾಗವಹಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಇ–ಪ್ರಕ್ಯೂರಮೆಂಟ್ ವೆಬ್‌ಸೈಟ್ **https://kppp.karnataka.gov.in** ರಲ್ಲಿ ಪ್ರಕಟಿಸಲಾಗಿದ್ದು, ಹೆಚ್ಚಿನ ಮಾಹಿತಿ ಬೇಕಾದಲ್ಲಿ ಕಾರ್ಯಾಲಯದಲ್ಲಿ ಪಡೆಯಬಹುದಾಗಿದೆ.

ಸಹಿ/– ಯೋಜನಾ ನಿರ್ದೇಶಕರು,
ಜಿಲ್ಲಾ ನಗರಾಭಿವೃದ್ಧಿ ಕೋಶ, ಹಾವೇರಿ

DIPR/DIPO/359/2024-25

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ
ಸಂಖ್ಯೆ 16 ಸಿ–1, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು–560052. ಫೋನ್: 080–22268677/78/79, ಫ್ಯಾಕ್ಸ್: 080–22268667
ಇಮೇಲ್: kerc-ka@nic.in ವೆಬ್‌ಸೈಟ್: https://kerc.karnataka.gov.in

ನಂ: ಕವಿನಿಆ/ಎಸ್/ಎಫ್–31/ವಾ–1401/966 ದಿನಾಂಕ: 20.11.2024

ಸಾರ್ವಜನಿಕ ವಿಚಾರಣೆ ಬಗ್ಗೆ ಸೂಚನೆ

ವಿಷಯ: ಕರಡು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಸೌರಶಕ್ತಿಯೊಂದಿಗೆ ಅಥವಾ ಸೌರಶಕ್ತಿಹೊರತಾದ ಮೇಲ್ಛಾವಣಿ ಏರೋ ಟರ್ಬೈನ್‌ನ ಅನುಷ್ಠಾನ) ವಿನಿಯಮಗಳು, 2024 ಬಗ್ಗೆ.

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು ಈ ಮೇಲಿನ ವಿಷಯದ ಬಗ್ಗೆ ಕರಡು ವಿನಿಯಮಗಳು ಹೊರಡಿಸಿದ್ದು, ಅದು ಆಯೋಗದ ಅಂತರ್ಜಾಲ ತಾಣ: **https://kerc.karnataka.gov.in** ಯಲ್ಲಿ ಲಭ್ಯವಿರುತ್ತದೆ.

ಆಯೋಗವು ಈ ವಿಷಯದ ಬಗ್ಗೆ ಭಾಗೀದಾರರ ಅಭಿಪ್ರಾಯ ಪಡೆಯಲು **ದಿನಾಂಕ: 06.12.2024 ಬೆಳಿಗ್ಗೆ 11.00 ಗಂಟೆಗೆ ಶುಕ್ರವಾರ ರಂದು, ಆಯೋಗದ ಕೋರ್ಟ್ ಹಾಲ್‌ನ, ಒಂದನೆಯ ಮಹಡಿ, #16ಸಿ–1, ಮಿಲ್ಲರ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು–560052** ಇಲ್ಲಿ ಸಾರ್ವಜನಿಕ ವಿಚಾರಣೆಯನ್ನು ನಿಗದಿಪಡಿಸಿದೆ.

ಆಸಕ್ತರು ಸಾರ್ವಜನಿಕ ವಿಚಾರಣೆಯಲ್ಲಿ ಭಾಗವಹಿಸಿ ತಮ್ಮ ಅನಿಸಿಕೆ/ಅಭಿಪ್ರಾಯ/ಸಲಹೆಗಳನ್ನು ಆಯೋಗದ ಮುಂದೆ ಸಲ್ಲಿಸಲು ಕೋರಲಾಗಿದೆ.

ಸಹಿ/– ಕಾರ್ಯದರ್ಶಿ
ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಪರವಾಗಿ

DIPR/CP/3457/2024-25

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಅಭಿಯಂತರರವರ ಕಛೇರಿ
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಮೈಸೂರು–570023.

ಸಂ.ಕಾಅ/ಪಂ.ರಾ.ಇಂ.ವಿ/ಮೈ/ಕೆಪಿಪಿ/ಸ.ಇಂ/ಕಿ.ಇಂ./24-25/06 ದಿನಾಂಕ: 25.11.2024

ಅಲ್ಪಾವಧಿ ಕೆಪಿಪಿ ಪೋರ್ಟಲ್–ಟೆಂಡರ್ ಪ್ರಕಟಣೆ
(ಏಕ ಮತ್ತು ದ್ವಿ ಲಕೋಟೆ ಪದ್ಧತಿ)

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಮೈಸೂರುರವರು ಕರ್ನಾಟಕ ಸರ್ಕಾರದ ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಮೂಲಕ CPWD/KPWD/ WRDO/PRED and any other Government Organisation ನಲ್ಲಿ ನೊಂದಾಯಿತರಾಗಿರುವ ಅಥವಾ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ಎನ್‌ರೋಲ್ ಮಾಡಿರುವ 4ನೇ ದರ್ಜೆ ಮತ್ತು ಮೇಲ್ಪಟ್ಟ ಗುತ್ತಿಗೆದಾರರಿಂದ ಟೆಂಡರ್ ನಮೂನೆ **KW-1, 2, 3 & 4** ಪದ್ಧತಿಯಂತೆ ವಿವಿಧ ಲೆಕ್ಕಶೀರ್ಷಿಕೆಗಳ ಯೋಜನೆ ಅನುದಾನದಡಿ ಟೆಂಡರ್ ಆಹ್ವಾನಿಸಲಾಗಿದ್ದು, ಮೈಸೂರು, ನಂಜನಗೂಡು ಮತ್ತು ಟಿ.ನರಸೀಪುರ ತಾಲ್ಲೂಕುಗಳಲ್ಲಿ ಅನುಮೋದನೆಯಾಗಿರುವ ಕಾಮಗಾರಿಗಳಾಗಿದ್ದು, ಸದರಿ ಕಾಮಗಾರಿಗಳಲ್ಲಿ ಕಟ್ಟಡಗಳ ನಿರ್ಮಾಣ/ದುರಸ್ಥಿ/ ಅಭಿವೃದ್ಧಿ ಕಾಮಗಾರಿಗಳು ಹಾಗೂ ರಸ್ತೆ ನಿರ್ಮಾಣ ಕಾಮಗಾರಿಗಳು ಇರುತ್ತವೆ. ಸದರಿ ಕಾಮಗಾರಿಗಳ **ಮೊತ್ತವು ರೂ. 6.00 ಲಕ್ಷದಿಂದ 147.30 ಲಕ್ಷಗಳಾಗಿದ್ದು,** ಕೆಪಿಪಿ ಪೋರ್ಟಲ್ ಮೂಲಕ ಅಲ್ಪಾವಧಿ ಟೆಂಡರ್‌ನ್ನು ಆಹ್ವಾನಿಸಲಾಗಿರುತ್ತದೆ. ಟೆಂಡರ್ ಫಾರಂಗೆ ಅರ್ಜಿ ಸಲ್ಲಿಸಲು ಮತ್ತು ಭರ್ತಿ ಮಾಡಿದ ಫಾರಂಗಳನ್ನು ಆನ್ ಲೈನ್‌ನಲ್ಲಿ ಸಲ್ಲಿಸಲು **ದಿನಾಂಕ: 28–11–2024 ರಿಂದ 10–12–2024 ಸಂಜೆ 4.00 ಘಂಟೆಯವರೆಗೆ** ಹಾಗೂ ಟೆಂಡರ್ ಬಗ್ಗೆ ಸ್ಪಷ್ಟೀಕರಣ/ವಿಚಾರಿಸಿ ಮಾಹಿತಿ ಪಡೆಯಲು ಅಂತಿಮ **ದಿನಾಂಕ: 09–12–2024ರ ಸಂಜೆ 4.00 ಘಂಟೆಯಾಗಿದ್ದು,** ಟೆಂಡರ್ ತೆರೆಯುವ **ದಿನಾಂಕ: 11–12–2024ರ ಸಂಜೆ 5.00 ಘಂಟೆಯ ನಂತರ** ಟೆಂಡರ್ ಫಾರಂ ಬೆಲೆ ಕೆಪಿಪಿ ಪೋರ್ಟಲ್ ನಂತೆ ಸಲ್ಲಿಸಬೇಕು.

ಹೆಚ್ಚಿನ ವಿವರಗಳಿಗೆ ಕರ್ನಾಟಕ ಸರ್ಕಾರದ ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಮೂಲಕ (ಕೆಪಿಪಿ ಪೋರ್ಟಲ್) ವೆಬ್‌ಸೈಟ್‌ನಲ್ಲಿ ಪಡೆಯಬಹುದು **https://kppp.karnataka.gov.in** ಈ ಬಗ್ಗೆ ಇನ್ನೂ ಹೆಚ್ಚಿನ ವಿವರಗಳಿಗಾಗಿ **ಕಾರ್ಯಪಾಲಕ ಅಭಿಯಂತರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಕುವೆಂಪುನಗರ, ಮೈಸೂರು (ಫೋನ್ ನಂ.0821–2560853)** ರವರಕಛೇರಿಯ ವೇಳೆಯಲ್ಲಿ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರು
ಪಂ.ರಾ.ಇಂ.ವಿಭಾಗ, ಮೈಸೂರು.

DIPR/MYS/RO.858/AAPL/2024-25

ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ
ಬೆಂ.ಮ.ಪ್ರ.ಪ್ರಾ.
ನಂ.1, ಆಲಿ ಆಸ್ಕರ್ ರಸ್ತೆ, ಬೆಂಗಳೂರು560 052 ದೂ:080–22263479.

ಸಂಖ್ಯೆ: ಬಿಎಂಆರ್‌ಡಿಎ/ಲೆಕ್ಕಶಾಖೆ/37/2024–25 ದಿನಾಂಕ: 27.11.2024

ಇ–ಹರಾಜು ಪ್ರಕಟಣೆ

ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಹೆಚ್ಚುವರಿ ನಿಧಿಗಳ ಹೂಡಿಕೆಗಾಗಿ ಇ–ಹರಾಜು GOKಯ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಪ್ರಕಟಿಸಲಾಗಿದೆ. ಹೆಚ್ಚಿನ ವಿವರಗಳನ್ನು ವೆಬ್‌ಸೈಟ್: **https://kppp.karnataka.gov.in**ನಿಂದ ಪಡೆಯಬಹುದಾಗಿದೆ.

ಸಹಿ/–ಜಂಟಿ ಮಹಾನಗರ ಆಯುಕ್ತರು,
ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ, ಬೆಂಗಳೂರು.

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ
#49, ಪರಿಸರ ಭವನ, ಚರ್ಚ್ ಸ್ಟ್ರೀಟ್, ಬೆಂಗಳೂರು–560 001
ದೂ: 080–2558 6520/ 2558 9112 ಫ್ಯಾಕ್ಸ್: 080–2588 6321
ಇಮೇಲ್: ho@kspcb.gov.in ವೆಬ್‌ಸೈಟ್: www.kspcb.karnataka.gov.in

ಸಂಖ್ಯೆ: ಮಾನಿಮಂ/111/ಬಿಎಲ್‌ಡಿ/2023/2024–25/2775 ದಿನಾಂಕ: 04.10.2024

ಟೆಂಡರ್‌ಗಾಗಿ ಆಹ್ವಾನ – 1ನೇ ಕರೆ
(https://kppp.karnataka.gov.in ಕರ್ನಾಟಕ ಸರ್ಕಾರದ ಪ್ಲಾಟ್‌ಫಾರ್ಮ್ ಮುಖಾಂತರ)

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ (ಕೆಎಸ್‌ಪಿಸಿಬಿ) ಪರವಾಗಿ **CEO-2**, ಇವರು ಅರ್ಹ ಟೆಂಡರುದಾರರಿಂದ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **https://kppp.karnataka.gov.in** ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕಾಮಗಾರಿಯ ಹೆಸರು: ಬೆಂಗಳೂರಿನ ಬೆಂಗಳೂರು ಸಿಟಿ ರೈಲ್ವೆ ನಿಲ್ದಾಣದಲ್ಲಿ ಕರಾಮಾನಿಮಂ, ಸಿಎಕ್ಯೂಎಂ ಸ್ಟೇಷನ್ ಅಳವಡಿಸಲು ಪ್ರದರ್ಶನ ನಾಮಫಲಕಕ್ಕಾಗಿ ಪ್ಲಾಟ್‌ಫಾರಂ ನಿರ್ಮಾಣ ಹಾಗೂ ಬೆಂಬಲಿತ/ಸರಿಹೊಂದುವ ಸ್ಟೀಲ್ ರಚನಾತ್ಮಕಗಳನ್ನು ಒದಗಿಸುವುದು. ಕಾಮಗಾರಿಯ ಅಂದಾಜು ಮೊತ್ತ: **ರೂ.9.51 ಲಕ್ಷಗಳು**. ಟೆಂಡರ್ ಮೊತ್ತ, ಇ.ಎಂ.ಡಿ ಇತ್ಯಾದಿಗಳನ್ನು ಇ–ಪಾವತಿ ಮೂಲಕ ಮಾತ್ರ ಪಾವತಿಸತಕ್ಕದ್ದು.

ಹೆಚ್ಚಿನ ಮಾಹಿತಿಗಳಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್:
https://kppp.karnataka.gov.in.ಗೆ ಭೇಟಿ ನೀಡುವುದು.

ಸಹಿ/–
CEO-2

ಡಿಐಪಿಆರ್/ಎಸ್‌ಐ/3447/2024–25

ನಮ್ಮೆಲ್ಲರ ಚಿತ್ತ, ನೈಸರ್ಗಿಕ ಸಂಪನ್ಮೂಲಗಳ ಮಿತ ಬಳಕೆಯತ್ತ;
ತ್ಯಾಜ್ಯ ಉತ್ಪಾದನೆಯನ್ನು ತಗ್ಗಿಸಿ

ಕರ್ನಾಟಕ ಸರ್ಕಾರ
ಪುರಸಭಾ ಕಾರ್ಯಾಲಯ, ಕೃಷ್ಣರಾಜಪೇಟೆ–571426, ಮಂಡ್ಯ ಜಿಲ್ಲೆ
ದೂರವಾಣಿ: 08230–295073
E-Mail: ka.krishnarajapete.tmc@gmail.com
Web: www.krishnarajapetetown.mrc.gov.in

ನಂ: ಪುಸಕೆ/ತಾಂ.ಶಾ/ಟೆಂ.ಪ್ರ–59/2024–25 ದಿನಾಂಕ:26.11.2024

ಟೆಂಡರ್ ಪ್ರಕಟಣೆ

ವಿಷಯ: ಪುರಸಭಾ ಅನುದಾನದ ಅಡಿ ಈ ಕೆಳಕಂಡಂತೆ ಸರಬರಾಜು ಮಾಡಲು ಟೆಂಡರ್ ಆಹ್ವಾನಿಸಿದೆ.

ವಿಷಯಕ್ಕೆ ಸಂಬಂಧಿಸಿದಂತೆ, ಕೃಷ್ಣರಾಜಪೇಟೆ, ಪುರಸಭೆಯ ಆರೋಗ್ಯ ಶಾಖೆಗೆ ಸಂಬಂಧಿಸಿದಂತೆ, ಪುರಸಭಾ ಅನುದಾನದ ಅಡಿ ಈ ಕೆಳಕಂಡಂತೆ ಸರಬರಾಜು ಮಾಡಲು ಟೆಂಡರ್ ಆಹ್ವಾನಿಸಿದ್ದು, ಆಸಕ್ತ ಅರ್ಹ ಗುತ್ತಿಗೆದಾರರು ಭಾಗವಹಿಸಲು ಸೂಚಿಸಿದೆ. ಹೆಚ್ಚಿನ ಮಾಹಿತಿಯನ್ನು ಟೆಂಡರ್ ಪ್ರಕಟಣೆ ವಿವರಗಳನ್ನು ಪುರಸಭೆ, ಕೃಷ್ಣರಾಜಪೇಟೆ ಕಛೇರಿ ಸೂಚನಾ ಫಲಕದಲ್ಲಿ ಮತ್ತು ವೆಬ್‌ಸೈಟ್ http://www.krishnarajapetetown.gov.in ಮತ್ತು https://kppp.karnataka.gov.in/ ನಲ್ಲಿ ವೀಕ್ಷಿಸಬಹುದು. ಆನ್‌ಲೈನ್ ನಲ್ಲಿ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : 11.12.2024 ಸಂಜೆ:5.30ರೊಳಗೆ. ಸ್ಯಾಂಪಲ್ ಸಲ್ಲಿಸಲು ಕೊನೆಯ ದಿನಾಂಕ : 12.12.2024 ಸಂಜೆ: 5.30 ರೊಳಗೆ. ಆನ್‌ಲೈನ್ ನಲ್ಲಿ ಟೆಂಡರ್ ತೆರೆಯುವ ದಿನಾಂಕ : (ತಾಂತ್ರಿಕ ಲಕೋಟೆ) ದಿ:16.12.2024 ಬೆಳಿಗ್ಗೆ:11.00 ಗಂಟೆಗೆ. ಆನ್‌ಲೈನ್ ನಲ್ಲಿ ಟೆಂಡರ್ ತೆರೆಯುವ ದಿನಾಂಕ : (ಆರ್ಥಿಕ ಲಕೋಟೆ) : 17.12.2024 ಬೆಳಿಗ್ಗೆ:11.00 ಗಂಟೆಗೆ ಕ್ರ.ಸಂ : 01. ಸರಬರಾಜು ಇಂಡೆಂಟ್ ವಿವರ : ಕೆ.ಆರ್.ಪೇಟೆ ಪುರಸಭಾ ಕಾರ್ಯಾಲಯಕ್ಕೆ ಸಾರ್ವಜನಿಕ ಉಪಯೋಗಕ್ಕಾಗಿ ಮಾರ್ಪಾಡಿತ ನಾಲ್ಕು ಚಕ್ರದ ಮುಕ್ತಿ ವಾಹನ (ಶವ ಸಾಗಿಸುವ ವಾಹನ) ಸರಬರಾಜು ಮಾಡುವ ಬಗ್ಗೆ. INDENTNO:DMA/2024-25/IND2572/CALL-2. ಅನುದಾನ : 2024–25 ನೇ ಸಾಲಿನ ಪುರಸಭಾ ನಿಧಿ. ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ) : 22.78. ಇ.ಎಂ.ಡಿ ಮೊತ್ತ (ರೂ.ಗಳಲ್ಲಿ) : 45561/–.

ಸಹಿ/–ಮುಖ್ಯಾಧಿಕಾರಿ, ಪುರಸಭೆ, ಕೃಷ್ಣರಾಜಪೇಟೆ

ವಾಸಾಸಂಇ/ಸನಿ–ಮಂ/ಕೆಎಸ್ಎಂಸಿ&ಎ/466/2024–25

ಕರ್ನಾಟಕ ಸರ್ಕಾರ
ಲೋಕೋಪಯೋಗಿ, ಇಲಾಖೆ ವಿಭಾಗ, ಹೊಸಪೇಟೆ, ವಿಜಯನಗರ ಜಿಲ್ಲೆ.

ಸಂ:ಪಿಬಿ/ಟೆಂಡರ್ ಪ್ರಕಟಣೆ/AE-1/2024–25/2528 ದಿ:–26/11/2024

ಅಲ್ಪಾವದಿ ಇ–ಟೆಂಡರ್ ಆಹ್ವಾನ ಪ್ರಕಟಣೆ

ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ **https://kppp.karnataka.gov.in** ಮುಖಾಂತರ ಈ ಕೆಳಕಂಡ ಕೆ.ಕೆ.ಆರ್.ಡಿ.ಬಿ ಯೋಜನೆ ಅಡಿಯಲ್ಲಿನ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲಾಗಿದೆ ಹೆಚ್ಚಿನ ವಿವರಗಳನ್ನು ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ, ಹೊಸಪೇಟೆ, ವಿಜಯನಗರ ಜಿಲ್ಲೆ ಕಾರ್ಯಾಲಯದಿಂದ ಮಾಹತಿಯನ್ನು ಪಡೆಯಬಹುದು.

ಕ್ರ. ಸಂ	ಕಾಮಗಾರಿಯ ಇಂಡೆಂಟ್ ಸಂಖ್ಯೆ	ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ	ಕ್ರ. ಸಂ	ಕಾಮಗಾರಿಯ ಇಂಡೆಂಟ್ ಸಂಖ್ಯೆ	ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ
THESE WORK ARE RESERVED FOR SC CATEGORY					
1	PWD/2024-25/BD/WORK_INDENT16111	64.00	3	PWD/2024-25/BD/WORK_INDENT16124	80.00
2	PWD/2024-25/BD/WORK_INDENT16174	30.00			
THIS WORK IS RESERVED FOR ST CATEGORY					
4	PWD/2024-25/BD/WORK_INDENT16097	48.00			
GENERAL WORKS					
5	PWD/2024-25/RD/WORK_INDENT16112	60.00	14	PWD/2024-25/RD/WORK_INDENT16105	166.78
6	PWD/2024-25/BD/WORK_INDENT16125	35.45	15	PWD/2024-25/RD/WORK_INDENT16113	486.71
7	PWD/2024-25/BD/WORK_INDENT16101	64.00	16	PWD/2024-25/RD/WORK_INDENT16107	160.00
8	PWD/2024-25/BD/WORK_INDENT16117	64.00	17	PWD/2024-25/RD/WORK_INDENT16423	310.00
9	PWD/2024-25/RD/WORK_INDENT16110	51.87	18	PWD/2024-25/RD/WORK_INDENT10514	419.44
10	PWD/2024-25/BD/WORK_INDENT16106	75.00	19	PWD/2024-25/RD/WORK_INDENT10515	150.00
11	PWD/2024-25/BD/WORK_INDENT16123	64.00	20	PWD/2024-25/RD/WORK_INDENT16273	180.00
12	PWD/2024-25/BD/WORK_INDENT16121	47.08	21	PWD/2024-25/RD/WORK_INDENT16369	350.27
13	PWD/2024-25/RD/WORK_INDENT16216	260.00	22	PWD/2024-25/BD/WORK_INDENT16371	35.00

1.ಗುತ್ತಿಗೆದಾರರ ಕ್ವಾರೀಸ್ ದಿನಾಂಕ **Kppp Portal** ನಲ್ಲಿ ಇರುವಂತೆ. 2.ಟೆಂಡರ್‌ಗೆ ಅರ್ಜಿ ಮತ್ತು ಟೆಂಡರ್ ಸಲ್ಲಿಸುವ ದಿನಾಂಕ **12.12.2024 (16.00 ಗಂಟೆಗೆ)**. 3.ಇ–ಪ್ರಾಕ್ಯೂರ್‌ಮೆಂಟ್ ಮುಖಾಂತರ ಬಿಡ್‌ಗಳನ್ನು ತೆರೆಯುವ ದಿನಾಂಕ **13.12.2024 (16.30 ಗಂಟೆಗೆ)**. 4.ಆರ್ಥಿಕ ಬಿಡ್ ತೆರೆಯುವ ದಿನಾಂಕ: **Kppp Portal** ನಲ್ಲಿ ಇರುವಂತೆ

NOTE: ಕಾರಣಾಂತರಗಳಿಂದ ಮೇಲೆ ತಿಳಿಸಿದ ಟೆಂಡರ್ ದಿನಾಂಕಗಳು ಹಾಗೂ ಇತರೆ ಬದಲಾವಣೆಗಳಾದಲ್ಲಿ ಗುತ್ತಿಗೆದಾರರು kppp Portal ನಲ್ಲಿ ನೊಡಿಕೊಳ್ಳಬಹುದು

ಸಹಿ/–ಕಾರ್ಯನಿರ್ವಾಹಕ ಅಭಿಯಂತರು,
ಲೋಕೋಪಯೋಗಿ ಇಲಾಖೆ ವಿಭಾಗ ಹೊಸಪೇಟೆ, ವಿಜಯನಗರ ಜಿಲ್ಲೆ.

ವಾ.ಸಾ.ಸಂ.ಇ/ವಿಜಯನಗರ/2024–25/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/385

ಕರ್ನಾಟಕ ಸರ್ಕಾರ – (ಜಲಸಂಪನ್ಮೂಲ ಇಲಾಖೆ)
ಭದ್ರಾ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ, ಇಂಜಿನಿಯರಿಂಗ್ ವಿಭಾಗ ಮಲವಗೊಪ್ಪ, ನಿಧಿಗೆ ಅಂಚೆ, ಶಿವಮೊಗ್ಗ–577222

ನಂ:ಭಕಾಶಿ/ಇಂ.ವಿಭಾಗ/ತಾಂ.ಶಾಖೆ/ಟೆಂಡರ್/24–25/450 ದಿ: 25.11.2024

ಐಟಂವಾರು ಅಲ್ಪವಾಧಿ ಟೆಂಡರ್ ಪ್ರಕಟಣೆ KW-1 & KW-2 ರ ಪ್ರಕಾರ ಟೆಂಡರ್ ಆಹ್ವಾನ (IFT – 03/2024–25)

Head of Account :- 4705- Capital Grant.

ಮಾನ್ಯ ಆಡಳಿತಾಧಿಕಾರಿಗಳು, ಭದ್ರಾಕಾಡಾ, ಶಿವಮೊಗ್ಗ ಇವರ ಪರವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪಾರದರ್ಶಕತೆ ಅಧಿನಿಯಮ–1999, ನಿಯಮಗಳು–2000 ರ ಹಾಗೂ ನಿಯಮಾವಳಿಗಳು 2017ರ ಪ್ರಕಾರ ಕಾರ್ಯಪಾಲಕ ಇಂಜಿನಿಯರ್, ಇಂಜಿನಿಯರಿಂಗ್ ವಿಭಾಗ, ಭದ್ರಾ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ, ಮಲವಗೊಪ್ಪ, ಶಿವಮೊಗ್ಗ ಇವರಿಂದ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ನಾಲ್ಕನೇ ದರ್ಜೆ ಮತ್ತು ಅದಕ್ಕಿಂತ ಮೇಲ್ಪಟ್ಟ ಅರ್ಹ ಗುತ್ತಿಗೆದಾರರಿಂದ ಅಂತರ್ಗತ ಬಸಿಗಾಲುವೆ ಕಾಮಗಾರಿಗೆ ಐಟಂವಾರು ಅಲ್ಪಾವಧಿ ಟೆಂಡರ್‌ಗಳನ್ನು ದ್ವಿ–ಲಕೋಟೆ ಪದ್ಧತಿಯಲ್ಲಿ ಕೆಪಿಪಿಪಿ–ಪೋರ್ಟಲ್ ಮೂಲಕ ಆಹ್ವಾನಿಸಲಾಗಿದೆ. ವಿವರ ಕೆಳಗಿನಂತಿದೆ.

1. ಟೆಂಡರನ್ನು ಇ–ಪ್ರಕ್ಯೂರ್‌ಮೆಂಟ್‌ನಲ್ಲಿ access ಮಾಡಬಹುದಾದ ದಿನಾಂಕ: 26–11–2024 ರಿಂದ ದಿ: 05–12–2024 ರವರೆಗೆ. 2. ಭರ್ತಿ ಮಾಡಿದ ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 05–12–2024 ಸಂಜೆ 04.00 ಗಂಟೆವರೆಗೆ 3. ತಾಂತ್ರಿಕ ಬಿಡ್ ತೆರೆಯುವ ದಿನಾಂಕ (ದ್ವಿ ಲಕೋಟೆ ಪದ್ಧತಿ): 06–12–2024 ಸಂಜೆ 4.30 ಗಂಟೆಯ ನಂತರ 4. ಆರ್ಥಿಕ ಬಿಡ್ ತೆರೆಯುವ ದಿನಾಂಕ: 07–12–2024 ಸಂಜೆ 04.30 ಗಂಟೆಯ ನಂತರ

ಕಾಮಗಾರಿಗಳ ಬಗ್ಗೆ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಇಂಜಿನಿಯರಿಂಗ್ ವಿಭಾಗ, ಭದ್ರಾಕಾಡಾ, ಶಿವಮೊಗ್ಗ ಇವರ ಕಛೇರಿಯಲ್ಲಿ, ಕಛೇರಿ ವೇಳೆಯಲ್ಲಿ ಅಥವಾ ವೆಬ್‌ಸೈಟ್ http:/www.kppp.karnataka.gov.in ನಿಂದ ಪಡೆಯಬಹುದಾಗಿದೆ.

ಸಹಿ/– ಕಾರ್ಯಪಾಲಕ ಇಂಜಿನಿಯರ್
ಇಂಜಿನಿಯರಿಂಗ್ ವಿಭಾಗ ಭದ್ರಾಕಾಡಾ, ಶಿವಮೊಗ್ಗ.

ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/24–25/146/11/1107

PUBLIC NOTICE

Our client ('**Client**') is desirous of entering into a sale transaction in connection with the immovable properties morefully described in the '**Schedule**' hereunder and are hereinafter collectively referred to as the '**Schedule Properties**' with **Akhilesh Reality and Development Private Limited**, having its registered office at No. E - 201, Lilac Garden, Charkop, Mumbai, Maharashtra, India, 400 067 ('**Owner**') along with **M/s. Ellis Properties LLP,** having its office at PT 200, MIG-2, Mayuri Nagar, Miyapur, Hyderabad, Tirumalagiri, Telangana, India, 500 049 ('**Agreement Holder**'). The Owner has represented to our Client that the Owner is the sole and absolute owner of the Schedule Properties, with unrestricted rights of alienation over the same.

Further, the Owner has represented that it has lost/misplaced the original Sale Deed dated 08.06.2005 (Document No. DNH-1-01238-2005-06, Book-1, stored in C.D. No. DNHD51, at the office of the Sub-Registrar, Devanahalli) executed by Mr. S. Jayaram, son of Late Shettappa and others in favour of Akhilesh Reality and Development Private Limited ('**Sale Deed**') in connection with the Schedule Properties. Despite best efforts, the Owner was unable to trace the original Sale Deed for which a Police Complaint intimating the loss was filed with Karnataka State Police, Bengaluru City, *vide* E- Lost Report on 21.11.2022 bearing Reference No. 0390358/2022.

Notice is hereby given to the general public that any person/s other than the Owner, asserting any right, title, charge, lien, claim/s or any interest whatsoever in respect of the Schedule Properties is/ are hereby called upon to submit to the undersigned, their claim/s, if any, over the Schedule Properties or their objections, if any, to the aforementioned sale transaction. The said claim/s or objections must be in writing, together with documentary proof of such claim/s or objections, so as to reach us at the address given below within a period of **10 (ten) days** from the date of publication of this Notice. If no such claim/s or objections are received within the said period of 10 (ten) days, it shall be deemed that no one else other than the Owner has/ have any right, title, charge, lien, claim/s or any interest whatsoever in respect of the Schedule Properties. Further any claims or alleged interests, if any, which are not received within the said period of 10 (ten) days shall be deemed to have been consciously waived and disregarded for all intents and purposes and shall thereafter not be binding on our Client and our Client would be at liberty to proceed with the said sale transaction in connection with the Schedule Properties.

SCHEDULE
(Description of the Schedule Properties)

Item No. 1 Property:

All that piece and parcel of immovable property being a portion of Survey No. 454, measuring 02 Acres 23 Guntas (out 03 Acres 08 Guntas), situated at Devanahalli Village, Kasaba Hobli, Devanahalli Taluk, Bangalore Rural District and bounded on:

East by : Oni;
West by : Property bearing Survey No. 455;
North by : Property belonging to Mr. Gopalappa; and
South by : Property of L & W.

Item No. 2 Property:

All that piece and parcel of immovable property being a portion of Survey No. 455, measuring 02 Acres 34 Guntas (out of 04 Acres 09 Guntas), situated at Devanahalli Village, Kasaba Hobli, Devanahalli Taluk, Bangalore Rural District and bounded on:

East by : Property bearing Survey No. 454;
West by : Property of L & W;
North by : Property belonging to Mr. Gopalappa; and
South by : Property of L & W.

Date: 28.11.2024
Place: Bengaluru

Ms. Brijita Prakash,
Partner
J. Sagar Associates,
Advocates & Solicitors,
Level 3, Prestige Obelisk,3, Kasturba Road
Bengaluru – 560 001.
Ph. 080-4350 3600/080-4350 3676
Email – brijita.prakash@jsalaw.com

ಪರಿಶಿಷ್ಟ ಪಂಗಡಗಳ ರಾಷ್ಟ್ರೀಯ ಆಯೋಗ

ಗುರುಶಂಕರ್ ಕೆ.ಪಿ

ಬುಡಕಟ್ಟು ಸಮುದಾಯಕ್ಕಿರುವ ಸಾಂವಿಧಾನಿಕ ಹಕ್ಕುಗಳನ್ನು ರಕ್ಷಿಸುವುದು ಮತ್ತು ಅವರಿಗಾಗಿ ಮೀಸಲಾದ ಅಭಿವೃದ್ಧಿ ಯೋಜನೆಗಳು ಸರಿಯಾದ ದಿಕ್ಕಿನಲ್ಲಿ ಪಾಲನೆಯಾಗುವುದು ಬಹಳ ಮುಖ್ಯ. ಈ ಕಾರಣಗಳಿಗಾಗಿ ಸಂವಿಧಾನವು ಪರಿಶಿಷ್ಟ ಪಂಗಡಗಳ ರಾಷ್ಟ್ರೀಯ ಆಯೋಗವನ್ನು ರಚಿಸಿತು. ಇದು ಭಾರತೀಯ ಸಂವಿಧಾನದ 338 ಎ ವಿಧಿ ಅಡಿಯಲ್ಲಿ ಸ್ಥಾಪನೆಯಾಗಿರುವ ಸಾಂವಿಧಾನಿಕ ಸಂಸ್ಥೆಯಾಗಿದೆ.

ಪರಿಶಿಷ್ಟ ಪಂಗಡಗಳ ಹಿತರಕ್ಷಣೆಯ ಕಾವಲುಗಾರನಾಗಿ ಮತ್ತು ಸಮುದಾಯದ ಬೌದ್ಧಿಕಕೇಂದ್ರವಾಗಿ ಕಾರ್ಯನಿರ್ವಹಿಸುವುದು ಆಯೋಗದ ಕರ್ತವ್ಯ.

ವಿವಿಧ ಸಂಸ್ಥೆಗಳಲ್ಲಿ ಬುಡಕಟ್ಟು ಸಮುದಾಯಗಳ ಕಲ್ಯಾಣದ ಜವಾಬ್ದಾರಿಯನ್ನು ಖಾತರಿಪಡಿಸಿಕೊಳ್ಳುವುದು ಆಯೋಗದ ಆದ್ಯತೆಗಳಲ್ಲಿ ಒಂದು.

ಆಯೋಗದ ರಚನೆ ಹೇಗೆ?

- ರಾಷ್ಟ್ರಪತಿ ಅವರಿಂದ ನೇಮಕಗೊಂಡ ಅಧ್ಯಕ್ಷರು, ಉಪಾಧ್ಯಕ್ಷರು ಸೇರಿದಂತೆ ಮೂವರು ಸದಸ್ಯರು ಇರುತ್ತಾರೆ.
- ಅಧ್ಯಕ್ಷರು ಕೇಂದ್ರ ಸಚಿವರ ಸ್ಥಾನಮಾನವನ್ನು ಹೊಂದಿದ್ದರೆ, ಉಪಾಧ್ಯಕ್ಷರು ಸಹಾಯಕ ಸಚಿವರ ಸ್ಥಾನವನ್ನು ಪಡೆಯುತ್ತಾರೆ ಹಾಗೂ ಸದಸ್ಯರು ಭಾರತ ಸರ್ಕಾರ ಕಾರ್ಯದರ್ಶಿಯ ಸ್ಥಾನಮಾನವನ್ನು ಪಡೆದಿರುತ್ತಾರೆ.
- ಶಾಶ್ವತ ಕಾರ್ಯದರ್ಶಿ ಕಚೇರಿಯು ನವದೆಹಲಿಯಲ್ಲಿದೆ. ದೇಶದಾದ್ಯಂತ ಆರು ವಿಭಾಗೀಯ ಕಚೇರಿಗಳನ್ನು ಹೊಂದಿದ್ದು ಇದು ಸಿವಿಲ್ ನ್ಯಾಯಾಲಯ ಮಟ್ಟದ ಅಧಿಕಾರವನ್ನು ಹೊಂದಿದೆ.

ಆಯೋಗದ ಕಾರ್ಯಗಳು

- ಪರಿಶಿಷ್ಟ ಪಂಗಡಗಳ ಸಂರಕ್ಷಣೆಗೆ ಸಂಬಂಧಿಸಿದಂಥ ಯಾವುದೇ ವಿಷಯಗಳಿರಲಿ; ಅದರ ನಿಗಾ ವಹಿಸುವುದು.
- ಪರಿಶಿಷ್ಟ ಪಂಗಡಗಳ ಹಕ್ಕುಗಳನ್ನು ಕಾಯ್ದುಕೊಳ್ಳಲು ಮತ್ತು ಹಿತರಕ್ಷಣೆ ಮಾಡಲು ನಿರ್ದಿಷ್ಟ ದೂರುಗಳ ವಿರುದ್ಧ ವಿಚಾರಣೆ ನಡೆಸುವುದು.
- ಪರಿಶಿಷ್ಟ ಪಂಗಡಗಳ ಸಾಮಾಜಿಕ ಹಾಗೂ ಆರ್ಥಿಕ ಅಭಿವೃದ್ಧಿಯ ಯೋಜನಾ ಪ್ರಕ್ರಿಯೆಗಳಲ್ಲಿ ಪಾಲ್ಗೊಳ್ಳುವುದು, ಸಲಹೆ ನೀಡುವುದು ಮತ್ತು ಕೇಂದ್ರಾಡಳಿತ ಪ್ರದೇಶ ಹಾಗೂ ಯಾವುದೇ ರಾಜ್ಯದಲ್ಲಿ ಈ ಬಗೆಗಿನ ಪ್ರಗತಿಯನ್ನು ನಿಯಮಿತವಾಗಿ ಪರಿಶೀಲಿಸುವುದು.
- ಪರಿಶಿಷ್ಟ ಪಂಗಡಗಳ ಹಿತಾಸಕ್ತಿಯನ್ನು ಕಾಯ್ದುಕೊಳ್ಳಲು ಪರಿಣಾಮಕಾರಿಯಾದ ಅನುಷ್ಠಾನಕ್ಕೆ ಕೇಂದ್ರಾಡಳಿತ ಪ್ರದೇಶ ಅಥವಾ ಯಾವುದೇ ರಾಜ್ಯವು ಕೈಗೊಳ್ಳಬೇಕಿರುವ ಕ್ರಮಗಳ ಬಗ್ಗೆ ವರದಿ ಸಲ್ಲಿಸುವುದು ಹಾಗೂ ಶಿಫಾರಸು ನೀಡುವುದು.
- ಪರಿಶಿಷ್ಟ ಪಂಗಡಗಳ ರಕ್ಷಣೆ, ಕಲ್ಯಾಣ, ಅಭಿವೃದ್ಧಿಗೆ ಸಂಬಂಧಿಸಿದಂತೆ ಇತರ ಕೆಲಸಗಳನ್ನು ನಿರ್ವಹಿಸುವುದರ ಜತೆಗೆ ಯಾವುದೇ ಸಮಯದಲ್ಲಿ ಸೂಕ್ತ ಎನಿಸಿದರೆ ರಾಷ್ಟ್ರಪತಿ ಅವರಿಗೆ ವರದಿ ನೀಡುವುದು.
- ಪರಿಶಿಷ್ಟ ಪಂಗಡಗಳ ಮೇಲೆ ಪರಿಣಾಮ ಬೀರಬಲ್ಲ ನೀತಿ ನಿರೂಪಣೆಗಳ ವಿಚಾರದಲ್ಲಿ ಕೇಂದ್ರಾಡಳಿತ ಪ್ರದೇಶಗಳು ಹಾಗೂ ಪ್ರತಿ ರಾಜ್ಯ ಸರ್ಕಾರಗಳು ಆಯೋಗದೊಂದಿಗೆ ಸಮಾಲೋಚನೆ ನಡೆಸಬೇಕು.

ರಾಜಸ್ಥಾನದ ಕಲಿಬೆಲಿಯಾ ಸಮುದಾಯದ ನೃತ್ಯ

ಆಯೋಗಕ್ಕಿರುವ ಅಧಿಕಾರ

- ದೂರುಗಳ ವಿಚಾರಣೆಯ ಸಂದರ್ಭಗಳಲ್ಲಿ ಪರಿಶಿಷ್ಟ ಪಂಗಡಗಳ ರಾಷ್ಟ್ರೀಯ ಆಯೋಗಕ್ಕೆ ಸಿವಿಲ್ ನ್ಯಾಯಾಲಯಕ್ಕೆ ಇರುವ ಎಲ್ಲಾ ಅಧಿಕಾರವೂ ಇರುತ್ತದೆ
- ಭಾರತದ ಯಾವುದೇ ಭಾಗದಲ್ಲಿರುವ ವ್ಯಕ್ತಿಗೆ ವಿಚಾರಣೆಗೆ ಹಾಜರಾಗುವಂತೆ ಸಮನ್ಸ್ ಜಾರಿ ಮಾಡುವ ಅಧಿಕಾರವಿದೆ.
- ಯಾವುದೇ ದಾಖಲೆಗಳ ಅನ್ವೇಷಣೆ ಮತ್ತು ಸಲ್ಲಿಕೆಯ ಅಗತ್ಯಗಳ ಸಂದರ್ಭ ಬಂದಾಗ ಅಫಿಡವಿತ್ ಆಧಾರದ ಮೇಲೆ ಸಾಕ್ಷಿ ಪಡೆಯಬಹುದು.
- ನ್ಯಾಯಾಲಯ ಅಥವಾ ಕಚೇರಿಯಿಂದ ದಾಖಲೆಗಳನ್ನು ಅಥವಾ ಅದರ ಪ್ರತಿಯನ್ನು ಪಡೆಯಲು ಕೋರಿಕೆ ಸಲ್ಲಿಸಬಹುದು.
- ಸಮನ್ಸ್ ಜಾರಿ ಮಾಡುವುದು ಅಥವಾ ಸಾಕ್ಷಿಗಳ ವಿಚಾರಣೆ ಹಾಗೂ ದಾಖಲೆಗಳ ಪರಿಶೀಲನೆ ಸಂಬಂಧ ಸಂವಹನ ನಡೆಸುವುದು.
- ಸಂವಿಧಾನದ ವಿಧಿ 338ರ ಪ್ರಕಾರ ಪರಿಶಿಷ್ಟ ಪಂಗಡಗಳ ಮೇಲೆ ಪರಿಣಾಮ ಬೀರಬಲ್ಲಂತಹ ಎಲ್ಲಾ ಪ್ರಮುಖ ನೀತಿ ನಿರೂಪಣೆ ವಿಚಾರಗಳ ಸಂಬಂಧ ಪ್ರತಿ ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳು ಆಯೋಗದ ಸಲಹೆಯನ್ನು ಪಡೆಯಬೇಕು.
- ಬುಡಕಟ್ಟು ಸಮುದಾಯಗಳ ಮೂಲಭೂತ ವಿಚಾರಗಳಿಗೆ ಸಂಬಂಧಿಸಿದಂತೆ ನೀತಿ ಅನುಷ್ಠಾನ ಮತ್ತು ತನಿಖೆಗಾಗಿ ಆಯೋಗ 10 ವಲಯಗಳನ್ನು ಗುರುತಿಸಿದ್ದು ಅವು ಹೀಗಿವೆ.

1. ಅರಣ್ಯ ಹಕ್ಕು 2. ಗಣಿ ಸಂಬಂಧಿತ ಸಮಸ್ಯೆಗಳು
3. ಹಣಕಾಸು ವಿಚಾರಗಳು ಮತ್ತು ಅಭಿವೃದ್ಧಿ ಯೋಜನೆಗಳ ಅನುಷ್ಠಾನ
4. ದೌರ್ಜನ್ಯ 5. ಕುಂದುಕೊರತೆ
6. ಒಳಗೊಳ್ಳುವಿಕೆ ಮತ್ತು ಹೊರಹಾಕುವಿಕೆಯ ಅಂಶಗಳು
7. ಆರೋಗ್ಯ ಮತ್ತು ಪೌಷ್ಟಿಕಾಂಶ 8. ಶಿಕ್ಷಣ
9. ಕಾನೂನು ಮತ್ತು ಸಂವಿಧಾನಾತ್ಮಕ ವಿಚಾರ
10. ಕಲ್ಯಾಣ ಯೋಜನೆಗಳಲ್ಲಿ ಪರಿಶಿಷ್ಟ ಪಂಗಡಗಳ ಅಂಶ

- ಈ ಅಂಶಗಳಿಗೆ ಸಂಬಂಧಿಸಿದಂತೆ ಆಯೋಗವು 'ಕುಂದುಕೊರತೆ ನಿವಾರಣೆ ಮತ್ತು ಯೋಜನೆ' ಕಾರ್ಯವನ್ನು ಕೈಗೊಳ್ಳುತ್ತದೆ.

ಭಾರತದಲ್ಲಿ ಬುಡಕಟ್ಟು ಸಮುದಾಯದ ನಿರ್ದಿಷ್ಟ ಅಗತ್ಯಗಳು

- ಭಾರತದಲ್ಲಿ ಬುಡಕಟ್ಟು ಸಮುದಾಯವು ಆಯಾ ಭೌಗೋಳಿಕ ಪ್ರದೇಶಗಳಿಗೆ ತಕ್ಕಂತೆ ವಿಶೇಷವಾದ ಸಾಂಸ್ಕೃತಿಕ ವಿನ್ಯಾಸಗಳನ್ನು ಹೊಂದಿರುವುದರಿಂದ ಅದರ ಸ್ವರೂಪ ವಿಶಿಷ್ಟವಾಗಿರುತ್ತದೆ ಮತ್ತು ಅವರ ಸಮಸ್ಯೆಗಳು ಭಿನ್ನವಾಗಿರುತ್ತದೆ.
- ಬುಡಕಟ್ಟು ಜನಾಂಗದವರು ಸುಸ್ಥಿರ ಅಭಿವೃದ್ಧಿಯ ಹರಿಕಾರರು. ಎಲ್ಲಿಯೇ ವಾಸಿಸಲಿ ಅವರು ಪರಿಸರ ಸಮತೋಲನವನ್ನು ಕಾಯ್ದುಕೊಳ್ಳುವ ನಿಸರ್ಗದ ಶಿಶುಗಳಾಗಿದ್ದಾರೆ. ಇವರ ಸಮಸ್ಯೆಗಳಿಗೆ ಸ್ಪಂದಿಸಲು ಮತ್ತು ಹಿತರಕ್ಷಣೆಗಾಗಿ ಎನ್‌ಸಿಎಸ್‌ಟಿಗೆ ವಿಶೇಷ ಸ್ಥಾನಮಾನವನ್ನು ನೀಡಲಾಗಿದೆ.

ಕುಂದುಕೊರತೆಗೆ ಪರಿಹಾರ

- ಪರಿಶಿಷ್ಟ ಪಂಗಡಕ್ಕೆ ಸೇರಿದ ಜನರ ಮೇಲೆ ನಡೆಯುತ್ತಿರುವ ಅನ್ಯಾಯಗಳ ಬಗ್ಗೆ ಜನರಿಂದ, ನಾಗರಿಕ ಸಂಸ್ಥೆಗಳಿಂದ ಮತ್ತು ಸರ್ಕಾರಿ ಇತರ ಸಂಸ್ಥೆಗಳಿಂದ ಆಯೋಗವು ಮನವಿ ಸ್ವೀಕರಿಸುತ್ತದೆ.
- ಈ ಪಂಗಡಗಳ ಮೇಲಾಗುತ್ತಿರುವ ದೌರ್ಜನ್ಯ, ಶೋಷಣೆ ಮತ್ತು ಸಾಮಾಜಿಕ ಅನ್ಯಾಯದ ಬಗ್ಗೆಗೂ ಮುದ್ರಣ ಮತ್ತು ವಿದ್ಯುನ್ಮಾನ ಮಾಧ್ಯಮಗಳು ಬೆಳಕು ಚೆಲ್ಲುತ್ತವೆ.
- ಯಾವುದೇ ಅನ್ಯಾಯದ ಪ್ರಕರಣಗಳು ಗಮನಕ್ಕೆ ಬರುತ್ತಿದ್ದಂತೆಯೇ ಆಯೋಗವು ಪರಿಶಿಷ್ಟ ಪಂಗಡಕ್ಕೆ ಸೇರಿದ ಜನರಿಗೆ ನ್ಯಾಯ ದೊರಕಿಸಿಕೊಡಲು ಪ್ರಯತ್ನ ಮಾಡುತ್ತದೆ. ಇದನ್ನು ಅನುಷ್ಠಾನಗೊಳಿಸಲು ಆಯೋಗಕ್ಕೆ ರಾಜ್ಯದ ಎಲ್ಲಾ ಅಂಗಗಳಿಂದ ಸಹಕಾರ ಮತ್ತು ನೆರವು ಸಿಗುತ್ತದೆ.
- ಆಯೋಗದ ಸದಸ್ಯರು ದೇಶದ ವಿವಿಧ ಭಾಗಗಳಿಗೆ ಭೇಟಿ ನೀಡುತ್ತಾರೆ. ಬುಡಕಟ್ಟು ಜನರ ಕುಂದುಕೊರತೆಗಳಿಗೆ ಸ್ಥಳದಲ್ಲಿಯೇ ಪರಿಹಾರವನ್ನು ನೀಡುತ್ತಾರೆ.
- ಸಾರ್ವಜನಿಕರು ತಮ್ಮ ದೂರುಗಳನ್ನು ದಾಖಲಿಸಲು ಆಯೋಗವು ತನ್ನದೇ ಆದ ವೆಬ್ ಪೋರ್ಟಲ್ ಅನ್ನು ಕೂಡ ರೂಪಿಸಿದೆ.

❖

ಬಹುಆಯ್ಕೆಯ ಪ್ರಶ್ನೋತ್ತರಗಳು

1. ಜನಸೇವಕ ಯೋಜನೆಗೆ ಸಂಬಂಧಿಸಿದಂತೆ ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ.
ಎ. ಜನಸೇವಕ ಯೋಜನೆಯನ್ನು 1ನೇ ನವೆಂಬರ್ 2021ರಲ್ಲಿ ಪ್ರಾರಂಭಿಸಲಾಯಿತು.
ಬಿ. ರಾಜ್ಯದ ನಾಗರಿಕರ ಮನೆ ಬಾಗಿಲಿಗೆ ಸರ್ಕಾರದ ಸೇವೆಗಳನ್ನು ತಲುಪಿಸಿ ಅವರ ದೈನಂದಿನ ಜೀವನವನ್ನು ಸುಗಮಗೊಳಿಸುವ ಉದ್ದೇಶದಿಂದ ಈ ಯೋಜನೆಯನ್ನು ಪ್ರಾರಂಭಿಸಲಾಗಿದೆ.
ಕೆಳಗಿನವುಗಳಲ್ಲಿ ಸರಿ ಉತ್ತರವನ್ನು ಆರಿಸಿ.
ಎ. ಹೇಳಿಕೆ ಎ ಸರಿಯಾಗಿದೆ.
ಬಿ. ಹೇಳಿಕೆ ಬಿ ಸರಿಯಾಗಿದೆ.
ಸಿ. ಎರಡೂ ಹೇಳಿಕೆಗಳು ತಪ್ಪಾಗಿವೆ.
ಡಿ. ಎರಡೂ ಹೇಳಿಕೆಗಳು ಸರಿಯಾಗಿವೆ.
ಉತ್ತರ: ಡಿ

2. ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ.
ಎ. ಬೆಂಗಳೂರು ಮಹಾನಗರದಲ್ಲಿ ವಿವಿಧ ಸರ್ಕಾರಿ ಮತ್ತು ಖಾಸಗಿ ಸೇವೆಗಳನ್ನು ಒಂದೇ ಸೂರಿನಡಿ ಒದಗಿಸಬೇಕೆಂಬ ಉದ್ದೇಶದಿಂದ ಬೆಂಗಳೂರು ಒನ್ ಯೋಜನೆಯನ್ನು 2005ರಲ್ಲಿ ಪ್ರಾರಂಭಿಸಲಾಗಿದೆ.
ಬಿ. ರಾಜ್ಯದಲ್ಲಿ ಮೊಬೈಲ್ ಒನ್ ಯೋಜನೆಯನ್ನು 2024ರಲ್ಲಿ ಪ್ರಾರಂಭಿಸಲಾಗಿದೆ.
ಕೆಳಗಿನವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ.
ಎ. ಹೇಳಿಕೆ ಎ ಸರಿಯಾಗಿದೆ.
ಬಿ. ಹೇಳಿಕೆ ಬಿ ಸರಿಯಾಗಿದೆ.
ಸಿ. ಎರಡೂ ಹೇಳಿಕೆಗಳು ತಪ್ಪಾಗಿವೆ.
ಡಿ. ಎರಡೂ ಹೇಳಿಕೆಗಳು ಸರಿಯಾಗಿವೆ.
ಉತ್ತರ: ಎ

3. ಸುವಿಧಾ ಯೋಜನೆಗೆ ಸಂಬಂಧಿಸಿದಂತೆ ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ.
ಎ. ಕರ್ನಾಟಕ ಸರ್ಕಾರದ ವಿವಿಧ ಯೋಜನೆಗಳನ್ನು ನಾಗರಿಕರಿಗೆ ಒದಗಿಸಲು ಅರ್ಹ ಫಲಾನುಭವಿಗಳನ್ನು ಗುರುತಿಸುವಲ್ಲಿ ಸುವಿಧಾ ಯೋಜನೆಯ ತಂತ್ರಾಂಶವನ್ನು ಉಪಯೋಗಿಸಲಾಗುತ್ತಿದೆ.
ಬಿ. ಸುವಿಧಾ ಯೋಜನೆಗಳಡಿಯಲ್ಲಿ 9 ಇಲಾಖೆಗಳ 150 ಸೇವೆಗಳನ್ನು ಒದಗಿಸಲಾಗುತ್ತಿದೆ.
ಕೆಳಗಿನವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ.
ಎ. ಹೇಳಿಕೆ ಎ ಸರಿಯಾಗಿದೆ.
ಬಿ. ಹೇಳಿಕೆ ಬಿ ಸರಿಯಾಗಿದೆ.
ಸಿ. ಎರಡೂ ಹೇಳಿಕೆಗಳು ತಪ್ಪಾಗಿವೆ.
ಡಿ ಎರಡೂ ಹೇಳಿಕೆಗಳು ಸರಿಯಾಗಿವೆ.
ಉತ್ತರ: ಡಿ

4. ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ.
ಎ. ಕನ್ನಡ ಸಾಹಿತ್ಯ ಪರಿಷತ್ತು ಅನ್ನು 1915ರಲ್ಲಿ ಸ್ಥಾಪನೆ ಮಾಡಲಾಯಿತು.
ಬಿ. 1915ರಿಂದ ಕನ್ನಡ ಸಾಹಿತ್ಯ ಪರಿಷತ್ತು, ಕನ್ನಡ ಸಾಹಿತ್ಯ ಸಮ್ಮೇಳನವನ್ನು ಪ್ರತಿ ವರ್ಷವೂ ಆಯೋಜಿಸುತ್ತಾ ಬಂದಿದೆ.
ಕೆಳಗಿನವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ.
ಎ. ಹೇಳಿಕೆ ಎ ಸರಿಯಾಗಿದೆ.
ಬಿ. ಹೇಳಿಕೆ ಬಿ ಸರಿಯಾಗಿದೆ.
ಸಿ. ಎರಡೂ ಹೇಳಿಕೆಗಳು ತಪ್ಪಾಗಿವೆ.
ಡಿ. ಎರಡೂ ಹೇಳಿಕೆಗಳು ಸರಿಯಾಗಿವೆ.
ಉತ್ತರ: ಡಿ

5. ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ.
ಎ. 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಮಂಡ್ಯ ಜಿಲ್ಲೆಯಲ್ಲಿ ನಡೆಯಲಿದೆ.
ಬಿ. 88ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವನ್ನು ರಾಷ್ಟ್ರ ರಾಜಧಾನಿ ನವದೆಹಲಿಯಲ್ಲಿ ಆಯೋಜಿಸಲು ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕಾರಣಿಯಲ್ಲಿ ತೀರ್ಮಾನಿಸಲಾಗಿದೆ.
ಕೆಳಗಿನವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ.
ಎ. ಹೇಳಿಕೆ ಎ ಸರಿಯಾಗಿದೆ.
ಬಿ. ಹೇಳಿಕೆ ಬಿ ಸರಿಯಾಗಿದೆ.
ಸಿ. ಎರಡೂ ಹೇಳಿಕೆಗಳು ತಪ್ಪಾಗಿವೆ.
ಡಿ. ಎರಡೂ ಹೇಳಿಕೆಗಳು ಸರಿಯಾಗಿವೆ.
ಉತ್ತರ: ಡಿ

6. ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ.
ಎ. 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರನ್ನಾಗಿ ಹಿರಿಯ ಸಾಹಿತಿ ಗೊ.ರು. ಚನ್ನಬಸಪ್ಪ ಅವರನ್ನು ಆಯ್ಕೆ ಮಾಡಲಾಗಿದೆ.
ಬಿ. ಗೊ.ರು.ಚೆನ್ನಬಸಪ್ಪ ಅವರು ಮಹಾದೇವಿ, ಸದಾಶಿವ ಶಿವಾಚಾರ್ಯ, ಕರ್ನಾಟಕ ಪ್ರಗತಿಪಥ, ಚೆಲುವಾಂಬಿಕೆ, ಕುನಾಲ, ಸಾಕ್ಷಿ ಕಲ್ಲು, ಬೆಳ್ಳಕ್ಕಿ ಹಿಂಡು ಬೆದರ್‍ಯಾವೊ, ಬಾಗೂರು ನಾಗಮ್ಮ, ಗ್ರಾಮ ಗೀತೆಗಳು, ವಿಭೂತಿ, ಮುಂತಾದ ಪ್ರಮುಖ ಕೃತಿಗಳನ್ನು ಬರೆದಿದ್ದಾರೆ.
ಕೆಳಗಿನವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ.
ಎ. ಹೇಳಿಕೆ ಎ ಸರಿಯಾಗಿದೆ.
ಬಿ. ಹೇಳಿಕೆ ಬಿ ಸರಿಯಾಗಿದೆ.
ಸಿ. ಎರಡೂ ಹೇಳಿಕೆಗಳು ತಪ್ಪಾಗಿವೆ.
ಡಿ ಎರಡೂ ಹೇಳಿಕೆಗಳು ಸರಿಯಾಗಿವೆ.
ಉತ್ತರ: ಡಿ

7. ಬ್ಯಾಂಕ್ ಆಫ್ ಮೈಸೂರ್ ಲಿಮಿಟೆಡ್ ಸಂಸ್ಥೆಯನ್ನು ಕೆಳಗಿನ ಯಾವ ಸಮಿತಿಯ ಶಿಫಾರಸಿನ ಮೇರೆಗೆ ಸ್ಥಾಪಿಸಲಾಯಿತು?
ಎ. ಸರ್ ಎಂ. ವಿಶ್ವೇಶ್ವರಯ್ಯ ಸಮಿತಿ.
ಬಿ. ಕ್ಯಾಪ್ಟನ್ ಮಿಲ್ಲರ್ ಸಮಿತಿ.
ಸಿ. ಜನರಲ್ ರಾಬರ್ಟ್ ಸಮಿತಿ.
ಡಿ. ಸರ್ದಾರ್ ವಲ್ಲಭಾಯಿ ಸಮಿತಿ.
ಉತ್ತರ : ಎ

8. ಕರ್ನಾಟಕದ ಯಾವ ಜಿಲ್ಲೆಯನ್ನು 'ಭಾರತದ ಬ್ಯಾಂಕಿಂಗ್ ತೊಟ್ಟಿಲು'ಎಂದು ಕರೆಯಲಾಗುತ್ತದೆ?
ಎ., ಉತ್ತರ ಕನ್ನಡ ಜಿಲ್ಲೆ.
ಬಿ. ದಕ್ಷಿಣ ಕನ್ನಡ ಜಿಲ್ಲೆ.
ಸಿ. ಮಂಗಳೂರು ಜಿಲ್ಲೆ.
ಡಿ. ಮೈಸೂರು ಜಿಲ್ಲೆ.
ಉತ್ತರ : ಸಿ

9. ಕೆಳಗಿನ ಯಾವ ವಿಧಾನಗಳನ್ನು ಪೌರತ್ವ ಪಡೆದುಕೊಳ್ಳುವ ವಿಧಾನಗಳು ಎಂದು ಪರಿಗಣಿಸಬಹುದು?
1. ಜನನದ ಮೂಲಕ.
2. ವಂಶವಾಹಿನಿಯ ಮೂಲಕ.
3. ನೋಂದಣಿಯ ಮೂಲಕ.
4. ಅಸ್ಸಾಂ ಒಪ್ಪಂದದ ಮೂಲಕ.
ಕೋಡ್ ಬಳಸಿ ಸರಿಯಾದ ಉತ್ತರವನ್ನು ಗುರುತಿಸಿ.
ಎ. 1, 2, 3 ಮತ್ತು 4 ಬಿ. 2 ಮತ್ತು 3
ಸಿ. 1 ಮತ್ತು 3 ಡಿ. 3 ಮತ್ತು 4
ಉತ್ತರ : ಎ

10. ಅಸ್ಸಾಂ ಒಪ್ಪಂದಕ್ಕೆ ಸಂಬಂಧಿಸಿದ ಸರಿಯಾದ ಅಂಶಗಳನ್ನು ಗುರುತಿಸಿ?
1. ಈ ಒಪ್ಪಂದದ ಅನ್ವಯ ಜನವರಿ 1, 1966ರ ಒಳಗಾಗಿ ಪಶ್ಚಿಮ ಪಾಕಿಸ್ತಾನದಿಂದ ಅಸ್ಸಾಂಗೆ ವಲಸೆ ಬಂದಿರುವ ವಲಸಿಗರಿಗೆ ಪೌರತ್ವವನ್ನು ಕಲ್ಪಿಸಲಾಗುತ್ತದೆ.
2. ಮಾರ್ಚ್ 25, 1971ರ ನಂತರ ಬಾಂಗ್ಲಾದೇಶದಿಂದ ಅಸ್ಸಾಂಗೆ ವಲಸೆ ಬಂದಿರುವ ವಲಸಿಗರನ್ನು ಅನಧಿಕೃತ ವಲಸಿಗರು ಎಂದು ಪರಿಗಣಿಸಲಾಗುತ್ತದೆ.
ಕೋಡ್ ಬಳಸಿ ಸರಿಯಾದ ಉತ್ತರವನ್ನು ಗುರುತಿಸಿ.
ಎ. 1 ಮಾತ್ರ
ಬಿ. 2 ಮಾತ್ರ
ಸಿ. 1 ಮತ್ತು 2
ಡಿ. ಮೇಲಿನ ಎರಡು ಹೇಳಿಕೆಗಳು ತಪ್ಪಾಗಿವೆ.
ಉತ್ತರ : ಸಿ

❖

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ಇಂಗ್ಲಿಷ್

Second Language ENGLISH

Prose The Concert

5. What arrangement would you make if Pandit Ravi Shankar and Allah Rakha were coming toyour house? [You may include in your answer such arrangements. one example is given. Think of others and write them in the bubbles].

Note: Answer need not be the same for all.



Ans: (.....Contd.)

Welcoming	Greeting	Garlanding
Serving	Inviting	respecting
obeying	following	honouring

6) Do you like the ending of the story? Why? If you don't, how would you like to end it?

Ans:

Text	New ending
Student X may answer in this way. No, I don't like the ending because life went out of Anant after meeting the great wizards.	I would like to end in this way After meeting Ustad Allah Rakha and Pandit Ravi Shankar and enjoying their performance he lived for some more years.

7. Suppose you are Smita and invite Pandit Ravi Shankar (PRS) to your home. Imagine the conversation that follows and write it. Some clues are given.

You (Smita): Good evening sir, May I have a word with you, please?
PRS: Well
You: My brother .... is a big fan of yours
PRS: I'm glad .... here?
You: No, he can't ....cancer.
PRS: I'm sorry .... How can I help you?
You: Would .... with me to see him
PRS : (looking at others) What do you say?
You: Please, I beg you all to come and play for him
Mustached man: Are you joking? Do you know .... to? Don't bother .... silly talk.
PRS: Sh! {Silencing him) .... what shall we do Ustad?
Allah Rakha : (after some thought) Don't weep. Don't worry, child We'll be .... tomorrow.

Ans:-
You (Smita): Good evening sir, May I have a word with you, please?
PRS: Well
You: My brother Anant is a big fan of yours
PRS: I'm glad to see him, has he come here?
You: No, he can't Sir. He is bed-ridden from cancer.
PRS: I'm sorry to hear this. How can I help you?
You: Would you come with me to see him
PRS : (looking at others) What do you say?
You: Please, I beg you all to come and play for him
Mustached man: Are you joking? Do you know whom you are talking to? Don't bother him with your silly talk.
PRS: Sh! {Silencing him) Be quiet what shall we do Ustad?
Allah Rakha : (after some thought) Don't weep. Don't worry, child We'll be performing tomorrow.

8.In the course of the story, who do you consider to be more worried, Smita or Anant? Have a discussion with the partner / in-group / in the class.

Ans: In the course of the story, Smita worried more.

9. Some incidents in the story are given in a jumbled order. Rearrange them as they occur inthe story.
a) Smita bit her lip in self-reproach.
b) A large mustached man gave a long boring speech.
c) Smita read the newspaper and got excited.
d) Pandit Ravi Shankar and Ustad Allah Rakha started playing in the boy's house.
e) Smita was lost in her thoughts in the park
f) Mother said, "This is not the last time they are going to play"
g) Anant said. "It's the chance of a lifetime'.

Ans: c g a f e b d

10.(a) Identify the paragraphs in which the incidents stated above occur.

Ans:1 is in paragraph 1
2 is in paragraph 4
3 is in paragraph 5
4 is in paragraph 6
5 is in paragraph 8
6 is in paragraph 11
7 is in paragraph 16

b) Read each paragraph again and summarise them in your own words.

Ans: Smita read the news paper and git excited. Anant said. It's the chat we of a lifetime. Smita bit her lip in self reproach. Mother said. This is not the last time they are going to play. Suna was lost in her thoughts in the park. A large moustached man gave a long boring speech. Pandit Ravi Shankar and Ustad Alish Rakha started playing in the boy's house

II PUC - CHEMISTRY

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ, ಕೇಂದ್ರ

Coordination Compound

19. $[Cr(NH_3)_6]^{3+}$ is paramagnetic while $[Ni(CN)_4]^{2-}$ is diamagnetic. Explain why.

Ans: In $[Ni(CN)_4]^{2-}$, Ni has an oxidation state of +2. Thus, it has d^8 configuration.

Ni^{2+} :



CN^- being a strong field ligand, causes the electrons in 3d orbitals to pair. This causes Ni^{2+} to undergo dsp^2 hybridisation.



Since all the electrons are paired, it is diamagnetic in nature.

Cr has an oxidation state of +3.

Thus, it has a d^3 configuration. As NH_3 is not a strong field ligand, it does not cause the electrons in the 3d orbital to pair.

Cr^{3+} :



It undergoes d^2sp^3 hybridisation, and the 3d orbital electrons remain unpaired.

Thus, $[Ni(CN)_4]^{2-}$ is paramagnetic in nature.

20. A solution of $[Ni(H_2O)_6]^{2+}$ is green, but a solution of $[Ni(CN)_4]^{2-}$ is colourless. Explain

Ans:$[Ni(H_2O)_6]^{2+}$ consists of Ni^{+2} ion with $3d^8$ electronic configuration. In this configuration, there are two unpaired electrons which cannot pair up because H_2O is a weak ligand. Thus, the d–d transition absorbs the incoming light and emits a green light, thereby giving a green colour to the solution.

$[Ni(CN)_4]^{2-}$ consists of Ni^{+2} ion with $3d^8$ electronic configuration. But CN^- is present here as a strong ligand, and in its presence, the unpaired electrons pair up. Thus, there is no d–d transition, so there is no colour.

21. $[Fe(CN)_6]^{4-}$ and $[Fe(H_2O)_6]^{2+}$ are of different colours in dilute solutions. Why?

Ans: $[Fe(H_2O)_6]^{2+}$ and $[Fe(CN)_6]^{4-}$ have two different ligands H_2O and CN^-. CN^- being a strong field ligand, has a higher value of CFSE (crystal field splitting energy) than water. As a result, the d-d transitions absorb and give back different wavelengths of light. Thus, they have different colours in a solution.

22. Discuss the nature of bonding in metal carbonyls.

Ans: In metal carbonyls, the metal-carbon bond contains both the σ and π bond characters. A σ bond forms when a lone pair of electrons are donated to the empty orbital of the metal by the carbonyl carbon. A π bond forms when a pair of electrons are donated to the empty antibonding π* orbital by the filled d orbital of the metal. This, in its entirety, stabilises and strengthens the metal-ligand bonding. The above two types of bonding are represented as :



σ-overlap : Donation of lone pair of electrons on carbon into a vacant orbital on the metals.



π-overlap : Donation of electrons from a filled metal d-orbital into a vacant antibonding π-orbital of CO

23. Give the oxidation state, d orbital occupation and coordination number of the central metal ion in the following complexes:
(i) $K_3[Co(C_2O_4)_3]$ (ii) cis-$[CrCl_2(en)_2]Cl$
(iii) $(NH_4)_2[CoF_4]$ (iv) $[Mn(H_2O)_6]SO_4$

Ans: (i)$K_3[Co(C_2O_4)_3]$ Central metal ion: Co.
Coordination number = 6.
We know,
The oxidation state is: $x - 6 = -3$
$x = +3$
The d orbital occupation: $t_{2g}^6 e_g^0$.

(ii) cis – $[Cr(en)_2Cl_2]Cl$
Central metal ion : Cr.
Coordination number = 6.
We know,
The oxidation state is:
$x + 2(0) + 2(-1) = +1$
$x - 2 = -1$
$x = +3$
The d orbital occupation: t_{2g}^3.

(iii) $(NH_4)_2[CoF_4]$ Central metal ion: Co.
Coordination number = 4.
We know,
The oxidation state is :
$x - 4 = -2$
$x = +2$
The d orbital occupation: $e_g^4 t_{2g}^3$.

(Contd.....)

ಚಿನ್ಮಯಿ ಕೃಷ್ಣದಾಸ್ ಬಂಧನದ ಬಳಿಕ ನಡೆದ ಘರ್ಷಣೆ ● ವಕೀಲನ ಹತ್ಯೆ: ಆರು ಮಂದಿ ಬಂಧನ

ಕೃಷ್ಣದಾಸ್ ಬಂಧನ: ಬಾಂಗ್ಲಾದಲ್ಲಿ ಉದ್ವಿಗ್ನ ಸ್ಥಿತಿ

ಪಿಟಿಐ/ರಾಯಿಟರ್ಸ್/ಎಎಫ್‌ಪಿ

ಢಾಕಾ/ನವದೆಹಲಿ: ದೇಶದ್ರೋಹದ ಆರೋಪ ಎದುರಿಸುತ್ತಿರುವ 'ಸಮ್ಮಿಲಿತ್ ಸನಾತನಿ ಜಾಗರಣ ಜೋತೆ' ಎಂಬ ಹಿಂದೂ ಸಂಘಟನೆಯ ವಕ್ತಾರ ಚಿನ್ಮಯಿ ಕೃಷ್ಣದಾಸ್ ಬ್ರಹ್ಮಚಾರಿ ಅವರ ಬಂಧನದ ವೇಳೆ ನಡೆದ ಘರ್ಷಣೆಯಲ್ಲಿ ಹತ್ಯೆಯಾದ ವಕೀಲ ಸೈಫುಲ್ ಇಸ್ಲಾಂ ಅವರ ಪ್ರಕರಣಕ್ಕೆ ಸಂಬಂಧಿಸಿ ಆರು ಮಂದಿಯನ್ನು ಪೊಲೀಸರು ಬಂಧಿಸಿದ್ದಾರೆ.

'ನ್ಯಾಯಾಲಯದ ಸಂಕೀರ್ಣದಲ್ಲಿನ ಮಸೀದಿ ಕಟ್ಟಡದ ಎರಡನೇ ಮಹಡಿಯಲ್ಲಿ ಅಳವಡಿಸಿದ್ದ ಕಿಟಕಿ ಗಾಜುಗಳನ್ನು ಒಡೆದ, ವಾಹನಗಳನ್ನು ಜಖಂಗೊಳಿಸಿದ, ವಕೀಲರ ಕೊಠಡಿಗಳ ಒಳಗೆ ನುಗ್ಗಿದ ಆರೋಪಕ್ಕೆ ಸಂಬಂಧಿಸಿ 21 ಮಂದಿಯನ್ನು ಬಂಧಿಸಲಾಗಿದೆ. ಭದ್ರತಾ ಪಡೆಗಳ ಕರ್ತವ್ಯಕ್ಕೆ ಅಡ್ಡಿಪಡಿಸಿದ ಹಾಗೂ ಅವರ ಮೇಲೆ ದಾಳಿ ನಡೆಸಿದ್ದಕ್ಕಾಗಿ ಇವರನ್ನು ಬಂಧಿಸಲಾಗಿದೆ' ಎಂದು ಬಾಂಗ್ಲಾದ 'ಬಿಡಿನ್ಯೂಸ್24.ಕಾಂ' ವರದಿ ಮಾಡಿದೆ.

'21 ಮಂದಿ ಬಂಧಿತರಲ್ಲಿ ಆರು ಮಂದಿ, ಮಾಜಿ ಪ್ರಧಾನಿ ಶೇಕ್ ಹಸೀನಾ ಅವರ 'ಅವಾಮಿ ಲೀಗ್' ಹಾಗೂ ಇದರ ವಿದ್ಯಾರ್ಥಿ ಘಟಕದ ಕಾರ್ಯಕರ್ತರು. ವಶಕ್ಕೆ ಪಡೆದುಕೊಳ್ಳುವ ಸಂದರ್ಭದಲ್ಲಿ ಇವರ ಬಳಿ ಪೆಟ್ರೋಲ್ ಬಾಂಬ್‌ಗಳು ದೊರೆತವು' ಎಂದು ಸರ್ಕಾರ ಹೇಳಿದೆ.

ತನಿಖೆಗೆ ಆದೇಶ: ವಕೀಲ ಸೈಫುಲ್ ಇಸ್ಲಾಂ ಅವರ ಹತ್ಯೆಯನ್ನು ಖಂಡಿಸಿರುವ ಮಧ್ಯಂತರ ಸರ್ಕಾರದ ಮುಖ್ಯಸ್ಥ ಮೊಹಮ್ಮದ್ ಯೂನುಸ್ ಅವರು, ಪ್ರಕರಣದ ತನಿಖೆಗೆ ಆದೇಶ ನೀಡಿದ್ದಾರೆ. 'ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಬೇಕು. ಚಟ್ಟೋಗ್ರಾಮದಲ್ಲಿ ಹಾಗೂ ಈ ನಗರದ ಸುತ್ತಮುತ್ತಲ ಸೂಕ್ಷ್ಮ ಪ್ರದೇಶಗಳಲ್ಲಿನ ಭದ್ರತೆಯನ್ನು ಬಿಗಿಗೊಳಿಸಿ' ಎಂದೂ ಹೇಳಿದ್ದಾರೆ.

ಜನರ ಸುರಕ್ಷತೆಗೆ ಧಕ್ಕೆ ತರುವಂಥ ಚಟುವಟಿಕೆಗಳಿಂದ ದೂರವಿರಿ. ಕೋಮು ಸೌಹಾರ್ದ ಕಾಪಾಡುವುದಕ್ಕೆ ಸರ್ಕಾರ ಬದ್ಧ
ಮೊಹಮ್ಮದ್ ಯೂನುಸ್ ಮಧ್ಯಂತರ ಸರ್ಕಾರದ ಮುಖ್ಯಸ್ಥ

ಬಾಂಗ್ಲಾದಲ್ಲಿನ ಹಿಂದೂಗಳು ಅಭದ್ರತೆಯಲ್ಲಿದ್ದಾರೆ. ಅವರ ಭದ್ರತೆಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಕೇಂದ್ರವು ಅಲ್ಲಿನ ಸರ್ಕಾರದ ಮೇಲೆ ಒತ್ತಡ ತರಬೇಕು
ಕಾಂಗ್ರೆಸ್

ಮಧ್ಯಂತರ ಸರ್ಕಾರದ ಮುಖ್ಯಸ್ಥರು ಹಿಂದೂಗಳನ್ನು ಅಮಾನವೀಯವಾಗಿ ನಡೆಸಿಕೊಳ್ಳುತ್ತಿದ್ದಾರೆ. ಈ ವಿಚಾರದಲ್ಲಿ ವಿಶ್ವಸಂಸ್ಥೆ ಮಧ್ಯಪ್ರವೇಶಿಸಬೇಕು
ಗಿರಿರಾಜ್ ಸಿಂಗ್, ಕೇಂದ್ರ ಸಚಿವ

'ನೋವಾಗಿದೆ'

ಬಾಂಗ್ಲಾದೇಶದ ಆಂತರಿಕ ವ್ಯವಹಾರಗಳ ಕುರಿತು ನಾವು ಮಾಡಿಕೊಂಡಿರುವ ಒಪ್ಪಂದ, ಷರತ್ತುಗಳಿಗೆ ವ್ಯತಿರಿಕ್ತವಾಗಿ ನೀವು ಪ್ರತಿಕ್ರಿಯಿಸಿದ್ದೀರಿ. 'ನಿರ್ದಿಷ್ಟ ಆರೋಪ'ದ ಮೇಲೆ ದಾಸ್ ಅವರನ್ನು ಬಂಧಿಸಲಾಗಿದೆ. ಕೆಲವು ಗುಂಪುಗಳು ಚಿನ್ಮಯಿ ಅವರ ವಿಚಾರವನ್ನು ತಿರುಚಿ ಮಾಹಿತಿ ಹಂಚಿಕೊಳ್ಳುತ್ತಿವೆ. ನಿಮ್ಮ ಹೇಳಿಕೆಯು ನೋವುಂಟು ಮಾಡಿದೆ ಎಂದು ಭಾರತದ ಹೇಳಿಕೆಗೆ ಬಾಂಗ್ಲಾದ ವಿದೇಶಾಂಗ ಸಚಿವಾಲಯ ಪ್ರತಿಕ್ರಿಯಿಸಿದೆ.

ಚಟ್ಟೋಗ್ರಾಮದಲ್ಲಿ ಹತ್ಯೆಯಾದ ವಕೀಲ ಸೈಫುಲ್ ಇಸ್ಲಾಂ ಅವರ ಅಂತ್ಯಕ್ರಿಯೆಯಲ್ಲಿ ಬುಧವಾರ ಪಾಲ್ಗೊಂಡಿದ್ದ ಜನಸ್ತೋಮ –ಎಎಫ್‌ಪಿ ಚಿತ್ರ

ಇಸ್ಕಾನ್ ಧ್ವಜ ಮೇಲೆ; ಬಾಂಗ್ಲಾ ಧ್ವಜ ಕೆಳಗೆ

ಬಾಂಗ್ಲಾದ 'ಢಾಕಾ ಟ್ರಿಬ್ಯೂನ್' ಪತ್ರಿಕೆಯು ಚಿನ್ಮಯ ಕೃಷ್ಣದಾಸ್ ಅವರ ಮೇಲಿರುವ ದೇಶದ್ರೋಹ ಪ್ರಕರಣದ ಕುರಿತು ಮಾಹಿತಿ ಹಂಚಿಕೊಂಡಿದೆ. ಈ ಮಾಹಿತಿಯ ಪ್ರಕಾರ, 'ಹಿಂದೂ ಸಂಘಟನೆಗಳು ಅ.25ರಂದು ಚಟ್ಟೋಗ್ರಾಮದ ನೂತನ ಮಾರುಕಟ್ಟೆಯಲ್ಲಿ ನಡೆಸಿದ ರ‍್ಯಾಲಿಯಲ್ಲಿ ಇಸ್ಕಾನ್‌ಗೆ ಸಂಬಂಧಿಸಿದ ಧಾರ್ಮಿಕ ಧ್ವಜವನ್ನು ಬಾಂಗ್ಲಾದೇಶದ ಧ್ವಜದ ಮೇಲೆ ಹಾರಿಸಲಾಗಿತ್ತು. ಇದು ದೇಶದ ಧ್ವಜಕ್ಕೆ ತೋರಿದ ಅಗೌರವ. ದೇಶದ ಸಾರ್ವಭೌಮತ್ವಕ್ಕೆ ತೋರಿದ ಅವಿಧೇಯ ವರ್ತನೆಯಾಗಿದೆ' ಎಂದು ಆರೋಪಿಸಲಾಗಿದೆ.

ಬಂಧನ ವಿರೋಧಿಸಿದ ಇಸ್ಕಾನ್

ಚಿನ್ಮಯ ಕೃಷ್ಣದಾಸ್ ಅವರ ಬಂಧನವನ್ನು ಕೋಲ್ಕತ್ತದಲ್ಲಿನ ಇಸ್ಕಾನ್ ಹಾಗೂ ಬಾಂಗ್ಲಾದೇಶದ ಇಸ್ಕಾನ್ ಖಂಡಿಸಿವೆ. ಚಿನ್ಮಯ ಅವರು ಬಾಂಗ್ಲಾದೇಶದಲ್ಲಿನ ಇಸ್ಕಾನ್‌ನ ಸದಸ್ಯರಾಗಿದ್ದರು. ಆದರೆ, ಕೆಲವು ತಿಂಗಳ ಹಿಂದೆ ಅವರನ್ನು ಇಸ್ಕಾನ್‌ನಿಂದ ಹೊರಹಾಕಲಾಗಿತ್ತು.

'ಇಸ್ಕಾನ್ ಹಾಗೂ ರಾಮಕೃಷ್ಣ ಮಿಷನ್‌ನಂತಹ ಹಿಂದೂ ಧಾರ್ಮಿಕ ಸಂಘಟನೆಗಳ ವಿರುದ್ಧ ಮುಖವಾಡ ಕಳೆದ ಮೂರು ತಿಂಗಳಿನಿಂದ ಬೆದರಿಕೆ ಒಡ್ಡುತ್ತಿದ್ದಾರೆ. ಚಿನ್ಮಯ ಅವರ ಬಂಧನವು ಇತ್ತೀಚಿನ ಉದಾಹರಣೆಯಾಗಿದೆ. ಇಂಥ ಭಯದ ಸನ್ನಿವೇಶದಲ್ಲಿ ಭಾರತದ ವಿದೇಶಾಂಗ ಸಚಿವಾಲಯ ಹಾಗೂ ಕೇಂದ್ರ ಗೃಹ ಸಚಿವಾಲಯವು ಬಾಂಗ್ಲಾದ ಹಿಂದೂಗಳ ಮೇಲೆ ದಾಳಿಗಳಾಗದಂತೆ ಸೂಕ್ತ ಕ್ರಮ ಕೈಗೊಳ್ಳಬೇಕು' ಎಂದು ಕೋಲ್ಕತ್ತದಲ್ಲಿನ ಇಸ್ಕಾನ್ ಹೇಳಿದೆ. ವಿಶ್ವಸಂಸ್ಥೆ ಮಧ್ಯಪ್ರವೇಶಿಸಬೇಕು ಎಂದೂ ಆಗ್ರಹಿಸಿದೆ.

ಬಾಂಗ್ಲಾದೇಶವು ನಮ್ಮ ಜನ್ಮಸ್ಥಳ ಮತ್ತು ನಮ್ಮ ಪೂರ್ವಜರ ಸ್ಥಳ. ಆದ್ದರಿಂದ, ಸನಾತನಿಗಳು ಶಾಂತಿಯುತವಾಗಿ ಸಹಬಾಳ್ವೆ ನಡೆಸುವಂತೆ ಸರ್ಕಾರವು ಕ್ರಮ ಕೈಗೊಳ್ಳಬೇಕು' ಎಂದು ಬಾಂಗ್ಲಾದ ಇಸ್ಕಾನ್ ಒತ್ತಾಯಿಸಿದೆ.

ಭ್ರಷ್ಟಾಚಾರ ಪ್ರಕರಣ: ಹೈಕೋರ್ಟ್ ತೀರ್ಪು

ಮಾಜಿ ಪ್ರಧಾನಿ ಖಲೀದಾ ಖುಲಾಸೆ

ಢಾಕಾ (ಪಿಟಿಐ): ಬಾಂಗ್ಲಾದೇಶದ ಮಾಜಿ ಪ್ರಧಾನಿ ಖಲೀದಾ ಜಿಯಾ ಅವರನ್ನು ಭ್ರಷ್ಟಾಚಾರ ಪ್ರಕರಣದಲ್ಲಿ ಹೈಕೋರ್ಟ್ ಬುಧವಾರ ಖುಲಾಸೆಗೊಳಿಸಿದೆ.

ಜಿಯಾ ಚಾರಿಟೇಬಲ್ ಟ್ರಸ್ಟ್‌ಗೆ ಸಂಬಂಧಿಸಿದ ಭ್ರಷ್ಟಾಚಾರ ಪ್ರಕರಣದಲ್ಲಿ, 2018ರಲ್ಲಿ ಢಾಕಾದ ಕೆಳ ನ್ಯಾಯಾಲಯವು ಖಲೀದಾ ಅವರನ್ನು ದೋಷಿ ಎಂದು ಘೋಷಿಸಿ, ಏಳು ವರ್ಷ ಜೈಲು ಶಿಕ್ಷೆ ವಿಧಿಸಿತ್ತು.

ಇದನ್ನು ಪ್ರಶ್ನಿಸಿ ಸಲ್ಲಿಸಿದ್ದ ಮೇಲ್ಮನವಿಯ ವಿಚಾರಣೆ ನಡೆಸಿದ ಹೈಕೋರ್ಟ್, ಖಲೀದಾ ಸೇರಿ ಈ ಪ್ರಕರಣದ ಮೂವರು ಆರೋಪಿಗಳನ್ನು ಖುಲಾಸೆಗೊಳಿಸಿದೆ.

ಖಲೀದಾ ಜಿಯಾ

ಖಲೀದಾ ಮತ್ತು ಇತರರು ಅಧಿಕಾರ ದುರ್ಬಳಕೆ ಮಾಡಿಕೊಂಡು ಅನಧಿಕೃತ ಮೂಲಗಳಿಂದ ಟ್ರಸ್ಟ್‌ಗೆ ಹಣ ಸಂಗ್ರಹಿಸಿದ್ದಾರೆ ಎಂದು ಆರೋಪಿಸಿ, ಭ್ರಷ್ಟಾಚಾರ ನಿಗ್ರಹ ಆಯೋಗವು ತೇಜಗಾಂವ್ ಪೊಲೀಸ್ ಠಾಣೆಯಲ್ಲಿ 2011ರಲ್ಲಿ ಪ್ರಕರಣ ದಾಖಲಿಸಿತ್ತು.

ಬಾಂಗ್ಲಾದೇಶ ನ್ಯಾಷನಲಿಸ್ಟ್ ಪಕ್ಷದ (ಬಿಎನ್‌ಪಿ) ಮುಖ್ಯಸ್ಥೆಯೂ ಆಗಿರುವ ಖಲಿದಾ ಭ್ರಷ್ಟಾಚಾರ ಪ್ರಕರಣಕ್ಕೆ ಸಂಬಂಧಿಸಿ 2018ರ ಫೆಬ್ರವರಿಯಿಂದ ಜೈಲಿನಲ್ಲಿದ್ದರು. ಕೋವಿಡ್ ಸಾಂಕ್ರಾಮಿಕದ ಸಂದರ್ಭದಲ್ಲಿ ಸರ್ಕಾರ ಅವರನ್ನು 2020ರ ಮಾರ್ಚ್ 25ರಂದು ಷರತ್ತುಗಳ ಆಧಾರದಲ್ಲಿ ತಾತ್ಕಾಲಿಕವಾಗಿ ಜೈಲಿನಿಂದ ಹೊರಗೆ ಬಿಟ್ಟಿತ್ತು.

ಆಗಸ್ಟ್ 6ರಂದು ಬಾಂಗ್ಲಾದಲ್ಲಿ ನೂತನ ಸರ್ಕಾರ ಅಸ್ತಿತ್ವಕ್ಕೆ ಬಂದ ಬಳಿಕ ಅಧ್ಯಕ್ಷ ಮೊಹಮ್ಮದ್ ಶಹಾಬುದ್ದೀನ್ ಅವರು, ಖಲೀದಾ ಅವರನ್ನು ಬಿಡುಗಡೆಗೊಳಿಸುವಂತೆ ಆದೇಶಿಸಿದ್ದರು.

ಖಲೀದಾ 1991 ಮಾರ್ಚ್‌ನಿಂದ 1996 ಮಾರ್ಚ್‌ವರೆಗೆ ಮತ್ತು 2001 ಜೂನ್‌ನಿಂದ 2006 ಅಕ್ಟೋಬರ್‌ವರೆಗೆ ಪ್ರಧಾನಿಯಾಗಿ ಕಾರ್ಯನಿರ್ವಹಿಸಿದ್ದರು.

ಎನ್‌ಐಎಚ್‌ಗೆ ನೇಮಕ

ವಾಷಿಂಗ್ಟನ್: ಅಮೆರಿಕದ ನ್ಯಾಷನಲ್ ಇನ್‌ಸ್ಟಿಟ್ಯೂಟ್ಸ್ ಆಫ್ ಹೆಲ್ತ್‌ನ (ಎನ್‌ಐಎಚ್) ನೂತನ ನಿರ್ದೇಶಕರನ್ನಾಗಿ ಭಾರತ ಮೂಲದ ವಿಜ್ಞಾನಿ ಜೈ ಭಟ್ಟಾಚಾರ್ಯ ಅವರನ್ನು ಅಮೆರಿಕದ ಚುನಾಯಿತ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ನೇಮಕ ಮಾಡಿದ್ದಾರೆ.

ಅಮೆರಿಕದ ಆರೋಗ್ಯ ಇಲಾಖೆ ಅಡಿ ಕಾರ್ಯನಿರ್ವಹಿಸುತ್ತಿರುವ ಅತ್ಯುನ್ನತ ಸಂಸ್ಥೆ ಇದಾಗಿದೆ.

ಶ್ರೀಲಂಕಾ: ಮಳೆಯಿಂದ ನಾಲ್ವರ ಸಾವು

ಕೊಲಂಬೊ: ಶ್ರೀಲಂಕಾದಲ್ಲಿ ಸುರಿಯುತ್ತಿರುವ ಭಾರಿ ಮಳೆಯಿಂದಾಗಿ ಇಬ್ಬರು ಮಕ್ಕಳು ಸೇರಿದಂತೆ ನಾಲ್ವರು ಮೃತಪಟ್ಟಿದ್ದು, ಹಲವರು ನಾಪತ್ತೆಯಾಗಿದ್ದಾರೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರವರ ಕಛೇರಿ, ಶಿವಾಜಿನಗರ ವಿಭಾಗ, ಕ್ವೀನ್ಸ್ ರಸ್ತೆ, ಮ್ಯಾನ್ಸ್ ರಸ್ತೆ, ಬೆಂಗಳೂರು–560 052.

ಸಂಖ್ಯೆ:ಕಾ.ಅ.ಶಿ/ಟೆಂಡರ್/ಕೆಪಿಪಿ/ಟೆಂಡರ್/12/2024-25 ದಿನಾಂಕ: 27-11-2024

ಅಲ್ಪಾವಧಿ ಟೆಂಡರ್‌ಗಳ ಆಹ್ವಾನ (ಇ-ಪ್ರೊ)
(ಕೆಪಿಪಿ ಪೋರ್ಟಲ್ ಮೂಲಕ ಮಾತ್ರ) (2 ಲಕೋಟೆ ಪದ್ಧತಿ)
ಕೆಪಿಪಿ ಪೋರ್ಟಲ್ https://kppp.karnataka.gov.in

ಕಾರ್ಯಪಾಲಕ ಅಭಿಯಂತರರು (ಶಿವಾಜಿನಗರ ವಿಭಾಗ) ಪೂರ್ವ ವಲಯ, ಬೃಬೆಂಮಪಾ, ಬೆಂಗಳೂರು ರವರು ಕೆಳಗೆ ತಿಳಿಸಿರುವ ನಿರ್ಮಾಣ ಕಾಮಗಾರಿಗಳಿಗೆ ಬಿ.ಬಿ.ಎಂ.ಪಿ/ಕೆ.ಪಿ.ಡಬ್ಲ್ಯು.ಡಿ/ಸಿ.ಪಿ.ಡಬ್ಲ್ಯು.ಡಿ/ರೈಲ್ವೆ/ಎಂ.ಇ.ಎಸ್/ಪಿ.ಎಸ್.ಯು ನೋಂದಣಿ ಹೊಂದಿರುವ ಅಥವಾ ಇತರೆ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕೆಲಸದ ಹೆಸರು
	ಸಾಮಾನ್ಯ ವರ್ಗ
1)	ವಾರ್ಡ್ ನಂ.121ರ ಹಲಸೂರಿನ ಬ್ಲಾಕ್ ಸಂಖ್ಯೆ: 37, 38, 39, 41, 42 ಮತ್ತು 43 ರಲ್ಲಿ ಎಂ.ಪಿ. ಉದ್ಯಾನವನದ ಒಳಚರಂಡಿಗಳ ದುರಸ್ತಿ, ದುರಸ್ತಿ ಮತ್ತು ಸುಧಾರಣಾ ಕಾಮಗಾರಿ. ಟೆಂಡರ್‌ಗಿಟ್ಟ ಮೊತ್ತ (ಲಕ್ಷ ರೂ.ಗಳಲ್ಲಿ): 20.00. ಇಎಂಡಿ (ರೂ.ಗಳಲ್ಲಿ): 50,000/-.
2)	ವಾರ್ಡ್ ನಂ.121ರ ಹಲಸೂರಿನ ಬ್ಲಾಕ್ ಸಂಖ್ಯೆ: 44, 45, 46, 47, 48 ಮತ್ತು 49 ರಲ್ಲಿ ಎಂ.ಪಿ. ಉದ್ಯಾನವನದ ಒಳಚರಂಡಿಗಳ ದುರಸ್ತಿ, ದುರಸ್ತಿ ಮತ್ತು ಸುಧಾರಣಾ ಕಾಮಗಾರಿ. ಟೆಂಡರ್‌ಗಿಟ್ಟ ಮೊತ್ತ (ಲಕ್ಷ ರೂ.ಗಳಲ್ಲಿ): 20.00. ಇಎಂಡಿ (ರೂ.ಗಳಲ್ಲಿ): 50,000/-.
3)	ವಾರ್ಡ್ ನಂ.121ರ ಹಲಸೂರಿನ ಬ್ಲಾಕ್ ಸಂಖ್ಯೆ: 50, 51, 52, 53 ಮತ್ತು 54ರಲ್ಲಿ ಎಂ.ಪಿ. ಉದ್ಯಾನವನದ ಒಳಚರಂಡಿಗಳ ದುರಸ್ತಿ, ದುರಸ್ತಿ ಮತ್ತು ಸುಧಾರಣಾ ಕಾಮಗಾರಿ. ಟೆಂಡರ್‌ಗಿಟ್ಟ ಮೊತ್ತ (ಲಕ್ಷ ರೂ.ಗಳಲ್ಲಿ): 20.00. ಇಎಂಡಿ (ರೂ.ಗಳಲ್ಲಿ): 50,000/-.
4)	ವಾರ್ಡ್ ನಂ.116ರ ರಾಮಸ್ವಾಮಿ ಪಾಳ್ಯದ ಎ. ಕೆ. ಕಾಲೋನಿ ಬ್ಲಾಕ್ 35 ಪಕ್ಕದಲ್ಲಿರುವ ಕಮ್ಯೂನಿಟಿ ಸೆಂಟರ್ ಮತ್ತು ಗ್ರಂಥಾಲಯ ಕಟ್ಟಡ ನಿರ್ಮಾಣ. ಟೆಂಡರ್‌ಗಿಟ್ಟ ಮೊತ್ತ (ಲಕ್ಷ ರೂ.ಗಳಲ್ಲಿ): 25.00. ಇಎಂಡಿ (ರೂ.ಗಳಲ್ಲಿ): 50,000/-.
5)	ವಾರ್ಡ್ ನಂ.116ರ ರಾಮಸ್ವಾಮಿ ಪಾಳ್ಯದ ಬ್ಲಾಕ್ 36ರಲ್ಲಿ ಎ.ಕೆ. ಬ್ಲಾಕ್ ಮುಖ್ಯ ರಸ್ತೆಗೆ ಸಿಮೆಂಟ್ ಕಾಂಕ್ರೀಟ್ ರಸ್ತೆ ಒದಗಿಸುವುದು. ಟೆಂಡರ್‌ಗಿಟ್ಟ ಮೊತ್ತ (ಲಕ್ಷ ರೂ.ಗಳಲ್ಲಿ): 25.00. ಇಎಂಡಿ (ರೂ.ಗಳಲ್ಲಿ): 50,000/-.
6)	ವಾರ್ಡ್ ನಂ.117ರ ವಸಂತನಗರದಲ್ಲಿರುವ ಬ್ಲಾಕ್ ನಂ.49 ಅಂಬೇಡ್ಕರ್ ಸ್ಮಶಾನ ಶೌಚಾಲಯ ಬ್ಲಾಕ್‌ಗಳನ್ನು ದುರಸ್ತಿ ಮಾಡುವುದು. ಟೆಂಡರ್‌ಗಿಟ್ಟ ಮೊತ್ತ (ಲಕ್ಷ ರೂ.ಗಳಲ್ಲಿ): 15.00. ಇಎಂಡಿ (ರೂ.ಗಳಲ್ಲಿ): 37,500/-.
7)	ವಾರ್ಡ್ ನಂ.118 ಸಂಪಂಗಿರಾಮನಗರದಲ್ಲಿ 79/2 ಟಿವಿಟ್ಟಾಗ್ ಕಾಲೋನಿಯಲ್ಲಿ ಅಂಗನವಾಡಿ ಕಟ್ಟಡ ನಿರ್ಮಾಣ. ಟೆಂಡರ್‌ಗಿಟ್ಟ ಮೊತ್ತ (ಲಕ್ಷ ರೂ.ಗಳಲ್ಲಿ): 150.00. ಇಎಂಡಿ (ರೂ.ಗಳಲ್ಲಿ): 2,25,000/-.
	ಪರಿಶಿಷ್ಟ ಜಾತಿ ವರ್ಗ
8)	ವಾರ್ಡ್ ಸಂಖ್ಯೆ.121ರ ಹಲಸೂರಿನಲ್ಲಿ ಎಂ.ಪಿ. ಉದ್ಯಾನವನದಲ್ಲಿ ಸಮುದಾಯ ಶೌಚಾಲಯದ ನಿರ್ಮಾಣ. ಟೆಂಡರ್‌ಗಿಟ್ಟ ಮೊತ್ತ (ಲಕ್ಷ ರೂ.ಗಳಲ್ಲಿ): 60.00. ಇಎಂಡಿ (ರೂ.ಗಳಲ್ಲಿ): 60,000/-.
9)	ವಾರ್ಡ್ ಸಂಖ್ಯೆ.121ರ ಹಲಸೂರಿನಲ್ಲಿ ಎಂ.ಪಿ. ಉದ್ಯಾನವನದಲ್ಲಿ ಅಂಬೇಡ್ಕರ್ ಸಮುದಾಯ ಭವನ ನಿರ್ಮಾಣ. ಟೆಂಡರ್‌ಗಿಟ್ಟ ಮೊತ್ತ (ಲಕ್ಷ ರೂ.ಗಳಲ್ಲಿ): 100.00. ಇಎಂಡಿ (ರೂ.ಗಳಲ್ಲಿ): 1,00,000/-.
	ಪರಿಶಿಷ್ಟ ಪಂಗಡ ವರ್ಗ
10)	ವಾರ್ಡ್ ನಂ.116ರ ರಾಮಸ್ವಾಮಿ ಪಾಳ್ಯದ ಎ. ಕೆ. ಕಾಲೋನಿ ಮುನಿಸ್ವಾಮಪ್ಪ ರಸ್ತೆ ಬ್ಲಾಕ್ 34ರಲ್ಲಿ ಅಂಗನವಾಡಿ ಕಟ್ಟಡ ನಿರ್ಮಾಣ ಕಾಮಗಾರಿ. ಟೆಂಡರ್‌ಗಿಟ್ಟ ಮೊತ್ತ (ಲಕ್ಷ ರೂ.ಗಳಲ್ಲಿ): 15.00. ಇಎಂಡಿ (ರೂ.ಗಳಲ್ಲಿ): 18,750/-.

ಟೆಂಡರ್ ಕಾರ್ಯಸೂಚಿ: 1. ಟೆಂಡರ್ ಡಾಕ್ಯುಮೆಂಟ್‌ಗಳನ್ನು ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್‌ನಿಂದ ದಿನಾಂಕ: 29-11-2024 ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. 2. ಭರ್ತಿಯಾದ ಟೆಂಡರ್ ದಾಖಲೆಗಳನ್ನು ಅಪ್‌ಲೋಡ್ ಮಾಡುವ ಕೊನೆಯ ದಿನಾಂಕ: 27-12-2024ರ ಸಂಜೆ 4:00 ಗಂಟೆಯವರೆಗೆ. 3. ಬಿಡ್‌ಗಳನ್ನು ತೆರೆಯುವ ದಿನಾಂಕ: 30-12-2024ರ ಸಾಧ್ಯವಾದಲ್ಲಿ ಅಥವಾ ಮುಂದಿನ ಕೆಲಸದ ದಿನದಂದು ಬೆಳಗ್ಗೆ 11.00 ಗಂಟೆಗೆ.

ಸಹಿ/- ಕಾರ್ಯಪಾಲಕ ಅಭಿಯಂತರರು, ಶಿವಾಜಿನಗರ ವಿಭಾಗ, ಬೃಬೆಂಮಪಾ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರು–6, ಘನ ತ್ಯಾಜ್ಯ ನಿರ್ವಹಣೆ, ಬಿಬಿಎಂಪಿ, 4ನೇ ಮಹಡಿ, ಅನೆಕ್ಸ್–3, ಎನ್.ಆರ್. ಚೌಕ, ಬೆಂಗಳೂರು – 560002.

ಸಂಖ್ಯೆ:ಬಿಬಿಎಂಪಿ/ಕಾಅ-6/ಘತ್ಯಾ/ಟೆಂಡರ್/01/2024–25/2ನೇ ಕರೆ ದಿನಾಂಕ: 27–11–2024

ಅಲ್ಪಾವಧಿ ಟೆಂಡರ್ ಪ್ರಕಟಣೆ – (2ನೇ ಕರೆ)
(ಜಿಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು–6, ಘನ ತ್ಯಾಜ್ಯ ನಿರ್ವಹಣೆ, ಬಿಬಿಎಂಪಿ, ಬೆಂಗಳೂರು ಇವರು ಈ ಕೆಳಕಂಡ ಕೆಲಸಕ್ಕೆ ಅರ್ಹ ಏಜೆನ್ಸಿಗಳು / ಸಂಸ್ಥೆಗಳು / ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು
1	ಬಿಬಿಎಂಪಿ ವ್ಯಾಪ್ತಿಗಳಲ್ಲಿ ಧೂಳನ್ನು ಕಡಿಮೆ ಮಾಡಲು ಹಾಗೂ ಮಾರುಕಟ್ಟೆ, ಕಮರ್ಷಿಯಲ್ ಸ್ಟ್ರೀಟ್‌ನಂತಹ ಜನನಿಬಿಡ ಪ್ರದೇಶಗಳಲ್ಲಿ ಸ್ಥಳೀಯ ಬೀದಿಗಳನ್ನು ಗುಡಿಸಲು 2 cum ಕಡಿಮೆ ಸಾಮರ್ಥ್ಯದ 86 ಸಂಖ್ಯೆಗಳ ಬ್ಯಾಟರಿ ಚಾಲಿತ (EV) ಸ್ಮಾಲರ್ ಮೆಕ್ಯಾನಿಕಲ್ ಸ್ವೀಪಿಂಗ್ ಮೆಷೀನ್‌ಗಳ ಸಂಗ್ರಹಣೆ. **ಟೆಂಡರಿಗಿಟ್ಟ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 580.50 (ತೆರಿಗೆಗಳನ್ನು ಹೊರತುಪಡಿಸಿ), ಇ.ಎಂ.ಡಿ ಮೊತ್ತ (ರೂ. ಲಕ್ಷಗಳಲ್ಲಿ): 8.80**

ಟೆಂಡರ್ ವೇಳಾಪಟ್ಟಿ: 1) ಆರ್‌ಎಫ್‌ಪಿ ಡಾಕ್ಯೂಮೆಂಟ್‌ನ್ನು ಜಿಓಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: **https://kppp.karnataka.gov.in** ನಿಂದ ದಿನಾಂಕ: **28–11–2024 ರಂದು 16.00 ಗಂಟೆಯ ನಂತರ** ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ವಿಚಾರಣೆಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ: **04–12–2024 ರಂದು 16.00 ಗಂಟೆವರೆಗೆ.** 3) ಬಿಡ್ ಪೂರ್ವಭಾವಿ ಸಭೆ ದಿನಾಂಕ: **05–12–2024 ರಂದು 15.30 ಗಂಟೆಗೆ ಮುಖ್ಯ ಅಭಿಯಂತರರ ಕಛೇರಿ, ಘನ ತ್ಯಾಜ್ಯ ನಿರ್ವಹಣೆ, 4ನೇ ಮಹಡಿ, ಅನೆಕ್ಸ್–3, ಬಿಬಿಎಂಪಿ ಸಂಕೀರ್ಣ, ಎನ್.ಆರ್. ಚೌಕ ಇಲ್ಲಿ ನಡೆಯುವುದು.** 4) ಭರ್ತಿ ಮಾಡಿದ ಪ್ರಸ್ತಾವನೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **13–12–2024 ರಂದು 16.30 ಗಂಟೆವರೆಗೆ.** 5) ತಾಂತ್ರಿಕ ಪ್ರಸ್ತಾವನೆಗಳನ್ನು ದಿನಾಂಕ: **16–12–2024 ರಂದು 16.00 ಗಂಟೆಯ ನಂತರ ತೆರೆಯಲಾಗುವುದು.** 6) ಆರ್ಥಿಕ ಪ್ರಸ್ತಾವನೆಗಳನ್ನು ಕೆಪಿಪಿ **ಪೋರ್ಟಲ್ ಮೂಲಕ ತಾಂತ್ರಿಕ ಪ್ರಸ್ತಾವನೆಗಳ ಅನುಮೋದನೆ ನಂತರ ತೆರೆಯಲಾಗುವುದು.** ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು–6,
ಘನ ತ್ಯಾಜ್ಯ ನಿರ್ವಹಣೆ, ಬಿಬಿಎಂಪಿ.

ಕೆ.ಎಂ.ಎಫ್ ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ನಿಯಮಿತ
ಕಹಾಮ ಸಂಕೀರ್ಣ, ಡಾ. ಎಂ.ಹೆಚ್. ಮರೀಗೌಡ ರಸ್ತೆ, ಬೆಂಗಳೂರು–560 029,
ಫೋನ್: 080–26096839/26096855 ಇಮೇಲ್: purchase@kmf.coop

IFT No- KMF/PUR/CFRM-618/2024-25 Date: 27-11-2024

ಅಲ್ಪಾವಧಿ ಟೆಂಡರ್ ಪ್ರಕಟಣೆ (KPPP Tender No.KMF/2024-25/IND1098)

ಕರ್ನಾಟಕ ಹಾಲು ಮಹಾಮಂಡಳವು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ವಿವಿಧ ಘಟಕಗಳಿಗೆ ಮೆಕ್ಕೆಜೋಳ ಖರೀದಿಸುವ ಸಂಬಂಧ **ರೈತ ಉತ್ಪಾದಕ ಸಂಸ್ಥೆಗಳಿಂದ (FPO's)** ಟೆಂಡರ್ ಆಹ್ವಾನಿಸಿದ್ದು, ಆಸಕ್ತಿಯುಳ್ಳ ಟೆಂಡರ್‌ದಾರರು ಭಾಗವಹಿಸಬಹುದಾಗಿದೆ. ಟೆಂಡರ್ ದಸ್ತಾವೇಜುಗಳನ್ನು ಹಾಗೂ ಐಟಂವಾರು ಇ.ಎಂ.ಡಿ ವಿವರಗಳನ್ನು KPP Portal https://kppp.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಸದರಿ ಟೆಂಡರ್‌ಗೆ ಸಂಬಂಧಿಸಿದ ತಿದ್ದುಪಡಿ/ ಟಿಪ್ಪಣಿಗಳೇನಾದರು ಇದ್ದಲ್ಲಿ ಕೆಪಿಪಿ ಪೋರ್ಟಲ್‌ನಲ್ಲಿಯೇ ಪ್ರಕಟಿಸಲಾಗುವುದು.

ಕ್ರ. ಸಂ.	ಕಚ್ಚಾಮಾಲುಗಳು	ಘಟಕವಾರು ಪರಿಮಾಣ ಮೆಟ್ರಿಕ್ ಟನ್‌ಗಳಲ್ಲಿ (MTs)				
		ರಾಜಾನುಕುಂಟೆ	ಗುಬ್ಬಿ	ಧಾರವಾಡ	ಹಾಸನ	ಶಿಕಾರಿಪುರ
1	ಮೆಕ್ಕೆಜೋಳ	3500	5000	3500	7000	4000

ಟೆಂಡರ್ ವೇಳಾಪಟ್ಟಿ: ಟೆಂಡರ್ ಪ್ರಾರಂಭವಾಗುವ ದಿನಾಂಕ: 27-11-2024; ಪೂರ್ವಭಾವಿ ಸಭೆಯ ದಿನಾಂಕ: 02-12-2024 at 11.30AM; ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 06-12-2024 at 03.00PM; ತಾಂತ್ರಿಕ ಟೆಂಡರ್ ತೆರೆಯುವ ದಿನಾಂಕ: 07-12-2024 at 03.05PM; ವಾಣಿಜ್ಯ ಟೆಂಡರ್ ತೆರೆಯುವ ದಿನಾಂಕ: 07-12-2024 at 03.10PM.

ಕರ್ನಾಟಕ ಸಹಕಾರ ಹಾಲು ಮಹಾಮಂಡಳ ಪರವಾಗಿ
ಸಹಿ/– ನಿರ್ದೇಶಕರು (ಖರೀದಿ)

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಟೆಂಡರ್‌ಗಾಗಿ ಆಹ್ವಾನ (ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಬೆಂಗಳೂರು ಜಲಮಂಡಳಿಯು ಕೆಳಕಂಡ ಕಾಮಗಾರಿಗಳಿಗೆ ನೋಂದಾಯಿತ ಏಜೆನ್ಸಿಗಳಿಂದ ದ್ವಿ ಹಂತದ ಟೆಂಡರ್ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಮುಖ್ಯ ಅಭಿಯಂತರರವರ ಕಛೇರಿ (ಪೂರ್ವ), 6ನೇ ಮಹಡಿ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು–560009

ಕ್ರಮ ಸಂ.	ಕೆಲಸದ ಹೆಸರು	ಟೆಂಡರ್‌ಗಿಟ್ಟ ಮೊತ್ತ / ಇ.ಎಂ.ಡಿ (ರೂ.ಗಳಲ್ಲಿ)
	ಐಎಫ್‌ಟಿ ಸಂಖ್ಯೆ: ಬೆಂಜಮಂ/ಮುಅ(ಪೂ)/ಅಮುಅ(ಪೂ)–1/ಉಮುಅ(ನಿ)–1/ತಾಂಸ(ಪೂ)/ಸಅ/8187/2024–25	ದಿನಾಂಕ: 27.11.2024
1	ಸಕಾನಿಅದಪೂ–4 ಉಪ ವಿಭಾಗದ ಇಂದಿರಾನಗರ ಸೇವಾ ಠಾಣೆ ಅಡಿಯಲ್ಲಿ ಬರುವ ಡಬಲ್ ರೋಡ್ ಸಿಎಂಹೆಚ್ ರಸ್ತೆ ಜಂಕ್ಷನ್‌ನಿಂದ ಗೌಡ್ರು ಹೋಟೆಲ್ ರಸ್ತೆ ಮತ್ತು 10ನೇ ಮುಖ್ಯ ರಸ್ತೆವರೆಗೆ ಹೊಸ ಮೆಷೀನ್ ಹೋಲ್‌ಗಳ ನಿರ್ಮಾಣದೊಂದಿಗೆ 150ಮಿಮೀ ವ್ಯಾಸದ ಎಸ್‌ಡಬ್ಲ್ಯೂ ಮಾರ್ಗವನ್ನು 300ಮಿಮೀ ವ್ಯಾಸದ ಆರ್‌ಸಿಸಿ ಎನ್‌ಪಿ3 ದರ್ಜೆ ಕೊಳವೆ ಮಾರ್ಗಕ್ಕೆ ಬದಲಾಯಿಸುವ ಕಾಮಗಾರಿ.	ರೂ.114.81 ಲಕ್ಷಗಳು / ರೂ.1,73,000 ಲಕ್ಷಗಳು
2	ಸಕಾನಿಅದಪೂ–4 ಉಪ ವಿಭಾಗದ ಹೆಚ್‌ಎಎಲ್ ಸೇವಾ ಠಾಣೆ ಅಡಿಯಲ್ಲಿ ಬರುವ 100 ಅಡಿ ರಸ್ತೆಯಿಂದ ಡಬಲ್ ರೋಡ್‌ನ 5ನೇ ಮುಖ್ಯ ರಸ್ತೆಯುದ್ದಕ್ಕೂ ಮತ್ತು ಅಡ್ಡ ರಸ್ತೆಗಳ ಜಂಕ್ಷನ್‌ಗಳವರೆಗೆ ಹೊಸ ಮೆಷೀನ್ ಹೋಲ್‌ಗಳ ನಿರ್ಮಾಣದೊಂದಿಗೆ 150ಮಿಮೀ ವ್ಯಾಸದ ಎಸ್‌ಡಬ್ಲ್ಯೂ ಮಾರ್ಗವನ್ನು 300ಮಿಮೀ ವ್ಯಾಸದ ಆರ್‌ಸಿಸಿ ಎನ್‌ಪಿ3 ದರ್ಜೆ ಕೊಳವೆ ಮಾರ್ಗಕ್ಕೆ ಬದಲಾಯಿಸುವ ಕಾಮಗಾರಿ.	ರೂ.154.23 ಲಕ್ಷಗಳು / ರೂ.2,32,000 ಲಕ್ಷಗಳು
3	ಸಕಾನಿಅಪೂ–2–2 ಉಪ ವಿಭಾಗದ ಓಎಂಬಿಆರ್ ಸೇವಾ ಠಾಣೆಗೆ ಸಂಬಂಧಿಸಿದಂತೆ ಓಎಂಬಿಆರ್ ಬಡಾವಣೆಯಲ್ಲಿ ಬಿಎಸ್‌ಎನ್‌ಎಲ್ ಕಛೇರಿಯಿಂದ 3ನೇ ಮೇನ್ ಜಿಎಲ್‌ಆರ್‌ವರೆಗೆ 300ಮಿಮೀ ವ್ಯಾಸದ ಎಂಎಸ್ ನೀರಿನ ಕೊಳವೆ ಮಾರ್ಗವನ್ನು ಒದಗಿಸಿ ಅಳವಡಿಸುವುದು.	ರೂ.215.02 ಲಕ್ಷಗಳು / ರೂ.3,23,000 ಲಕ್ಷಗಳು
4	ಸಕಾನಿಅಪೂ–2–2 ಉಪ ವಿಭಾಗದ ಓಎಂಬಿಆರ್ ಸೇವಾ ಠಾಣೆಗೆ ಸಂಬಂಧಿಸಿದಂತೆ 2ನೇ ಮೇನ್, ನಂದ ಗೋಕುಲ ಹೋಟೆಲ್‌ನಿಂದ ಕಸ್ತೂರಿನಗರದ ಎನ್‌ಜಿಇಎಫ್ ಬಡಾವಣೆಯ ಪೂರ್ವದಲ್ಲಿರುವ ಬೃಬೆಂಮಪಾಯ ಕಛೇರಿವರೆಗೆ 300ಮಿಮೀ ವ್ಯಾಸದ ಎಂಎಸ್ ನೀರಿನ ಕೊಳವೆ ಮಾರ್ಗವನ್ನು ಒದಗಿಸಿ ಅಳವಡಿಸುವುದು.	ರೂ.216.10 ಲಕ್ಷಗಳು / ರೂ.3,25,000 ಲಕ್ಷಗಳು
5	ಸಕಾನಿದಪೂ–5 ಉಪ ವಿಭಾಗದ ಕೋರಮಂಗಲ ಸೇವಾ ಠಾಣೆ ಅಡಿಯಲ್ಲಿ ಬರುವ 7ನೇ ಬ್ಲಾಕ್, ಕೋರಮಂಗಲದಲ್ಲಿ 150ಮಿಮೀ ವ್ಯಾಸದ ಮತ್ತು 100ಮಿಮೀ ವ್ಯಾಸದ ಡಿಐ ನೀರು ಸರಬರಾಜು ಕೊಳವೆ ಮಾರ್ಗವನ್ನು ಒದಗಿಸಿ ಅಳವಡಿಸುವುದು. (ಕರೆ–2).	ರೂ.157.60 ಲಕ್ಷಗಳು / ರೂ.2,36,000 ಲಕ್ಷಗಳು

ಭರ್ತಿ ಮಾಡಿದ ಟೆಂಡರ್ ದಾಖಲಾತಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ 12.12.2024 ರ ಸಂಜೆ 4.00 ಗಂಟೆಯವರೆಗೆ. ಬಿಡ್‌ಗಳನ್ನು 13.12.2024 ರಂದು ಸಂಜೆ 4.00 ಗಂಟೆಯ ನಂತರ ತೆರೆಯಲಾಗುವುದು.

ಸಹಿ/– ಮುಖ್ಯ ಅಭಿಯಂತರರು (ಪೂರ್ವ)

ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತು ಮಾಹಿತಿಗಳನ್ನು **https://kppp.karnataka.gov.in** ಗೆ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಮೇಲಿನ ಸಹಿದಾರರ ಕಚೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.

ವಾ.ಸಾ.ಸಂ.ಇ/ವಾಪ್ರ/3469/ಆಕಾರ್/2024–25

THE FEDERAL BANK LIMITED
Regd. Office: Aluva, Kerala.
ZONAL OFFICE: 2nd Floor, Halcyon Complex, No.9, St Marks Road, Bangalore-560 001.
e-mail: bgrr-cpc@federalbank.co.in Phone: 080-22074610/604/613/624/625

BGRR/PvtSale/2024-25 **NOTICE FOR PRIVATE SALE OF GOLD** 27/11/2024

Notice is hereby given for the information of all concerned that Gold Ornaments pledged in the following Gold Loan accounts, with the under mentioned Branches of the Bank, which are overdue for redemption and which have not been regularized so far in spite of repeated notices, will be put for Private sale, in the respective Branches on any date after 10-12-2024 as shown below:

Br. Ainapur: Karchi Building, Opposite Pattan Panchayath, Ainapur, Taluk Athani, Belgaum, Karnataka- 591 303, Ph No. 08339-254084 :-
14976400018854,14976400013228,14976400019035,14976400018805,14976400018896,14976400018847,14976400011750,14976400015959.
Br. Bagalkot: Prema Arcade, Engineering college circle, Vidyagiri PO, Bagalkot-587 102 Ph no. 08354 233399 :-
21966400026776,21966400048853,21966400052582,21966400051782,21966400023799,21966400026321,21966400055270,21966400045701,21966400052038,21966400055783,21966400045495.
Br. Belgaum/Tilakwadi: Near 3rd Railway Gate, Khanapur Road, Tilakwadi, Belgaum- 590 006 Ph no. 0831-2495439 :-
15306400023465,15306400023986,15306400024067,15306400023788,15306400015891,15306400022475,15306400024695.
Br. Belgaum/City: Ground Floor, Vijaylaxmi Arcade, Opp. Khade Bazar Police station, Narvekar Galli, Belgaum- 590002,Ph no. 0831-2423460:-
15096400034493,15096400027489,15096400026697,15096400034378,15096400027166,15096400027380,15096400036324.
Br. Bellary: Modi Chambers, 2nd Cross, Gandhi Nagar, Bellary, Karnataka-583 103, Ph no. 08392-258667:- 15896400150763,15896400150755,15896400189571,15896400190330,15896400124073,15896400189563,15896400175869,15896400189340,15896400185504,15896400186551.
Br. Challakere: Chaitanya Arcade, Bangalore Road, Challakere, Chitradurga, Karnataka-577 522, Ph no. 08195-222456 :-
18976100036043,18976100051151,18976400034451,18976400032349,18976100051045.
Br. Chitradurga: Opp.Vasavi Mahal, Basaveshwara Talkies Road, Chitradurga- 577 501, Ph no. 08194-220931 :-
15946400082654,15946400067697,15946400059611,15946400073331,15946400082167,15946400064496,15946400083959,15946400074503,15946400062342,15946400082076,15946400062995,15946400083314,15946400074750,15946400084494,15946400073695,15946400084270,15946400083892,15946400083793,15946400084593,15946400071947,15946400081805,15946400081672,15946400083611,15946400070998,15946400073943,15946400055643,15946400082548,15946400074701,15946400083413,15946400082365,15946400082910,15946400074529,15946400080385,15946400079684,15946400082688,15946400084049,15946400084114,15946400070543,15946400083389,15946400084734.
Br,Davanagere: Raghavendra Plaza, No.200/1A & 200/1B, 3rd Main, 7th Cross, 28th Ward, P J Extension, Davangere-577 002,Ph no. 08192-222511:-
22976400040650,22976400042862,22976400040676,22976400042466,22976400024035,22976400024498,22976400042433,22976400048620,22976400031881,22976400034414,22976400029943,22976400043415,22976400042961,22976400042508,22976400048604,22976400043407,22976400048612,22976400040031,22976400018292,22976400024399,22976400043282,22976400034695,22976400041179,22976400039801,22976400043423,22976400048638,22976400041906,22976400043399,22976400031923,22976400039678,22976400031972.
Br. Dharwad: Inamdhar Desai Arcade, Opp Spandhana Hospital, Vivekananda Circle,Saptapur, Dharwad- 580 001, Ph no. 0836-2445280 :-
16386400103771,16386400077173,16386400103284,16386400101619,16386400103292,16386400090879,16386400087727,16386400103516,16386400091562,16386400102708,16386400094970,16386400087610,16386400102609,16386400103052,16386400104001,16386400086067,16386100022503,16386400095076,16386400101767,16386400100751,16386400091208,16386400103466,16386400102161,16386400101429,16386400103128,16386400095324,16386400076910,16386400101346,16386400102633,16386400083379,16386400103946,16386400083544,16386400101635,16386400094871,16386400101957,16386400095209,16386400101981,16386400102591,16386400104084,16386400104050,16386400101072,16386400080227,16386400094962,16386400101031,16386400095019,16386400082306,16386400103037,16386400092917,16386400095290,16386400095027,16386400103565,16386400103144,16386400101593.
Br. Gulbarga: Plot No.7, 1st Floor, Main Road, Super Market, Gulbarga- 585 101 Ph no. 08472-230107 :-
16046400051152,16046400046392,16046400025610,16046400045667,16046400046574,16046400055500,16046400038746.
Br. Ganeshpur: Plot No. 19, BUDA Scheme No 51, Near Military Hospital, Ganeshpur Main Road, Belgaum - 590 009, Ph no. 0831-2446719 :-
14956400019326,14956400026636,14956400023104,14956400017940,14956400020795,14956400020894,14956400020886,14956100109302,14956400015613,14956400020373,14956400021108,14956400025554,14956400025729,14956400025737, 14956400025745,14956400025752,14956400025760.
Br.Gangawati: Building No 2-12-81,82,83, Malleswara Complex, Koppal road, Gangawati-583 227 Ph 08533-271861:-
16856400139199,16856400093727,16856400139124,16856400127624,16856400139207,16856400139173,16856400127640,16856400139165,16856400096696,16856400110414,16856400139959,16856400130818,16856400106297,16856400130776,16856400130560,16856400072606,16856400131535,16856400106354,16856400076649,16856400139215,16856400130446,16856400139181,16856400139157,16856400139942,16856400131022,16856400129000,16856400130545,16856400102254,16856400130628,16856400139132,16856400131667,16856400130602,16856400118854,16856400139223,16856400119803,16856400130057,16856400130982,16856400130529,16856400131063,16856400139389,16856400129679,16856400128853,16856400129539,16856400088594,16856400139140,16856400130016,16856400120439,16856400130974,16856400130941,16856400091390,16856400117823,16856400129430,16856400115892,16856400139090,16856400130636,16856400118565,16856400132004,16856400131279,16856400130321,16856400088776,16856400112790,16856400139116,16856400105638,16856400130958,16856400131840,16856400129125,16856400089824,16856400139108,16856400094865,16856400131188.
Br. Hubli: Swastik Central, Niligin Road, New Cotton Market, Hubballi, Dharwad- 580 029,Ph no. 0836-2369449 :- 13386400070288,13386400089890,13386400115265,13386400126080,13386400065460,13386400075691,13386400115273,13386400125363,13386100399839,13386400115067,13386400118533,13386400097828,13386400065148,13386400084925,13386400120380,13386400120679,13386400114854,13386400117121,13386400112866,13386400120687,13386400071468,13386400126007,13386400116578,13386400120638,13386400124564,13386400122279,13386400122824,13386400121313,13386400105282,13386400130660,13386400106884,13386400127104,13386400091276,13386400093926,13386400118509,13386400126577,13386400127443.
Br. Hiriyur: Prashantha Nilaya, Main Road, Hiriyur, Chitradurga Dist, Karnataka :- 577 598, Ph no. 08193271024 :-
19886400063500,19886400076437,19886400082062,19886400082633,19886400065745,19886400061884,19886400081353,19886400082526,19886400050762,19886400081973,19886400082328,19886400077112,19886400066065,19886400081957,19886400083466,19886400070992,19886400068640,19886400051208,19886400082898,19886400083532,19886400083011,19886400050937,19886400071990,19886400076791,19886400068509,19886400081528,19886400041290,19886400079522,19886400082096,19886400085594,19886400082468,19886400079514,19886400076056,19886400082799,19886400077773,19886400083326,19886400083334,19886400086253,19886400086402,19886400081072,19886400083375,19886400084415,19886400041456,19886400067089,19886400074150,19886400077658,19886400063096,19886400082278,19886400077575,19886400082336,19886400085644,19886400076387,19886400069119,19886400082849.
Br. Haveri: C Plot No.30A, Vidya Nagar, P B Road, Haveri Dist- 581110 Ph no. 08375232784 :-
20436300006212,20436300006014,20436400071280,20436300006022,20436400070894,20436400069615,20436400077337,20436400077808,20436300006295,20436400076693,20436400076248,20436400069094,20436400076156,20436400046712,20436400077816,20436400071306,20436400076958,20436400077899,20436300006444,20436400077535,20436400071108,20436400054922,20436400071314,20436400055176,20436400069128.
Br. Kagwad: Athani Road, Kagwad PO, Taluk-Athani, Belgaum- 591 223 Ph no. 08339264628 :-
14806400023275,14806400021436,14806400021410,14806400022285,14806400018994,14806400019364,14806400023267,14806400023309,14806400023291.
Br. Koppal: Kodandappa Complex,Near Kiran Paints, Jawahar Road, Koppal- 583 231, Ph no. 0853-9220606 :-
21176400101476,21176400091362,21176400089853,21176400071497,21176400101641,21176400091677,21176400102789,21176400089648,21176400100072,21176400091735,21176400070978,21176400102755,21176400074277,21176400099514,21176400092568.
Br. Ranebennur: Gungadatti Building, Opp.KEB Office, PB Road, Ranibennur, Haveri- 581 115, Ph no. 08373-262111 :-
21116400033063,21116400033360.
Br. Raichur: Ashwini Complex, Opp. Public Gardens, Ambedkar Circle, Station Road, Raichur- 584101, Ph no. 08532-225091:-
15736400138469,15736400117083,15736400148492.
Br. Ugarkhurd: Ghodagire Building, Opposite Post Office, Ugar Khurd, Athani Taluk, Belgaum- 591316, Ph no.8339 272325 :-
14996400031632,14996400033901,14996400034883,14996400028901,14996400031889,14996400027382,14996400035112,14996400034206,14996400034602,14996400029628,14996400029800,14996400031459,14996400030964,14996400032119,14996400033919,14996400032036,14996400034297,14996400031756,14996400032051,14996400034438,14996400031590,14996400030451,14996400034834,14996400029339,14996400034495.
Br. Nipani: Dhole Prime, Ashok Nagar, Nipani, Belgaum-591 237, Ph No. 083382231379 :-15086400035723,15086400041143.
Br. Hosapete: Elevated Ground Floor, D No.486, PID No.4-2-5-79C, Venkateshwara Automobiles Road, 2nd Division, 4th Ward, Patel Nagar, Hosapete, Vijayanagara- 583 201 :- 23726400002724,23726400002732,23726400002682,23726400002666,23726400002674,23726400002633.
Br. Jamkhandi : Opp to Govts Girls High School, Near Bus Stand, Jamkhandi, Bagalkote- 587 301, Ph. No: 9663380119 :-
23846400002597,23846400005384,23846400003173,23846400003736,23846400003140,23846400005640,23846400003272,23846400002076,23846400003405,23846400002092,23846400003280,23846400002324,23846400003553,23846400003744,23846400003355,23846400004015.

Bangalore 27-11-2024 Vice President & Zonal Head

ಕಟ್ಟಾ ಮನೆಯಲ್ಲಿ ಬಿವೈವಿ ಬೆಂಬಲಿಗರ ಸಭೆ: ಯತ್ನಾಳರದ್ದು ಸಿದ್ದರಾಮಯ್ಯ ಮೋರ್ಚಾ: ರೇಣುಕಾಚಾರ್ಯ

ದಾವಣಗೆರೆ: ವಿಜಯೇಂದ್ರ ನಿಷ್ಠರ ಸಮಾವೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ನಿಷ್ಠರ ಬಣ ಸದ್ಯವೇ ದಾವಣಗೆರೆಯಲ್ಲಿ ಬೃಹತ್ ಸಮಾವೇಶವೊಂದನ್ನು ನಡೆಸಿ, ಶಾಸಕ ಬಸನಗೌಡ ಪಾಟೀಲ ಯತ್ನಾಳ ಮತ್ತು ತಂಡದ ವಿರುದ್ಧ ಶಿಸ್ತುಕ್ರಮ ಜರುಗಿಸುವಂತೆ ಪಕ್ಷದ ವರಿಷ್ಠರನ್ನು ಒತ್ತಾಯಿಸಲು ತೀರ್ಮಾನಿಸಿದೆ.

ಮಾಜಿ ಸಚಿವ ಕಟ್ಟಾ ಸುಬ್ರಹ್ಮಣ್ಯ ನಾಯ್ಡು ಅವರ ನಿವಾಸದಲ್ಲಿ ಬುಧವಾರ ನಡೆದ ಸಭೆಯಲ್ಲಿ, ಯತ್ನಾಳ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಡಿಯಾಳಾಗಿ ನಡೆದುಕೊಳ್ಳುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಈ ಸಭೆಯಲ್ಲಿ ಮಾಜಿ ಸಚಿವರಾದ ಎಂ. ಪಿ. ರೇಣುಕಾಚಾರ್ಯ, ಬಿ.ಸಿ. ಪಾಟೀಲ, ಮಾಜಿ ಶಾಸಕರಾದ ವೈ.ಸಂಪಂಗಿ, ಎಂ.ಡಿ.ಲಕ್ಷ್ಮಿನಾರಾಯಣ ಭಾಗವಹಿಸಿದ್ದರು.

ಸಭೆಯ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ರೇಣುಕಾಚಾರ್ಯ, ಈ ಸಮಾವೇಶ ಯಾವುದೇ ವ್ಯಕ್ತಿ ಅಥವಾ ಬಣದ ಪರವಾಗಿ ನಡೆಸುತ್ತಿಲ್ಲ. ಕಾರ್ಯಕರ್ತರಲ್ಲಿ ಉಂಟಾಗಿರುವ ಗೊಂದಲವನ್ನು ನಿವಾರಿಸಿ ಹೊಸ ಹುರುಪು ತುಂಬಿ ಪಕ್ಷವನ್ನು ಬೇರು ಮಟ್ಟದಿಂದ ಸಂಘಟಿಸುವುದಾಗಿದೆ ಎಂದು ಹೇಳಿದರು.

ಶಾಸಕರಾದ ಬಸನಗೌಡ ಪಾಟೀಲ ಯತ್ನಾಳ, ರಮೇಶ ಜಾರಕಿಹೊಳಿ, ಮಾಜಿ ಶಾಸಕ ಕುಮಾರ್ ಬಂಗಾರಪ್ಪ ಮತ್ತಿತರರು ಪಕ್ಷದ ಅಧ್ಯಕ್ಷರ ಅನುಮತಿಯನ್ನು ಪಡೆಯದೇ ಚಿಹ್ನೆಯನ್ನು ಬಳಸದೇ ನಡೆಸುತ್ತಿರುವ ಜನಜಾಗೃತಿ ಅಭಿಯಾನಕ್ಕೆ ಕಾರ್ಯಕರ್ತರ ವಲಯದಲ್ಲಿ ಭಾರಿ ವಿರೋಧ ವ್ಯಕ್ತವಾಗಿದೆ. ತಕ್ಷಣವೇ ವರಿಷ್ಠರು ಮಧ್ಯಪ್ರವೇಶಿಸಿ ಅಭಿಯಾನ ನಡೆಸದಂತೆ ಸ್ಪಷ್ಟ ಸೂಚನೆ ನೀಡಬೇಕೆಂದು ಒತ್ತಾಯಿಸಿದರು.

'ಕೆಲವರು ಪಕ್ಷಕ್ಕಿಂತ ನಾನೇ ದೊಡ್ಡವನೆಂದು ಬಿಂಬಿಸಿಕೊಂಡು ನಾಲ್ಕಾರು ಜನರ ಮೂಲಕ ಅಭಿಯಾನ ನಡೆಸುತ್ತಿದ್ದಾರೆ. ಇದರಲ್ಲಿ ಪಕ್ಷದ ಹಿತಕ್ಕಿಂತ ಸ್ವಾರ್ಥವೇ ಹೆಚ್ಚಾಗಿದೆ. ವಿಜಯೇಂದ್ರ ಅವರನ್ನು ರಾಜ್ಯಾಧ್ಯಕ್ಷರನ್ನಾಗಿ ನೇಮಿಸಿದ್ದು, ಈಗ ಪಾದಯಾತ್ರೆ ನಡೆಸುತ್ತಿರುವವರಲ್ಲ. ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ, ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ, ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಬಿ.ಎಲ್.ಸಂತೋಷ್ ಅವರ ಸಂಪೂರ್ಣ ಬೆಂಬಲದಿಂದ ಅಧ್ಯಕ್ಷರಾಗಿದ್ದಾರೆ. ಯಡಿಯೂರಪ್ಪ ಮತ್ತು ವಿಜಯೇಂದ್ರ ಅವರನ್ನು ಟೀಕಿಸಿದರೆ ಮೋದಿ– ಅಮಿತ್ ಶಾ ಅವರನ್ನು ಟೀಕಿಸಿದಂತೆ' ಎಂದು ಹೇಳಿದರು.

'ಯತ್ನಾಳ ಹೋರಾಟ ಕಾಂಗ್ರೆಸ್ ಪಕ್ಷದ ವಿರುದ್ಧ ಇರಬೇಕಿತ್ತು. ಆದರೆ ಸಿದ್ದರಾಮಯ್ಯ ಅವರು ಅಣತಿಯಂತೆ ನಡೆಯುತ್ತಿದ್ದಾರೆ. ಅಲ್ಲದೆ, ತಮ್ಮ ಬಣದವರೇ ಮುಖ್ಯಮಂತ್ರಿ ಆಗುತ್ತಾರೆ ಎಂದು ಹೇಳುವುದಕ್ಕೆ ಯತ್ನಾಳ ಅವರಿಗೆ ಅಧಿಕಾರ ಇದೆಯೇ? ಯಡಿಯೂರಪ್ಪ ಅವರಿಗೂ ಆ ಅಧಿಕಾರವಿಲ್ಲ. ಗೊಂದಲಗಳ ಬಗ್ಗೆ ಕಾರ್ಯಕರ್ತರು ನಮ್ಮನ್ನು ಪ್ರಶ್ನಿಸುತ್ತಿದ್ದಾರೆ. ಅವರಿಗೆ ಉತ್ತರ ಹೇಳುವ ಜವಾಬ್ದಾರಿ ನಮ್ಮದು' ಎಂದು ರೇಣುಕಾಚಾರ್ಯ ತಿಳಿಸಿದರು.

'ಯತ್ನಾಳ ಅವರು ನಡೆಸುತ್ತಿರುವ ಹೋರಾಟ ಸಿದ್ದರಾಮಯ್ಯ ಮೋರ್ಚಾ ಎಂದು ಎಚ್.ವಿಶ್ವನಾಥ್ ಅವರು ವ್ಯಾಖ್ಯಾನಿಸಿರುವುದು ಸರಿಯಾಗಿಯೇ ಇದೆ' ಎಂದು ವ್ಯಂಗ್ಯವಾಡಿದರು.

ನೋಟಿಸ್ ಕೊಟ್ಟರೆ ಭಯಪಡಬೇಡಿ: ಯತ್ನಾಳ

ರಾಯಚೂರು: 'ವಕ್ಫ್ ವಿರುದ್ಧ ನಾವು ಮಾಡುತ್ತಿರುವ ಹೋರಾಟದಲ್ಲಿ ಬಿಜೆಪಿಯ ಕೆಲ ನಾಯಕರು ಸ್ಥಳೀಯ ಕಾರ್ಯಕರ್ತರಿಗೆ ಎಚ್ಚರಿಕೆ ನೀಡುತ್ತಿದ್ದಾರೆ. ಕಾರ್ಯಕರ್ತರು ನೋಟಿಸ್‌ಗೆ ಹೆದರದೆ ರೈತರ ಜೊತೆಗೆ ಬೀದಿಗಿಳಿದು ಹೋರಾಟ ಮಾಡಬೇಕು' ಎಂದು ವಿಜಯಪುರದ ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿದರು.

ರಾಯಚೂರಿನಲ್ಲಿ ಬುಧವಾರ ಹಮ್ಮಿಕೊಂಡಿದ್ದ ವಕ್ಫ್ ವಿರುದ್ಧದ ಜನಜಾಗೃತಿ ಹೋರಾಟದಲ್ಲಿ ಮಾತನಾಡಿದ ಅವರು, 'ಕ್ಯಾನ್ಸರ್‌ನಂತೆ ವಕ್ಫ್ ದೊಡ್ಡ ಪಿಡುಗಾಗಿ ಹರಡುತ್ತಿರುವುದರಿಂದ ಅದರ ವಿರುದ್ಧ ನಾವು ಹೋರಾಡುತ್ತಿದ್ದೇವೆ. ನಾವೂ ಬಿಜೆಪಿಯವರು. ನಾವೂ ತಳಮಟ್ಟದಿಂದ ಪಕ್ಷ ಸಂಘಟನೆಗೆ ಶ್ರಮಿಸಿದ್ದೇವೆ. ಪಕ್ಷ ಸಂಘಟನೆಯ ಭಾಗವಾಗಿಯೂ ನಮ್ಮ ಹೋರಾಟ ನಡೆಯುತ್ತಿದೆ. ನಾವೇನೂ ಮಧ್ಯದಲ್ಲಿ ಲೀಡರ್ ಆಗಿ ಬಂದವರಲ್ಲ' ಎಂದು ಬಿ.ಎಸ್.ಯಡಿಯೂರಪ್ಪ ಹಾಗೂ ಬಿ.ವೈ. ವಿಜಯೇಂದ್ರ ಹೆಸರು ಪ್ರಸ್ತಾಪಿಸದೇ ವಾಗ್ದಾಳಿ ನಡೆಸಿದರು.

'ನಾನು ಸೇರಿದಂತೆ ರಮೇಶ ಜಾರಕಿಹೊಳಿ, ಅರವಿಂದ ಲಿಂಬಾವಳಿ, ಕುಮಾರ ಬಂಗಾರಪ್ಪ ನಾಲ್ಕೈದು ಬಾರಿ ಶಾಸಕರು, ಸಚಿವರಾಗಿದ್ದೇವೆ. ನಮಗೇನೂ ಅಧಿಕಾರದ ಹುಚ್ಚು ಹಿಡಿದಿಲ್ಲ. ಈಗ ಚುನಾವಣೆಯೂ ಇಲ್ಲ. ನಾವು ಪಕ್ಷ ವಿರೋಧಿ ಚಟುವಟಿಕೆ ಮಾಡುತ್ತಿಲ್ಲ' ಎಂದು ವಕ್ಫ್ ವಿರುದ್ಧ ತಾವು ನಡೆಸುತ್ತಿರುವ ಹೋರಾಟವನ್ನು ಸಮರ್ಥಿಸಿಕೊಂಡರು.

ಬಿಜೆಪಿ ಮುಖಂಡರಾದ ರಮೇಶ ಜಾರಕಿಹೊಳಿ, ಕುಮಾರ ಬಂಗಾರಪ್ಪ, ಜಿ.ಎಂ. ಸಿದ್ದೇಶ್ವರ, ಅರವಿಂದ ಲಿಂಬಾವಳಿ, ಎನ್.ಆರ್.ಸಂತೋಷ, ಬಿ.ಪಿ. ಹರೀಶ ಹಾಜರಿದ್ದರು.

ಸುದ್ದಿ 2 ನಿಮಿಷ

ಗೆಲುವಿನಲ್ಲೂ ಕಾಂಗ್ರೆಸ್ ವಿಕೃತಿ: ನಿಖಿಲ್ ಬೇಸರ

ರಾಮನಗರ: 'ಚನ್ನಪಟ್ಟಣ ಉಪ ಚುನಾವಣೆಯಲ್ಲಿ ಜಯ ಗಳಿಸಿರುವ ಕಾಂಗ್ರೆಸ್ ಗೆಲುವಿನಲ್ಲೂ ವಿಕೃತಿ ಮೆರೆಯುತ್ತಿದೆ. ಈ ಸೋಲಿನಿಂದ ನನಗೆ ನೋವಾಗಿರುವುದು ನಿಜ. ಗೆಲ್ಲಲು ಪ್ರಾಮಾಣಿಕವಾಗಿ ಹೋರಾಡಿದ್ದೇನೆ. ಕೆಲ ವಿಷಯಗಳಿಂದ ನಮಗೆ ಹಿನ್ನಡೆಯಾಗಿದೆ. ಮತ್ತೆ ಪುಟಿದೆದ್ದು ಬರುವ ಛಲ ನನಗಿದೆ. ನೋವು ಭರಿಸುವ ಶಕ್ತಿಯಂತೆ, ಛಲದಿಂದ ಎದ್ದು ಬರುವ ಕೆಚ್ಚು ನನಗೆ ರಕ್ತಗತವಾಗಿದೆ' ಎಂದು ಉಪ ಚುನಾವಣೆಯ ಪರಾಜಿತ ಜೆಡಿಎಸ್ ಅಭ್ಯರ್ಥಿ ನಿಖಿಲ್ ಕುಮಾರಸ್ವಾಮಿ ಹೇಳಿದ್ದಾರೆ. ತಮ್ಮ ಸೋಲಿನ ಬೆನ್ನಲ್ಲೇ ಪಕ್ಷದ ಕಾರ್ಯಕರ್ತರಿಗೆ ಬರೆದಿರುವ ಪತ್ರವನ್ನು ಸಾಮಾಜಿಕ ಜಾಲತಾಣ 'ಎಕ್ಸ್'ನಲ್ಲಿ ಬುಧವಾರ ಪೋಸ್ಟ್ ಮಾಡಿದ್ದಾರೆ.

ಕಾರ್ಯಕರ್ತರಿಗೆ ಸಾಂತ್ವನ ಹೇಳುತ್ತಲೇ ಮುಂದಿನ ಹೋರಾಟಕ್ಕೆ ಸ್ಫೂರ್ತಿ ತುಂಬಿರುವ ನಿಖಿಲ್, ಕಾಂಗ್ರೆಸ್ ಅಭ್ಯರ್ಥಿ ಸಿ.ಪಿ. ಯೋಗೇಶ್ವರ್ ತಮ್ಮ ಕುಟುಂಬ ಮತ್ತು ಪಕ್ಷದ ವಿರುದ್ಧ ನೀಡುತ್ತಿರುವ ಹೇಳಿಕೆಗಳಿಗೆ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಎದುರಾಳಿಯ ಗೆಲುವು ಕ್ಷೇತ್ರದ ಜನತೆಯ ಪದತಲಕ್ಕೆ ಅರ್ಪಣೆಯಾಗಬೇಕಿತ್ತು. ಆದರೆ, ವಿರೋಧ ಪಕ್ಷವನ್ನು ನಿರ್ನಾಮ ಮಾಡುವ, ಎದುರಾಳಿ ಸೋಲನ್ನು ಅವಹೇಳನ ಮಾಡುವ, ವಿರೋಧಿ ನಾಯಕರನ್ನು ಕೀಳಾಗಿ ನಿಂದಿಸುವ ವಿಕಾರಿ ಅವಸ್ಥೆಗೆ ಹೋಗಬಾರದಿತ್ತು. ಅವರ ಗೆಲುವಿಗೆ ನಾನು ಶುಭ ಹಾರೈಸಿ, ಚನ್ನಪಟ್ಟಣಕ್ಕೆ ಒಳ್ಳೆಯದಾಗಲಿ ಎಂದು ಆಶಿಸಿದ್ದೆ. ಸೋಲಿನ ಹತಾಶೆಯಲ್ಲಿ ಗೆದ್ದವರ ಮೇಲೆ ನಾನು ವಿಷಕಾರಿಕೊಳ್ಳಲಿಲ್ಲ. ಅಂಥ ವಿಕೃತಿ ನನ್ನ ನೆರಳಿಗೂ ಸುಳಿಯಲು ಬಿಡುವುದಿಲ್ಲ ಎಂದು ಹೇಳಿದ್ದಾರೆ.

ಡಿ.27ರಿಂದ ವಿಶ್ವ ಹವ್ಯಕ ಸಮ್ಮೇಳನ

ಬೆಂಗಳೂರು: ಅಖಿಲ ಹವ್ಯಕ ಮಹಾಸಭಾ ಡಿಸೆಂಬರ್ 27ರಿಂದ 29ರವರೆಗೆ ಅರಮನೆ ಮೈದಾನದ ರಾಯಲ್ ಸೆನೆಟ್ ಹಾಗೂ ಗ್ರ್ಯಾಂಡ್ ಕ್ಯಾಸಲ್‌ನಲ್ಲಿ ತೃತೀಯ ವಿಶ್ವ ಹವ್ಯಕ ಸಮ್ಮೇಳನ ಹಮ್ಮಿಕೊಂಡಿದೆ.

ಮೂರು ದಿನಗಳು ಬೆಳಿಗ್ಗೆ 9ರಿಂದ ರಾತ್ರಿ 9ರವರೆಗೆ ವಿವಿಧ ಕಾರ್ಯಕ್ರಮಗಳು ನಡೆಯಲಿವೆ. ಸಮ್ಮೇಳನದಲ್ಲಿ ಎಂಟು ಗೋಷ್ಠಿಗಳು ನಡೆಯಲಿವೆ. ಕೃಷಿ, ಶಿಕ್ಷಣ ಸೇರಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವ ಸಮುದಾಯದ 567 ಮಂದಿಯನ್ನು ಗೌರವಿಸಲಾಗುತ್ತದೆ. 'ಹವ್ಯಕ ಸಾಧಕ ರತ್ನ', 'ಹವ್ಯಕ ಕೃಷಿ ರತ್ನ', 'ಹವ್ಯಕ ಶಿಕ್ಷಕ ರತ್ನ' ಸೇರಿ ವಿವಿಧ ಪ್ರಶಸ್ತಿಗಳನ್ನು ಪ್ರದಾನ ಮಾಡಲಾಗುತ್ತದೆ. 'ಸಹಸ್ರಚಂದ್ರ' ಸ್ಮರಣ ಸಂಚಿಕೆಯನ್ನು ಬಿಡುಗಡೆ ಮಾಡಲಾಗುತ್ತದೆ.

ಯಕ್ಷಗಾನ, ಸುಗಮ ಸಂಗೀತ, ಭಕ್ತಿ ಭಜನೆ, ನಾಟಕ ಪ್ರದರ್ಶನ ಸೇರಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿದ್ದು, 300ಕ್ಕೂ ಅಧಿಕ ಕಲಾವಿದರು ಪಾಲ್ಗೊಳ್ಳುತ್ತಾರೆ. ವಾಣಿಜ್ಯ, ಕರಕುಶಲ ಹಾಗೂ ಹವ್ಯಕ ಖಾದ್ಯಗಳ ಮಳಿಗೆಗಳು ಸಮ್ಮೇಳನದಲ್ಲಿ ಇರಲಿವೆ. 6,000 ಹವ್ಯಕ ಪುಸ್ತಕಗಳ ಪ್ರದರ್ಶನವನ್ನು ಹಮ್ಮಿಕೊಳ್ಳಲಾಗುತ್ತದೆ. ಈ ಸಮ್ಮೇಳನದಲ್ಲಿ 1.5 ಲಕ್ಷ ಜನ ಪಾಲ್ಗೊಳ್ಳುವ ನಿರೀಕ್ಷೆಯಿದೆ ಎಂದು ಮಹಾಸಭೆ ತಿಳಿಸಿದೆ.

ದೇಸಿ ಗೋವುಗಳ ಪ್ರದರ್ಶನ, ಕಬ್ಬಿನ ಆಲೆಮನೆ, ಅಡಿಕೆ ಪ್ರಪಂಚ, ಯಕ್ಷಗಾನ ವೇಷ ಭೂಷಣಗಳ ಪ್ರದರ್ಶನ, ಬೈಕ್ ರ‍್ಯಾಲಿ, ಹವ್ಯಕ ಪಾಕೋತ್ಸವ ಸೇರಿ ಹಲವು ವೈಶಿಷ್ಟ್ಯಗಳನ್ನು ಸಮ್ಮೇಳನ ಒಳಗೊಂಡಿದೆ ಎಂದು ಪ್ರಕಟಣೆ ತಿಳಿಸಿದೆ.

ಕೊಂಕಣ ರೈಲ್ವೆ ವಿಲೀನಕ್ಕೆ ಒಪ್ಪದ ರಾಜ್ಯ: ವೈಷ್ಣವ್

ನವದೆಹಲಿ: ಭಾರತೀಯ ರೈಲ್ವೆಯೊಂದಿಗೆ ಕೊಂಕಣ ರೈಲ್ವೆಯನ್ನು ವಿಲೀನಗೊಳಿಸುವ ಪ್ರಸ್ತಾವನೆಗೆ ಕರ್ನಾಟಕ ಸರ್ಕಾರ ಒಪ್ಪಿಗೆ ನೀಡಿಲ್ಲ ಎಂದು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ತಿಳಿಸಿದ್ದಾರೆ.

ಲೋಕಸಭೆಯಲ್ಲಿ ಉಡುಪಿ–ಚಿಕ್ಕಮಗಳೂರು ಸಂಸದ ಕೋಟ ಶ್ರೀನಿವಾಸ ಪೂಜಾರಿ ಬುಧವಾರ ಕೇಳಿದ ಪ್ರಶ್ನೆಗೆ ಲಿಖಿತ ಉತ್ತರ ನೀಡಿದ ಸಚಿವರು, 'ಗೋವಾ ರಾಜ್ಯ ಸರ್ಕಾರ ಮಾತ್ರ ತನ್ನ ಪಾಲನ್ನು ಬಿಟ್ಟುಕೊಡಲು ಇಚ್ಛೆ ವ್ಯಕ್ತಪಡಿಸಿದೆ' ಎಂದು ಮಾಹಿತಿ ನೀಡಿದ್ದಾರೆ.

'ಕೊಂಕಣ ರೈಲ್ವೆ ಕಾರ್ಪೊರೇಷನ್ ಲಿಮಿಟೆಡ್‌ನಲ್ಲಿ ರೈಲ್ವೆ ಸಚಿವಾಲಯ, ಮಹಾರಾಷ್ಟ್ರ ಸರ್ಕಾರ, ಕರ್ನಾಟಕ ಸರ್ಕಾರ, ಗೋವಾ ಸರ್ಕಾರ ಮತ್ತು ಕೇರಳ ಸರ್ಕಾರ ಪಾಲುದಾರಿಕೆ ಹೊಂದಿವೆ. ಕೊಂಕಣ ರೈಲ್ವೆಯ ಮೂಲಸೌಕರ್ಯ 25 ವರ್ಷಗಳಿಗಿಂತ ಹೆಚ್ಚು ಹಳೆಯದಾಗಿದೆ. ಸುರಂಗಗಳ ಡಬಲಿಂಗ್ ಮತ್ತು ದುರಸ್ತಿ, ಪ್ರಯಾಣಿಕರ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳಲು ಮೂಲಸೌಕರ್ಯಗಳ ಹೆಚ್ಚಳ ಮತ್ತು ದುರಸ್ತಿಗೆ ಬಂಡವಾಳದ ಅಗತ್ಯ ಇದೆ. ತಮ್ಮ ಪಾಲಿನ ಬಂಡವಾಳ ವೆಚ್ಚ ನೀಡಲು ಅಥವಾ ರೈಲ್ವೆ ಸಚಿವಾಲಯದ ಪರವಾಗಿ ತಮ್ಮ ಪಾಲನ್ನು ತ್ಯಜಿಸಲು ಎಲ್ಲ ಷೇರುದಾರರನ್ನು ರೈಲ್ವೆ ಸಚಿವಾಲಯ ಸಂಪರ್ಕಿಸಿದೆ. ಇದಕ್ಕೆ ಗೋವಾ ಸರ್ಕಾರ ಮಾತ್ರ ಸಕಾರಾತ್ಮಕವಾಗಿ ಸ್ಪಂದಿಸಿದೆ' ಎಂದು ಅವರು ವಿವರ ನೀಡಿದ್ದಾರೆ.

ವಿಎಒ ಹುದ್ದೆಗಳ ಪರೀಕ್ಷಾ ಫಲಿತಾಂಶ ಪ್ರಕಟ

ಬೆಂಗಳೂರು: ಗ್ರಾಮ ಆಡಳಿತ ಅಧಿಕಾರಿ ಹುದ್ದೆಗೆ ಅ.27ರಂದು ನಡೆಸಲಾಗಿದ್ದ ಲಿಖಿತ ಪರೀಕ್ಷೆಯಲ್ಲಿ ಅಭ್ಯರ್ಥಿಗಳು ಪಡೆದಿರುವ ಅಂಕಗಳ ತಾತ್ಕಾಲಿಕ ಪಟ್ಟಿಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಬುಧವಾರ ಪ್ರಕಟಿಸಿದೆ. ಇದಕ್ಕೆ ಆಕ್ಷೇಪಣೆಗಳು ಇದ್ದಲ್ಲಿ ನ.28ರಂದು ಸಂಜೆ 4ರ ಒಳಗೆ ವೆಬ್‌ಸೈಟ್‌ನಲ್ಲಿ ಒದಗಿಸಲಾದ ಲಿಂಕ್ ಮೂಲಕ ಸಲ್ಲಿಸಬಹುದು ಎಂದು ಪ್ರಾಧಿಕಾರ ಹೇಳಿದೆ. ಬಿ.ಎಸ್ಸಿ ನರ್ಸಿಂಗ್ ಮತ್ತು ಅಲೈಡ್‌ಹೆಲ್ತ್ ಸೈನ್ಸ್ ಕೋರ್ಸ್‌ಗಳಿಗೆ ಸೀಟು ಹಂಚಿಕೆಯಾಗಿರುವ ಅಭ್ಯರ್ಥಿಗಳು ಶುಲ್ಕ ಪಾವತಿಸಿ, ಪ್ರವೇಶ ಪತ್ರ ಡೌನ್‌ಲೋಡ್ ಮಾಡಿಕೊಳ್ಳಲು ನ. 28ರವರೆಗೆ ಅವಕಾಶ ನೀಡಲಾಗಿದೆ. ನ. 29ರೊಳಗೆ ಕಾಲೇಜಿಗೆ ಪ್ರವೇಶಪಡೆಯಬೇಕು.

'ಗೂಟದ ಕಾರಿನ ಭ್ರಮೆ'

ಸಿ.ಪಿ.ಯೋಗೇಶ್ವರ್ ವಿರುದ್ಧ ಸಿ.ಎಸ್.ಪುಟ್ಟರಾಜು ವಾಗ್ದಾಳಿ

ಪ್ರಜಾವಾಣಿ ವಾರ್ತೆ

ಮಂಡ್ಯ: 'ದೇವೇಗೌಡರ ಕುಟುಂಬವನ್ನು ನಿಂದಿಸಿದರೆ ಗೂಟದ ಕಾರು ಸಿಗುತ್ತದೆಂಬ ಭ್ರಮೆಯಲ್ಲಿ ಸಿ.ಪಿ. ಯೋಗೇಶ್ವರ್ ಇದ್ದಾರೆ. ಜೆಡಿಎಸ್ ಅನ್ನು ಮುಗಿಸುವಂತೆ ಮಾತನಾಡುವ ಯೋಗೇಶ್ವರ್ ಅವರೇ ಎಚ್ಚರಿಕೆ ಇರಲಿ. ನಡವಳಿಕೆ ಸರಿಪಡಿಸಿಕೊಳ್ಳದಿದ್ದರೆ, ಡಿ.ಕೆ.ಶಿವಕುಮಾರ್ ಮತ್ತು ಡಿ.ಕೆ. ಸುರೇಶ್ ನಿಮ್ಮ ಬಗ್ಗೆ ಮಾತನಾಡಿರುವ ರೆಕಾರ್ಡ್ ಇದೆ. ಅದನ್ನು ಹಾದಿ ಬೀದಿಯಲ್ಲಿ ಹೇಳಿ ಮಾನ ಹರಾಜು ಹಾಕುತ್ತೇವೆ' ಎಂದು ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಹೇಳಿದರು.

'ಗೆಲುವಿನ ಮದದಿಂದ ದೇವೇಗೌಡರನ್ನು ಮನೆಯಲ್ಲಿರಿ ಅನ್ನೋದು, ಕುಮಾರಣ್ಣ ಅವರನ್ನು ರಣಹೇಡಿ ಅನ್ನೋದು ಶೋಭೆ ತರುವುದಿಲ್ಲ. ಕೇವಲ ರಾಜಕಾರಣಕ್ಕಾಗಿ ದೇವೇಗೌಡರು ಬೀದಿಯಲ್ಲಿ ಓಡಾಡಲಿಲ್ಲ, ರೈತರ ಸಮಸ್ಯೆಗಳ ನಿವಾರಣೆಗಾಗಿ ಹೋರಾಡಿದ್ದಾರೆ. ರೈತರು ಒಪ್ಪಿರುವುದಕ್ಕೇ ಗೌಡ್ರು ಇನ್ನೂ ಗೌಡರಾಗಿದ್ದಾರೆ' ಎಂದು ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.



ಸಿ.ಎಸ್. ಪುಟ್ಟರಾಜು

'ಯೋಗೇಶ್ವರ್ ಕೂಡ ಚುನಾವಣೆಯಲ್ಲಿ ಹಲವಾರು ಬಾರಿ ಸೋತಿದ್ದಾರೆ. ಈ ಬಾರಿ ಚುನಾವಣೆ ಇನ್ನೆರಡು ದಿನವಿರುವಾಗಲೇ ರಣಹೇಡಿಯಂತೆ ಓಡಿ ಹೋದರು. ಈಗ ಗೆದ್ದಿರುವುದನ್ನು ಸ್ವಾಗತಿಸುತ್ತೇವೆ. ಚನ್ನಪಟ್ಟಣ ಮತದಾರರನ್ನು ಗೌರವಿಸುವುದನ್ನು ಕಲಿಯಲಿ' ಎಂದರು.

'ರಾಮನಗರಕ್ಕೆ ಮಳವಳ್ಳಿಯ ಸತ್ತೇಗಾಲದಿಂದ ಕಾವೇರಿ ನೀರು ತರಲು ಯೋಜನೆ ಮಾಡಿದ್ದು ಎಚ್.ಡಿ.ಕುಮಾರಸ್ವಾಮಿ. ಅವರು ಮುಖ್ಯಮಂತ್ರಿಯಾಗಿದ್ದಾಗ ಸುಮಾರು ₹450 ಕೋಟಿ ಅನುದಾನ ಬಿಡುಗಡೆ ಮಾಡಿದ್ದರು. ಇಷ್ಟಿದ್ದರೂ, ನೀನು ಅದ್ಯಾವುದೋ ಕೆಲವು ಕೆರೆಗಳಿಗೆ ನೀರು ಹರಿಸಿಬಿಟ್ಟು ಇಷ್ಟೊಂದು ಮಾತನಾಡುತ್ತೀಯಾ' ಎಂದು ಟೀಕಿಸಿದರು.

'ನಿನಗೆ ತಾಕತ್ ಇದ್ದರೆ, ಒಬ್ಬ ಜೆಡಿಎಸ್ ಶಾಸಕನನ್ನ ಕರೆದುಕೊಂಡು ಹೋಗು. ಗೆದ್ದ ಮಾತ್ರಕ್ಕೆ ಎಲ್ಲವನ್ನೂ ಪಡೆದುಕೊಂಡೆನೆಂದುಕೊಳ್ಳಬೇಡ. ಕಾಂಗ್ರೆಸ್‌ನಲ್ಲಿ ಘಟಸರ್ಪಗಳಿವೆ, ನಿನಗೆ ಮಾತನಾಡಲು ಬಿಡುವುದಿಲ್ಲ. ಕಾದು ನೋಡು. ಯಾವ ಪಕ್ಷದಲ್ಲಿ ಕುಟುಂಬ ರಾಜಕಾರಣವಿಲ್ಲ, ನಿಮ್ಮದೇ ಪಕ್ಷದ ನೆಹರು ಕುಟುಂಬ, ಇಂದಿರಾಗಾಂಧಿ, ರಾಜೀವ್ ಗಾಂಧಿ, ಮಲ್ಲಿಕಾರ್ಜುನ ಖರ್ಗೆ, ಸಂಡೂರು ಕ್ಷೇತ್ರದ ಅನ್ನಪೂರ್ಣ ಅವರ ಕುಟುಂಬ, ಅಷ್ಟೇ ಏಕೆ ನೀವು, ನಿಮ್ಮ ಸಹೋದರ, ನಿಮ್ಮ ಪತ್ನಿ ರಾಜಕೀಯದಲ್ಲಿಲ್ಲವೇ' ಎಂದು ಕೇಳಿದರು.

'ಮಂಡ್ಯ ಲೋಕಸಭೆ ಚುನಾವಣೆಯಲ್ಲಿ ನಿಖಿಲ್ ಅವರನ್ನು ಅನಿವಾರ್ಯವಾಗಿ ಕಣಕ್ಕಿಳಿಸಿದ್ದೆವು. ಜಿಲ್ಲೆಯೊಂದಿಗೆ ಅಂಬರೀಶ್‌ಗೆ ಅವಿನಾಭಾವ ಸಂಬಂಧವಿದ್ದ ಕಾರಣ ನಿಖಿಲ್‌ಗೆ ಸೋಲಾಯಿತು. ಜನಾಭಿಪ್ರಾಯದ ಮುಂದೆ ನಾವು ಯಾರೂ ಅಲ್ಲ' ಎಂದರು. ಮಾಜಿ ಶಾಸಕ ಕೆ.ಅನ್ನದಾನಿ, ಜೆಡಿಎಸ್ ಜಿಲ್ಲಾ ಘಟಕದ ಅಧ್ಯಕ್ಷ ಡಿ.ರಮೇಶ್, ಬಿಜೆಪಿ ಮುಖಂಡ ಸಿ.ಟಿ.ಮಂಜುನಾಥ್ ಇದ್ದರು.

ವಿಜಯೇಂದ್ರ ವಿರುದ್ಧದ ಕ್ರಿಮಿನಲ್ ಪ್ರಕರಣ ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಹುಲ್ ಗಾಂಧಿ ಅವರ ದ್ವೇಷದ ಅಂಗಡಿ ಕರ್ನಾಟಕವನ್ನು ಮತಾಂಧರ ಗಲಭೆಯ ತೋಟವನ್ನಾಗಿ ಮಾಡಿದೆ' ಎಂಬ ಎಕ್ಸ್ (ಟ್ವಿಟರ್) ಹೇಳಿಕೆಯನ್ನು ಆಧರಿಸಿ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ವಿರುದ್ಧ ದಾಖಲಾಗಿದ್ದ ಎಫ್‌ಐಆರ್ ಹಾಗೂ ಈ ಸಂಬಂಧ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದಲ್ಲಿನ ಕ್ರಿಮಿನಲ್ ಪ್ರಕರಣವನ್ನು ಹೈಕೋರ್ಟ್ ರದ್ದುಗೊಳಿಸಿದೆ.

'ನಮ್ಮ ವಿರುದ್ಧದ ಎಫ್‌ಐಆರ್ ಹಾಗೂ ವಿಚಾರಣಾ ನ್ಯಾಯಾಲಯದ ನ್ಯಾಯಿಕ ಪ್ರಕ್ರಿಯೆ ರದ್ದುಗೊಳಿಸಬೇಕು' ಎಂದು ಕೋರಿ ಬಿ.ವೈ.ವಿಜಯೇಂದ್ರ ಹಾಗೂ ಬಿಜೆಪಿ ಘಟಕದ ಎಕ್ಸ್ ಖಾತೆ ನಿರ್ವಹಣೆದಾರ ಪ್ರಶಾಂತ ಮಾಕನೂರು ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ಅರ್ಜಿದಾರರ ಪರ ಹಿರಿಯ ವಕೀಲ ಎಂ.ಅರುಣ್ ಶ್ಯಾಮ್ ವಾದ ಮಂಡಿಸಿದರು

ಹುದ್ದೆ ಭರ್ತಿಗೆ ಆಗ್ರಹ

ಬೆಂಗಳೂರು: ಸರ್ಕಾರಿ ಹಾಗೂ ಅನುದಾನಿತ ಪಿಯು ಕಾಲೇಜುಗಳಲ್ಲಿ ಖಾಲಿ ಇರುವ ಉಪನ್ಯಾಸಕರ ಹುದ್ದೆಗಳನ್ನು ಭರ್ತಿ ಮಾಡಬೇಕು ಎಂದು ರಾಜ್ಯ ಪದವಿಪೂರ್ವ ಕಾಲೇಜುಗಳ ಉಪನ್ಯಾಸಕರ ಸಂಘ ಒತ್ತಾಯಿಸಿದೆ.

ರಾಜ್ಯದಲ್ಲಿರುವ 1,232 ಸರ್ಕಾರಿ ಕಾಲೇಜುಗಳಲ್ಲಿ ಮಂಜೂರಾದ 12,917 ಬೋಧಕ ಹುದ್ದೆಗಳಿವೆ. ಪ್ರಸ್ತುತ 8,356 ಉಪನ್ಯಾಸಕರು ಕೆಲಸ ಮಾಡುತ್ತಿದ್ದಾರೆ. 4,561 ಹುದ್ದೆಗಳು ಖಾಲಿ ಇವೆ. 821 ಅನುದಾನಿತ ಪದವಿಪೂರ್ವ ಕಾಲೇಜುಗಳಿಗೆ 10,948 ಹುದ್ದೆಗಳು ಮಂಜೂರಾಗಿವೆ. 4,291 ಖಾಲಿ ಇವೆ. ಶೇ 35ರಷ್ಟು ಹುದ್ದೆಗಳು ಖಾಲಿ ಇರುವ ಕಾರಣ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ನೀಡಲು ಸಾಧ್ಯವಾಗುತ್ತಿಲ್ಲ ಎಂದು ಸಂಘದ ಅಧ್ಯಕ್ಷ ಎ.ಎಚ್. ನಿಂಗೇಗೌಡ, ಪ್ರಧಾನ ಕಾರ್ಯದರ್ಶಿ ಎಸ್.ಬಿ. ಮಾಲೀಪಾಟೀಲ ವಿವರಿಸಿದ್ದಾರೆ.

ಕನ್ನಡದ ಆನೆ... ಬೆಂಗಳೂರಿನಲ್ಲಿ ಬುಧವಾರ ಆಯೋಜಿಸಿದ್ದ 69ನೇ ರಾಜ್ಯೋತ್ಸವ ಕಾರ್ಯಕ್ರಮಕ್ಕೆ ತುಮಕೂರಿನ ನೊಣವಿನಕೆರೆಯಿಂದ ಬಂದಿದ್ದ ಆನೆಯೊಂದು ಪುರಭವನದ ಎದುರು ಹಾದುಹೋದ ವೇಳೆ ಜನರ ಗಮನ ಸೆಳೆಯಿತು – ಪ್ರಜಾವಾಣಿ ಚಿತ್ರ:ರಂಜು ಪಿ

ಎಲ್ಲ ಭೂ ದಾಖಲೆಗಳ ಡಿಜಿಟಲೀಕರಣ, ದಶಕಗಳ ಸಮಸ್ಯೆಗೆ ಮುಕ್ತಿ

ಪೋಡಿಗೆ ಸಾಕು ಮೂರೇ ದಾಖಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನಿಷ್ಠ ಮೂರು ದಾಖಲಾತಿಗಳು ಲಭ್ಯವಿದ್ದರೂ ರೈತರಿಗೆ ಮಂಜೂರಾಗಿರುವ ಜಮೀನುಗಳ ಪೋಡಿ ಕಾರ್ಯ ಪೂರ್ಣಗೊಳಿಸಬಹುದು.

ಈ ಕುರಿತು ಕಂದಾಯ ಇಲಾಖೆ ಆದೇಶ ಹೊರಡಿಸಿದ್ದು, ಇನ್ನು ಮುಂದೆ ಕನಿಷ್ಠ ದಾಖಲೆಗಳ ಆಧಾರದಲ್ಲಿ ಆಯಾ ತಹಶೀಲ್ದಾರ್ ಅವರು, ದಾಖಲೆಗಳ ನೈಜತೆಯನ್ನು ಪರಿಶೀಲಿಸಿ, ಪೋಡಿ ಮಾಡಲು ಆದೇಶಿಸಬಹುದಾಗಿದೆ.

ಮೊದಲು ಯಾವುದೇ ಒಂದು ದಾಖಲಾತಿ ಲಭ್ಯವಿಲ್ಲದಿದ್ದರೂ ಆ ಕಡತವನ್ನು 'ಗೈರುವಿಲೇ ಸಮಿತಿ' ಮುಂದೆ ಮಂಡಿಸಬೇಕಿತ್ತು. ಈ ಪ್ರಕ್ರಿಯೆ ಸುದೀರ್ಘ ಅವಧಿ ತೆಗೆದುಕೊಳ್ಳುತ್ತಿದ್ದ ಕಾರಣ ಪೋಡಿ ಕಾರ್ಯಗಳು ಸಾಕಷ್ಟು ವಿಳಂಬವಾಗುತ್ತಿದ್ದವು. ಪೋಡಿ ದುರಸ್ತಿಗಾಗಿ ನಮೂನೆ 1ರಿಂದ 5 ಮತ್ತು 6ರಿಂದ 10ರವರೆಗಿನ ಭೂ ದಾಖಲೆಗಳನ್ನು ಹಾಜರುಪಡಿಸುವುದು ಕಡ್ಡಾಯವಾಗಿತ್ತು. ದಶಕಗಳ ಹಿಂದೆಯೇ ಸರ್ಕಾರ ಬಡ ರೈತರಿಗೆ ಜಮೀನು ಮಂಜೂರು ಮಾಡಿದ್ದರೂ, ಸಮರ್ಪಕ ದಾಖಲೆಗಳ ಕೊರತೆಯ ಕಾರಣ ಜಮೀನು ಪೋಡಿ ಆಗಿರಲಿಲ್ಲ. ರೈತರು ಇಂದಿಗೂ ಸರ್ಕಾರಿ ಕಚೇರಿಗಳಿಗೆ ಸುತ್ತುತ್ತಿದ್ದಾರೆ.

ಈಗ ಪ್ರಕ್ರಿಯೆಯನ್ನು ಸರಳೀಕರಣಗೊಳಿಸಲಾಗಿದ್ದು, ಒಂದು ಸರ್ವೆ ನಂಬರಿನ ಎಲ್ಲ ಮಂಜೂರಾತಿಯ ನಮೂನೆ 1ರಿಂದ 5 ಮತ್ತು ಪೋಡಿ ಕೆಲಸವನ್ನು ಏಕಕಾಲದಲ್ಲಿ ನಿರ್ವಹಿಸಲಾಗುತ್ತದೆ. ಎಲ್ಲ ದಾಖಲೆಗಳನ್ನೂ ಸ್ಕ್ಯಾನ್ ಮಾಡಿ, ಅಳವಡಿಸಲಾಗುತ್ತಿದೆ. ಒಂದು ಸರ್ವೆ ನಂಬರಿಗೆ ಒಮ್ಮೆ ದಾಖಲೆಗಳನ್ನು ಅಳವಡಿಸಿದ ನಂತರ ಅವು ಕಾಯಂ ಆಗಿ ಲಭ್ಯವಾಗುತ್ತವೆ.

ದರಖಾಸ್ತು ಪೋಡಿ ಪ್ರಕ್ರಿಯೆಯಲ್ಲಿ ಅಕ್ರಮಗಳನ್ನು ತಡೆಯುವ ಸಲುವಾಗಿ ಗ್ರಾಮ ಆಡಳಿತ ಅಧಿಕಾರಿಗಳು, ಕಂದಾಯ ನಿರೀಕ್ಷಕರು, ಶಿರಸ್ತೇದಾರರು ಹಾಗೂ ತಹಶೀಲ್ದಾರರು ನಮೂನೆ 1ರಿಂದ 5ರ ಮಾಹಿತಿಯನ್ನು ಭರ್ತಿ ಮಾಡಿ, ಡಿಜಿಟಲ್ ಸಹಿ ಮಾಡುವಂತಹ ತಂತ್ರಾಂಶ ಅಭಿವೃದ್ಧಿಪಡಿಸಲಾಗಿದೆ. ಈ ಮೂಲಕ ಅಕ್ರಮಗಳಿಗೆ ಕಡಿವಾಣ ಹಾಕಲಾಗುತ್ತಿದೆ.

ದಾರಿಗೆ ಪ್ರತ್ಯೇಕ ಅಸ್ತಿತ್ವ: ಮಂಜೂರಾತಿ ನಕ್ಷೆಯಲ್ಲಿ ಗುರುತಿಸಿರುವ ಹೊಲದ ದಾರಿಯನ್ನು ದುರಸ್ತಿ ದಾಖಲೆಯಲ್ಲಿ ಪ್ರತ್ಯೇಕ ದಾರಿ ಎಂದೇ ಗುರುತಿಸಿ, ಕಾಯಂಗೊಳಿಸಬೇಕು. ಆ ಜಾಗವನ್ನು ಯಾರ ವಿಸ್ತೀರ್ಣದಲ್ಲೂ ಸೇರಿಸಬಾರದು ಎಂದು ಆದೇಶದಲ್ಲಿ ಸೂಚಿಸಲಾಗಿದೆ.

ತಹಶೀಲ್ದಾರ್‌ಗೆ ಪೋಡಿಯ ಸಂಪೂರ್ಣ ಅಧಿಕಾರ

ಮೊದಲು ನಮೂನೆ 1ರಿಂದ 5ನ್ನು ತಹಶೀಲ್ದಾರರು ತಯಾರಿಸಿದ ನಂತರ ಉಪ ವಿಭಾಗಾಧಿಕಾರಿಗಳು ಹಾಗೂ ಭೂದಾಖಲೆಗಳ ಉಪನಿರ್ದೇಶಕರು ಪರಿಶೀಲಿಸಿ, ಅನುಮೋದಿಸುತ್ತಿದ್ದರು. ಈ ಹಂತವನ್ನು ಕೈಬಿಡಲಾಗಿದ್ದು, ತಹಶೀಲ್ದಾರರಿಗೆ ಸಂಪೂರ್ಣ ಅಧಿಕಾರವನ್ನು ನೀಡಲಾಗಿದೆ. ಮಂಜೂರಾತಿಯ ನೈಜತೆಯನ್ನು ಖಚಿತಪಡಿಸಿಕೊಂಡ ನಂತರ ನೇರವಾಗಿ ಭೂದಾಖಲೆಗಳ ಸಹಾಯಕ ನಿರ್ದೇಶಕರಿಗೆ ಪೋಡಿ ಮಾಡಲು ಸೂಚಿಸಬಹುದು.

ಮಧ್ಯವರ್ತಿಗಳ ಬೆನ್ನಟ್ಟಿ ಹಿಡಿದ ಪೊಲೀಸರು

ಪ್ರಜಾವಾಣಿ ವಾರ್ತೆ

ತುಮಕೂರು: ನಗರದ ಪ್ರಾದೇಶಿಕ ಸಾರಿಗೆ ಅಧಿಕಾರಿ ಕಚೇರಿ ಹಾಗೂ ಮಧುಗಿರಿ ಸಹಾಯಕ ಸಾರಿಗೆ ಅಧಿಕಾರಿ ಕಚೇರಿ (ಆರ್‌ಟಿಒ) ಮೇಲೆ ಬುಧವಾರ ಲೋಕಾಯುಕ್ತ ಪೊಲೀಸ್ ಅಧಿಕಾರಿಗಳು ದಾಳಿ ನಡೆಸಿದರು.

ದಾಳಿ ವೇಳೆ ಮಧುಗಿರಿ ಎಆರ್‌ಟಿಒ ಕಚೇರಿಯಿಂದ ಓಡಿ ಹೋಗುತ್ತಿದ್ದ ಇಬ್ಬರು ಮಧ್ಯವರ್ತಿಗಳನ್ನು ರಸ್ತೆಯಲ್ಲಿ ಬೆನ್ನಟ್ಟಿ ಹಿಡಿದು ವಶಕ್ಕೆ ಪಡೆದರು. ನಂತರ ಕಚೇರಿಗೆ ಕರೆತಂದು ವಿಚಾರಣೆ ನಡೆಸಿದರು. ಕಚೇರಿಯಲ್ಲಿದ್ದ ಮತ್ತೊಬ್ಬರನ್ನು ವಿಚಾರಣೆ ನಡೆಸಿ ಹೊರಗೆ ಕಳುಹಿಸಿದರು.

ತುಮಕೂರು ನಗರದ ಆರ್‌ಟಿಒ ಕಚೇರಿ ಮೇಲೆ ಮಧ್ಯಾಹ್ನದ 12 ಗಂಟೆ ವೇಳೆಗೆ ದಾಳಿ ನಡೆಸಿದ ಅಧಿಕಾರಿಗಳು ತಡ ರಾತ್ರಿವರೆಗೂ ತಪಾಸಣೆಯಲ್ಲಿ ತೊಡಗಿದ್ದರು. ಗುರುವಾರ ಬೆಳಗಿನವರೆಗೂ ತಪಾಸಣೆ, ಕಡತ ಪರಿಶೀಲನೆ ಮುಂದುವರಿಯಲಿದೆ ಎಂದು ಲೋಕಾಯುಕ್ತ ಮೂಲಗಳು ತಿಳಿಸಿವೆ.

ಆರ್‌ಟಿಒ ಕಚೇರಿಯಲ್ಲಿ ನಡೆಯುತ್ತಿರುವ ಅಕ್ರಮಗಳ ಬಗ್ಗೆ ಸಾರ್ವಜನಿಕರು ದೂರು ನೀಡಿದ್ದರು. ಅಕ್ಟೋಬರ್ ಕೊನೆಯಲ್ಲಿ ಉಪಲೋಕಾಯುಕ್ತ ಬಿ.ವೀರಪ್ಪ ನಗರದಲ್ಲಿ ಸಾರ್ವಜನಿಕರ ಕುಂದುಕೊರತೆ ಸಭೆ ನಡೆಸಿದ್ದರು. ಈ ಸಂದರ್ಭದಲ್ಲಿ ಆರ್‌ಟಿಒ ಕಚೇರಿ ವಿರುದ್ಧ ಸಾಕಷ್ಟು ದೂರು ಕೇಳಿ ಬಂದಿದ್ದವು. ಈ ಎಲ್ಲಾ ಮಾಹಿತಿಗಳನ್ನು ಆಧರಿಸಿ ದಾಳಿ ಮಾಡಲಾಗಿದೆ ಎಂದು ಲೋಕಾಯುಕ್ತರು ತಿಳಿಸಿದರು.

ಕಚೇರಿಯಲ್ಲಿ ಮಧ್ಯವರ್ತಿಗಳ ಹಾವಳಿ, ಚಾಲನಾ ಪರವಾನಗಿ ನೀಡುವಲ್ಲಿ ವಿಳಂಬ, ಹಣಕ್ಕೆ ಬೇಡಿಕೆ, ವಾಹನಗಳಿಗೆ ಎಫ್‌ಸಿ ನೀಡುವಲ್ಲಿ ಅಕ್ರಮ, ಕೆಲವು ಶಾಲೆ, ಕಾಲೇಜುಗಳ ವಾಹನಗಳಿಗೆ ಎಫ್‌ಸಿ ಪ್ರಮಾಣಪತ್ರ ಪಡೆದುಕೊಳ್ಳದಿದ್ದರೂ ಸಂಚಾರಕ್ಕೆ ಅವಕಾಶ ಮಾಡಿಕೊಟ್ಟಿರುವುದು ಸೇರಿದಂತೆ ಹಲವು ದೂರುಗಳ ಬಗ್ಗೆ ಪರಿಶೀಲನೆ ನಡೆದಿದೆ.

ದಾಳಿ ಸಮಯದಲ್ಲಿ ಕಚೇರಿಯಲ್ಲಿದ್ದ ಸಾರ್ವಜನಿಕರಿಂದ ಅಧಿಕಾರಿಗಳು ಮಾಹಿತಿ ಪಡೆದುಕೊಂಡರು. ಯಾವ ಉದ್ದೇಶಕ್ಕೆ ಬಂದಿದ್ದೀರಿ, ಎಷ್ಟು ದಿನಗಳಿಂದ ಕೆಲಸವಾಗಿಲ್ಲ. ಲಂಚ ಕೇಳಿದರೆ? ಮೊದಲಾದ ವಿವರ ಸಂಗ್ರಹಿಸಿದ ನಂತರ ಕಚೇರಿಯಲ್ಲಿದ್ದವರನ್ನು ಹೊರಗೆ ಕಳುಹಿಸಿದರು. ನಂತರ ಕಡತಗಳ ತಪಾಸಣೆಯಲ್ಲಿ ತೊಡಗಿಸಿಕೊಂಡರು.

'ಪರಿಶೀಲನೆ ಕಾರ್ಯ ಇನ್ನೂ ಮುಂದುವರಿದಿದೆ. ಗುರುವಾರ ಬೆಳಿಗ್ಗೆ ಹೊತ್ತಿಗೆ ಪೂರ್ಣಗೊಳ್ಳಬಹುದು. ನಂತರ ಏನೆಲ್ಲ ಆಗಿದೆ ಎಂಬುದು ಗೊತ್ತಾಗಲಿದೆ' ಎಂದು ದಾಳಿ ನೇತೃತ್ವ ವಹಿಸಿದ್ದ ಲೋಕಾಯುಕ್ತ ಎಸ್ಪಿ ಎ.ವಿ.ಲಕ್ಷ್ಮಿನಾರಾಯಣ ತಿಳಿಸಿದರು.

ಮಧುಗಿರಿ ಎಆರ್‌ಟಿಒ ಕಚೇರಿಯಲ್ಲೂ ಲೋಕಾಯುಕ್ತ ಡಿವೈಎಸ್‌ಪಿ ಉಮಾಶಂಕರ್ ನೇತೃತ್ವದಲ್ಲಿ ತಪಾಸಣೆ ಮಾಡಲಾಯಿತು. ಕೆಲವು ದಾಖಲೆ ಪತ್ರಗಳು, ಕಡತಗಳನ್ನು ವಶಕ್ಕೆ ಪಡೆದು ಪರಿಶೀಲನೆ ನಡೆಸಿದರು. ತಡ ರಾತ್ರಿವರೆಗೂ ಶೋಧ ಕಾರ್ಯ ಮುಂದುವರಿದಿತ್ತು.

ಸಂಪುಟ ಪುನಾರಚನೆ ಚರ್ಚೆ ಮುನ್ನೆಲೆಗೆ

ಒಂದನೇ ಪುಟದಿಂದ...

'ಕೆಪಿಸಿಸಿ ಅಧ್ಯಕ್ಷರ ಸ್ಥಾನಕ್ಕೆ ನಾನು ಲಾಬಿ ಮಾಡಿಲ್ಲ. ಅಧ್ಯಕ್ಷರ ಬದಲಾವಣೆ ಬಗ್ಗೆ ಯಾವುದೇ ಚರ್ಚೆಯೂ ನಡೆದಿಲ್ಲ. 2028ಕ್ಕೆ ಅಧ್ಯಕ್ಷ ಸ್ಥಾನಕ್ಕೆ ಹಕ್ಕು ಪ್ರತಿಪಾದಿಸುತ್ತೇನೆ. ಅಧ್ಯಕ್ಷ ಸ್ಥಾನ ಎಂದರೆ ಮುಳ್ಳಿನ ಮೇಲೆ ನಿಂತಂತೆ. ನಾವು ಅಂದುಕೊಂಡಷ್ಟು ಸುಲಭದ ಕೆಲಸವಲ್ಲ. ಎಲ್ಲರ ಸಹಕಾರ ಬೇಕಾಗುತ್ತದೆ. ಹೈಕಮಾಂಡ್ ಹೇಳಿದರೆ ನೋಡೋಣ. ಸಂಘಟನೆಯಲ್ಲಿ ತೊಡಗುವ ಆಸಕ್ತಿ ಇರುವವರ ಬಗ್ಗೆ ಚಿಂತನೆ ನಡೆಸಲಿ' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ತ್ಯಾಗವೇ ದೊಡ್ಡದು': 'ಕಾಂಗ್ರೆಸ್ ಪಕ್ಷ ತ್ಯಾಗಕ್ಕೆ ಸಂಕೇತ. ತ್ಯಾಗಕ್ಕಿಂತ ಯಾವುದು ದೊಡ್ಡದಿದೆ. ಪಕ್ಷದ ವೇದಿಕೆಯಲ್ಲಿ ಈ ಪ್ರಶ್ನೆ ಸದ್ಯಕ್ಕೆ ಎದುರಾಗಿಲ್ಲ' ಎಂದು ಸಚಿವ ಡಾ. ಎಚ್. ಸಿ. ಮಹದೇವಪ್ಪ ಹೇಳಿದರು.

'ತ್ಯಾಗಕ್ಕೆ ಎಲ್ಲರೂ ಸಿದ್ಧರಿರಬೇಕು'

ಶಿವಮೊಗ್ಗ: 'ರಾಜ್ಯ ಸಚಿವ ಸಂಪುಟ ಪುನಾರಚನೆ ಅಥವಾ ವಿಸ್ತರಣೆ ವಿಚಾರದಲ್ಲಿ ಸದ್ಯಕ್ಕೆ ಯಾವುದೇ ಬೆಳವಣಿಗೆ ನಡೆದಿಲ್ಲ. ಒಂದೊಮ್ಮೆ ಪುನರ್‌ರಚನೆಯಾದರೆ ಸ್ಥಾನ ತ್ಯಾಗಕ್ಕೆ ಎಲ್ಲರೂ ಸಿದ್ಧರಾಗಿರಬೇಕು' ಎಂದು ಸಚಿವ ದಿನೇಶ್ ಗುಂಡೂರಾವ್ ಹೇಳಿದರು. 'ಎರಡು ವರ್ಷಗಳ ನಂತರ ಸಂಪುಟ ಪುನಾರಚನೆ ಆದರೆ ಒಳ್ಳೆಯದು. ಇದರಿಂದ ಬೇರೆಯವರಿಗೂ ಅವಕಾಶ ಸಿಗುತ್ತದೆ. ನಾವೇ ಇರಬೇಕು. ಇನ್ನೊಬ್ಬರಿಗೆ ಅವಕಾಶ ಕೊಡಬಾರದು ಎಂದೇನೂ ಇಲ್ಲ' ಎಂದು ಇಲ್ಲಿ ಸುದ್ದಿಗಾರರಿಗೆ ಬುಧವಾರ ತಿಳಿಸಿದರು.

ಬಿಜೆಪಿಗೆ 'ಮಹಾ' ಸಿ.ಎಂ ಪಟ್ಟ

ಒಂದನೇ ಪುಟದಿಂದ...

ಈ ಬೆಳವಣಿಗೆಯಿಂದಾಗಿ, ಮಹಾರಾಷ್ಟ್ರದ ಮುಂದಿನ ಮುಖ್ಯಮಂತ್ರಿ ಆಯ್ಕೆಗೆ ಇದ್ದ ಅಡ್ಡಿಗಳು ನಿವಾರಣೆಯಾದಂತಾಗಿವೆ. ಶಿಂದೆ ಅವರು ಸದ್ಯ ಉಸ್ತುವಾರಿ ಮುಖ್ಯಮಂತ್ರಿಯಾಗಿದ್ದಾರೆ.

ಠಾಣೆಯಲ್ಲಿನ ತಮ್ಮ ನಿವಾಸದಲ್ಲಿ ಬುಧವಾರ ತುರ್ತು ಸುದ್ದಿಗೋಷ್ಠಿ ನಡೆಸಿದ ಶಿಂದೆ, 'ನಾನು ಮೋದಿ ಹಾಗೂ ಅಮಿತ್ ಶಾ ಅವರೊಂದಿಗೆ ಮಂಗಳವಾರ ಮಾತನಾಡಿ, ಮುಖ್ಯಮಂತ್ರಿ ಅಭ್ಯರ್ಥಿ ವಿಚಾರವಾಗಿ ನೀವು ತೆಗೆದುಕೊಳ್ಳುವ ನಿರ್ಧಾರಕ್ಕೆ ನಾನು ಬದ್ಧ ಎಂಬುದಾಗಿ ತಿಳಿಸಿದೆ' ಎಂದು ಹೇಳಿದರು.

'ನಾನು ಬೇಸರಗೊಂಡಿಲ್ಲ. ನನಗೆ ನಿರಾಸೆಯೂ ಆಗಿಲ್ಲ. ನಾವು ಹೋರಾಟಗಾರರೇ ಹೊರತು ಅಳುತ್ತಾ ಕೂರುವವರಲ್ಲ. ಈ ಗೆಲುವಿಗಾಗಿ ನಾವೆಲ್ಲರೂ ಒಟ್ಟಿಗೆ ಕೆಲಸ ಮಾಡಿದ್ದೇವೆ' ಎಂದರು.

'ಸಿ.ಎಂ ಎಂದರೆ 'ಕಾಮನ್‌ಮ್ಯಾನ್' (ಸಾಮಾನ್ಯವ್ಯಕ್ತಿ) ಎಂಬ ಅರ್ಥವೂ ಇದೆ. ಸಾಮಾನ್ಯ ಜನರ ಏಳಿಗೆಗಾಗಿ ರಕ್ತದ ಕೊನೆ ಹನಿ ಇರುವವರೆಗೂ ನಾನು ದುಡಿಯುತ್ತೇನೆ' ಎಂದರು.

'ನೀವು ಉಪಮುಖ್ಯಮಂತ್ರಿಯಾಗಲು ಒಪ್ಪುವಿರಾ? ನೀವು ರಾಜ್ಯ ರಾಜಕಾರಣದಲ್ಲಿಯೇ ಇರುತ್ತೀರಾ ಇಲ್ಲವೇ ಕೇಂದ್ರ ಸಂಪುಟ ಸೇರುವಿರಾ' ಎಂಬ ಸುದ್ದಿಗಾರರ ಪ್ರಶ್ನೆಗೆ ಉತ್ತರಿಸದ ಅವರು, 'ನಾಳೆ, ಶಾ ಅವರೊಂದಿಗೆ ಸಭೆ ಇದೆ' ಎಂದಷ್ಟೆ ಹೇಳಿದರು.

ಏಕನಾಥ ಶಿಂದೆ ಅವರನ್ನೇ ಮುಖ್ಯಮಂತ್ರಿಯನ್ನಾಗಿ ಮಾಡಬೇಕು ಎಂದು ಶಿವಸೇನಾ (ಶಿಂದೆ) ಕಾರ್ಯಕರ್ತರು ರಾಜ್ಯದ ದೇವಸ್ಥಾನಗಳಲ್ಲಿ ಪೂಜೆ ನೆರವೇರಿಸಿದ್ದರು. 'ಏಕನಾಥ ಹೈ ತೋ ಸೇಫ್ ಹೈ' ಎಂಬ ಘೋಷಣೆಗಳನ್ನು ಕೂಗಿದ್ದರು. ಇದು, ಶಿಂದೆ ಅವರೇ ಮುಂದಿನ ಮುಖ್ಯಮಂತ್ರಿ ಎಂಬಂತೆ ಬಿಂಬಿಸುವ ಪ್ರಯತ್ನ ಎಂದೇ ಅರ್ಥೈಸಲಾಗಿತ್ತು. ಆದರೆ, ಈ ಬೆಳವಣಿಗೆ ಬೆನ್ನಲ್ಲೇ, ಶಿಂದೆ ಅವರು ಸುದ್ದಿಗೋಷ್ಠಿ ನಡೆಸಿ ತಮ್ಮ ನಿಲುವನ್ನು ಸ್ಪಷ್ಟಪಡಿಸಿದ್ದಾರೆ.

ಮುಖ್ಯಮಂತ್ರಿ ಸ್ಥಾನಕ್ಕೆ ಬಿಜೆಪಿ ನಾಯಕ ದೇವೇಂದ್ರ ಫಡಣವೀಸ್ ಅವರ ಹೆಸರು ಮುಂಚೂಣಿಯಲ್ಲಿದೆ. ಬಿಜೆಪಿಗೆ ಪ್ರಚಂಡ ಗೆಲುವು ಸಿಕ್ಕ ನಂತರ, ಪಕ್ಷದ ರಾಜ್ಯ ಘಟಕ ಕೂಡ ಫಡಣವೀಸ್ ಬೆಂಬಲಕ್ಕೆ ನಿಂತಿದೆ.

ಶಿವಸೇನಾ ಸಂಸದರಿಂದ ಶಾ ಭೇಟಿ

ನವದೆಹಲಿ: ಮಹಾರಾಷ್ಟ್ರದ ನೂತನ ಮುಖ್ಯಮಂತ್ರಿ ವಿಚಾರದಲ್ಲಿ ಬಿಜೆಪಿ ನಿರ್ಧಾರಕ್ಕೆ ಬೆಂಬಲಿಸುವುದಾಗಿ ಏಕನಾಥ ಶಿಂದೆ ಮುಂಬೈನಲ್ಲಿ ಘೋಷಿಸಿದರೆ, ಇನ್ನೊಂದೆಡೆ ಪಕ್ಷದ ಸಂಸದರ ನಿಯೋಗ ನವದೆಹಲಿಯಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಬುಧವಾರ ಭೇಟಿ ಮಾಡಿದೆ.

ಕೇಂದ್ರ ಸಚಿವ ಪ್ರತಾಪ್‌ರಾವ್ ಜಾಧವ, ಸಂಸದರಾದ ನರೇಶ್ ಮ್ಹಾಸ್ಕೆ, ರವೀಂದ್ರ ವಾಯ್ಕರ್, ಸಾಂದೀಪನ್ ಭೂಮರೆ, ಶ್ರೀರಂಗ ಅಪ್ಪ ಬಾರ್ನೆ, ಧೈರ್ಯಶೀಲ ಮಾನೆ, ರಾಜ್ಯಸಭಾ ಸದಸ್ಯರಾದ ಮಿಲಿಂದ್ ದೇವ್ರಾ, ಮಾಜಿ ಸಂಸದ ರಾಹುಲ್ ಶೇವಳೆ ನಿಯೋಗದಲ್ಲಿದ್ದರು.

'ವಿಧಾನಸಭೆ ಚುನಾವಣೆಯಲ್ಲಿ ಪಕ್ಷದ ಗೆಲುವಿಗೆ ಬಿಜೆಪಿ ಬಹಳ ಸಹಾಯ ಮಾಡಿದೆ. ಈ ಕುರಿತು ಸಚಿವ ಅಮಿತ್ ಶಾ ಅವರಿಗೆ ಕೃತಜ್ಞತೆ ಸಲ್ಲಿಸಲು ಅವರನ್ನು ಭೇಟಿ ಮಾಡಿದ್ದೆವು' ಎಂದು ಸಂಸದ ಧೈರ್ಯಶೀಲ ಮಾನೆ, ನಂತರ ಸುದ್ದಿಗಾರರಿಗೆ ತಿಳಿಸಿದರು.

ಕೇಂದ್ರದಿಂದ 'ಬಾಲ್ಯ ವಿವಾಹ ಮುಕ್ತ ಭಾರತ' ಅಭಿಯಾನ

'ಪ್ರತಿ ಐದರಲ್ಲಿ ಒಂದು ಬಾಲ್ಯ ವಿವಾಹ'

ನವದೆಹಲಿ (ಪಿಟಿಐ): ದೇಶದಲ್ಲಿ ಕಳೆದ ಒಂದು ವರ್ಷದಲ್ಲಿ ಎರಡು ಲಕ್ಷ ಬಾಲ್ಯ ವಿವಾಹಗಳನ್ನು ತಡೆಯಲು ಸಾಧ್ಯವಾಗಿದೆ. ಆದರೆ, ವಿವಾಹವಾಗುತ್ತಿರುವ ಪ್ರತಿ ಐವರು ಯುವತಿಯರಲ್ಲಿ ಒಬ್ಬರು 18ಕ್ಕಿಂತ ಕಡಿಮೆ ವಯಸ್ಸಿನವರು ಎಂಬುದು ಕಳವಳಕಾರಿಯಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಅನ್ನಪೂರ್ಣಾ ದೇವಿ ಬುಧವಾರ ತಿಳಿಸಿದರು.

ಈ ಪಿಡುಗನ್ನು ನಾವು ಪೂರ್ಣವಾಗಿ ನಿವಾರಿಸಲು ಶ್ರಮಿಸಬೇಕಿದೆ ಎಂದು ಅವರು ಹೇಳಿದರು

'ಬಾಲ್ಯ ವಿವಾಹ ಮುಕ್ತ ಭಾರತ' ಅಭಿಯಾನ ಉದ್ಘಾಟಿಸಿ ಮಾತನಾಡಿದ ಅವರು, ಬಾಲ್ಯ ವಿವಾಹಗಳನ್ನು ತಡೆಗಟ್ಟಲು ಮತ್ತು 2029ರೊಳಗೆ ಅದರ ಅನುಪಾತವನ್ನು ಶೇ 5ಕ್ಕೆ ತರುವ ಗುರಿಯನ್ನಿಟ್ಟುಕೊಂಡು ದೇಶದ ಎಲ್ಲ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ಕ್ರಿಯಾ ಯೋಜನೆ ರೂಪಿಸಬೇಕಿದೆ ಎಂದು ಸಚಿವರು ಸೂಚಿಸಿದರು.

'ಬಾಲ್ಯ ವಿವಾಹ ಮುಕ್ತ ಭಾರತ' ಅಭಿಯಾನವು ಪ್ರಮುಖವಾಗಿ ಪಶ್ಚಿಮ ಬಂಗಾಳ, ಬಿಹಾರ, ಜಾರ್ಖಂಡ್, ರಾಜಸ್ಥಾನ, ತ್ರಿಪುರಾ, ಅಸ್ಸಾಂ ಮತ್ತು ಆಂಧ್ರ ಪ್ರದೇಶ ರಾಜ್ಯಗಳು ಹಾಗೂ ರಾಷ್ಟ್ರಮಟ್ಟಕ್ಕಿಂತಲೂ ಹೆಚ್ಚಿನ ಬಾಲ್ಯ ವಿವಾಹ ದರ ಹೊಂದಿರುವ ದೇಶದ 300 ಜಿಲ್ಲೆಗಳನ್ನು ಪ್ರಮುಖವಾಗಿ ಗಮನದಲ್ಲಿರಿಸಿಕೊಂಡಿದೆ.

ಬಾಲ್ಯ ವಿವಾಹವು ಮಾನವ ಹಕ್ಕಿನ ತೀವ್ರ ಉಲ್ಲಂಘನೆಯಾಗಿದ್ದು, ಕಾನೂನು ಪ್ರಕಾರ ಕ್ರಿಮಿನಲ್ ಅಪರಾಧ ಆಗಿದೆ ಎಂದು ಅವರು ಹೇಳಿದರು. ವಿಶ್ವಸಂಸ್ಥೆಯ ವರದಿ ಪ್ರಕಾರ ದಕ್ಷಿಣ ಏಷ್ಯಾ ದೇಶಗಳಲ್ಲಿ ಬಾಲ್ಯ ವಿವಾಹ ಪ್ರಮಾಣ ಗಮನಾರ್ಹ ಪ್ರಮಾಣದಲ್ಲಿ ಇಳಿದಿದೆ. ಇದರಲ್ಲಿ ಭಾರತದ್ದು ನಿರ್ಣಾಯಕ ಪಾತ್ರವಾಗಿದೆ ಎಂದು ಅವರು ಹೇಳಿದರು.

2047ರಲ್ಲಿ ಭಾರತವನ್ನು ಅಭಿವೃದ್ಧಿ ಹೊಂದಿದ ದೇಶವನ್ನಾಗಿಸುವ ಗುರಿಯೊಂದಿಗೆ ಈ ಅಭಿಯಾನವೂ ಕಾರ್ಯ ನಿರ್ವಹಿಸುತ್ತದೆ. ದೇಶ ಕಟ್ಟುವ ಕಾಯಕದಲ್ಲಿ ಮಹಿಳೆಯರು ಮತ್ತು ಹೆಣ್ಣು ಮಕ್ಕಳು ಪೂರ್ಣ ಪ್ರಮಾಣದಲ್ಲಿ ತೊಡಗಿಸಿಕೊಳ್ಳುವ ಅಗತ್ಯವಿದೆ ಎಂದು ಅವರು ತಿಳಿಸಿದರು.

ಈ ಅಭಿಯಾನದ ಭಾಗವಾಗಿ ಬಾಲ್ಯ ವಿವಾಹ ಮುಕ್ತ ಭಾರತ್ ಪೋರ್ಟಲ್ ಅನ್ನು ಪ್ರಾರಂಭಿಸಲಾಗುವುದು. ಆ ಮೂಲಕ ಜಾಗೃತಿ, ಪ್ರಕರಣಗಳ ವರದಿ ಮತ್ತು ಪ್ರಗತಿ ಕುರಿತು ಮೇಲ್ವಿಚಾರಣೆ ವಹಿಸಲಾಗುವುದು ಎಂದು ಅವರು ವಿವರಿಸಿದರು.

ಕ್ರಿಮಿನಲ್ ಪ್ರಕರಣ ರದ್ದುಪಡಿಸಬಾರದು, ಅನಿಷ್ಟ ಪದ್ಧತಿ ತಡೆಗೆ ಕಠಿಣ ಕ್ರಮ ಅಗತ್ಯ: ಹೈಕೋರ್ಟ್

ಬಾಲ್ಯವಿವಾಹ: ಪೋಷಕರನ್ನು ಹೊಣೆಯಾಗಿಸಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹೆಣ್ಣುಮಕ್ಕಳಿಗೆ 18 ವರ್ಷ ತುಂಬುವ ಮುನ್ನವೇ ಮದುವೆ ಮಾಡುವ ಪರಿಪಾಟಕ್ಕೆ ಪೋಷಕರೇ ಕಾರಣ' ಎಂದು ಕಿಡಿ ಕಾರಿರುವ ಹೈಕೋರ್ಟ್, 'ಇಂತಹ ಪ್ರಕರಣಗಳಲ್ಲಿ ಪೋಷಕರ ವಿರುದ್ಧದ ಕ್ರಿಮಿನಲ್ ಪ್ರಕರಣ ರದ್ದುಪಡಿಸಲೇ ಬಾರದು. ಆಗಷ್ಟೇ, ಈ ಅನಿಷ್ಟ ಪದ್ಧತಿಯ ಆಚರಣೆ ಸ್ಥಗಿತಗೊಳ್ಳುತ್ತದೆ' ಎಂದು ಮೌಖಿಕವಾಗಿ ಕಿಡಿ ಕಾರಿದೆ.

ಬಾಲಕಿಯನ್ನು ಮದುವೆಯಾದ ಕಾರಣಕ್ಕೆ ಆಕೆಯ ಪತಿ ಹಾಗೂ ಪೋಷಕರ ವಿರುದ್ಧ, ಪೋಕ್ಸೊ (ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ ಕಾಯ್ದೆ-2012) ಹಾಗೂ ಬಾಲ್ಯ ವಿವಾಹ ತಡೆ ಕಾಯ್ದೆ-2006ರ ವಿವಿಧ ಕಲಂಗಳಡಿ ದಾಖಲಾಗಿರುವ ಕ್ರಿಮಿನಲ್ ಪ್ರಕರಣವೊಂದನ್ನು ರದ್ದುಪಡಿಸುವಂತೆ ಕೋರಲಾಗಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲರು, 'ಈ ಪ್ರಕರಣದಲ್ಲಿ ಪೋಷಕರನ್ನು ಆರೋಪ ಮುಕ್ತಗೊಳಿಸಬೇಕು' ಎಂಬ ಮನವಿಯನ್ನು ತಳ್ಳಿ ಹಾಕಿದ

ನ್ಯಾಯಪೀಠ, 'ಹೆಣ್ಣುಮಕ್ಕಳಿಗೆ 18 ವರ್ಷ ತುಂಬುವ ಮುನ್ನವೇ ಮದುವೆಯಾಗುವಂತೆ ಏಕೆ ಬಲವಂತ ಮಾಡಬೇಕು? ಪೋಷಕರ ಈ ನಡೆಯನ್ನು ಸಮರ್ಥಿಸಲು ಸಾಧ್ಯವೇ ಇಲ್ಲ. ಇಂತಹ ಪೋಷಕರ ವಿರುದ್ಧ ದಂಡನಾ ಕ್ರಮಗಳನ್ನು ಜರುಗಿಸಲು ಇದು ಸಕಾಲ' ಎಂಬ ಅಭಿಪ್ರಾಯ ವ್ಯಕ್ತಪಡಿಸಿತು.

'ಮತ್ತೊಂದು ಪ್ರಕರಣದಲ್ಲಿ ಬಾಲಕಿಯೊಬ್ಬಳು ತನಗೆ 18 ವರ್ಷ ತುಂಬಿಲ್ಲ, ಮದುವೆ ಮಾಡಬೇಡಿ ಎಂದು ಕೇಳಿಕೊಂಡರೂ ಪೋಷಕರು ಮದುವೆ ಮಾಡಿದ್ದಾರೆ. ಇಂತಹ ಪ್ರಕರಣಗಳಿಗೆ ಪೋಷಕರೇ ಜವಾಬ್ದಾರಿ. ಹಾಗಾಗಿ, ಪೋಷಕರನ್ನು ಇಂತಹ ವಿಷಯಗಳಲ್ಲಿ ಸಂವೇದನಶೀಲರನ್ನಾಗಿ ಮಾಡಬೇಕಿದೆ' ಎಂದು ನ್ಯಾಯಪೀಠ ಹೇಳಿತು.

ಲಾಕಪ್‌ಡೆತ್: ನಾಲ್ವರು ಕಾನ್‌ಸ್ಟೆಬಲ್‌ಗಳಿಗೆ ಜೈಲು

ಬೆಂಗಳೂರು: ಎಂಟು ವರ್ಷದ ಹಿಂದೆ ಜೀವನ್ ಬಿಮಾನಗರ ಪೊಲೀಸ್ ಠಾಣೆಯಲ್ಲಿ ನಡೆದಿದ್ದ ಮಹೇಂದ್ರ ರಾಥೋಡ್ ಅವರ ಲಾಕಪ್‌ಡೆತ್ ಪ್ರಕರಣದಲ್ಲಿ ನಾಲ್ವರು ಪೊಲೀಸ್ ಕಾನ್‌ಸ್ಟೆಬಲ್‌ಗಳಿಗೆ 51ನೇ ಹೆಚ್ಚುವರಿ ಜಿಲ್ಲಾ ಹಾಗೂ ಸೆಷನ್ಸ್ ನ್ಯಾಯಾಲಯ (ಸಿ.ಐ.ಡಿ ವಿಶೇಷ ನ್ಯಾಯಾಲಯ) ಏಳು ವರ್ಷ ಜೈಲು ಶಿಕ್ಷೆ ಹಾಗೂ ದಂಡ ವಿಧಿಸಿ ಆದೇಶಿಸಿದೆ.

ಹೆಡ್ ಕಾನ್‌ಸ್ಟೆಬಲ್ ಏಜಾಜ್ ಖಾನ್ (ಹಾಲಿ ಕೆಲಸ ಹಲಸೂರು ಸಂಚಾರ ಠಾಣೆ), ಕಾನ್‌ಸ್ಟೆಬಲ್‌ಗಳಾದ ಕೇಶವಮೂರ್ತಿ (ರಾಮಮೂರ್ತಿ ನಗರ ಪೊಲೀಸ್ ಠಾಣೆ), ಮೋಹನ್ ರಾಮ್ (ಇಂದಿರಾನಗರ ಸಂಚಾರ ಠಾಣೆ), ಸಿದ್ದಪ್ಪ ಬೊಮ್ಮನಹಳ್ಳಿ (ಇಂದಿರಾನಗರ ಪೊಲೀಸ್ ಠಾಣೆ) ಅವರು ಶಿಕ್ಷೆಗೆ ಒಳಗಾದವರು.

ಲಾಕಪ್‌ಡೆತ್ ನಡೆದಾಗ ನಾಲ್ವರೂ ಜೀವನ್ ಬಿಮಾನಗರ ಪೊಲೀಸ್ ಠಾಣೆಯ ಅಪರಾಧ ಪತ್ತೆ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದರು.

2016ರಲ್ಲಿ ಜೀವನ್ ಬಿಮಾ ನಗರ ಠಾಣೆಯಲ್ಲಿ ಕಳ್ಳತನ ಪ್ರಕರಣ ದಾಖಲಾಗಿತ್ತು. ಕಳ್ಳತನ ನಡೆಸಿದ ಅನುಮಾನದ ಮೇಲೆ ಮಹೇಂದ್ರ ರಾಥೋಡ್ ಅವರನ್ನು ನಾಲ್ವರು ಕಾನ್‌ಸ್ಟೆಬಲ್‌ಗಳು ಠಾಣೆಗೆ ಕರೆ ತಂದಿದ್ದರು. ವಿಚಾರಣೆ ವೇಳೆ ದೈಹಿಕ ಹಲ್ಲೆ ನಡೆಸಿದ್ದರಿಂದ ಪೊಲೀಸ್ ವಶದಲ್ಲಿದ್ದಾಗಲೇ ಮಹೇಂದ್ರ ರಾಥೋಡ್ ಅವರು ಮೃತಪಟ್ಟಿದ್ದರು. ನಂತರ ಪ್ರಕರಣದ ತನಿಖೆಯನ್ನು ಸಿಐಡಿಗೆ ವಹಿಸಲಾಗಿತ್ತು.

ಸಿಐಡಿ ತನಿಖಾಧಿಕಾರಿ, ಅಂದಿನ ಡಿವೈಎಸ್‌ಪಿ ಬಿ.ಎಸ್.ಶ್ರೀನಿವಾಸ್ ಅವರು ಪ್ರಕರಣದ ತನಿಖೆ ನಡೆಸಿ 1ನೇ ಎಸಿಎಂಎಂ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

ಕೊಲೆ ಮಾಡಿರುವ ಆರೋಪ ವಿಚಾರಣೆಯಲ್ಲಿ ಸಾಬೀತಾಗಿದ್ದು, ಈ ಅಪರಾಧಕ್ಕಾಗಿ ಏಳು ವರ್ಷ ಶಿಕ್ಷೆ ಹಾಗೂ ₹30 ಸಾವಿರ ದಂಡ, ಉದ್ದೇಶಪೂರ್ವಕ ಹಲ್ಲೆ ನಡೆಸಿರುವುದಕ್ಕಾಗಿ ಅಪರಾಧಕ್ಕಾಗಿ ಐದು ವರ್ಷ ಶಿಕ್ಷೆ ಹಾಗೂ ₹25 ಸಾವಿರ ದಂಡ ವಿಧಿಸಿ ಸಿಐಡಿ ಪ್ರಕರಣಗಳ ವಿಶೇಷ ನ್ಯಾಯಾಲಯ ಆದೇಶಿಸಿದೆ. ಸರ್ಕಾರಿ ವಕೀಲರಾದ ಕಷ್ಣವೇಣಿ ಪ್ರಾಸಿಕ್ಯೂಷನ್ ಪರ ವಾದ ಮಂಡಿಸಿದ್ದರು.

ಮಹೇಂದ್ರ ರಾಥೋಡ್ ಅವರಿಗೆ ಲಾಠಿ ಹಾಗೂ ರೋಲರ್‌ಗಳಿಂದ ಹೊಡೆದ ಪರಿಣಾಮ ಸಾವು ಸಂಭವಿಸಿರುವ ಸಾಧ್ಯತೆ ಇದೆ ಎಂದು ದೂರು ನೀಡಲಾಗಿತ್ತು. ಆ ದೂರು ಆಧರಿಸಿ ತನಿಖೆ ನಡೆಸಲಾಗಿತ್ತು.

ದೇಹದ ಒಳಗಡೆ ಪ್ರಮುಖ ಅಂಗಗಳಿಗೆ ರಕ್ತದ ಮೂಲಕ ಪೂರೈಕೆಯಾಗುವ ಆಮ್ಲಜನಕದ ಕೊರತೆಯ ಕಾರಣದಿಂದ ಸಾವು ಸಂಭವಿಸಿದೆ ಎಂಬುದಾಗಿ ಮರಣೋತ್ತರ ಪರೀಕ್ಷೆ ನಡೆಸಿದ್ದ ವೈದ್ಯರು ವರದಿ ನೀಡಿದ್ದರು. ತನಿಖಾ ಕಾಲದಲ್ಲಿ ಸಂಗ್ರಹಿಸಿದ ದಾಖಲೆಗಳು ಹಾಗೂ ವೈದ್ಯಕೀಯ ವರದಿಯಿಂದ ಆರೋಪಿಗಳು ಅಪರಾಧ ಎಸಗಿರುವುದು ಸಾಬೀತಾಗಿದೆ ಎಂದು ದೋಷಾರೋಪ ಪಟ್ಟಿಯಲ್ಲಿ ಉಲ್ಲೇಖಿಸಲಾಗಿತ್ತು.

ಕೋರ್ಟ್ ಮೆಟ್ಟಿಲೇರಿದ ಕೆಸರೆ ಭೂಮಿ ವಿವಾದ

ಪ್ರಜಾವಾಣಿ ವಾರ್ತೆ

ಮೈಸೂರು: ತಾಲ್ಲೂಕಿನ ಕೆಸರೆ ಗ್ರಾಮದ ಸರ್ವೆ ಸಂಖ್ಯೆ 464ರ ಭೂಮಾಲೀಕತ್ವದ ವಿವಾದವು ಇಲ್ಲಿನ ನ್ಯಾಯಾಲಯದ ಮೆಟ್ಟಿಲೇರಿದ್ದು, ಮೂಲ ಮಾಲೀಕರಾದ ಜವರ ಉರುಫ್ ನಿಂಗ ಅವರ ಮೊಮ್ಮಗಳು ಜಮುನಾ ದಾವೆ ಹೂಡಿದ್ದಾರೆ.

'ಕುಟುಂಬದ ವಂಶವೃಕ್ಷದಿಂದ ನನ್ನನ್ನು ಕೈಬಿಟ್ಟಿದ್ದು, ನನಗೆ ತಿಳಿಸದೆಯೇ ಜಮೀನು ಮಾರಲಾಗಿದೆ. ಮಾರಾಟದಲ್ಲಿ ಪಾಲು ನೀಡಿಲ್ಲ' ಎಂದು ಆಕ್ಷೇಪಿಸಿ ಅವರು ಅಕ್ಟೋಬರ್ 21ರಂದು ಇಲ್ಲಿನ 7ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯದ ಮೊರೆ ಹೋಗಿದ್ದರು. 'ಪ್ರಕರಣವು ಇತ್ಯರ್ಥಗೊಳ್ಳುವವರೆಗೆ ಜಮೀನಿಗೆ ಸಂಬಂಧಿಸಿ ಯಾವುದೇ ನಿರ್ಧಾರ ಕೈಗೊಳ್ಳದಂತೆ ಏಕಪಕ್ಷೀಯ ತಾತ್ಕಾಲಿಕ ಪ್ರತಿಬಂಧಕ ಆದೇಶ ನೀಡಬೇಕು' ಎಂದು ಕೋರಿದ್ದರು.

ನ್ಯಾಯಾಲಯವು ತಡೆಯಾಜ್ಞೆ ನೀಡಲು ನಿರಾಕರಿಸಿದ್ದು, ಸಿದ್ದರಾಮಯ್ಯ ಪತ್ನಿ ಬಿ.ಎಂ. ಪಾರ್ವತಿ, ಬಾಮೈದ ಬಿ.ಎಂ. ಮಲ್ಲಿಕಾರ್ಜುನ ಸ್ವಾಮಿ, ಮೈಸೂರು ಜಿಲ್ಲಾಧಿಕಾರಿ, ಮುಡಾ ಆಯುಕ್ತರು ಸೇರಿ 12 ಪ್ರತಿವಾದಿಗಳಿಗೆ ನವೆಂಬರ್ 20ರಂದು ಸಮನ್ಸ್ ಮತ್ತು ತುರ್ತು ನೋಟಿಸ್ ಜಾರಿಗೊಳಿಸಿ, 2025ರ ಜನವರಿ 10ಕ್ಕೆ ವಿಚಾರಣೆ ಮುಂದೂಡಿದೆ.

ವಿವರ: ಜಮೀನಿನ ಮೂಲ ಮಾಲೀಕ ಜವರ ಅವರಿಗೆ ಮೈಲಾರಯ್ಯ, ಮಲ್ಲಯ್ಯ ಮತ್ತು ದೇವರಾಜು ಎಂಬ ಪುತ್ರರಿದ್ದು, ಜಮುನಾ ಅವರು ಮೈಲಾರಯ್ಯ ಅವರ ಪುತ್ರಿ.

ಸರ್ವೆ ಸಂಖ್ಯೆ 464ರಲ್ಲಿ ಈ ಕುಟುಂಬಕ್ಕೆ ಸೇರಿದ್ದ 3 ಎಕರೆ 16 ಗುಂಟೆ ಜಮೀನನ್ನು, ಮಾಲೀಕ ಜೆ. ದೇವರಾಜು 2004ರಲ್ಲಿ ಬಿ.ಎಂ. ಮಲ್ಲಿಕಾರ್ಜುನ ಸ್ವಾಮಿ ಅವರಿಗೆ ಮಾರಾಟ ಮಾಡಿದ್ದರು. 2010ರಲ್ಲಿ ಮಲ್ಲಿಕಾರ್ಜುನಸ್ವಾಮಿ ಅದನ್ನೇ ಬಿ.ಎಂ. ಪಾರ್ವತಿ ಅವರಿಗೆ ದಾನ ಪತ್ರದ ರೂಪದಲ್ಲಿ ವರ್ಗಾಯಿಸಿದ್ದರು.

ಈ ನಡುವೆ, ಜಮೀನನ್ನು ಮುಡಾ ವಶಪಡಿಸಿಕೊಂಡು ಬಡಾವಣೆ ನಿರ್ಮಿಸಿದ್ದು, ಪರಿಹಾರವಾಗಿ ಪಾರ್ವತಿ ಅವರಿಗೆ ಒಟ್ಟು 38 ಸಾವಿರ ಚದರ ಅಡಿ ಅಳತೆಯ 14 ನಿವೇಶನಗಳನ್ನು ಮಂಜೂರು ಮಾಡಿತ್ತು. ವಿವಾದದ ಬಳಿಕ 14 ಬದಲಿ ನಿವೇಶನಗಳನ್ನು ಪಾರ್ವತಿ ಮುಡಾಕ್ಕೆ ವಾಪಸ್ ನೀಡಿದ್ದರು.

'ಪೇಜಾವರ ಶ್ರೀ ವಿರುದ್ಧ ದೇಶದ್ರೋಹ ಪ್ರಕರಣ ದಾಖಲಿಸಿ'

ಪ್ರಜಾವಾಣಿ ವಾರ್ತೆ

ಗದಗ: 'ನಮ್ಮನ್ನು ಗೌರವಿಸುವ ಸಂವಿಧಾನ ಬರಬೇಕು' ಎಂಬ ಹೇಳಿಕೆ ನೀಡಿರುವ ಉಡುಪಿ ಪೇಜಾವರ ಮಠದ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ವಿರುದ್ಧ ರಾಜ್ಯ ಸರ್ಕಾರ ದೇಶದ್ರೋಹ ಪ್ರಕರಣ ದಾಖಲಿಸಬೇಕು' ಎಂದು ಸಾಹಿತಿ ಬಸವರಾಜ ಸೂಳಿಭಾವಿ ಆಗ್ರಹಿಸಿದರು.

ಬಸವರಾಜ ಸೂಳಿಭಾವಿ

'ಧಾರ್ಮಿಕ ಸಂಸ್ಥೆಗಳು ದೇಶವನ್ನು ಛಿದ್ರಗೊಳಿಸಿದರೆ, ಎಲ್ಲವನ್ನೂ ಒಟ್ಟುಗೂಡಿಸಿದ್ದು ಸಂವಿಧಾನ. ಸಂವಿಧಾನದಂತೆ ಎಲ್ಲರೂ ಸಮಾನರು ಎಂದು ಒಪ್ಪಲು ಸ್ವಾಮೀಜಿ ಸಿದ್ಧರಿಲ್ಲ. ಅದಕ್ಕೇಹೀಗೆ ಹೇಳಿಕೆ ನೀಡಿದ್ದಾರೆ' ಎಂದು ಬುಧವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'ಆರ್‌ಎಸ್‌ಎಸ್, ವಿಎಚ್‌ಪಿ ಗುರಿಯನ್ನು ಸ್ವಾಮೀಜಿ ಮೂಲಕ ಹೇಳಿಸುವ ಯತ್ನ ನಡೆದಿದೆ' ಎಂದರು.

ಬದುಕಿನ ಮೌಲ್ಯಗಳನ್ನು ಒಳಗೊಂಡು ಸಂವಿಧಾನ ರಚನೆಯಾಗಿದೆ. ಭಾರತ ಬಹುತ್ವದ ರಾಷ್ಟ್ರ. ಹಿಂದೂರಾಷ್ಟ್ರ ಮಾಡಬೇಕು ಎನ್ನುತ್ತಿದ್ದಾರೆ. ಅದು ನಡೆಯದು

ಡಾ. ಎಚ್.ಸಿ.ಮಹದೇವಪ್ಪ, ಸಚಿವ

ಮುಸ್ಲಿಮರಿಗೆ ಮತದಾನದ ಹಕ್ಕು ನೀಡಬಾರದೆಂಬ ಹೇಳಿಕೆಗೆ ವಿಷಾದ

ಬಾಯಿ ತಪ್ಪಿ ಹೇಳಿದ್ದೆ: ಸ್ವಾಮೀಜಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಭಾರತೀಯ ಕಿಸಾನ್ ಸಂಘದ ನೇತೃತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ ಬಾಯಿತಪ್ಪಿನಿಂದ ಮುಸಲ್ಮಾನರಿಗೆ ಮತದಾನದ ಹಕ್ಕು ರದ್ದು ಮಾಡಬೇಕು' ಎಂದಿದ್ದೆ. ಇದರಿಂದ ಮುಸಲ್ಮಾನ ಸಹೋದರರಿಗೆ ಬೇಸರವಾಗಿದ್ದರೆ, ಅದಕ್ಕಾಗಿ ವಿಷಾದಿಸುತ್ತೇನೆ' ಎಂದು ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷ ಕುಮಾರ ಚಂದ್ರಶೇಖರ ನಾಥ ಸ್ವಾಮೀಜಿ ತಿಳಿಸಿದ್ದಾರೆ.

ಚಂದ್ರಶೇಖರನಾಥ

ಈ ಕುರಿತು ಬುಧವಾರ ಪತ್ರಿಕಾ ಹೇಳಿಕೆ ಮೂಲಕ ಸ್ಪಷ್ಟನೆ ನೀಡಿರುವ ಅವರು, 'ಮುಸಲ್ಮಾನರೂ ಈ ದೇಶದ ಪ್ರಜೆಗಳೇ. ಎಲ್ಲರಂತೆ ಅವರಿಗೂ ಮತದಾನದ ಹಕ್ಕು ಇರುತ್ತದೆ. ಬಾಯಿ ತಪ್ಪಿ ಈ ರೀತಿ ಮಾತನಾಡಿದ್ದಕ್ಕೆ ವಿಷಾದಿಸುತ್ತೇನೆ. ಈ ಪ್ರಕರಣವನ್ನು ಇಲ್ಲಿಗೆ ಮುಕ್ತಾಯ ಮಾಡುವಂತೆ ಮನವಿ ಮಾಡುತ್ತೇನೆ' ಎಂದಿದ್ದಾರೆ.

'ವಕ್ಫ್ ಮಂಡಳಿ, ನೂರಾರು ವರ್ಷಗಳಿಂದ ಉಳುಮೆ ಮಾಡಿಕೊಂಡು ಜೀವನ ನಡೆಸುತ್ತಿದ್ದ ರೈತರನ್ನು ಒಕ್ಕಲೆಬ್ಬಿಸುತ್ತಿದೆ ಎಂದು ಸುದ್ದಿ ಮಾಧ್ಯಮಗಳಲ್ಲಿ ಗಮನಿಸಿದ್ದೇನೆ. ರೈತರನ್ನು ಒಕ್ಕಲೆಬ್ಬಿಸುವ ಯಾವುದೇ ಸಂಸ್ಥೆಯ ನಡೆಯನ್ನು ನಾನು ಒಪ್ಪುವುದಿಲ್ಲ. ಒಕ್ಕಲಿಗರು ಧರ್ಮ ಸಹಿಷ್ಣುಗಳು, ಎಲ್ಲ ಧರ್ಮದವರನ್ನೂ ಸಮಾನವಾಗಿ ನೋಡುತ್ತಿದ್ದೇವೆ. ಮುಸ್ಲಿಂ ಸಮುದಾಯದವರೂ ಮಠದೊಂದಿಗೆ ಸಂಪರ್ಕ ಇಟ್ಟುಕೊಂಡಿದ್ದಾರೆ. ನಾನು ಕೂಡ ಮುಸ್ಲಿಂ ಸಮುದಾಯದ ಮದುವೆ ಇನ್ನಿತರ ಶುಭ ಸಮಾರಂಭಗಳಲ್ಲಿ ಭಾಗಿಯಾಗಿದ್ದೇನೆ. ಆದ್ದರಿಂದ ಜನಾಂಗದ ಬಗ್ಗೆ ಯಾವುದೇ ಅಸಹಿಷ್ಣುತೆ ಇಲ್ಲ' ಎಂದು ಸ್ವಾಮೀಜಿ ತಿಳಿಸಿದ್ದಾರೆ.

ಸ್ವಾಮೀಜಿಗಳಿಗೆ ರಾಜಕಾರಣ ಬೇಡ: ಡಿಕೆಶಿ

'ಸ್ವಾಮೀಜಿಗಳು ರಾಜಕಾರಣದಿಂದ ದೂರ ಇರಬೇಕು. ವಿವಾದಾತ್ಮಕ ಹೇಳಿಕೆ ಕೊಟ್ಟು ದೇಶದಲ್ಲಿ ಅಶಾಂತಿ ಮೂಡಿಸುವ ಪ್ರಯತ್ನ ಮಾಡಬಾರದು' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮನವಿ ಮಾಡಿದರು.

ಮುಸ್ಲಿಮರಿಗೆ ಮತದಾನದ ಹಕ್ಕು ಇಲ್ಲದಂತೆ ಕಾನೂನು ಜಾರಿ ಮಾಡಬೇಕು ಎಂಬ ಕುಮಾರ ಚಂದ್ರಶೇಖರನಾಥ ಸ್ವಾಮೀಜಿ ಹೇಳಿಕೆ ಬಗ್ಗೆ ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ಶಿವಕುಮಾರ್, 'ಸಮಾಜದ ಶಾಂತಿ ಕೆಡಿಸುವ ಕೆಲಸವನ್ನು ಸ್ವಾಮೀಜಿಗಳು ಮಾಡಬಾರದು. ಮತದಾನ ಎಂಬುದು ಸಂವಿಧಾನದ ಮೂಲಕ ಈ ದೇಶದ ಪ್ರತಿಯೊಬ್ಬ ಪ್ರಜೆಗೂ ಬಂದಿರುವ ಹಕ್ಕು. ಇಲ್ಲಿ ಒಬ್ಬ ವ್ಯಕ್ತಿ ಜನಿಸಿದರೆ ಸಂವಿಧಾನದಿಂದ ಸಿಗುವ ಹಕ್ಕುಗಳಲ್ಲಿ ಇದು ಕೂಡ ಒಂದು' ಎಂದರು.

'ಮಠಾಧೀಶರು ಸಮಾಜದ ಸ್ವಾಸ್ಥ್ಯ ಕಾಪಾಡಲಿ'

ವಿಜಯಪುರ: 'ನಾಡಿನ ಮಠಾಧೀಶರು ಸಮಾಜದ ಸ್ವಾಸ್ಥ್ಯ ಕಾಪಾಡಬೇಕು. ಸಮಾಜಕ್ಕೆ ಮಾರ್ಗದರ್ಶನ ನೀಡಬೇಕೆ ಹೊರತು ಅನಗತ್ಯ ಮಾತನಾಡಿ, ಸಮಾಜದ ಸ್ವಾಸ್ಥ್ಯ ಹಾಳು ಮಾಡಬಾರದು' ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಹೇಳಿದರು.

'ಮುಸ್ಲಿಮರಿಗೆ ಮತದಾನದ ಹಕ್ಕು ಇಲ್ಲದಂತೆ ಮಾಡಬೇಕು' ಎಂದು ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದ ಚಂದ್ರಶೇಖರ ಸ್ವಾಮೀಜಿ ಹೇಳಿಕೆಗೆ ವಿಜಯಪುರದಲ್ಲಿ ಬುಧವಾರ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಸಚಿವರು, 'ಈ ದೇಶದ ಸಂವಿಧಾನದ ಪ್ರಕಾರ, ರಾಷ್ಟ್ರಪತಿಗೂ ಮತ್ತು ಜನಸಾಮಾನ್ಯರಿಗೂ ಒಂದೇ ಕಾನೂನು' ಎಂದರು.

'ಸಚಿವೆಯಾಗಿದ್ದರೂ ಪಂಚಮಸಾಲಿ ಮೀಸಲಾತಿ ಹೋರಾಟದಲ್ಲಿ ನಾನು ಈಗಲೂ ಸಕ್ರಿಯವಾಗಿರುವೆ. ಕೆಲಸದ ಒತ್ತಡದಿಂದ ಮೀಸಲಾತಿ ಹೋರಾಟದ ಒಂದೆರಡು ಸಭೆಗಳಲ್ಲಿ ಭಾಗವಹಿಸಲು ಆಗಿಲ್ಲ. ಆದರೆ, ನನ್ನ ತಮ್ಮ ಮತ್ತು ಮಗ ಪಾಲ್ಗೊಳ್ಳುತ್ತಿದ್ದಾರೆ' ಎಂದರು.

'ಮೀಸಲಾತಿ ಸಂಬಂಧ ಸಿದ್ದರಾಮಯ್ಯ ಅವರನ್ನು ಈಗಾಗಲೇ ಮೂರು ಬಾರಿ ಭೇಟಿ ಮಾಡಲಾಗಿದೆ. ನಮ್ಮ ಸಮಾಜಕ್ಕೆ ಖಂಡಿತವಾಗಿಯೂ ನ್ಯಾಯ ಸಿಗುತ್ತದೆ' ಎಂದರು.

ಸಚಿವ ಸಂಪುಟ ಪುನರ್ ರಚನೆ ಕುರಿತು ಪ್ರತಿಕ್ರಿಯಿಸಿದ ಅವರು, 'ಈ ಬಗ್ಗೆ ಮಾತನಾಡಲು ನಾನು ಪಕ್ಷದ ಅಧ್ಯಕ್ಷೆ ಅಲ್ಲ, ಹೈಕಮಾಂಡ್ ಕೂಡ ಅಲ್ಲ' ಎಂದರು.

ಸಾಂಸ್ಕೃತಿಕ ಮೆರವಣಿಗೆ

ವಿಜಯಪುರದ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ಅಂತರ್ ಮಹಿಳಾ ಮಹಾವಿದ್ಯಾಲಯಗಳ ಯುವಜನೋತ್ಸವದ ಪ್ರಯುಕ್ತ ಬುಧವಾರ ನಡೆದ ಸಾಂಸ್ಕೃತಿಕ ಮೆರವಣಿಗೆಯಲ್ಲಿ ವಿದ್ಯಾರ್ಥಿನಿಯರು ವೈವಿಧ್ಯಮಯ ಜಾನಪದ ವೇಷಭೂಷಣದಲ್ಲಿ ಪಾಲ್ಗೊಂಡರು

–ಪ್ರಜಾವಾಣಿ ಚಿತ್ರ: ಸಂಜೀವ ಅಕ್ಕಿ

ಬೆಳಕಾದ 'ಹೃದಯ ಜ್ಯೋತಿ'

ಒಂದನೇ ಪುಟದಿಂದ..

ಈ ಸಾವುಗಳನ್ನು ತಡೆಯಲು, ಯೋಜನೆಯಡಿ ಚಿಕಿತ್ಸೆಗೆ ಸರ್ಕಾರಿ ಆಸ್ಪತ್ರೆಗಳ ಜತೆಗೆ ಖಾಸಗಿ ಆಸ್ಪತ್ರೆಗಳನ್ನೂ ಒಳಗೊಂಡ ಜಾಲವನ್ನು ಇಲಾಖೆ ರೂಪಿಸಿದೆ. 'ಹಬ್ ಮತ್ತು ಸ್ಪೋಕ್' ಮಾದರಿಯಲ್ಲಿ ಚಿಕಿತ್ಸೆಗೆ ವ್ಯವಸ್ಥೆ ಮಾಡಲಾಗಿದೆ. ಯೋಜನೆಯಡಿ ಈವರೆಗೆ ಮೂರು ಲಕ್ಷಕ್ಕೂ ಅಧಿಕ ಮಂದಿಗೆ ಇಸಿಜಿ ಪರೀಕ್ಷೆ ಮಾಡಲಾಗಿದೆ.

ಅಗತ್ಯವಿದ್ದಲ್ಲಿ ಚುಚ್ಚುಮದ್ದು: ಯೋಜನೆಯ ಎರಡನೇ ಹಂತದಲ್ಲಿ 'ಟೆನೆಕ್ಟ್ ಪ್ಲಸ್' ಚುಚ್ಚು ಮದ್ದನ್ನು ತಾಲ್ಲೂಕು ಹಾಗೂ ಜಿಲ್ಲಾ ಆಸ್ಪತ್ರೆಗಳಿಗೆ ಪೂರೈಕೆ ಮಾಡಲಾಗಿದೆ. ಈ ಚುಚ್ಚುಮದ್ದಿನ ಒಂದು ಬಾಟಲಿಗೆ ₹30 ಸಾವಿರ ದರ ಇದೆ. ಹೃದಯಾಘಾತಕ್ಕೆ ಒಳಗಾದವರಿಗೆ ಇಸಿಜಿ ಪರೀಕ್ಷೆ ನಡೆಸಿ, ಚುಚ್ಚುಮದ್ದು ಅಗತ್ಯವಿದ್ದಲ್ಲಿ ಒದಗಿಸಲಾಗುತ್ತದೆ. ತೃತೀಯ ಹಂತದ ಚಿಕಿತ್ಸೆಗೆ 'ಹಬ್' ಆಸ್ಪತ್ರೆಗಳಾಗಿ ನೋಂದಾಯಿತವಾಗಿರುವ ಜಯದೇವ ಹೃದ್ರೋಗ ಸಂಸ್ಥೆ ಸೇರಿ ವಿವಿಧ ಸರ್ಕಾರಿ ಹಾಗೂ ಖಾಸಗಿ ಆಸ್ಪತ್ರೆಗಳಿಗೆ ರವಾನಿಸಲಾಗುತ್ತದೆ. ಯೋಜನೆಯಡಿ 5 ಸಾವಿರಕ್ಕೂ ಅಧಿಕ ತೀವ್ರ ಹೃದಯಾಘಾತದ ರೋಗಿಗಳನ್ನು ಪತ್ತೆ ಹಚ್ಚಿ, ಮೂರು ಸಾವಿರಕ್ಕೂ ಅಧಿಕ ರೋಗಿಗಳಿಗೆ ಯಶಸ್ವಿಯಾಗಿ ಚಿಕಿತ್ಸೆ ಒದಗಿಸಲಾಗಿದೆ.

'ಹೃದಯಾಘಾತಕ್ಕೆ ಒಳಗಾದವರಿಗೆ ಯೋಜನೆಯಡಿ ನೋಂದಾಯಿತವಾದ ತಾಲ್ಲೂಕು ಹಾಗೂ ಜಿಲ್ಲಾ ಆಸ್ಪತ್ರೆಗಳಲ್ಲಿ ತುರ್ತು ಚಿಕಿತ್ಸೆ ಒದಗಿಸಿ, ಹೃದಯದ ನಾಳದ ಬ್ಲಾಕ್ ತೆರವುಗೊಳಿಸಲು ಚುಚ್ಚುಮದ್ದನ್ನು ನೀಡಲಾಗುತ್ತದೆ. ಬಳಿಕ ಕ್ಯಾಥ್‌ಲ್ಯಾಬ್ ಇರುವ ಆಸ್ಪತ್ರೆಗಳಿಗೆ ಕಳಿಸಲಾಗುತ್ತದೆ. ಬಿಪಿಎಲ್ ಪಡಿತರ ಚೀಟಿ ಇದ್ದಲ್ಲಿ ಎಲ್ಲ ಚಿಕಿತ್ಸೆಯೂ ಉಚಿತವಾಗಿ ದೊರೆಯಲಿದೆ' ಎಂದು ಇಲಾಖೆಯ ಸಾಂಕ್ರಾಮಿಕ ವಲ್ಲದ-ರೋಗಗಳ ವಿಭಾಗದ ಉಪ ನಿರ್ದೇಶಕ ಡಾ.ಜಿ. ಶ್ರೀನಿವಾಸ್ ತಿಳಿಸಿದರು.

ಸಾರ್ವಜನಿಕ ಸ್ಥಳದಲ್ಲೂ ಚಿಕಿತ್ಸೆ

ಸಾರ್ವಜನಿಕ ಸ್ಥಳಗಳಲ್ಲಿ ಹೃದಯಾಘಾತದಿಂದ ಸಂಭವಿಸುವ ಮರಣ ಪ್ರಕರಣಗಳನ್ನು ತಡೆಯಲು ಇಲಾಖೆಯು 'ಆಟೊಮೇಟೆಡ್ ಎಕ್ಸ್‌ಟರ್ನಲ್ ಡಿಫೈಬ್ರಿಲ್ಲೇಟರ್ಸ್' (ಎಇಡಿ) ಸಾಧನಗಳನ್ನು ಅಳವಡಿಸಲು ಮುಂದಾಗಿದೆ. ಬಸ್ ನಿಲ್ದಾಣಗಳು, ಸರ್ಕಾರಿ ಕಚೇರಿಗಳು ಹಾಗೂ ರೈಲು ನಿಲ್ದಾಣಗಳಲ್ಲಿ ಈ ಸಾಧನಗಳನ್ನು ಅಳವಡಿಸಲಾಗುತ್ತದೆ. 37 ಎಇಡಿ ಸಾಧನಗಳ ಖರೀದಿಗೆ ಟೆಂಡರ್ ಕರೆಯಲಾಗಿದೆ. ಹೃದಯಾಘಾತ ಪ್ರಕರಣಗಳ ನಿರ್ವಹಣೆಗೆ ಜೀವರಕ್ಷಕ ಟ್ರಸ್ಟ್ ವತಿಯಿಂದ ವೈದ್ಯಕೀಯ ಸಿಬ್ಬಂದಿಗೆ ತರಬೇತಿ ನೀಡಲಾಗುತ್ತಿದೆ.

ವಕ್ಫ್ ಆಸ್ತಿ: ನೋಟಿಸ್ ಸರಮಾಲೆ

ಒಂದನೇ ಪುಟದಿಂದ...

2015ರಲ್ಲಿ ವಕ್ಫ್ ಆಸ್ತಿಗಳ ಎರಡನೇ ಭೂಮಾಪನ ಪ್ರಕ್ರಿಯೆ ಆರಂಭಿಸಿದ ನಂತರ, ಕಾಂಗ್ರೆಸ್ ಸರ್ಕಾರವೂ ನೂರಾರು ರೈತರು ಮತ್ತು ಭೂಮಾಲೀಕರಿಗೆ ನೋಟಿಸ್ ನೀಡಿತ್ತು. ವಕ್ಫ್ ಆಸ್ತಿಗಳ ಎರಡನೇ ಭೂಮಾಪನ ಪ್ರಕ್ರಿಯೆ 2019ರಲ್ಲಿ ಪೂರ್ಣಗೊಂಡಿತ್ತು. ರಾಜ್ಯದಾದ್ಯಂತ ಎಷ್ಟು ಆಸ್ತಿಗಳು ಒತ್ತುವರಿಯಾಗಿವೆ ಮತ್ತು ಒತ್ತುವರಿಯಾದ ಜಮೀನುಗಳ ವಿಸ್ತೀರ್ಣದ ನಿಖರ ಮಾಹಿತಿ ದೊರೆತಿತ್ತು. ಆಗ ಬಿಜೆಪಿ ನೇತೃತ್ವದಸರ್ಕಾರಅಧಿಕಾರಕ್ಕೆಬಂದಿತ್ತು. ಬಿಜೆಪಿಯ ಶಾಸಕ ಕುಮಾರ್ ಬಂಗಾರಪ್ಪ ಅವರು ರಾಜ್ಯ ವಿಧಾನಸಭೆಯ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತ ಕಲ್ಯಾಣ ಸಮಿತಿಯ ಅಧ್ಯಕ್ಷರಾಗಿದ್ದರು. ಕುಮಾರ್ ಬಂಗಾರಪ್ಪ ಅವರು ವಿಧಾನಮಂಡಲದಲ್ಲಿ ಮಂಡಿಸಿದ್ದ, ಸಮಿತಿಯ ಐದೂ ವರದಿಗಳಲ್ಲಿ, 'ಕಾನೂನು ರೀತ್ಯಾ ಕ್ರಮ ತೆಗೆದುಕೊಳ್ಳಬೇಕು.

ನೋಟಿಸ್ ಜಾರಿ ಮಾಡಿ ವಿವರಣೆ ಪಡೆಯುವ ಜತೆಗೆ ಅಗತ್ಯ ಪ್ರಕರಣಗಳಲ್ಲಿ ವಕ್ಫ್ ಆಸ್ತಿ ಮರುವಶಕ್ಕೆ ಪಡೆದುಕೊಳ್ಳಬೇಕು' ಎಂದು ಶಿಫಾರಸು ಮಾಡಲಾಗಿತ್ತು. ಇದರ ಪ್ರಕಾರ, ನೋಟಿಸ್ ನೀಡುವ ಕಾರ್ಯವನ್ನು ವಕ್ಫ್ ಮಂಡಳಿ ಮತ್ತೆ ಆರಂಭಿಸಿತ್ತು. 2019–2023ರ ಬಿಜೆಪಿ ಸರ್ಕಾರದ ಅವಧಿಯಲ್ಲಿ 1,800 ಕ್ಕೂ ಹೆಚ್ಚು ನೋಟಿಸ್ ನೀಡಲಾಗಿತ್ತು.

2023ರಲ್ಲಿ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಸರ್ಕಾರ ಮೊದಲ ಏಳು ತಿಂಗಳು ನೋಟಿಸ್ ನೀಡುವುದನ್ನು ಬಹುತೇಕ ನಿಲ್ಲಿಸಿತ್ತು. 2024ರ ಫೆಬ್ರುವರಿ ನಂತರ ನೂರಾರು ನೋಟಿಸ್ ನೀಡಿತು. ಒಟ್ಟು ಬಿಜೆಪಿ ಮತ್ತು ಕಾಂಗ್ರೆಸ್ ಅಧಿಕಾರದಲ್ಲಿ ಹಿಂದಿನ 16 ವರ್ಷಗಳಲ್ಲಿ 3,404 ನೋಟಿಸ್ ನೀಡಲಾಗಿದೆ. ಜೆಡಿಎಸ್–ಕಾಂಗ್ರೆಸ್ ಮೈತ್ರಿ ಆಡಳಿತದಲ್ಲಿ 114 ನೋಟಿಸ್ ನೀಡಲಾಗಿದೆ.

ಖಬರಸ್ಥಾನಕ್ಕೆ ಜಮೀನು: ವಿಧಾನ ಮಂಡಲ ಸಮಿತಿ ಶಿಫಾರಸು

'ರಾಜ್ಯದಲ್ಲಿ ಖಬರಸ್ಥಾನಗಳಿಗೆ ಬೇಡಿಕೆ ಇರುವ ಜಿಲ್ಲೆಗಳಲ್ಲಿ ಜಮೀನು ಗುರುತಿಸಿ, ಮಂಜೂರು ಮಾಡಲು ತುರ್ತು ಕ್ರಮ ತೆಗೆದುಕೊಳ್ಳಬೇಕು' ಎಂದು ಕುಮಾರ್ ಬಂಗಾರಪ್ಪ ಅಧ್ಯಕ್ಷತೆಯ ಸಮಿತಿ 2020ರ ಮಾರ್ಚ್ 19ರಂದು ವಿಧಾನಸಭೆಯಲ್ಲಿ ಮಂಡಿಸಿದ ವರದಿಯಲ್ಲಿ ಶಿಫಾರಸು ಮಾಡಿತ್ತು.

'ಮುಸ್ಲಿಂ ಸಮುದಾಯಕ್ಕೆ ಖಬರಸ್ಥಾನಗಳ ಅಗತ್ಯವಿದೆ ಎಂದು ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆಯು 363 ಪ್ರಸ್ತಾವನೆ ಸಲ್ಲಿಸಿದೆ' ಎಂದು ಸಮಿತಿ ಉಲ್ಲೇಖಿಸಿತ್ತು. ಬಸವರಾಜ ಬೊಮ್ಮಾಯಿ ಅವರು ಸಿ.ಎಂ ಆಗಿದ್ದಾಗ 2022ರ ಡಿಸೆಂಬರ್‌ನಲ್ಲಿ ವಿಧಾನಸಭೆಗೆ ಉತ್ತರಿಸಿ, 'ಖಬರಸ್ಥಾನ ಮಂಜೂರಾತಿಗೆ ಕ್ರಮವಹಿಸಲು ಸೂಚಿಸಲಾಗಿದೆ' ಎಂದಿದ್ದರು.

ಯಾವ ಜಿಲ್ಲೆಗಳಿಂದ ಎಷ್ಟು ಖಬರಸ್ತಾನಗಳಿಗೆ ಬೇಡಿಕೆ ಬಂದಿದೆ ಮತ್ತು ಬೇಡಿಕೆಗೆ ಕ್ರಮವಹಿಸಲು ಸೂಚಿಸಲಾಗಿದೆ ಎಂಬ ವಿವರವನ್ನು ಆಗ ಅಲ್ಪ ಸಂಖ್ಯಾತರ ಕಲ್ಯಾಣ ಸಚಿವೆ ಆಗಿದ್ದ ಶಶಿಕಲಾ ಜೊಲ್ಲೆ ವಿಧಾನಸಭೆಗೆ ನೀಡಿದ್ದರು. ಈಗ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಖಬರಸ್ಥಾನಗಳಿಗೆ ಬಂದಿರುವ ಒಟ್ಟು ಬೇಡಿಕೆಗಳ ಸಂಖ್ಯೆ 400 ದಾಟಿದೆ.

ಜಿ.ಪಂ–ತಾ.ಪಂ ಮೀಸಲು: ಮತ್ತೆ ಸಮಯ ಕೋರಿದ ಸರ್ಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿ ಜಿಲ್ಲಾ ಪಂಚಾಯಿತಿ ಹಾಗೂ ತಾಲ್ಲೂಕು ಪಂಚಾಯಿತಿಗಳಿಗೆ ಮೀಸಲಾತಿ ನಿಗದಿಪಡಿಸುವ ಪ್ರಕ್ರಿಯೆಯನ್ನು ಅಖೈರುಗೊಳಿಸಲು ಇನ್ನಷ್ಟು ಕಾಲಾವಕಾಶ ನೀಡಬೇಕು' ಎಂದು ರಾಜ್ಯ ಸರ್ಕಾರ, ಹೈಕೋರ್ಟ್‌ಗೆ ಪುನಃ ಮನವಿ ಮಾಡಿದೆ.

ಈ ಸಂಬಂಧ ರಾಜ್ಯ ಚುನಾವಣಾ ಆಯೋಗ ಮತ್ತು ಇತರರು ಸಲ್ಲಿಸಿರುವ ಪ್ರತ್ಯೇಕ ಸಿವಿಲ್ ನ್ಯಾಯಾಂಗ ನಿಂದನೆ ಅರ್ಜಿಗಳನ್ನು ಮುಖ್ಯ ನ್ಯಾಯಮೂರ್ತಿ ಎನ್.ವಿ. ಅಂಜಾರಿಯಾ ನೇತೃತ್ವದ ವಿಭಾಗೀಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಸರ್ಕಾರದ ಪರ ಹಾಜರಾಗಿದ್ದ ಹೆಚ್ಚುವರಿ ಅಡ್ವೊಕೇಟ್ ಜನರಲ್ ಪ್ರತಿಮಾ ಹೊನ್ನಾಪುರ, 'ಕ್ಷೇತ್ರ ಪುನರ್ ವಿಂಗಡಣೆ ಮುಗಿದಿದೆ. ಪುನರ್ ವಿಂಗಡಣೆ ಆದ ಕ್ಷೇತ್ರಗಳ ವಾರ್ಡ್‌ವಾರು ಮೀಸಲಾತಿ ಅಂತಿಮಗೊಳಿಸಲು ನಾಲ್ಕು ವಾರಗಳ ಕಾಲಾವಕಾಶ ಬೇಕು' ಎಂದು ನ್ಯಾಯ ಪೀಠಕ್ಕೆ ಮನವಿ ಮಾಡಿದರು.

'ಈಗಾಗಲೇ ಮೀಸಲಾತಿ ಸಿದ್ಧಪಡಿಸಿ ಸರ್ಕಾರಕ್ಕೆ ರವಾನಿಸಲಾಗಿದೆ. ಶೀಘ್ರದಲ್ಲೇ ಕರಡು ಮೀಸಲಾತಿಯನ್ನು ಹೊರಡಿಸಿ, ಸಾರ್ವಜನಿಕರಿಂದ ಆಕ್ಷೇಪಣೆ ಆಹ್ವಾನಿಸಲಾಗುವುದು. ಬಳಿಕ ಮೀಸಲಾತಿ ಪಟ್ಟಿಯನ್ನು ಮುಂದಿನ ಕ್ರಮಕ್ಕಾಗಿ ರಾಜ್ಯ ಚುನಾವಣಾ ಆಯೋಗಕ್ಕೆ ಕಳಿಸಿಕೊಡಲಾಗುವುದು' ಎಂದು ವಿವರಿಸಿದರು.

ರಾಜ್ಯ ಚುನಾವಣಾ ಆಯೋಗದ ಪರ ಹಾಜರಾಗಿದ್ದ ಹಿರಿಯ ವಕೀಲ ಕೆ.ಎನ್.ಫಣೀಂದ್ರ, 'ಚುನಾವಣೆಗಳು ನಡೆಯದೆ ಬಹಳಷ್ಟು ವಿಳಂಬವಾಗಿದೆ. ಕಳೆದೊಂದು ವರ್ಷದಿಂದ ಮೀಸಲಾತಿ ನಿಗದಿ ನನೆಗುದಿಗೆ ಬಿದ್ದಿದೆ. ಸರ್ಕಾರ ಪುನಃ ಜನವರಿ ತನಕ ಕಾಲಾವಕಾಶ ಕೇಳುತ್ತಿದೆ. ಕನಿಷ್ಠ ಇವತ್ತಿನ ಮನವಿಗಾದರೂ ಬದ್ಧವಾಗಿರುವಂತೆ ಸರ್ಕಾರದ ಹೇಳಿಕೆಯನ್ನು ದಾಖಲಿಸಿಕೊಳ್ಳಬೇಕು' ಎಂದು ನ್ಯಾಯಪೀಠಕ್ಕೆ ಮನವಿ ಮಾಡಿದರು. ನ್ಯಾಯಪೀಠ, ವಿಚಾರಣೆಯನ್ನು ಡಿಸೆಂಬರ್ 12ಕ್ಕೆ ಮುಂದೂಡಿತು.

'ಬಿಜೆಪಿ ಅವಧಿಯಲ್ಲಿ ₹5,900 ಕೋಟಿ ನಷ್ಟ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿ ಆಡಳಿತದಲ್ಲಿ ಸಾರಿಗೆ ಸಂಸ್ಥೆಗಳು ಅನುಭವಿಸಿದ್ದ ನಷ್ಟ ₹5,900 ಕೋಟಿ ಹಾಗೂ ಭವಿಷ್ಯ ನಿಧಿ, ಸಾಮಗ್ರಿ, ಡೀಸೆಲ್ ಖರೀದಿ ಬಾಕಿಯನ್ನು ಕಾಂಗ್ರೆಸ್ ಸರ್ಕಾರ ತೀರಿಸುತ್ತಲೇ ಯಶಸ್ವಿಯಾಗಿ ಸಂಸ್ಥೆ ಮುನ್ನಡೆಸುತ್ತಿದೆ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಹೇಳಿದ್ದಾರೆ.

'ಎಕ್ಸ್'ನಲ್ಲಿ ಅಭಿಪ್ರಾಯ ಹಂಚಿಕೊಂಡಿರುವ ಸಚಿವರು, ಕಾಂಗ್ರೆಸ್ ಸರ್ಕಾರ 2018ರಲ್ಲಿ ನಿರ್ಗಮಿಸುವಾಗ ಸಾರಿಗೆ ನಿಗಮಗಳಲ್ಲಿ ಭವಿಷ್ಯ ನಿಧಿ ಮೊತ್ತ ₹13.71 ಕೋಟಿ ಬಾಕಿ ಇತ್ತು. 2023ರ ಮೇ ಅಂತ್ಯಕ್ಕೆ ಬಿಜೆಪಿ ಸರ್ಕಾರ ಬಿಟ್ಟುಹೋದಾಗ ಬಾಕಿ ಇದ್ದದ್ದು ₹1,380.59 ಕೋಟಿ ಎಂದಿದ್ದಾರೆ.

ರಾಮಲಿಂಗಾ ರೆಡ್ಡಿ

ಸಾರಿಗೆ ಸಿಬ್ಬಂದಿಗೆ 2020 ಜನವರಿಯಲ್ಲಿ ಹೆಚ್ಚಿಸಬೇಕಿದ್ದ ವೇತನವನ್ನು 38 ತಿಂಗಳು ತಡವಾಗಿ ನೀಡಲಾಗಿತ್ತು. ಹಿಂಬಾಕಿ ಕೂಡಾ ನೀಡಲಿಲ್ಲ. ಸಿಬ್ಬಂದಿಗೆ ಮೋಸ ಮಾಡಿದ ಬಿಜೆಪಿ ನಾಯಕರಿಗೆ ಅವರ ಬಗ್ಗೆ ಮಾತನಾಡುವ ಯಾವ ನೈತಿಕತೆ ಇದೆ ಎಂದು ಪ್ರಶ್ನಿಸಿದ್ದಾರೆ.

ಶಕ್ತಿ ಯೋಜನೆ ಜತೆಗೆ ಬಿಜೆಪಿ ಸರ್ಕಾರ ಬಾಕಿ ಉಳಿಸಿದ್ದ ಸಾಲ ತೀರಿಸುತ್ತಾ ಸಂಸ್ಥೆಗಳಿಗೆ ಬಲತುಂಬಲಾಗಿದೆ. ಬಾಕಿ ಉಳಿಸಿಕೊಂಡು ಸಿಬ್ಬಂದಿಗೆ ಮೋಸ ಮಾಡಿಲ್ಲ ಎಂದು ಟೀಕಿಸಿದ್ದಾರೆ.

ದನದ ಕೊಟ್ಟಿಗೆಯಲ್ಲಿ ಕಚೇರಿ: ಐದು ಕಂಪನಿಗಳಿಗೆ ₹34 ಕೋಟಿ ವರ್ಗ

ಭೋವಿ ನಿಗಮ: ₹90 ಕೋಟಿಗೂ ಹೆಚ್ಚು ಅಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದಲ್ಲಿ ನಡೆದಿರುವ ಅಕ್ರಮ ಪ್ರಕರಣದ ತನಿಖೆ ನಡೆಸುತ್ತಿರುವ ಸಿಐಡಿ ವಿಶೇಷ ತನಿಖಾ ದಳದ ಅಧಿಕಾರಿಗಳು, ಐದು ಖಾಸಗಿ ಕಂಪನಿಗಳಿಗೆ ಅಕ್ರಮವಾಗಿ ₹34 ಕೋಟಿ ವರ್ಗಾವಣೆ ಆಗಿರುವುದನ್ನು ಪತ್ತೆ ಹಚ್ಚಿದ್ದಾರೆ.

ಜಿ.ಪರಮೇಶ್ವರ

ಇತ್ತೀಚೆಗೆ ಆತ್ಮಹತ್ಯೆ ಮಾಡಿಕೊಂಡ ಉದ್ಯಮಿಗೆ ಸೇರಿದ್ದು ಎನ್ನಲಾದ ಕಂಪನಿಯ ಬ್ಯಾಂಕ್ ಖಾತೆಗೂ ಹಣ ವರ್ಗಾವಣೆ ಆಗಿತ್ತು ಎಂದು ಎಸ್‌ಐಟಿ ಮೂಲಗಳು ಹೇಳಿವೆ.

2018ರಿಂದ 2024ರವರೆಗೆ ಐದು ವರ್ಷಗಳಲ್ಲಿ ಸುಮಾರು ₹90 ಕೋಟಿಗೂ ಅಧಿಕ ಮೊತ್ತದ ಅಕ್ರಮ ನಡೆದಿರುವುದು ತನಿಖೆಯಿಂದ ದೃಢಪಟ್ಟಿದೆ ಎಂದು ಮೂಲಗಳು ತಿಳಿಸಿವೆ.

ದನದ ಕೊಟ್ಟಿಗೆಯಲ್ಲಿ ಕಚೇರಿ: ಬೆಂಗಳೂರು ನಗರದಲ್ಲಿ ಕಾರ್ಯ ಚಟುವಟಿಕೆ ಹೊಂದಿವೆ ಎಂದು ಕಂಪನಿಗಳ ಮಾಲೀಕರು ಹೇಳಿಕೊಂಡಿದ್ದರು. ಈ ಕಂಪನಿಗಳ ಬೆನ್ನತ್ತಿ ಹೋಗಿದ್ದ ತನಿಖಾಧಿಕಾರಿಗಳಿಗೆ ದನದ ಕೊಟ್ಟಿಗೆ ಇರುವ ಸ್ಥಳವನ್ನೇ ಕಚೇರಿ ವಿಳಾಸ ಎಂಬುದಾಗಿ ತೋರಿಸಿರುವುದು ಪತ್ತೆಯಾಗಿತ್ತು.

ನಿಗಮದ ಮಾಜಿ ಪ್ರಧಾನ ವ್ಯವಸ್ಥಾಪಕ ಬಿ.ಕೆ.ನಾಗರಾಜಪ್ಪ ಮನೆಯಲ್ಲಿ ಉದ್ಯಮಿ ಜೀವಾ ಹಾಗೂ ಆಕೆಯ ಸಹೋದರಿ ಸಂಗೀತಾ ಬಾಡಿಗೆಗೆ ಇದ್ದರು. ಇದೇ ಮನೆಯನ್ನೇ ತಮ್ಮ ಸಹೋದರಿ ಸಂಗೀತಾ ಒಡೆತನದ ಹರ್ನಿತಾ ಕ್ರಿಯೇಷನ್ಸ್ ಕಂಪನಿಯ ಕಚೇರಿ ಎಂದು ಹೇಳಿಕೊಂಡು ಜೀವಾ ಹಣ ವರ್ಗಾವಣೆ ಮಾಡಿಕೊಂಡಿದ್ದರು ಎಂದು ತನಿಖಾ ತಂಡದ ಮೂಲಗಳು ತಿಳಿಸಿವೆ.

ಭೋವಿ ನಿಗಮದಲ್ಲಿ ನಡೆದಿದ್ದ ಹಗರಣ ಸಂಬಂಧ ಜೀವಾ ಅವರೂ ವಿಚಾರಣೆ ಎದುರಿಸಿದ್ದರು. ವಿಚಾರಣೆ ವೇಳೆ ತನಿಖಾಧಿಕಾರಿಗಳು ಕಿರುಕುಳ ನೀಡಿದ್ದರು ಎಂದು ಆರೋಪಿಸಿ, ಮರಣ ಪತ್ರ ಬರೆದಿಟ್ಟು ಜೀವಾ ಆತ್ಮಹತ್ಯೆ ಮಾಡಿಕೊಂಡಿದ್ದರು. ಜೀವಾ ಆತ್ಮಹತ್ಯೆಯ ಕುರಿತು ಅವರ ಸಹೋದರಿ ಸಂಗೀತಾ ನೀಡಿದ್ದ ದೂರಿನ ಅನ್ವಯ ಸಿಐಡಿ ಡಿವೈಎಸ್‌ಪಿ ಕನಕಲಕ್ಷ್ಮಿ ವಿರುದ್ಧ ಬನಶಂಕರಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಪ್ರಕರಣವನ್ನು ಸಿಸಿಬಿ ವರ್ಗಾವಣೆ ಮಾಡಲಾಗಿದೆ.

ಯಾವ ಕಂಪನಿಗೆ ಎಷ್ಟು?: ಜೀವಾ ಅವರಿಗೆ ಸೇರಿದ್ದು ಎನ್ನಲಾದ ಅನ್ನಿಕಾ ಎಂಟರ್ ಪ್ರೈಸಸ್‌ಗೆ ₹7.16 ಕೋಟಿ, ಅವರ ಸಹೋದರಿ ಹೆಸರಿನಲ್ಲಿ ಇರುವ ಹರ್ನಿತಾ ಕ್ರಿಯೇಷನ್ಸ್‌ಗೆ ₹3.79 ಕೋಟಿ ಸೇರಿದಂತೆ ₹10.9 ಕೋಟಿ ವರ್ಗಾವಣೆ ಆಗಿದೆ.

ನಿಗಮದ ಮಾಜಿ ವ್ಯವಸ್ಥಾಪಕ ನಿರ್ದೇಶಕಿ ಲೀಲಾವತಿ ಅವರ ಸಹೋದರಿ ಮಂಗಳಾ ರಾಮು ಅವರಿಗೆ ಹಂತ ಹಂತವಾಗಿ ₹1.48 ಕೋಟಿ ಕೊಡಲಾಗಿತ್ತು. ಇನ್ನೂ ಮೂರು ಕಂಪನಿಗಳು ಬಿ.ಕೆ.ನಾಗರಾಜಪ್ಪ ಅವರ ಆಪ್ತರ ಪಾಲುದಾರಿಕೆಯಲ್ಲಿ ಇವೆ ಎಂದು ಎಸ್‌ಐಟಿ ಮೂಲಗಳು ತಿಳಿಸಿವೆ.

ಬಿ.ಕೆ.ನಾಗರಾಜಪ್ಪ ಅವರ ಆಪ್ತ ಸಹಾಯಕಿ ಯಶಸ್ವಿನಿ ಹೆಸರಿನಲ್ಲಿ ನ್ಯೂ ಡ್ರೀಮ್, ಆಕೆಯ ಸಹೋದರ ಕಾರ್ತಿಕ್ ಗೌಡ ಹೆಸರಿನಲ್ಲಿ ಆದಿತ್ಯಾ ಕಂಪನಿ, ಮನೆ ಬಾಡಿಗೆದಾರರಾದ ಜೀವಾ ಹೆಸರಿನಲ್ಲಿ ಅನ್ನಿಕಾ ಎಂಟರ್ ಪ್ರೈಸಸ್, ಆಕೆಯ ಸಹೋದರಿ ಸಂಗೀತಾ ಹೆಸರಿನಲ್ಲಿ ಹರ್ನಿತಾ ಕ್ರಿಯೇಷನ್ಸ್ ಹಾಗೂ ಆಪ್ತ ಸಿ.ಸಂತೋಷ್ ಹೆಸರಿನಲ್ಲಿ ಸೋಮೇಶ್ವರ ಎಂಟರ್ ಪ್ರೈಸಸ್ ಎಂಬ ಕಂಪನಿಗಳನ್ನು ಸ್ಥಾಪಿಸಲಾಗಿತ್ತು. ಈ ರೀತಿ ಬೇರೆಯವರ ಹೆಸರಿನಲ್ಲಿ ಕಂಪನಿ ಸ್ಥಾಪಿಸಿ ನಾಗರಾಜಪ್ಪ ಹಣ ವರ್ಗಾವಣೆ ಮಾಡಿಕೊಂಡಿರುವುದು ತನಿಖೆಯಿಂದ ಗೊತ್ತಾಗಿದೆ ಎಂದು ಮೂಲಗಳು ತಿಳಿಸಿವೆ.

ಸಾಲ ಮಂಜೂರಾತಿ ಹೆಸರಿನಲ್ಲಿ ಹಣ ಲಪಟಾಯಿಸಲು ಮಧ್ಯವರ್ತಿಗಳ ನೆರವಿನಲ್ಲಿ ಅಧಿಕಾರಿಗಳೇ ನಕಲಿ ಫಲಾನುಭವಿಗಳನ್ನು ಸೃಷ್ಟಿಸಿದ್ದರು. ಸಾಲ ಮಂಜೂರಾತಿಗೂ ಮುನ್ನವೇ ಫಲಾನುಭವಿಗಳಿಂದ ಸಹಿ ಮಾಡಿದ ಖಾಲಿ ಚೆಕ್ ಹಾಗೂ ಪತ್ರಗಳಿಗ ಸಹಿ ಪಡೆಯುತ್ತಿದ್ದರು. ಫಲಾನುಭವಿಗೆ ₹50 ಸಾವಿರ ಸಿಕ್ಕಿದರೆ, ಉಳಿದ ₹4 ಲಕ್ಷದಿಂದ ₹ 5 ಲಕ್ಷವನ್ನು ಅಧಿಕಾರಿಗಳು ಹಾಗೂ ಮಧ್ಯವರ್ತಿಗಳು ಪಡೆದುಕೊಳ್ಳುತ್ತಿದ್ದರು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಆರೋಪಿಯಿಂದ ತನಿಖಾಧಿಕಾರಿ ಹಣ ಕೇಳಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಐಡಿ ವಿಭಾಗದ ಹಿರಿಯ ಅಧಿಕಾರಿಗಳಿಂದ ತನಿಖೆ ನಡೆಸಲಾಗುವುದು

ಜಿ.ಪರಮೇಶ್ವರ, ಗೃಹ ಸಚಿವ

ಉದ್ಯಮಿ ಜೀವಾ ಆತ್ಮಹತ್ಯೆ ಪ್ರಕರಣದ ತನಿಖೆಯನ್ನು ಎಸಿಪಿ ಮಟ್ಟದ ಅಧಿಕಾರಿ ನೇತೃತ್ವದಲ್ಲಿ ನಡೆಸಲಾಗುವುದು

ಬಿ.ದಯಾನಂದ, ಬೆಂಗಳೂರು ನಗರ ಪೊಲೀಸ್ ಕಮಿಷನರ್

ಜೀವಾ ಆತ್ಮಹತ್ಯೆ–ಸಿಬಿಐಗೆ ಕೋರಿಕೆ: 29ಕ್ಕೆ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಭೋವಿ ಅಭಿವೃದ್ಧಿ ನಿಗಮದಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರಕ್ಕೆ ಸಂಬಂಧಿಸಿದ ಪ್ರಕರಣದ ಆರೋಪಿ, ವಕೀಲೆ ಎಸ್.ಜೀವಾ ಅವರ ಆತ್ಮಹತ್ಯೆ ಪ್ರಕರಣವನ್ನು ಸಿಬಿಐ ತನಿಖೆಗೆ ಒಪ್ಪಿಸಬೇಕು' ಎಂದು ಕೋರಲಾದ ಅರ್ಜಿಗೆ ಸಂಬಂಧಿಸಿದ ಆದೇಶವನ್ನು ಹೈಕೋರ್ಟ್ ಕಾಯ್ದಿರಿಸಿದೆ.

ಬೆಂಗಳೂರು ವಕೀಲರ ಸಂಘ ಸಲ್ಲಿಸಿದ್ದ ಮಧ್ಯಂತರ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ಪೀಠ ವಿಚಾರಣೆ ನಡೆಸಿದ್ದು, ಇದೇ 29ರಂದು ಆದೇಶ ಪ್ರಕಟಿಸುವುದಾಗಿ ತಿಳಿಸಿತು.

ವಿಚಾರಣೆ ವೇಳೆ ರಾಜ್ಯದ ಹೆಚ್ಚುವರಿ ಪ್ರಾಸಿಕ್ಯೂಟರ್ ಬಿ.ಎನ್.ಜಗದೀಶ್, 'ಭೋವಿ ಹಗರಣದಲ್ಲಿ ಭಾಗಿಯಾಗಿರುವ ಕೆಲವರು ಬೆಂಗಳೂರು ವಕೀಲರ ಸಂಘವನ್ನು (ಎಎಬಿ) ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆ. ಪೂರಕವಾಗಿ ಎಎಬಿ ಪ್ರಮುಖರ ಪಾತ್ರ ಕಂಡುಬಂದಿದೆ' ಎಂದರು.

ಎಎಬಿ ಪರ ಹಾಜರಾಗಿದ್ದ ಹಿರಿಯ ವಕೀಲರೂ ಆದ ಸಂಘದ ಅಧ್ಯಕ್ಷ ವಿವೇಕ್ ರೆಡ್ಡಿ ಮತ್ತು ಹಿರಿಯ ವಕೀಲ ಡಿ.ಆರ್.ರವಿಶಂಕರ್ ಇದನ್ನು ಬಲವಾಗಿ ಅಲ್ಲಗಳೆದರು. 'ಪ್ರಕರಣದ ತನಿಖಾಧಿಕಾರಿ ಡಿಎಸ್‌ಪಿ ಕನಕಲಕ್ಷ್ಮಿ ಕಿರುಕುಳದಿಂದಲೇ ಜೀವಾ ಆತ್ಮಹತ್ಯೆಗೆ ಶರಣಾಗಿದ್ದಾರೆ. ಕನಕಲಕ್ಷ್ಮಿ ಅನೇಕ ಹಗರಣಗಳಲ್ಲಿ ಭಾಗಿಯಾಗಿರುವ ಆರೋಪಗಳಿವೆ' ಎಂಬ ಅಂಶವನ್ನು ನ್ಯಾಯಪೀಠದ ಗಮನಕ್ಕೆ ತಂದರು.

ಕನಕಲಕ್ಷ್ಮಿ ಪರ ವಕೀಲ ವೆಂಕಟೇಶ್ ಪಿ.ದಳವಾಯಿ, 'ಪ್ರಕರಣದ ತನಿಖೆಯ ಮೇಲೆ ನ್ಯಾಯಾಲಯ ನಿಗಾ ಇರಿಸಬೇಕು ಮತ್ತು ತನಿಖೆಗೆ ಕಾಲಮಿತಿ ನಿಗದಿಪಡಿಸಬೇಕು' ಎಂದು ಕೋರಿದರು.

ವಾದ ಪ್ರತಿವಾದ ಆಲಿಸಿದ ನ್ಯಾಯಪೀಠ, 'ಕೇಂದ್ರ ಸರ್ಕಾರ ಮತ್ತು ಸಿಬಿಐ ಅನ್ನು ಪ್ರತಿವಾದಿ ಆಗಿಸಲು ಕೋರಿದ್ದ ಮಧ್ಯಂತರ ಅರ್ಜಿ ಪುರಸ್ಕರಿಸಿ ದ್ದು, ಕೇಂದ್ರ ಮತ್ತು ಸಿಬಿಐಗೆ ನೋಟಿಸ್ ಜಾರಿಗೆ ಆದೇಶಿಸಲಾಗಿದೆ' ಎಂದು ತಿಳಿಸಿತು.

ನದಿಯಲ್ಲಿ ಮುಳುಗಿ ಮೂವರು ಯುವಕರು ಸಾವು

ಪ್ರಜಾವಾಣಿ ವಾರ್ತೆ

ಬೆಳ್ತಂಗಡಿ (ದಕ್ಷಿಣ ಕನ್ನಡ): ವೇಣೂರಿನ ಗೆಳೆಯನ ಮನೆಗೆ ಬಂದಿದ್ದ ಮೂವರು ಯುವಕರು ಬರ್ಕಜೆ ಬಳಿ ನದಿಯಲ್ಲಿ ಮುಳುಗಿ ಬುಧವಾರ ಮೃತಪಟ್ಟರು.

'ವಗ್ಗ ಕಾಡಬೆಟ್ಟುವಿನ ಜಾಯ್ಸನ್ (19), ಕುಪ್ಪೆ ಪದವಿನ ಲಾರೆನ್ಸ್ (21), ಪುಂಜಾಲಕಟ್ಟೆ ಬಸವನಗುಡಿಯ ಸೂರಜ್ (19) ಮೃತರು. ಅವರು ಮಂಗಳೂರಿನ ಮಂಗಳ ನರ್ಸಿಂಗ್ ಕಾಲೇಜಿನ ಬಿ.ಎಸ್.ಸಿ. ನರ್ಸಿಂಗ್ ವಿದ್ಯಾರ್ಥಿಗಳು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ವೇಣೂರು ಚರ್ಚ್‌ನಲ್ಲಿ ಕಾರ್ಯಕ್ರಮಕ್ಕಾಗಿ ಸಹಪಾಠಿಯ ಮನೆಗೆ ಬಂದಿದ್ದರು. ಸಮೀಪದಲ್ಲಿದ್ದ ಕಿಂಡಿ ಅಣೆಕಟ್ಟು ನೋಡಲು ಹೋಗಿದ್ದಾಗ ನದಿಗೆ ಸ್ನಾನಕ್ಕೆ ಇಳಿದಿದ್ದಾಗ ಅವಘಡ ಸಂಭವಿಸಿದೆ.

❦ ಸುಭಾಷಿತ ❦

ನಾವು ಪ್ರತಿದಿನ ಪಾಲಿಸುವ ಸಣ್ಣ ಸಣ್ಣ ಶಿಸ್ತುಗಳು, ನಮ್ಮ ಬದುಕಿನಲ್ಲಿ ಶಾಶ್ವತ ಬದಲಾವಣೆಗಳನ್ನು ತರಬಲ್ಲವು.

-ಜಿಮ್ ರೌನ್

ನಬಾರ್ಡ್‌ನಿಂದ ಸಾಲದ ಮೊತ್ತ ಕಡಿತ ರೈತರ ಬೆಂಬಲಕ್ಕೆ ಬೇಕು ಪರಿಹಾರ ಸೂತ್ರ

ರಾಜ್ಯದ ಬಹುಪಾಲು ರೈತರು ಕೃಷಿ ಚಟುವಟಿಕೆಗಳಿಗೆ ಸಂಬಂಧಿಸಿದ ತುರ್ತು ವೆಚ್ಚಗಳಿಗೆ ಸಹಕಾರ ಸಂಸ್ಥೆಗಳು ನೀಡುತ್ತಿರುವ ಬಡ್ಡಿರಹಿತ ಅಲ್ಪಾವಧಿ ಬೆಳೆಸಾಲವನ್ನೇ ನೆಚ್ಚಿಕೊಂಡಿದ್ದಾರೆ. ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್‌ನ ಅಂಕಿಅಂಶಗಳ ಪ್ರಕಾರ, ಸುಮಾರು 35 ಲಕ್ಷಕ್ಕೂ ಹೆಚ್ಚು ರೈತರು ಸಹಕಾರ ಸಂಸ್ಥೆಗಳಿಂದ ಅಲ್ಪಾವಧಿ ಸಾಲ ಪಡೆಯುತ್ತಿದ್ದಾರೆ. 2023–24ನೇ ಆರ್ಥಿಕ ವರ್ಷದಲ್ಲಿ ರಾಜ್ಯದಲ್ಲಿ ಸಹಕಾರ ಸಂಸ್ಥೆಗಳ ಮೂಲಕ ₹ 22,070 ಕೋಟಿಗಳಷ್ಟು ಬಡ್ಡಿರಹಿತ ಅಲ್ಪಾವಧಿ ಸಾಲವನ್ನು ರೈತರಿಗೆ ವಿತರಿಸಲಾಗಿದೆ. ಹಿಂದೆ ಬಡ್ಡಿರಹಿತ ಅಲ್ಪಾವಧಿ ಸಾಲದ ಮಿತಿ ₹ 3 ಲಕ್ಷದವರೆಗೂ ಇತ್ತು. 2023ರಿಂದ ಈ ಮೊತ್ತವನ್ನು ₹ 5 ಲಕ್ಷಕ್ಕೆ ಹೆಚ್ಚಳ ಮಾಡಲಾಗಿದೆ. ಅಪೆಕ್ಸ್ ಬ್ಯಾಂಕ್‌ನ ಸ್ವಂತ ಬಂಡವಾಳ, ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ಗಳ ಸ್ವಂತ ಬಂಡವಾಳ ಮತ್ತು ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ (ನಬಾರ್ಡ್) ಶೇಕಡ 4.5ರ ಬಡ್ಡಿ ದರದಲ್ಲಿ ನೀಡುವ ಸಾಲ ಪುನರ್ಧನದ ಮೊತ್ತವನ್ನು ರೈತರಿಗೆ ಬಡ್ಡಿರಹಿತ ಸಾಲ ನೀಡಲು ಬಳಸಲಾಗುತ್ತಿದೆ. ನಬಾರ್ಡ್ ಒದಗಿಸುವ ಮೊತ್ತದ ಮೇಲಿನ ಬಡ್ಡಿ ಮತ್ತು ಅಪೆಕ್ಸ್ ಬ್ಯಾಂಕ್ ಹಾಗೂ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ಗಳ ಸ್ವಂತ ಬಂಡವಾಳದ ಪಾಲಿನ ಮೇಲಿನ ಬಡ್ಡಿಯನ್ನು ರಾಜ್ಯ ಸರ್ಕಾರ ಭರಿಸುತ್ತಿದೆ. ಅಲ್ಪಾವಧಿ ಕೃಷಿ ಸಾಲದ ಒಟ್ಟು ಮೊತ್ತದ ಅರ್ಧಕ್ಕಿಂತಲೂ ಹೆಚ್ಚು ನಬಾರ್ಡ್‌ನಿಂದ ಲಭ್ಯವಾಗುತ್ತಿತ್ತು.

ಸಾಲ ವಿತರಣೆಯಲ್ಲಿನ ಸಮಸ್ಯೆ ಜಟಿಲವಾಗಿ ಕೃಷಿ ಉತ್ಪಾದನೆಯ ಮೇಲೆ ಪ್ರತಿಕೂಲ ಪರಿಣಾಮ ಬೀರದಂತೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ನೋಡಿಕೊಳ್ಳಬೇಕಿದೆ

ನಬಾರ್ಡ್ 2024–25ನೇ ಆರ್ಥಿಕ ವರ್ಷದಲ್ಲಿ ಸಾಲ ಪುನರ್ಧನದ ಮೊತ್ತದಲ್ಲಿ ಭಾರಿ ಕಡಿತ ಮಾಡಿದೆ. ಇದರಿಂದ ಸಹಕಾರ ಸಂಸ್ಥೆಗಳ ಮೂಲಕ ಅಲ್ಪಾವಧಿ ಕೃಷಿ ಸಾಲ ವಿತರಣೆಗೆ ದೊಡ್ಡ ಪೆಟ್ಟು ಬಿದ್ದಿದೆ. ಕರ್ನಾಟಕಕ್ಕೆ 2023–24ನೇ ಆರ್ಥಿಕ ವರ್ಷದಲ್ಲಿ ₹ 5,600 ಕೋಟಿ ಮೊತ್ತವನ್ನು ಒದಗಿಸಿತ್ತು. 2024–25ನೇ ಆರ್ಥಿಕ ವರ್ಷಕ್ಕೆ ₹ 13,742 ಕೋಟಿ ಮೊತ್ತದ ಬೇಡಿಕೆ ಸಲ್ಲಿಸಿದ್ದರೂ ₹ 2,340 ಕೋಟಿಯನ್ನು ಮಾತ್ರ ನಬಾರ್ಡ್ ಮಂಜೂರು ಮಾಡಿದೆ. ಹಿಂದಿನ ವರ್ಷಕ್ಕೆ ಹೋಲಿಸಿದರೆ ಶೇ 58ರಷ್ಟು ಕಡಿತ ಮಾಡಲಾಗಿದೆ. ನಬಾರ್ಡ್‌ನ ಈ ನಡೆಯಿಂದಾಗಿ ಸಹಕಾರ ಸಂಸ್ಥೆಗಳ ಮೂಲಕ ರೈತರಿಗೆ ಅಲ್ಪಾವಧಿ ಸಾಲ ವಿತರಿಸುವ ಪ್ರಕ್ರಿಯೆಯಲ್ಲಿ ಬಿಕ್ಕಟ್ಟು ಸೃಷ್ಟಿಯಾಗುವ ಸನ್ನಿವೇಶ ಎದುರಾಗಿದೆ. ಸಹಕಾರ ಸಂಸ್ಥೆಗಳಲ್ಲಿ ಅಲ್ಪಾವಧಿ ಕೃಷಿ ಸಾಲ ಪಡೆಯುತ್ತಿರುವ ರೈತರಲ್ಲಿ ಶೇ 75ಕ್ಕಿಂತಲೂ ಹೆಚ್ಚು ಮಂದಿ ಅತಿಸಣ್ಣ ಮತ್ತು ಸಣ್ಣ ಹಿಡುವಳಿದಾರರು. ಈಗ ರೈತರಿಗೆ ನೀಡುವ ಸಾಲದ ಪ್ರಮಾಣವನ್ನು ಕಡಿತಗೊಳಿಸಬೇಕಾದ ಇಕ್ಕಟ್ಟಿಗೆ ಸಹಕಾರಿ ಸಂಸ್ಥೆಗಳು ಸಿಲುಕಿವೆ. ಪರಿಣಾಮವಾಗಿ, ರೈತರು ತಮ್ಮ ತುರ್ತು ಅಗತ್ಯಗಳಿಗೆ ಹಣ ಹೊಂದಿಸಿಕೊಳ್ಳಲು ಹೆಚ್ಚು ಬಡ್ಡಿ ದರ ವಿಧಿಸುವ ರಾಷ್ಟ್ರೀಕೃತ ಬ್ಯಾಂಕ್‌ಗಳು, ಖಾಸಗಿ ಬ್ಯಾಂಕ್‌ಗಳು ಅಥವಾ ಖಾಸಗಿ ಲೇವಾದೇವಿಗಾರರ ಬಳಿ ಹೋಗಬೇಕಾದ ಅನಿವಾರ್ಯ ಸೃಷ್ಟಿಯಾಗಲಿದೆ.

ನಬಾರ್ಡ್ ತನ್ನ ಈ ನಿರ್ಧಾರವನ್ನು ಹಿಂಪಡೆದು ಹೆಚ್ಚು ಸಾಲ ಮಂಜೂರು ಮಾಡುವಂತೆ ಕರ್ನಾಟಕವೂ ಸೇರಿದಂತೆ ಕೆಲವು ರಾಜ್ಯ ಸರ್ಕಾರಗಳು ಆಗ್ರಹಿಸಿವೆ. ರಾಷ್ಟ್ರೀಕೃತ ಮತ್ತು ಇತರ ವಾಣಿಜ್ಯ ಬ್ಯಾಂಕ್‌ಗಳು ಕೂಡ ಕೃಷಿ ಸಾಲ ನೀಡುತ್ತಿರುವ ಕಾರಣದಿಂದ ನಬಾರ್ಡ್ ಇಂತಹ ನಿರ್ಧಾರ ಕೈಗೊಂಡಿದೆ ಎಂಬ ಸಮರ್ಥನೆಯನ್ನು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ನೀಡಿದ್ದಾರೆ. ಆದರೆ, ನಬಾರ್ಡ್ ಶೇ 4.5ರಷ್ಟು ಬಡ್ಡಿ ದರದಲ್ಲಿ ಅಪೆಕ್ಸ್ ಬ್ಯಾಂಕ್‌ಗಳಿಗೆ ಸಾಲ ನೀಡುತ್ತಿದೆ. ಅದನ್ನು ಬಳಸಿಕೊಂಡು ಕರ್ನಾಟಕವೂ ಸೇರಿದಂತೆ ಕೆಲವು ರಾಜ್ಯ ಸರ್ಕಾರಗಳು ಬಡ್ಡಿರಹಿತ ಸಾಲ ನೀಡುತ್ತಿವೆ. ಕೆಲವು ರಾಜ್ಯಗಳಲ್ಲಿ ಬಡ್ಡಿ ರಿಯಾಯಿತಿ ಸೌಲಭ್ಯ ಇದೆ. ಸುಸ್ಥಿರ ಮತ್ತು ನ್ಯಾಯಸಮ್ಮತ ಕೃಷಿ ಹಾಗೂ ಗ್ರಾಮೀಣಾಭಿವೃದ್ಧಿಯನ್ನು ಪ್ರೋತ್ಸಾಹಿಸಲು ಹಣಕಾಸು, ಇತರ ಸಾಂಸ್ಥಿಕ ನೆರವು ಒದಗಿಸುವುದು ನಬಾರ್ಡ್‌ನ ಧ್ಯೇಯ. ಈಗ ಅದು ಸಾಲ ಪುನರ್ಧನ ಮೊತ್ತ ಕಡಿತಕ್ಕೆ ಕೈಗೊಂಡಿರುವ ನಿರ್ಧಾರವು ತನ್ನದೇ ಧ್ಯೇಯಕ್ಕೆ ವಿರುದ್ಧವಾದ ನಡೆ. ಈ ವಿಷಯದಲ್ಲಿ ಕೇಂದ್ರ ಸರ್ಕಾರವು ತನ್ನ ನಿಲುವು ಬದಲಿಸಿ ರೈತರ ಬೆಂಬಲಕ್ಕೆ ನಿಲ್ಲಬೇಕು. ಎಲ್ಲ ರಾಜ್ಯ ಸರ್ಕಾರಗಳೂ ಸಂಘಟಿತವಾಗಿ ಈ ದಿಸೆಯಲ್ಲಿ ಕೇಂದ್ರದ ಮೇಲೆ ಒತ್ತಡ ಹೇರಬೇಕು. ಸಾಲ ವಿತರಣೆಯಲ್ಲಿನ ಸಮಸ್ಯೆ ಜಟಿಲವಾಗಿ ಕೃಷಿ ಉತ್ಪಾದನೆಯ ಮೇಲೆ ಪ್ರತಿಕೂಲ ಪರಿಣಾಮ ಬೀರದಂತೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಸಮನ್ವಯದಿಂದ ಪರಿಹಾರ ಸೂತ್ರ ರೂಪಿಸಿ, ಅನುಷ್ಠಾನಕ್ಕೆ ತರಬೇಕು.

ದಿನದ ಟ್ವೀಟ್

ವಿಳಂಬ ನ್ಯಾಯ ತರವೇ?

7 ವರ್ಷಗಳ ಸುದೀರ್ಘ ತನಿಖೆಯ ಬಳಿಕ ಎನ್‌ಡಿಟಿವಿ ಸಂಸ್ಥಾಪಕರ ವಿರುದ್ಧದ ಪ್ರಕರಣವನ್ನು ಸಿಬಿಐ ಕೊನೆಗೊಳಿಸಿದೆ. ಅದು ತನ್ನ ಪರಿಸಮಾಪ್ತಿ ವರದಿಯಲ್ಲಿ, ‘ಮಾಮೂಲು ವ್ಯಾಪಾರ ಸಂಬಂಧಿ ವ್ಯವಹಾರಗಳು ನಡೆದಿವೆ, ಯಾವುದೇ ಕ್ರಿಮಿನಲ್ ಅಂಶವಿಲ್ಲ, ನಿಯಮದ ಉಲ್ಲಂಘನೆ ಇಲ್ಲ’ ಎಂದು ಹೇಳಿದೆ. ಹಾಗಿದ್ದಮೇಲೆ ಅವರಿಗೆ 7 ವರ್ಷಗಳವರೆಗೆ ಕಿರುಕುಳ ನೀಡಿದ್ದೇಕೆ?...

ಅರವಿಂದ್ ಗುಣಶೇಖರ್, ಪತ್ರಕರ್ತ

ಕಿಡಿನುಡಿ

ಇಂತಹ ಭಯಾನಕ ಕೃತ್ಯಗಳು ಎಂದಾದರೂ ನಿಲ್ಲುತ್ತವೆಯೇ?

(ಮಧ್ಯಪ್ರದೇಶದಲ್ಲಿ ವ್ಯಾಜ್ಯವೊಂದಕ್ಕೆ ಸಂಬಂಧಿಸಿದಂತೆ ದಲಿತ ಯುವಕನ ಮೇಲೆ ಗ್ರಾಮವೊಂದರ ಸರಪಂಚ್ ಮತ್ತು ಆತನ ಕುಟುಂಬದ ಸದಸ್ಯರು ಮಾರಣಾಂತಿಕ ಹಲ್ಲೆ ನಡೆಸಿರುವುದಕ್ಕೆ ಪ್ರತಿಕ್ರಿಯೆ)

ಸುಕುಮಾರ್ ಮುರಳೀಧರನ್, ಸಂಶೋಧಕ, ಲೇಖಕ

25 ವರ್ಷಗಳ ಹಿಂದೆ

ಭಾನುವಾರ, 28-11-1999

• ಕಲ್ಯಾಣ್ ಸಿಂಗ್ ಅಮಾನತು ಸ್ಪಷ್ಟನೆ ಕೇಳಿ ನೋಟಿಸ್

ನವದೆಹಲಿ, ನ. 27 (ಯುಎನ್‌ಐ, ಪಿಟಿಐ)– ಉತ್ತರಪ್ರದೇಶದ ಮಾಜಿ ಮುಖ್ಯಮಂತ್ರಿ ಕಲ್ಯಾಣ್ ಸಿಂಗ್ ಅವರನ್ನು ಪಕ್ಷ ವಿರೋಧಿ ಚಟುವಟಿಕೆಗಳಿಗಾಗಿ ಇಂದು ಭಾರತೀಯ ಜನತಾ ಪಕ್ಷದ ಪ್ರಾಥಮಿಕ ಸದಸ್ಯತ್ವದಿಂದ ಅಮಾನತುಗೊಳಿಸಲಾಯಿತು.

‘ನಿನ್ನೆ ಕಲ್ಯಾಣ್ ಸಿಂಗ್ ಅವರು ನೀಡಿದ ಹೇಳಿಕೆ ಹಾಗೂ ಅಲಿಗಢದಲ್ಲಿ ನೀಡಿದ ಟಿ.ವಿ. ಸಂದರ್ಶನವು ಶಿಸ್ತುಕ್ರಮವನ್ನು ಅಗತ್ಯವನ್ನಾಗಿ ಮಾಡಿದವು’ ಎಂದು ಅಮಾನತಿನ ವಿಚಾರವನ್ನು ಇಂದು ಪತ್ರಕರ್ತರಿಗೆ ತಿಳಿಸಿದ ಪಕ್ಷದ ಅಧ್ಯಕ್ಷ ಕುಶಭಾವು ಠಾಕ್ರೆ ಹೇಳಿದರು.

• ಕೈದಿಗಳ ಪರಾರಿ: ಶಂಕೆಯ ಸುಳಿಯಲ್ಲಿ ಪೊಲೀಸರು

ಬೆಂಗಳೂರು, ನ. 27– ಅನಾರೋಗ್ಯದ ನೆಪವೊಡ್ಡಿ ಆಸ್ಪತ್ರೆ ಸೇರುವ ವಿಚಾರಣಾಧೀನ ಕೈದಿಗಳು ಪಹರೆ ಪೊಲೀಸರಿಗೆ ಆಮಿಷ ಒಡ್ಡಿ ಅಲ್ಲಿಂದ ಪರಾರಿಯಾಗುತ್ತಿರುವ ಘಟನೆಗಳಿಂದ ಸಾರ್ವಜನಿಕರು ಹಾಗೂ ಪೊಲೀಸರು ಆತಂಕಕ್ಕೆ ಈಡಾಗಿದ್ದಾರೆ.

ಆಸ್ಪತ್ರೆಯಲ್ಲಿರುವ ವಿಚಾರಣಾಧೀನ ಕೈದಿಗಳು ಒಡ್ಡುವ ಆಮಿಷಕ್ಕೆ ಪಹರೆಯಲ್ಲಿರುವ (ನಗರ ಸಶಸ್ತ್ರ ಮೀಸಲು ಪಡೆ– ಸಿಎಆರ್) ಪೊಲೀಸರು ಬಲಿಯಾಗುತ್ತಿರುವುದು ಈ ಆತಂಕಕ್ಕೆ ಕಾರಣವಾಗಿದೆ.

‘ರೋಗಿ’ಗಳಾಗಿ ಆಸ್ಪತ್ರೆ ಸೇರುವ ಕೈದಿಗಳ ಕಾವಲು ಕಾಯುವ ಪೊಲೀಸ್ ಸಿಬ್ಬಂದಿಯೇ ಕೈದಿಗಳು ತಪ್ಪಿಸಿಕೊಳ್ಳಲು ಅನುವು ಮಾಡಿಕೊಟ್ಟಿರುವುದು ಆರು ತಿಂಗಳಲ್ಲಿ ಇದು ಎರಡನೇ ಸಲ. ಕುಖ್ಯಾತ ರೌಡಿ ತನ್ವೀರ್ ಸಹ ತನ್ನ ಜತೆಗಿದ್ದ ಪೊಲೀಸರ ನಂಬಿಕೆ ಗಳಿಸಿ ಅವರಿಗೆ ಹಣದ ಆಮಿಷ ಒಡ್ಡಿ ನಂತರ ಪರಾರಿಯಾಗಿದ್ದ.

ಈಗಲೂ ಮುತ್ತಪ್ಪ ರೈ ಸಹಚರ ಸುಧೀರ್ ಪ್ರಭು ತಪ್ಪಿಸಿಕೊಳ್ಳಲು ನಗರ ಸಶಸ್ತ್ರ ಮೀಸಲು ಪಡೆಯ ಸಹಾಯಕ ಸಬ್ ಇನ್‌ಸ್ಪೆಕ್ಟರ್ ಗೇಬ್ರಿಯಲ್ ಕಾರಣ ಎನ್ನಲಾಗಿದೆ.

• ಅಕಾಡೆಮಿ ಪ್ರಶಸ್ತಿ: ವೈದೇಹಿ ತಿರಸ್ಕಾರ

ಉಡುಪಿ, ನ. 27– ಕಳೆದ ವರ್ಷ ಕರ್ನಾಟಕ ಸರ್ಕಾರ ದಾನಚಿಂತಾಮಣಿ ಅತ್ತಿಮಬ್ಬೆ ಪ್ರಶಸ್ತಿ ನೀಡಿರುವ ಹಿನ್ನೆಲೆಯಲ್ಲಿ, ಕರ್ನಾಟಕ ಸರ್ಕಾರದ ಆಶ್ರಯದಲ್ಲಿರುವ ಸಾಹಿತ್ಯ ಅಕಾಡೆಮಿ ಈ ವರ್ಷ ನೀಡಿರುವ ಪ್ರಶಸ್ತಿಯನ್ನು ವೈಯಕ್ತಿಕ ನೆಲೆಯಲ್ಲಿ ತಾವು ತಿರಸ್ಕರಿಸುವುದಾಗಿ ಲೇಖಕಿ ವೈದೇಹಿ ಅವರು ಅಕಾಡೆಮಿ ಅಧ್ಯಕ್ಷರಿಗೆ ಬರೆದಿರುವ ಪತ್ರದಲ್ಲಿ ತಿಳಿಸಿದ್ದಾರೆ.

‘ಇದು ಉದ್ಧಟತನದಿಂದ ಅಲ್ಲ, ದುಡ್ಡಿನ ಜಿಜ್ಞಾಸೆಯಿಂದಲೂ ಅಲ್ಲ’ ಎಂದಿದ್ದಾರೆ.

50 ವರ್ಷಗಳ ಹಿಂದೆ

ಗುರುವಾರ, 28-11-1974

• ಕಬಿನಿ ನೀರು: ನಿಯಮಬದ್ಧ ಶೇಖರಣೆ

ಬೆಂಗಳೂರು, ನ. 27– ಕಬಿನಿ ಜಲಾಶಯದಲ್ಲಿ ಬೇಸಿಗೆ ಬೆಳೆಗಾಗಿ ಕರ್ನಾಟಕವು ನಿಯಮ-ಬದ್ಧವಾಗಿ ನೀರನ್ನು ಶೇಖರಿಸಿಟ್ಟುಕೊಂಡಿದೆ ಎಂದು ಮುಖ್ಯಮಂತ್ರಿ ದೇವರಾಜ ಅರಸು ಅವರು ಇಂದು ಇಲ್ಲಿ ನಡೆದ ಪತ್ರಿಕಾಗೋಷ್ಠಿ-ಯಲ್ಲಿ ತಿಳಿಸಿದರು.

ಈ ಯೋಜನೆಗಾಗಿ ₹ 24 ಕೋಟಿ ವ್ಯಯಿಸಿದ್ದೇವೆ. ಕಾಲುವೆಗಳ ನಿರ್ಮಾಣಕ್ಕಾಗಿ ₹ 8 ಕೋಟಿ ವೆಚ್ಚ ಮಾಡಲಾಗಿದೆ ಎಂದು ಅರಸು, ಎರಡೂ ರಾಜ್ಯಗಳ ಮುಖ್ಯಮಂತ್ರಿಗಳ ಸಭೆಯಲ್ಲಿ ತೆಗೆದುಕೊಂಡ ನಿರ್ಧಾರವನ್ನು ಉಲ್ಲಂಘಿಸಿಲ್ಲ ಎಂದು ಹೇಳುವ ಮೂಲಕ, ಈ ಸಂಬಂಧದ ತಮಿಳುನಾಡಿನ ಆರೋಪವನ್ನು ಅವರು ಅಲ್ಲಗಳೆದರು.

ಕಾವೇರಿ ಜಲವಿವಾದ ಕುರಿತ ಸಭೆಯಲ್ಲಿ ಭಾಗವಹಿಸಲು ಮುಖ್ಯಮಂತ್ರಿಯು ಇಂದು ದೆಹಲಿಗೆ ತೆರಳಿದರು.

ಬಿಜೆಪಿಯ ಅಬ್ಬರ, ವ್ಯವಸ್ಥಿತ ಪ್ರಚಾರದ ಮರ್ಮ ಅರಿಯದ ಕಾಂಗ್ರೆಸ್

ಕೈಯಲ್ಲಿ ಬೆಣ್ಣೆ, ತುಪ್ಪಕ್ಕೆ ಹುಡುಕಾಟ!

ಅನುಸಂಧಾನ

ರವೀಂದ್ರ ಭಟ್ಟ

ರಾಜ್ಯದ ಮೂರು ಕ್ಷೇತ್ರಗಳ ಉಪಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಗೆದ್ದಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಖುಷಿಯಾಗಿದ್ದಾರೆ. ಆದರೂ ಕಾಂಗ್ರೆಸ್ ಪಕ್ಷ ತಾಳತಪ್ಪಿದಂತೆಯೇ ಇದೆ. ಒಂದೂವರೆ ವರ್ಷದಿಂದ, ವಿರೋಧ ಪಕ್ಷಗಳಾದ ಬಿಜೆಪಿ ಮತ್ತು ಜೆಡಿಎಸ್ ಹೆಣೆಯುತ್ತಿರುವ ಬಲೆಯೊಳಗೆ ಕಾಂಗ್ರೆಸ್ ಪಕ್ಷ ತಾನಾಗಿಯೇ ಬೀಳುತ್ತಿರುವಂತೆ ಕಾಣುತ್ತಿದೆ.

ಆಡಳಿತ ಪಕ್ಷವೇ ಆಗಿದ್ದರೂ ತನ್ನನ್ನು ಸಮರ್ಥಿಸಿಕೊಳ್ಳಲು ಕಾಂಗ್ರೆಸ್ ಪಕ್ಷಕ್ಕೆ ಸಾಧ್ಯವಾಗುತ್ತಿಲ್ಲ. ಪ್ರಚಾರ ಮಾಡುವ ಬಿಜೆಪಿಯ ಕಲೆಗಾರಿಕೆಯನ್ನು ಕಾಂಗ್ರೆಸ್ ಇನ್ನೂ ಕಲಿತಿಲ್ಲ; ವ್ಯವಸ್ಥಿತ ಅಪಪ್ರಚಾರವನ್ನು ಎದುರಿಸುವಷ್ಟು ಜಾಣ್ಮೆಯನ್ನೂ ರೂಢಿಸಿಕೊಂಡಿಲ್ಲ. ಚುನಾವಣೆ ಗೆಲ್ಲಲು ಬೇಕಾದ ತಂತ್ರವನ್ನು ಕಾಂಗ್ರೆಸ್ ಯಶಸ್ವಿಯಾಗಿ ಹೆಣೆದಿದ್ದರೂ ಜನಮಾನಸದಲ್ಲಿ ಬಿಜೆಪಿ ಬಿತ್ತುತ್ತಿರುವ ವಿಷಬೀಜವನ್ನು ಕಿತ್ತುಹಾಕಲು ಕಾಂಗ್ರೆಸ್‌ಗೆ ಸಾಧ್ಯವಾಗುತ್ತಿಲ್ಲ.

ಅಮೆರಿಕದ ನ್ಯಾಯಾಲಯವೊಂದು ಉದ್ಯಮಿ ಗೌತಮ್ ಅದಾನಿ ವಿರುದ್ಧ ಬಂಧನದ ವಾರಂಟ್ ಪ್ರಕಟಿಸುತ್ತಿದ್ದಂತೆ ಬಿಜೆಪಿಯ ದೆಹಲಿ ನಾಯಕರಿಂದ ಹಿಡಿದು ತಾಲ್ಲೂಕು ಮಟ್ಟದ ನಾಯಕರವರೆಗೆ ಒಂದೇ ರೀತಿಯ ಪ್ರತಿಕ್ರಿಯೆಯನ್ನು ನೀಡುತ್ತಾರೆ. ಅದು ಮಾಧ್ಯಮಗಳಲ್ಲಿ, ವಿಶೇಷವಾಗಿ ಎಲೆಕ್ಟ್ರಾನಿಕ್ ಮಾಧ್ಯಮಗಳಲ್ಲಿ ಬರುವಂತೆ ನೋಡಿಕೊಳ್ಳುತ್ತಾರೆ. ಡಿಜಿಟಲ್ ಮಾಧ್ಯಮಗಳಲ್ಲಿ ಹುಯಿಲೆಬ್ಬಿಸುತ್ತಾರೆ. ಬಿಜೆಪಿಯವರು ಹೇಳುವುದನ್ನು ಜನ ಹೌದೇ ಹೌದು ಎಂದು ನಂಬುವಂತೆ ಮಾಡುತ್ತಾರೆ. ಇಂತಹದ್ದೊಂದು ಸಂಪರ್ಕ ಜಾಲ ಕಾಂಗ್ರೆಸ್ ಪಕ್ಷದಲ್ಲಿ ಇಲ್ಲ. ಜನ ನಂಬುವಂತೆ ಹೇಳುವ ಕಲೆಗಾರಿಕೆಯೂ ಅವರಿಗೆ ಸಿದ್ಧಿಸಿದಂತೆ ಕಾಂಗ್ರೆಸ್ ಮುಖಂಡರಿಗೆ ಸಿದ್ಧಿಸಿಲ್ಲ.

ಈಗ ಮುಡಾ ಹಗರಣವನ್ನೇ ತೆಗೆದುಕೊಳ್ಳಿ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪತ್ನಿ 14 ನಿವೇಶನಗಳನ್ನು ಪಡೆದುಕೊಂಡಿದ್ದಾರೆ ಎಂಬ ಆರೋಪ ಕೇಳಿಬಂದಾಗ, ಸಿದ್ದರಾಮಯ್ಯ ಅವರನ್ನು ಭ್ರಷ್ಟಾತಿಭ್ರಷ್ಟ ಎಂದೇ ಬಿಂಬಿಸಲಾಯಿತು. ಬಿಜೆಪಿ ಮತ್ತು ಜೆಡಿಎಸ್ ಪಕ್ಷದ ಪ್ರಚಾರ ಹೇಗಿತ್ತೆಂದರೆ, ಮುಡಾದಲ್ಲಿ ಪರ್ಯಾಯ ನಿವೇಶನಗಳನ್ನು ಪಡೆದವರು ಸಿದ್ದರಾಮಯ್ಯ ಅವರ ಪತ್ನಿ ಮಾತ್ರ ಎನ್ನುವಂತೆ ಇತ್ತು. ಆದರೆ ಎಲ್ಲರಿಗೂ ಗೊತ್ತಿರುವ ಸತ್ಯ ಏನು ಎಂದರೆ, ಮುಡಾದಲ್ಲಿ ಕಾಂಗ್ರೆಸ್, ಬಿಜೆಪಿ ಮತ್ತು ಜೆಡಿಎಸ್ ಪಕ್ಷಗಳ ಅನೇಕ ನಾಯಕರು ಪರ್ಯಾಯ ನಿವೇಶನಗಳನ್ನು ಪಡೆದುಕೊಂಡಿದ್ದರು. ಅದನ್ನು ಸರಿಯಾಗಿ ಹೇಳಲೂ ಕಾಂಗ್ರೆಸ್ ಪಕ್ಷಕ್ಕೆ ಸಾಧ್ಯವಾಗಲಿಲ್ಲ. ಕಾಂಗ್ರೆಸ್ ಪಕ್ಷದ ಕೈಯಲ್ಲಿ ಅಧಿಕಾರ ಇತ್ತು. ಮುಡಾದ ಎಲ್ಲ ದಾಖಲೆಗಳೂ ಅವರ ಬಳಿಯೇ ಇದ್ದವು. ಆದರೂ ಬಿಜೆಪಿಯ ಆರೋಪವನ್ನು ಹುಸಿಗೊಳಿಸಲು ಸಾಧ್ಯವಾಗಲಿಲ್ಲ. ಸಿದ್ದರಾಮಯ್ಯ ಅವರ ವಿರುದ್ಧ ಆಪಾದನೆ ಬಂದಾಗ ಬಿಜೆಪಿ ಮತ್ತು ಜೆಡಿಎಸ್ ಪಕ್ಷದ ಯಾರ್‍ಯಾರು ಎಷ್ಟೆಷ್ಟು ನಿವೇಶನಗಳನ್ನು ಪಡೆದುಕೊಂಡಿದ್ದಾರೆ ಎನ್ನುವುದನ್ನು ಜನರಿಗೆ ಮನಮುಟ್ಟುವಂತೆ ವ್ಯವಸ್ಥಿತವಾಗಿ ಹೇಳಲು ಕಾಂಗ್ರೆಸ್ ನಾಯಕರು ವಿಫಲರಾದರು.

ಬಿಪಿಎಲ್ ಕಾರ್ಡ್ ರದ್ದು ವಿಷಯದಲ್ಲಿಯೂ ಹೀಗೆಯೇ ಆಯಿತು. ಕೇಂದ್ರ ಸರ್ಕಾರದ ನಿಯಮಾವಳಿ ಪ್ರಕಾರವೇ ಕಾರ್ಡುಗಳನ್ನು ರದ್ದು ಮಾಡಲಾಗಿದ್ದರೂ ಅದನ್ನು ಸಮರ್ಥಿಸಿಕೊಳ್ಳುವಲ್ಲಿ ಕಾಂಗ್ರೆಸ್ ನಾಯಕರು ವಿಫಲರಾದರು. ದೇಶದಲ್ಲಿ 5 ಕೋಟಿಗೂ ಹೆಚ್ಚು ಕಾರ್ಡ್‌ಗಳನ್ನು ರದ್ದು ಮಾಡಿರುವುದಾಗಿ ಕೇಂದ್ರ ಸರ್ಕಾರವೇ ಪ್ರಕಟ ಮಾಡಿದ ನಂತರ ನಮ್ಮ ಆಹಾರ ಸಚಿವರು ಪತ್ರಿಕಾಗೋಷ್ಠಿ ನಡೆಸಿ ಕೇಂದ್ರದ ನಿಯಮಾವಳಿಗಳನ್ನು ಪ್ರಕಟಿಸಿದರು. ಇದು, ಎಲ್ಲಾ ದೋಚಿಯಾದ ಮೇಲೆ ಕೋಟೆ ಬಾಗಿಲು ಹಾಕಿದಂತೆ ಎಂಬಂತೆ ಆಯಿತು. ಬಡವರ ಬಿಪಿಎಲ್ ಕಾರ್ಡ್ ರದ್ದು ಮಾಡಲಾಗುತ್ತಿದೆ, ಅಕ್ಕಿ ಕೊಡಲು ಸಾಧ್ಯವಾಗದೆ ಹೀಗೆಲ್ಲಾ ಮಾಡಲಾಗುತ್ತಿದೆ ಎಂದು ಬಿಜೆಪಿ ಮುಖಂಡರು ಹುಯಿಲೆಬ್ಬಿಸಿಯಾಗಿತ್ತು. ಬಿಪಿಎಲ್ ಕಾರ್ಡ್ ರದ್ದಾದವರ ಮನೆಗಳಿಗೆ ಭೇಟಿ ನೀಡಿದ ಬಿಜೆಪಿ ನಿಯೋಗ, ‘ನಿಮ್ಮ ಜೊತೆಗೆ ಬಿಜೆಪಿ ಇದೆ’ ಎಂಬ ಸಂದೇಶವನ್ನೂ ಸಾರಿಯಾಗಿತ್ತು. ಅಲ್ಲಿಗೆ ಚಿವುಟಿಯೂ ಆಗಿತ್ತು, ಮಗು ಅಳುವುದನ್ನು ಸುಮ್ಮನಿರಿಸಲು ತೊಟ್ಟಿಲು ತೂಗಿದ್ದೂ ಆಗಿತ್ತು.

ವಕ್ಫ್ ಆಸ್ತಿ ವಿವಾದಕ್ಕೆ ಸಂಬಂಧಿಸಿದಂತೆಯೂ ಹೀಗೆಯೇ ಆಯಿತು. ಬಿ.ಎಸ್.ಯಡಿಯೂರಪ್ಪ ಮತ್ತು ಬಸವರಾಜ ಬೊಮ್ಮಾಯಿ ಮುಖ್ಯಮಂತ್ರಿಯಾಗಿದ್ದಾಗಲೇ ವಕ್ಫ್ ಆಸ್ತಿ ಉಳಿಸುವ ಪ್ರಕ್ರಿಯೆ ಆರಂಭವಾಗಿತ್ತು. ಕುಮಾರ್ ಬಂಗಾರಪ್ಪ ಅಧ್ಯಕ್ಷತೆಯ ಸಮಿತಿಯು ವಕ್ಫ್ ಆಸ್ತಿಯ ಬಗ್ಗೆ ಅಧ್ಯಯನ ನಡೆಸಿ ವರದಿ ನೀಡಿತ್ತು. ಆ ವರದಿಯು ವಿಧಾನಮಂಡಲದಲ್ಲಿ ಮಂಡನೆಯೂ ಆಗಿತ್ತು. ಅದನ್ನು ಅವಲೋಕಿಸಿದರೆ, ಕಾಂಗ್ರೆಸ್ ನೇತೃತ್ವದ ಸರ್ಕಾರದ ಅವಧಿಯಲ್ಲಿ ನೀಡಿರುವ ನೋಟಿಸ್‌ಗಳಿಗಿಂತ ಬಿಜೆಪಿ ಆಡಳಿತದ ಅವಧಿಯಲ್ಲೇ ಹೆಚ್ಚಿನ ರೈತರಿಗೆ ನೋಟಿಸ್ ನೀಡಿರುವ ಮಾಹಿತಿ ಲಭ್ಯವಾಗುತ್ತದೆ. ವರದಿ ಸರ್ಕಾರದ ಕೈಯಲ್ಲಿಯೇ ಇತ್ತು. ಆದರೆ ಅದನ್ನು ಬಹಿರಂಗಪಡಿಸಿ ಬಿಜೆಪಿಯ ಬಾಯಿ ಮುಚ್ಚಿಸಲು ಕಾಂಗ್ರೆಸ್ ಪಕ್ಷಕ್ಕೆ ಸಾಧ್ಯವಾಗಲಿಲ್ಲ. ಕಡತಗಳಲ್ಲಿ ಇರುವುದನ್ನೇ ಹುಡುಕಿ ಹೇಳದಷ್ಟು ಸೋಮಾರಿಗಳಾಗಿದ್ದರು ಕಾಂಗ್ರೆಸ್ ನಾಯಕರು. ಬಿದ್ದರೂ ಮೀಸೆ ಮಣ್ಣಾಗಲಿಲ್ಲ ಎನ್ನುವಂತೆ ಬಿಜೆಪಿ ನಾಯಕರು ‘ನಾವು ರೈತರಿಗೆ ನೋಟಿಸ್ ನೀಡಿಲ್ಲ. ವಕ್ಫ್ ಆಸ್ತಿಯನ್ನು ಒತ್ತುವರಿ ಮಾಡಿಕೊಂಡಿದ್ದ ದೊಡ್ಡ ದೊಡ್ಡ ಕುಳಗಳಿಗೆ ಮಾತ್ರ ನೋಟಿಸ್ ನೀಡಿದ್ದೆವು’ ಎಂದರು. ಈ ದೊಡ್ಡ ದೊಡ್ಡ ಕುಳಗಳಲ್ಲಿ ಬಿಜೆಪಿ ಮತ್ತು ಜೆಡಿಎಸ್ ನಾಯಕರೂ ಇದ್ದಾರೆ ಎಂಬುದನ್ನು ಎತ್ತಿ ತೋರಿಸಲು ಕಾಂಗ್ರೆಸ್ ನಾಯಕರು ಇನ್ನೂ ತಿಣುಕಾಡುತ್ತಿದ್ದಾರೆ. ಕೇಂದ್ರ ಸರ್ಕಾರವು ವಕ್ಫ್ ಕಾಯ್ದೆಗೆ ತಿದ್ದುಪಡಿ ತರುವ ಹೊತ್ತಿನಲ್ಲಿಯೇ ಯಾಕೆ ಈ ವಿವಾದ ಹುಟ್ಟುಹಾಕಲಾಯಿತು ಎನ್ನುವುದನ್ನು ಜನರಿಗೆ ಮನದಟ್ಟು ಮಾಡುವ ಅವಕಾಶವನ್ನೂ ಕಾಂಗ್ರೆಸ್ ನಾಯಕರು ಕಳೆದುಕೊಂಡರು. ಸಮಾಜದಲ್ಲಿ ಮುಸ್ಲಿಮರ ವಿರುದ್ಧ ದ್ವೇಷ ಬಿತ್ತುವ ಚಟುವಟಿಕೆಯು ಮಿತಿಮೀರುತ್ತಿದ್ದರೂ ಅದಕ್ಕೆ ಕಡಿವಾಣ ಹಾಕುವ ಯಾವ ಪ್ರಯತ್ನವನ್ನೂ ಮಾಡದೆ ಸುಮ್ಮನೆ ಕುಳಿತರೆ ಮುಂದೊಂದು ದಿನ ದೊಡ್ಡ ಬೆಲೆಯನ್ನು ತೆರಬೇಕಾಗುತ್ತದೆ.



ಕಾಂಗ್ರೆಸ್ ಪಕ್ಷದ ಗ್ಯಾರಂಟಿ ಯೋಜನೆಗಳಿಂದ ರಾಜ್ಯ ಆರ್ಥಿಕವಾಗಿ ದಿವಾಳಿಯಾಗುತ್ತಿದೆ ಎಂದು ಪ್ರತಿಪಕ್ಷಗಳು ಆರೋಪಿಸುತ್ತಿದ್ದರೆ, ಅದನ್ನು ಸಮರ್ಥಿಸಿಕೊಳ್ಳಲೂ ಮುಖ್ಯಮಂತ್ರಿ ಮತ್ತು ಉಪಮುಖ್ಯಮಂತ್ರಿ ಬಿಟ್ಟರೆ ಉಳಿದ ಸಚಿವರು ಪೂರ್ಣ ಪ್ರಮಾಣದಲ್ಲಿ ಮುಂದಾಗಲಿಲ್ಲ. ಮುಖ್ಯಮಂತ್ರಿ ಮೇಲೆ ಆರೋಪಗಳು ಬಂದಾಗ ಅವರ ಸಮರ್ಥನೆಗೆ ಒಂದಿಬ್ಬರು ಸಚಿವರನ್ನು ಬಿಟ್ಟರೆ ಉಳಿದ ಸಚಿವರು ಯಾರೂ ಮುಂದೆ ಬರಲಿಲ್ಲ. ಆರೋಪ ಬಂದಿದ್ದು ಮುಖ್ಯಮಂತ್ರಿ ಮೇಲೆ ತಾನೆ, ಅವರೇ ಬಗೆಹರಿಸಿಕೊಳ್ಳಲಿ ಎಂಬ ಧೋರಣೆ ಸರ್ಕಾರದ ಭಾಗವಾಗಿರುವ ನಾಯಕರಲ್ಲೂ ಪಕ್ಷದ ನಾಯಕರಲ್ಲೂ ಕಾಣಿಸಿಕೊಂಡಿದ್ದು ಸುಳ್ಳಲ್ಲ.

ಜಿಎಸ್‌ಟಿ ಪರಿಹಾರ, ಹಣಕಾಸು ಆಯೋಗದ ಅನುದಾನ ಹಂಚಿಕೆಯಲ್ಲಿ ರಾಜ್ಯಕ್ಕೆ ಅನ್ಯಾಯವಾಗಿದ್ದರೂ ಕೇಂದ್ರ ಸರ್ಕಾರವು ರಾಜ್ಯಕ್ಕೆ ಅನ್ಯಾಯ ಮಾಡುತ್ತಿದೆ ಎನ್ನುವುದನ್ನು ರಾಜ್ಯದ ಜನರಲ್ಲಿ ಬಿಂಬಿಸುವುದಕ್ಕೆ ಕಾಂಗ್ರೆಸ್ ಪಕ್ಷಕ್ಕೆ ಸಾಧ್ಯವಾಗಿಲ್ಲ. ಬಿಜೆಪಿ ನಾಯಕರಿಗೂ ಕಾಂಗ್ರೆಸ್ ನಾಯಕರಿಗೂ ಇರುವ ಪ್ರಮುಖ ವ್ಯತ್ಯಾಸ ಏನೆಂದರೆ, ಬಿಜೆಪಿ ನಾಯಕರು ಹೇಳಿದ್ದನ್ನೇ ಮತ್ತೆ ಮತ್ತೆ ಹೇಳುತ್ತಾ ಅದನ್ನು ಜನ ನಂಬುವಂತೆ ಮಾಡುತ್ತಾರೆ. ಸಾಧ್ಯ ಇರುವ ಎಲ್ಲ ಪ್ರಚಾರ ಮಾರ್ಗಗಳನ್ನೂ ಬಳಸಿ ಜನರ ಭಾವನೆಯನ್ನು ಕೆರಳಿಸುತ್ತಾರೆ. ಕಾಂಗ್ರೆಸ್ ನಾಯಕರು ಎಲ್ಲವೂ ಕೈಯಲ್ಲಿ ಇದ್ದರೂ ಒಮ್ಮೆ ಹೇಳಿದ ಹಾಗೆ ಮಾಡಿ ಸುಮ್ಮನಾಗಿಬಿಡುತ್ತಾರೆ. ಒಂದು ಸುಳ್ಳನ್ನು ನೂರು ಬಾರಿ ಹೇಳಿದರೆ ಅದು ಸತ್ಯವಾಗುತ್ತದೆ ಎನ್ನುವುದು ಬಿಜೆಪಿ ನಾಯಕರಿಗೆ ಗೊತ್ತು. ಸತ್ಯವಾದರೂ ಅದನ್ನೂ ನೂರು ಬಾರಿ ಹೇಳಿ ಇದೇ ಸತ್ಯ ಎಂದು ಸಾಬೀತು ಮಾಡಬೇಕಾದ ಕಾಲದಲ್ಲಿ ನಾವಿದ್ದೇವೆ ಎನ್ನುವುದು ಇನ್ನೂ ಕಾಂಗ್ರೆಸ್ ಪಕ್ಷದ ನಾಯಕರಿಗೆ ಅರಿವಾಗಿಲ್ಲ.

ಮುಖ್ಯಮಂತ್ರಿ ಸಿದ್ದರಾಮಯ್ಯ ಈಗ ಉತ್ತರರಾಮಯ್ಯ ಆಗಿಬಿಟ್ಟಿದ್ದಾರೆ. ಬಿಜೆಪಿ ಮತ್ತು ಜೆಡಿಎಸ್ ಪಕ್ಷಗಳ ನಾಯಕರು ಮಾಡುವ ಆರೋಪಗಳಿಗೆ ಉತ್ತರ ಹೇಳುವುದೇ ಅವರ ಕೆಲಸವಾಗಿದೆ. ಈ ಎರಡೂ ಪಕ್ಷಗಳ ಮುಖಂಡರ ಹಗರಣಗಳನ್ನು ಬಯಲಿಗೆಳೆಯುವುದಾಗಿ ಅವರು ಹೇಳಿದ್ದರೂ ಅದು ಇನ್ನೂ ಕಾರ್ಯರೂಪಕ್ಕೆ ಬಂದಿಲ್ಲ. ಕೋವಿಡ್ ಕಾಲದ ಹಗರಣಗಳೂ ಇನ್ನೂ ಪೂರ್ಣ ಪ್ರಮಾಣದಲ್ಲಿ ಹೊರಬಂದಿಲ್ಲ. ಈ ಜಡತ್ವದಿಂದ ಕಾಂಗ್ರೆಸ್ ಹೊರಬರುವುದೇ?

ಚುರುಮುರಿ

ಮುಂದಿನ ಮುಖ್ಯಮಂತ್ರಿ

• ಗುರು ಪಿ.ಎಸ್.

‘ಹೋರಾಟ, ಹೋರಾಟ... ಎಲ್ಲಿಯವರೆಗೆ ಹೋರಾಟ, ಗೆಲ್ಲುವವರೆಗೆ ಹೋರಾಟ...’ ಕೂಗುತ್ತಾ ಹೊರಟ ಮುದ್ದಣ್ಣ.

‘ಯಾರು ಗೆಲ್ಲೋವರೆಗೆ ಹೋರಾಟ?’ ಮುದ್ದಣ್ಣನನ್ನು ತಡೆದು ಕೇಳಿದ ವಿಜಿ.

‘ನಮ್ ಟೀಮ್ ಗೆಲ್ಲೋವರೆಗೆ’ ಥಟ್ ಅಂತ ಹೇಳಿದ ಮುದ್ದಣ್ಣ.

‘ಟೀಮ್ ಗೆಲ್ಲಬೇಕೆಂದರೆ ಎಲ್ಲ ಸಮುದಾಯದವರ ಬೆಂಬಲ ಬೇಕಲ್ವ?’

‘ನಮಗೆ ಒಂದ್ ಸಮುದಾಯದ ಬೆಂಬಲ ಇದ್ದರೆ ಸಾಕು, ಮತ್ತೊಂದು, ಮಗದೊಂದು ಎಲ್ಲ ಏನೂ ಬೇಡ’ ಮುದ್ದಣ್ಣನಿಗೆ ಮೂಗಿನ ತುದಿಗೇ ಬಂತು ಕೋಪ.

‘ಹೀಗೆ ಹೇಳಿ ಹೇಳಿಯೇ ಮೊನ್ನೆ ಎಲೆಕ್ಷನ್‌ನಲ್ಲಿ ಮುಗ್ಗರಿಸಿ ಬಿದ್ದಿದ್ದು ನಿಮ್ಮ ಪಕ್ಷವೇ ಅಲ್ಲವೆ?’ ಕೈಯಲ್ಲಿದ್ದ ಚನ್ನಪಟ್ಟಣದ ಗೊಂಬೆ ಆಡಿಸುತ್ತಾ ವ್ಯಂಗ್ಯವಾಡಿದ ವಿಜಿ.

‘ಅದು ನಮ್ಮ ಪಕ್ಷವೇ, ಆದರೆ ಬೇರೆ ಟೀಮ್’.

‘ಪಕ್ಷ ಸೋತರೆ ನಿಮ್ಮ ತಂಡ ಕೂಡ ಸೋತಂಗಲ್ವ?’ ಪಟ್ಟು ಬಿಡಲಿಲ್ಲ ವಿಜಿ.

‘ಪಕ್ಕದ ಮಹಾರಾಷ್ಟ್ರದಲ್ಲಿ ನಮ್ ಪಕ್ಷ ಎಷ್ಟ್ ಸ್ಟ್ರಾಂಗ್ ಇದೆಯೋ ಅಷ್ಟು ಸ್ಟ್ರಾಂಗ್ ನಮ್ ಟೀಮ್ ಇದೆ. ಅದು ನಮ್ಮ ನಿಜವಾದ ಪಕ್ಷ. ಇಲ್ಲಿಯವರದ್ದೆಲ್ಲ ಅಡ್ಜಸ್ಟ್‌ಮೆಂಟ್ ಪಾಲಿಟಿಕ್ಸ್’.

‘ಅದೆಲ್ಲ ಸರಿ, ಈಗ ಯಾವುದಕ್ಕೆ ಹೋರಾಟ ಅಂತ ಹೇಳಲೇ ಇಲ್ಲ ನೀವು’.

‘ಭೂಮಿ ಕಳೆದುಕೊಂಡವರಿಗೆ ಮರಳಿ ಕೊಡಿಸುವುದಕ್ಕೆ ಈ ಹೋರಾಟ’.

‘ಹಾಗೇ ನಿಮಗೂ ಒಂದು ನೆಲೆ ಕಂಡುಕೊಳ್ಳೋದಕ್ಕೂ ಅನ್ನಿ’ ಎಂದು ಮೆಲ್ಲಗೆ ನಕ್ಕ ವಿಜಿ.

‘ನೋಡ್ರಿ, ನೀವ್ ಏನಾದರೂ ತಿಳ್ಕೊಳ್ಳಿ, ಈ ಹೋರಾಟದಲ್ಲಿ ನಾವು ಯಶಸ್ವಿ ಆಗ್ತೀವಿ. ಮುಂದೆ ನಮ್ ಟೀಮ್‌ನವರೇ ಮುಖ್ಯಮಂತ್ರಿ ಆಗ್ತಾರೆ’ ವಿಶ್ವಾಸದಿಂದ ಹೇಳಿದ ಮುದ್ದಣ್ಣ.

‘ಸಿಎಂ ಆಗಬೇಕೆಂದರೂ ಎಲ್ಲ ಸಮುದಾಯದವರ ಬೆಂಬಲ ಬೇಕು’.

‘ಬೇಡವೇ ಬೇಡ, ಆ ಸಮುದಾಯದವರ ಬೆಂಬಲ ಬೇಡವೇ ಬೇಡ’ ಎನ್ನುತ್ತಾ ಜೋರಾಗಿ ಕೂಗಿದ ಮುದ್ದಣ್ಣ.

‘ವೈಲ್ಡ್ ಕಾರ್ಡ್ ಎಂಟ್ರಿ’ ಎನ್ನುವ ರೀತಿ ಹೈಕಮಾಂಡ್‌ನಿಂದ ಹೆಸರೊಂದು ತೇಲಿ ಬಂತು.

‘ಶ್ರೀಮಾನ್... ಅವರೇ ಮುಂದಿನ ಸಿಎಂ’.

ಪೆಚ್ಚಾಗಿ ಕೂತ ಮುದ್ದಣ್ಣ!

ಸಂಗತ

ನಮ್ಮ ಸಂವಿಧಾನ, ನಮ್ಮ ಬದ್ಧತೆ

ಭ್ರಷ್ಟಾಚಾರ ನಿಲ್ಲದ ವಿನಾ ಪ್ರಜಾಪ್ರಭುತ್ವಕ್ಕೆ ಉಳಿಗಾಲವಿಲ್ಲ, ಸಂವಿಧಾನಕ್ಕೂ ಉಳಿಗಾಲ ಇರುವುದಿಲ್ಲ, ಗೌರವವೂ ಬರುವುದಿಲ್ಲ

• ಆರ್.ಲಕ್ಷ್ಮೀನಾರಾಯಣ

ಇದೀಗತಾನೆ ಸಂವಿಧಾನ ದಿನವನ್ನು ಆಚರಿಸಿದ್ದೇವೆ. ‘ಲಾ ಡೇ’ ಎಂದು ಇದ್ದದ್ದನ್ನು ಸಂವಿಧಾನ ದಿನ ಎಂದು ಬದಲಿಸುವ ಮೂಲಕ ಉನ್ನತೀಕರಿಸಿ ಆಚರಿಸಿದ್ದೇವೆ. ಭಾರತೀಯರು ದಿನಾಚರಣೆಗಳ ವಿಷಯದಲ್ಲಿ ಜಗತ್ತಿನಲ್ಲಿ ಎಲ್ಲರಿಗಿಂತ ಮುಂದು! ಸತ್ತವರಿಂದ ಹಿಡಿದು ಸಂವಿಧಾನದವರೆಗೆ ದಿನಾಚರಣೆಗಳೋ ದಿನಾಚರಣೆಗಳು! ಬಹುಶಃ ವರ್ಷದಲ್ಲಿ ಯಾವುದೇ ದಿನಾಚರಣೆ ಇಲ್ಲದ ದಿನ ಯಾವುದೆಂದು ಕಷ್ಟಪಟ್ಟು ಹುಡುಕಬೇಕಾಗಿದೆ ಎನ್ನುವಷ್ಟು ಮಟ್ಟಿಗೆ ದಿನಾಚರಣೆಗಳು ರೂಢಿಗೆ ಬಂದುಬಿಟ್ಟಿವೆ. ಆದರೆ ಸಂವಿಧಾನ ದಿನ ಕೂಡ ಅವುಗಳಲ್ಲಿ ಒಂದು ಎನ್ನುವಂತೆ ಖಂಡಿತ ಆಗಬಾರದು.

ನಮ್ಮ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಅದನ್ನೇ ಬಹುಶಃ ‘ಸಂವಿಧಾನ ನಮ್ಮ ಜೀವನದ ಅವಿಭಾಜ್ಯ ಅಂಗವಾಗಬೇಕು’ ಎಂದು ಹೇಳಿದ್ದಾರೆ. ನಮ್ಮ ಎಲ್ಲ ಮಂತ್ರಿ ಮಹೋದಯರೂ ಅಧಿಕಾರ ಸ್ವೀಕರಿಸುವಾಗ ಹೇಳುವ ಪ್ರತಿಜ್ಞಾವಿಧಿಯಲ್ಲಿ ಸಂವಿಧಾನದ ವಿಷಯಕ್ಕೆ ಶ್ರದ್ಧೆ ಮತ್ತು ನಿಷ್ಠೆ ಇಟ್ಟುಕೊಂಡಿರುವುದಾಗಿ ಹೇಳುವ ಪರಿಪಾಟ ಬೆಳೆದುಬಂದಿದೆ. ಆದರೆ ಹಾಗೆ ಹೇಳಿ ಪ್ರತಿಜ್ಞಾವಿಧಿ ಸ್ವೀಕರಿಸಿದ ಬಹುಪಾಲು ಜನ ಅಧಿಕಾರ ಬಿಟ್ಟುಕೊಡುವ ಹೊತ್ತಿಗೆ ಅವರ ಸುತ್ತ ಹಗರಣಗಳ ಸರಮಾಲೆಯೇ ಸುತ್ತಿಕೊಂಡುಬಿಟ್ಟಿರುವುದು ಹಿಂದಿನ ಅರ್ಧ ಶತಮಾನದಿಂದಂತೂ ತೀರಾ ಸಾಮಾನ್ಯವಾಗಿಬಿಟ್ಟಿದೆ. ಅವರು ನಿಜಕ್ಕೂ ಸಂವಿಧಾನಕ್ಕೆ ಬದ್ಧರೇ ಆಗಿದ್ದರೆ ಹಾಗಾಗಬೇಕಿಲ್ಲ. ಕಡೇಪಕ್ಷ ಪ್ರತಿಜ್ಞಾವಿಧಿ ಸ್ವೀಕರಿಸಿದ ದಿನವಾದರೂ ಅದರಂತೆ ಇರುತ್ತಾರೆಯೇ ಎನ್ನುವುದೂ ಅನುಮಾನವೇ ಎನ್ನುವಂತಾಗಿಬಿಟ್ಟಿದೆ.

ಕವಿವರ್ಯ ಬೇಂದ್ರೆಯವರ ಕವಿತೆಯ ‘ಗಾಂಧಿ ಜಯಂತಿಯ ದಿನ/ ಇಂದಾದರೂ ನಿಜ ಹೇಳೋಣ ಸುಳ್ಳಿಗೋ ಇಡಿ ವರುಷ ತೆರವಿಹುದು’ ಎಂಬ ವ್ಯಂಗ್ಯದ ಸಾಲು ನೆನಪಾಗುತ್ತದೆ. ಆದರೆ ವ್ಯಂಗ್ಯವೇ ವಾಸ್ತವ ಆಗಿಬಿಟ್ಟಿರುವ ದುರಂತ ಸಮಯದಲ್ಲಿ ನಾವಿದ್ದೇವೆ.

ಸಂವಿಧಾನದ ಬಗ್ಗೆ ನಮಗೆ ಇರಬೇಕಾದದ್ದು ಎಲ್ಲಕ್ಕಿಂತ ಹೆಚ್ಚಾಗಿ ಬದ್ಧತೆ, ಗೌರವ. ಸಂವಿಧಾನವನ್ನು ಪಾಲಿಸಬೇಕಾದವರಲ್ಲಿ ಅವು ಇದ್ದಿದ್ದರೆ ನಮ್ಮ ದೇಶದ ಜನ ಇಷ್ಟೊಂದು ಪಾಡು ಪಡಬೇಕಾಗಿರಲಿಲ್ಲ. ರಾಜಕೀಯ ಭ್ರಷ್ಟಾಚಾರ ಮತ್ತು ಅಧಿಕಾರಿಶಾಹಿಯ ಭ್ರಷ್ಟಾಚಾರ ತನ್ನ ತುತ್ತತುದಿಯನ್ನು ತಲುಪಿರುವ ಕಾಲದಲ್ಲಿ ನಾವಿದ್ದೇವೆ. ಯಾವ ಕಚೇರಿಗೆ ಕಾಲಿಟ್ಟರೂ ಒಂದು ಸಣ್ಣ ಕೆಲಸಕ್ಕೂ ಲಂಚ ತೆರದೆ ಕೆಲಸವಾಗುವುದಿಲ್ಲ ಎಂಬುದು ಸೂರ್ಯಸತ್ಯ. ಕೇಳಿದರೆ, ಮಂತ್ರಿಗಳವರೆಗೂ ಹಂಚಿಕೆಯಾಗಬೇಕು ಎನ್ನುತ್ತಾರೆ.

ಭ್ರಷ್ಟಾಚಾರ ನಿಲ್ಲದ ವಿನಾ ಪ್ರಜಾಪ್ರಭುತ್ವಕ್ಕೆ ಉಳಿಗಾಲವಿಲ್ಲ, ಸಂವಿಧಾನಕ್ಕೂ ಉಳಿಗಾಲ ಇರುವುದಿಲ್ಲ, ಗೌರವವೂ ಬರುವುದಿಲ್ಲ. ರೆವಿನ್ಯೂ ಕಚೇರಿಗಳು, ಶಿಕ್ಷಣ ಸಂಸ್ಥೆಗಳು, ಆಸ್ಪತ್ರೆಗಳು, ಉದ್ಯೋಗ ರಂಗ, ಉದ್ಯಮಗಳು... ಹೀಗೆ ಇದು ಸರ್ವವ್ಯಾಪಿಯಾಗಿ, ಸಹಜವಾಗಿ ಪರಿಹಾರ ಕಾಣಬೇಕಾದಂಥ ಸಮಸ್ಯೆಗಳ ಪರಿಹಾರಕ್ಕೂ ರಾಜಕಾರಣಿಗಳು ಮತ್ತು ಅಧಿಕಾರಿಶಾಹಿಯ ಈ ಲಂಚಗುಳಿತನ ದೊಡ್ಡ ತಡೆಗೋಡೆಯಾಗಿದೆ. ಇದರ ಹಾವಳಿಯಿಂದ ಹತಾಶರಾಗಿ ಹೊಸ ಹೊಸ ನಕ್ಸಲೀಯರು ಹುಟ್ಟಿಕೊಳ್ಳುವುದಕ್ಕೂ ಇದು ಕಾರಣ ಆಗಿದೆ. ಇನ್ನು ಭ್ರಷ್ಟಾಚಾರ ವಿರುದ್ಧದ ಆಂದೋಲನದ ಹೆಸರು ಹೇಳಿಕೊಂಡು ಅಧಿಕಾರಕ್ಕೆ ಬಂದ ವ್ಯಕ್ತಿ ಮತ್ತು ಆತನ ಬಹಳಷ್ಟು ಸಂಗಡಿಗರು ಭ್ರಷ್ಟಾಚಾರದ ಆಪಾದನೆಯಲ್ಲಿ ಜೈಲು ಸೇರಿದ್ದಕ್ಕಿಂತ ಇನ್ನೊಂದು ವ್ಯಂಗ್ಯ ಇನ್ನೇನಿದೆ?

ಜಗತ್ತಿನ ಮೊದಲ ಧಾರ್ಮಿಕ ಸಂಸತ್ತು ಶರಣರ ಅನುಭವ ಮಂಟಪ; ಅಲ್ಲ, ತೀರ್ಥಂಕರರ ಸಮವಸರಣ ಎಂದೆಲ್ಲ ಹೆಮ್ಮೆತಾಳುವ ನಾವು, ಕವಿ ಅಡಿಗರು ಹೇಳುವಂತೆ ‘ಇದೆ’ಯ ಹೃದಯದ್ರಾವದ ಗೊಡವೆಯಿಲ್ಲದೆ ‘ಇತ್ತು’ಗಳ ಧ್ವಜವನ್ನು ಎತ್ತಿಹಿಡಿಯುವುದರಲ್ಲಿ ನಿಸ್ಸೀಮರು. ಆದರೆ ಈಗಿನ ನಮ್ಮ ಸಂಸತ್ತು ಹೇಗೆ ನಡೆಯುತ್ತಿದೆ ಎಂಬುದರ ಬಗ್ಗೆ ಜನ ತಲೆಕೆಡಿಸಿಕೊಳ್ಳುವುದಿರಲಿ ಸಂಸದರೂ ತಲೆಕೆಡಿಸಿಕೊಳ್ಳುವ ಕಷ್ಟ ತೆಗೆದುಕೊಳ್ಳುವುದಿಲ್ಲವಲ್ಲ ಎಂಬುದೇ ನಮ್ಮ ಚಿಂತೆಯಾಗಿದೆ.

ಒಂದು ದಿನದ ಸಂಸತ್ ಕಲಾಪಕ್ಕೆ ಕೋಟಿಗಟ್ಟಲೆ ಹಣ ಖರ್ಚಾಗುತ್ತದೆಂದು ಹೇಳಲಾಗುತ್ತದೆ ಮತ್ತು ಆ ಕಲಾಪಗಳು ದೂರದರ್ಶನದಲ್ಲಿ ನೇರವಾಗಿ ಪ್ರಸಾರವಾಗುತ್ತವೆ ಎಂಬುದು ಎಲ್ಲ ಸಂಸದರಿಗೂ ತಿಳಿದಿದೆ. ಹೀಗಿದ್ದೂ ಜನರ ಸಮಸ್ಯೆಗಳನ್ನು ಮುನ್ನೆಲೆಗೆ ತಂದು, ಸಂಸತ್ತಿನಲ್ಲಿ ಪ್ರತಿಧ್ವನಿಸುವುದರತ್ತ ಅವರು ಅಲಕ್ಷ್ಯ ತೋರುತ್ತಾರೆ. ತಮ್ಮ ಬಗ್ಗೆ ಜನ ಏನೆಂದುಕೊಂಡಾರು ಎಂಬುದರ ಬಗ್ಗೆ ಕಿಂಚಿತ್ತೂ ಯೋಚಿಸದೆ, ಬರೀ ತಮ್ಮ ಪಕ್ಷಗಳ ಹಾಗೂ ತಮ್ಮ ವೈಯಕ್ತಿಕ ಪ್ರತಿಷ್ಠೆ ಮೆರೆಸಲು ಇನ್ನಿಲ್ಲದಂತೆ ಮುಗಿಬೀಳುತ್ತಾರೆ. ಏನೊಂದೂ ತ್ಯಾಗ ಮಾಡದವರು ಸಭಾತ್ಯಾಗಕ್ಕೆ ತುದಿಗಾಲಿನಲ್ಲಿ ನಿಲ್ಲುತ್ತಾರೆ. ಇದನ್ನೆಲ್ಲ ಕಂಡಾಗ, ಈ ಚಿತ್ರ ಬದಲಾಗಲು ಭಾರತದ ನಾಗರಿಕರು ಇನ್ನೆಷ್ಟು ವರ್ಷ ಕಾಯಬೇಕು ಎಂದು ಬೇಸರವಾಗುತ್ತದೆ. ‘ಹೆಮ್ಮೆಪಟ್ಟುಕೊಳ್ಳುವಂಥ ಇಂತಹ ಸಂವಿಧಾನವನ್ನು ನಾವು ಕೊಟ್ಟರೂ ಅದಕ್ಕೆ ಚ್ಯುತಿ ಬಾರದಂತೆ ಸಂಸದರು ನಡೆದುಕೊಳ್ಳುವುದನ್ನು ನೋಡಲು ನಾವಿನ್ನೆಷ್ಟು ಕಾಲ ಕಾಯಬೇಕು’ ಎಂದು ಸಂವಿಧಾನ ಪಿತೃಗಳ ಆತ್ಮ ನೊಂದುಕೊಳ್ಳುವುದನ್ನು ತಡೆಯಲಾಗದೇ?

ಎ.ಸೂರ್ಯ ಪ್ರಕಾಶ್ ಅವರೇನೋ ತಮ್ಮ ಲೇಖನದಲ್ಲಿ (ಪ್ರ.ವಾ., ನ. 27) ‘ನಮ್ಮ ಸಂವಿಧಾನ ಜಗತ್ತಿಗೇ ದಾರಿದೀಪ’ ಎಂದು ಸಾರಿಬಿಟ್ಟಿದ್ದಾರೆ. ಅದು ಚರ್ಚಾಸ್ಪದವೋ ಅಲ್ಲವೋ ಎಂಬ ಬಗ್ಗೆ ಹೆಚ್ಚು ತಲೆಕೆಡಿಸಿಕೊಳ್ಳದೆ, ಆ ಬಗ್ಗೆ ಹೆಮ್ಮೆಪಡುತ್ತಲೇ ನಮ್ಮ ಸಂವಿಧಾನ ಮೊದಲು ನಮಗೆ ನಿಜಕ್ಕೂ ದಾರಿದೀಪವಾಗುವಂತೆ, ಅದು ಎಂದೆಂದಿಗೂ ನಂದದಂತೆ ನೋಡಿಕೊಳ್ಳಬೇಕಾದ ಮತ್ತು ಅದರ ಬೆಳಕಿನಲ್ಲಿ ಮುಂದಡಿ ಇಡಬೇಕಾದ ಹೊಣೆಗಾರಿಕೆ ನಮ್ಮದೇ ಆಗಿದೆ.

ವಾಚಕರ ವಾಣಿ

ಸ್ವಾಮೀಜಿಗಳಿಗೂ ಇರಲಿ ನಿವೃತ್ತಿ

ಮುಸ್ಲಿಮರಿಗೆ ಮತದಾನದ ಹಕ್ಕು ಇಲ್ಲದಂತೆ ಮಾಡುವ ಕಾನೂನು ಜಾರಿಗೆ ತರಬೇಕೆಂದು ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದ ಕುಮಾರ ಚಂದ್ರಶೇಖರನಾಥ ಸ್ವಾಮೀಜಿ ಹೇಳಿರುವುದಾಗಿ ವರದಿಯಾಗಿದೆ (ಪ್ರ.ವಾ., ನ. 27). ಇದು ಯಾರನ್ನು ಓಲೈಸುವ ಮಾತು? ಕಾವಿ ತೊಟ್ಟ ಸ್ವಾಮೀಜಿಗಳಿಗೆ ಏಕಿಂಥ ಸಂಕುಚಿತ ಭಾವನೆ? ಇವರ ಇಂತಹ ಮಾತುಗಳು ಸಂವಿಧಾನಕ್ಕೆ ಮಾಡುವ ಅಪಚಾರವಲ್ಲವೇ?

ಸರ್ವರಿಗೂ ಶಾಂತಿ, ಸಮಾಧಾನ ಬಯಸಬೇಕಾದ ಸ್ವಾಮೀಜಿಗಳ ಮನಸ್ಸು ಇಂತಹ ವಿಕಾರಕ್ಕೆ ಒಳಗಾಗಿರುವುದರ ಬಗ್ಗೆ ಸ್ವಸ್ಥ ಸಮಾಜ ಚಿಂತಿಸಬೇಕಾಗಿದೆ. ಬಹುಶಃ ವಯಸ್ಸಿನ ಪರಿಣಾಮವೂ ಇರಬಹುದು. ಎಲ್ಲ ಮಠಗಳ ಸ್ವಾಮೀಜಿಗಳಿಗೂ ಒಂದು ಸೂಕ್ತ ವಯೋಮಾನವನ್ನು ನಿಗದಿ ಮಾಡಿ, ಆನಂತರ ಭಕ್ತಾದಿಗಳು ಅವರಿಗೆ ನಿವೃತ್ತಿ ಘೋಷಿಸಿ, ಪರ್ಯಾಯ ವ್ಯವಸ್ಥೆ ಮಾಡಿಕೊಳ್ಳುವ ಬಗ್ಗೆ ಚಿಂತನೆ ನಡೆಯಬೇಕು.

ತಾ.ಸಿ.ತಿಮ್ಮಯ್ಯ, ಬೆಂಗಳೂರು

ಮಹಾ...ಚಿಂತೆ!

ಗೆದ್ದವರಿಗೆ
ಸಿಎಂ ಚಿಂತೆ,
ಸೋತವರಿಗೆ
ಇವಿಎಂನದೇ ಚಿಂತೆ!

ಮ.ಗು.ಬಸವಣ್ಣ
ಮೈಸೂರು

ಜನಪ್ರತಿನಿಧಿಗಳು ಜನರಿಗೆ ಮಾದರಿಯಾಗಲಿ

ರಾಜ್ಯದ ಎಲ್ಲ ಸಚಿವರು, ಜನಪ್ರತಿನಿಧಿಗಳು ಹಾಗೂ ಸರ್ಕಾರಿ ಅಧಿಕಾರಿಗಳ ಮಕ್ಕಳು ಕಡ್ಡಾಯವಾಗಿ ಸರ್ಕಾರಿ ಶಾಲೆಗಳಲ್ಲಿ ಕಲಿಯುವಂತೆ ಆಗಬೇಕು, ಇಲ್ಲದಿದ್ದರೆ ಸರ್ಕಾರಿ ಶಾಲೆಗಳು ಉದ್ಧಾರ ಆಗುವುದಿಲ್ಲ ಎಂದು ಆದಿಚುಂಚನಗಿರಿ ಕ್ಷೇತ್ರದ ಪೀಠಾಧ್ಯಕ್ಷ ನಿರ್ಮಲಾನಂದನಾಥ ಸ್ವಾಮೀಜಿ ಹೇಳಿರುವುದಾಗಿ ವರದಿಯಾಗಿದೆ (ಪ್ರ.ವಾ., ನ. 19). ಬಹಳ ಕಾಲದಿಂದಲೂ ಇಂತಹ ಒತ್ತಾಯ ಕೇಳಿಬರುತ್ತಲೇ ಇದೆ. ಸರ್ಕಾರಿ ಶಾಲೆಯಲ್ಲಿ ಇವರ ಮಕ್ಕಳು ಓದುವುದಿಲ್ಲ, ಸರ್ಕಾರಿ ಆಸ್ಪತ್ರೆಯಲ್ಲಿ ಇವರು ಚಿಕಿತ್ಸೆ ಪಡೆಯುವುದಿಲ್ಲ ಎನ್ನುವುದಾದರೆ ಇವರು ಸರಿಯಾಗಿ ಆಡಳಿತ ನಡೆಸುತ್ತಿಲ್ಲ ಎಂದಾಗುತ್ತದೆ. ಮಾತ್ರವಲ್ಲ, ವ್ಯವಸ್ಥೆ ಕೆಟ್ಟಿದೆ ಎಂಬುದು ಇದರ ಅರ್ಥ. ಹಾಗಾದರೆ ಸರ್ಕಾರಿ ಆಸ್ಪತ್ರೆ ಮತ್ತು ಸರ್ಕಾರಿ ಶಾಲೆಗಳ ಗುಣಮಟ್ಟವನ್ನು ಸುಧಾರಿಸುವವರು ಯಾರು? ಸರ್ಕಾರಿ ಆಸ್ಪತ್ರೆಯಲ್ಲಿ ಸೌಲಭ್ಯಗಳು ಇದ್ದಾಗಲೂ ಇವರು ಖಾಸಗಿ ಆಸ್ಪತ್ರೆಯಲ್ಲಿ ಪಡೆಯುವ ಚಿಕಿತ್ಸೆಗೆ ಜನಸಾಮಾನ್ಯರ ಹಣವನ್ನು ಬಳಸಿಕೊಳ್ಳುವುದು ಎಷ್ಟು ಸರಿ?

ಈಗಲಾದರೂ ಜನಪ್ರತಿನಿಧಿಗಳು ಮತ್ತು ಸರ್ಕಾರಿ ಅಧಿಕಾರಿಗಳ ಮಕ್ಕಳು ಕಡ್ಡಾಯವಾಗಿ ಸರ್ಕಾರಿ ಶಾಲೆಗಳಲ್ಲಿ ಓದುವಂತೆ ಮತ್ತು ಸರ್ಕಾರಿ ಆಸ್ಪತ್ರೆಗಳಲ್ಲಿಯೇ ಚಿಕಿತ್ಸೆ ಪಡೆಯುವಂತೆ, ಖಾಸಗಿ ಆಸ್ಪತ್ರೆಗಳಲ್ಲಿ ಪಡೆಯುವ ಚಿಕಿತ್ಸೆಯ ವೆಚ್ಚವನ್ನು ಸರ್ಕಾರ ಭರಿಸದಂತೆ ನಿಯಮ ರೂಪಿಸಲಿ. ಸರ್ಕಾರ ನಡೆಸುವ ಹೊಣೆ ಹೊತ್ತ ಇವರೆಲ್ಲ ಜನರಿಗೆ ಮಾದರಿಯಾಗಲಿ.

ಅತ್ತಿಹಳ್ಳಿ ದೇವರಾಜ್, ಹಾಸನ

ಭಿನ್ನಮತ ಎಂಬ ಬಿಜೆಪಿಯ ಗಾಜಿನಮನೆ

ಕರ್ನಾಟಕದಲ್ಲಿ ಕಾಂಗ್ರೆಸ್ ನೇತೃತ್ವದ ಸರ್ಕಾರದ ದುರಾಡಳಿತದಿಂದ ಬೇಸತ್ತಿರುವ ಜನ ಮತ್ತೆ ಬಿಜೆಪಿಯನ್ನು ಅಧಿಕಾರಕ್ಕೆ ತರಲಿದ್ದು, ತಮ್ಮ ತಂಡದವರೇ ಮುಂದಿನ ಮುಖ್ಯಮಂತ್ರಿ ಆಗಲಿದ್ದಾರೆ ಎಂದು ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿರುವ (ಪ್ರ.ವಾ., ನ. 27) ಸುದ್ದಿಯನ್ನು ಓದಿ ಆಶ್ಚರ್ಯವಾಯಿತು. ಬಿಜೆಪಿಯು ಆಂತರಿಕ ಕಲಹ ಹಾಗೂ ಕೆಟ್ಟ ಆಡಳಿತದಿಂದಾಗಿ ಈ ಬಾರಿಯ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಎದುರು ದಯನೀಯವಾಗಿ ಸೋತಿತು. ಮತ್ತೆ ಅದೇ ಚಾಳಿಯನ್ನು ಮುಂದುವರಿಸಿ ಉಪಚುನಾವಣೆ ನಡೆದ ಎಲ್ಲ ಮೂರೂ ಕ್ಷೇತ್ರಗಳಲ್ಲಿ ಸೋತಿದೆ.

ಅಷ್ಟಾದರೂ ಈಗಲೂ ಭಿನ್ನಮತ ಎಂಬ ಗಾಜಿನಮನೆಯಲ್ಲಿರುವ ಯತ್ನಾಳ ಅವರು ಇಂತಹ ಹೇಳಿಕೆಯನ್ನು ನೀಡಿರುವುದು ತೀರಾ ಬಾಲಿಶವಾಗಿದೆ. ಇದೀಗ ರಾಜ್ಯದಲ್ಲಿ ಬಿಜೆಪಿಯು ಅಂಬಿಗನಿಲ್ಲದ ದೋಣಿಯಂತಾಗಿದೆ. ಅದರಲ್ಲಿರುವ ಎಲ್ಲರೂ ತಮಗೆ ತೋಚಿದಂತೆ ಅದನ್ನು ನಡೆಸುತ್ತಿರುವಂತೆ ಕಾಣಿಸುತ್ತಿದೆ. ಸೋಲೇ ಗೆಲುವಿನ ಸೋಪಾನ ಎನ್ನುವ ನಾಣ್ಣುಡಿ ಇದೆ. ಆದರೆ ಬಿಜೆಪಿಯು ಸೋಲಿನಿಂದ ಇನ್ನೂ ಪಾಠ ಕಲಿತಿಲ್ಲವೇನೋ ಅನ್ನಿಸುತ್ತಿದೆ.

ಕಡೂರು ಫಣಿಶಂಕರ್, ಬೆಂಗಳೂರು

ಪ್ರಶ್ನೆಪತ್ರಿಕೆ: ಬೇಕೆ ಈ ತಂತ್ರ?!

ಪದವಿ ಕಾಲೇಜು ಉಪನ್ಯಾಸಕರ ಅರ್ಹತಾ ಪರೀಕ್ಷೆಯಾದ ಕೆ-ಸೆಟ್ ಹಾಗೂ ರಾಯಚೂರು ವಿಶ್ವವಿದ್ಯಾಲಯದ ಸಹಾಯಕ ಪ್ರಾಧ್ಯಾಪಕರ ಹುದ್ದೆ ನೇಮಕಾತಿಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ (ಕೆಇಎ) ವತಿಯಿಂದ ಭಾನುವಾರ (ನ. 24) ರಾಜ್ಯದಾದ್ಯಂತ ಪರೀಕ್ಷೆಗಳನ್ನು ನಡೆಸಲಾಯಿತು. ಈ ಎರಡೂ ಪರೀಕ್ಷೆಗಳನ್ನು ಒಂದೇ ದಿನ ನಡೆಸುವ ಮೂಲಕ, ಕೆಲವು ಕೆ-ಸೆಟ್ ಆಕಾಂಕ್ಷಿಗಳಿಗೆ (ಪಿಎಚ್‌.ಡಿ. ಅಥವಾ ನೆಟ್ ಅರ್ಹತೆ ಹೊಂದಿ ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ಅರ್ಜಿ ಸಲ್ಲಿಸಿದ್ದರೂ) ಅವಕಾಶ ಸಿಗದಂತೆ ಮಾಡಿದ್ದು ಒಂದೆಡೆಯಾದರೆ, ಎಲ್ಲಕ್ಕಿಂತ ದೊಡ್ಡ ಮೋಸ ಮಾಡಿದ್ದು ಕೆಇಎ. ಅಂದರೆ, ಕೆ-ಸೆಟ್ ಹಾಗೂ ಸಹಾಯಕ ಪ್ರಾಧ್ಯಾಪಕರ ಪರೀಕ್ಷೆಗಳಿಗೆ ಒಂದೇ ರೀತಿಯ ಪ್ರಶ್ನೆಪತ್ರಿಕೆಗಳನ್ನು ನೀಡಲಾಗಿತ್ತು. ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ಇದ್ದ ಪರೀಕ್ಷೆಗೆ ಋಣಾತ್ಮಕ ಅಂಕಗಳನ್ನು ನಿಗದಿಪಡಿಸಿದ್ದಷ್ಟೇ ಎರಡರ ನಡುವೆ ಇದ್ದ ವ್ಯತ್ಯಾಸ.

ಕೆ-ಸೆಟ್ ಒಂದು ಅರ್ಹತಾ ಪರೀಕ್ಷೆಯಾದರೆ, ಇನ್ನೊಂದು, ಸಹಾಯಕ ಪ್ರಾಧ್ಯಾಪಕರ ಹುದ್ದೆಯ ನೇಮಕಾತಿಗಾಗಿ ಇರುವಂಥದ್ದು. ಆದರೂ ಎರಡಕ್ಕೂ ಒಂದೇ ರೀತಿಯ ಪ್ರಶ್ನೆಪತ್ರಿಕೆಗಳನ್ನು ನೀಡಿ, ಒಂದೇ ದಿನ ಎರಡೂ ಪರೀಕ್ಷೆಗಳನ್ನು ನಡೆಸಿ ಕೆಇಎ ತನ್ನ ಸಮಯ, ಹಣ ಉಳಿಸಿರಬಹುದು. ಆದರೆ ಅದು ಈ ಮೂಲಕ ಸಹಾಯಕ ಪ್ರಾಧ್ಯಾಪಕರ ಹುದ್ದೆ ಪರೀಕ್ಷೆಗೆ ಇರುವ ಮೌಲ್ಯವನ್ನು ಹಾಳುಗೆಡವಿದೆ. ಇಂತಹ ನಿಲುವು ಪರೀಕ್ಷಾರ್ಥಿಗಳಲ್ಲೂ ವಿವಿಧ ಬಗೆಯ ಗೊಂದಲಗಳನ್ನು ಮೂಡಿಸಿತು. ಒಂದೇ ದಿನ ಎರಡೂ ಪರೀಕ್ಷೆಗಳನ್ನು ನಡೆಸಿದ್ದರೂ ಎರಡಕ್ಕೂ ಬೇರೆ ಬೇರೆ ರೀತಿಯ ಪ್ರಶ್ನೆಪತ್ರಿಕೆಗಳನ್ನು ನೀಡಿದ್ದರೆ ಪರೀಕ್ಷಾರ್ಥಿಗಳಿಗೆ ಸ್ವಲ್ಪ ಸಮಾಧಾನವಾದರೂ ಆಗುತ್ತಿತ್ತು. ರಾಜ್ಯ ಮಟ್ಟದ ಪರೀಕ್ಷಾ ಪ್ರಾಧಿಕಾರವಾಗಿ, ಸಮಯ, ಹಣ ಉಳಿಸಲು ಹೀಗೆ ಬೇಜವಾಬ್ದಾರಿತನ ಪ್ರದರ್ಶಿಸುವುದು ಎಷ್ಟು ಸರಿ?

ಲಕ್ಷ್ಮೀಕಾಂತ ಗೋಡಬೋಲೆ, ಕಲಬುರಗಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಕರ್ನಾಟಕ ಚಿನ್ನದ ಹೊಳಪು

ಕೃತಕ ಬುದ್ಧಿಮತ್ತೆ ಜೊತೆ ಕನ್ನಡದ ಬೆಸುಗೆ ಹೇಗೆ?

ಕನ್ನಡವೂ ಸೇರಿದಂತೆ ರಾಜ್ಯದ ಭಾಷೆಗಳ ಭಾವಲೋಕವನ್ನು ಎಐನ ಭಾಗವಾಗಿಸುವುದು ಅನಿವಾರ್ಯ

ಕೃತಕ ಬುದ್ಧಿಮತ್ತೆ (ಎಐ) ಎಂಬ ತಂತ್ರಜ್ಞಾನದ ಅಲೆಯಲ್ಲಿ ಎದ್ದ ಸಾಮಾಜಿಕತೆ, ಸೃಜನಶೀಲತೆಗಳ ಜಾಗತಿಕ ವಾಗ್ವಾದದಲ್ಲಿ ಪ್ರತಿ ಭಾಷೆಯನ್ನಾಡುವ ಪ್ರತಿ ಮನುಷ್ಯನೂ ಪಾಲ್ಗೊಳ್ಳಲೇಬೇಕಾದ್ದು ಅನಿವಾರ್ಯವಾಗಿದೆ. ಕನ್ನಡವು ಕೂಡ ತನ್ನೆಲ್ಲ ಚಿಂತನಶೀಲ, ಮಾನವೀಯ ಸತ್ವವನ್ನು ತನ್ನ ಬರಹಗಾರರ, ವಿಜ್ಞಾನಿಗಳ, ಚಿಂತಕರ ಮೂಲಕ ಅಂತರ್ಜಾಲಕ್ಕೆ ಬೆಸೆಯಬೇಕು. ಹಳಬರ ನೆನಪು, ತಿಳಿವಳಿಕೆ, ವಿವೇಕಗಳನ್ನು ಸ್ಪೀಚ್ ಪ್ರೊಸೆಸಿಂಗ್ ಮೂಲಕವೂ, ಹೊಸ ಹುಡುಗರ ಸೃಜನಶೀಲ ಉತ್ಸಾಹಕ್ಕೆ ಟೆಕ್ಸ್ಟ್ ಪ್ರೊಸೆಸಿಂಗ್ ಮತ್ತು ರಿ-ಪರ್ಪಸಿಂಗ್ ಸಾಧನಗಳುಳ್ಳ ಡಿಜಿಟಲ್ ಪ್ಲಾಟ್‌ಫಾರ್ಮ್‌ಗಳ ಮುಖಾಂತರವೂ ಕನ್ನಡವನ್ನು ತಂತ್ರಜ್ಞಾನದ ಜೊತೆಗೆ ಅಡಕಗೊಳಿಸಬಹುದಾದ ಸಾಧ್ಯತೆಗಳಿವೆ

● ಅವಿನಾಶ್ ಗೋಪಾಲಕೃಷ್ಣ

ಕನ್ನಡ ಹಣದ ಭಾಷೆಯಲ್ಲ ಎಂಬ ಆತಂಕ ಕಾಲಕಾಲಕ್ಕೆ ಕನ್ನಡಿಗರಲ್ಲಿ ವ್ಯಕ್ತವಾಗುತ್ತಿರುತ್ತದೆ. ಭಾಷೆಯಿಂದ ಹಣವಲ್ಲ, ಭಾಷೆಯೇ ಹಣ ಎಂಬ ನಿಜ ಅರಿವು ಮರೆಯಾಗಿಬಿಟ್ಟ ಸ್ಥಿತಿ ಅದು. ಎರಡು ವರ್ಷಗಳ ಹಿಂದೆ ಕೃತಕ ಬುದ್ಧಿಮತ್ತೆ (ಎಐ) ಎಂಬ ತಂತ್ರಜ್ಞಾನ ಲೋಕದ ಮೇಲ್ತುದಿಯ ಕುಡಿಯಾದ ಚಾಟ್ ಜಿಪಿಟಿಯ ಉದಯವಾದಾಗಲೂ ಈ ಮೇಲಿನ ಆತಂಕ ಕನ್ನಡಿಗರಲ್ಲಿ ಉಂಟಾಗಿತ್ತು. ಹಣದ ಭಾಷೆಯಲ್ಲದ ಕನ್ನಡ ಈ ಭಾಷೋತ್ಪಾದಕ ಯಂತ್ರದ ಸವಾಲನ್ನು ಎದುರಿಸುವುದು ಹೇಗೆ ಎಂಬ ಅಮೂರ್ತವಾದ ಭಯ ಉಂಟಾಗಿತ್ತು. ಹಾಗಿದ್ದರೆ, ಹಣದ ಭಾಷೆ ಎಂದರೇನು? ಅಥವಾ ಮೂಲಭೂತವಾಗಿ ಹಣ ಎಂದರೆ ಏನು?

ಜಗತ್ತಿನ ಶ್ರೀಮಂತ ಮನುಷ್ಯನೂ, ಈ ಎಐ ತಂತ್ರಜ್ಞಾನದ ಮುಂಚೂಣಿ ಮನುಷ್ಯನೂ ಆದ ಇಲಾನ್ ಮಸ್ಕ್‌ನ ಪ್ರಕಾರ, ಹಣವೆಂದರೆ ಮಾಹಿತಿ, ಹಣವೆಂದರೆ ಜ್ಞಾನ ಅಥವಾ ಹಣವೆಂದರೆ ಮಾಹಿತಿ-ಜ್ಞಾನಗಳ ಒಂದು ದತ್ತ ಸಂಚಯ (ಡೇಟಾಬೇಸ್). ಈ ದೃಷ್ಟಿಯಿಂದ ನೋಡಿದಾಗ ಕನ್ನಡವು ಹಣದ ಭಾಷೆ ಹೌದೇ ಅಲ್ಲವೇ ಎಂಬುದನ್ನು ನಾವೇ ನೇರವಾಗಿ ನಿರ್ಧರಿಸಬಹುದು. ಏಕೆಂದರೆ, ಸುಮಾರು ಹನ್ನೆರಡು ಹದಿಮೂರು ಶತಮಾನಗಳ ಕಾಲ ಬಹುಭಾಷಿಕವಾದ ಭಾರತದಲ್ಲಿ ಸಾಂಸ್ಕೃತಿಕ ಚಹರೆಗಳಿಂದಲೂ, ಚಿಂತನಶೀಲ ಜೀವಂತಿಕೆಯಿಂದಲೂ ವಿಶಿಷ್ಟವಾಗಿ ಬೆಳೆದ ಕನ್ನಡವೆಂಬ ಭಾಷೆಯ ಭಾವಲೋಕದ ದತ್ತಸಂಚಯದಲ್ಲಿ ಮಾಹಿತಿಯ ಕೊರತೆಯಿದ್ದರೂ ಜ್ಞಾನದ ಕೊರತೆಯಿಲ್ಲ. ಮಾಹಿತಿ ಕೊರತೆಯು ಕನ್ನಡದ ಸಮಸ್ಯೆ ಮಾತ್ರವೇ ಅಲ್ಲ; ಅದು ಭಾರತೀಯ ಭಾಷೆಗಳ ಸಮಸ್ಯೆಯೂ ಹೌದು ಅಥವಾ ಒಟ್ಟಾರೆಯಾಗಿ ಭಾರತದ ಸಮಸ್ಯೆಯೂ ಹೌದು.

ಹೀಗೆ ಮಾಹಿತಿಯನ್ನು ಆಮದು ಮಾತ್ರವೇ ಮಾಡಿಕೊಳ್ಳುತ್ತ, ಅದು ಸುಳ್ಳೋ ಸತ್ಯವೋ ಎಂಬುದನ್ನೂ ನಿರ್ಧರಿಸಲಾಗದಂತೆ ಗೊಂದಲಗೊಳ್ಳುತ್ತ ಇರುವಂತೆ ಮಾಡಿದ ಕೃತಕ ಬುದ್ಧಿಮತ್ತೆಯ ಕಾಲಕ್ಕೆ ಕನ್ನಡ ಎದುರಾಗಬೇಕಾದ್ದು ಹೇಗೆ? ಬಸವಣ್ಣ, ಕುವೆಂಪು ಅವರಂಥ ಜಾಗತಿಕ ಮಟ್ಟದ ವ್ಯಕ್ತಿತ್ವಗಳನ್ನು ಕೊಟ್ಟ ಕನ್ನಡ ತನ್ನ ಸಮುದಾಯದ ಸತ್ವವನ್ನು, ಭಾಷೆಯ ಶ್ರೀಮಂತಿಕೆಯನ್ನು ಅಂತರ್ಜಾಲದ, ಕೃತಕ ಬುದ್ಧಿಮತ್ತೆಯ ಜೊತೆಗೆ ಭವಿಷ್ಯಮುಖಿಯಾಗಿ ಹೆಣೆಯುವುದು ಹೇಗೆ?

ಹೇಗೆಂದರೆ, ಅದಕ್ಕೆ 'ಎದುರಾಗದೇ' ಇರುವ ಮೂಲಕ; ಬದಲು ಅದಕ್ಕೆ ಒದಗುವ ಮೂಲಕ.

ಪೂರ್ಣಚಂದ್ರ ತೇಜಸ್ವಿಯವರು ತಮ್ಮ ಸಾಮುದಾಯಿಕ ಪರಿಸರದಲ್ಲಿ ಎಷ್ಟು ಒಂದಾಗಿ ಹೋಗಿದ್ದರೋ, ಜಾಗತಿಕ ಪ್ರಜೆಯಾಗಿ ಸಹ ಅವರು ತಂತ್ರಜ್ಞಾನದ ಬಗ್ಗೆ ಕುತೂಹಲಿಯಾಗಿದ್ದರು. ಅವರ ಮತ್ತು ಇತರರ ಆಸಕ್ತಿಗಳಿಂದಾಗಿ ಸರ್ಕಾರಗಳು ಕನ್ನಡವನ್ನು ತಂತ್ರಜ್ಞಾನದ ಬೆಳವಣಿಗೆಗೆ ಸಂವಾದಿಯಾಗಿರುವಂತೆ ಮಾಡಲು ಪ್ರಯತ್ನಿಸಿವೆಯಾದರೂ- ಆ ಪ್ರಯತ್ನಗಳೆಲ್ಲ ಎಲ್ಲಿಗೆ ಬಂದು ನಿಂತಿವೆ ಎಂಬುದಕ್ಕೆ ನಾವು ಮತ್ತೊಮ್ಮೆ ಈ ಪ್ರಶ್ನೆಯನ್ನು ಕೇಳಿಕೊಳ್ಳುತ್ತ ಆಕಾಶ ನೋಡುತ್ತಿರುವುದೇ ಉತ್ತರ. ಇದು ಟೆಕ್ನೋಕ್ರಸಿಯ ಆರಂಭ ಕಾಲ. ಅಮೆರಿಕದಲ್ಲಿ ಉದ್ಘಾಟನೆಯಾದ ಈ ಆಳ್ವಿಕೆಯ ಕ್ರಮ ಭಾರತದ ರಾಜಕೀಯದ ಮೇಲೆ ಪರಿಣಾಮ ಉಂಟುಮಾಡುವ ಕಾಲ ದೂರವಿಲ್ಲ. ಉಪಯುಕ್ತತೆ, ಕ್ಷಮತೆಗಳೇ ನಾಗರಿಕತೆಯ ಅಳತೆಗೋಲಾಗುವ ಆ ಕಾಲದಲ್ಲಿ ಸರ್ಕಾರಗಳಿಗೆ ತನ್ನ ಬಡ ನಾಗರಿಕರನ್ನು ಕಾಪಾಡಿಕೊಳ್ಳುವುದೇ ದುಸ್ತರವಾಗುತ್ತದೆ. ಹಾಗಿರುವಾಗ ಮಾತೇ ಆಡದ ಆ ಮೂಕಜೀವಿಯ ಮಾತೃಭಾಷೆಯನ್ನೂ, ಅದರ ಒಳಗಿನ ಜ್ಞಾನದ ತಿರುಳನ್ನೂ ಕಾಪಾಡುವುದಂತೂ ಆಗದ ಮಾತು.

ಈ ಸೂಕ್ಷ್ಮ ತಿರುವಿನಲ್ಲಿ ನಿಂತು ನೋಡಿದಾಗ, ಕನ್ನಡದ ಮತ್ತು ರಾಜ್ಯದ ಇತರ ಭಾಷೆಗಳ ಭಾವಲೋಕವನ್ನು ಎಐಯ ಭಾಗವನ್ನಾಗಿಸಬೇಕಾದ ಜರೂರು ಮತ್ತು ಅದರ ಪ್ರಾಮುಖ್ಯ ತಿಳಿಯುತ್ತದೆ. ಆದರೆ, ಭಾಷೆಯನ್ನು ತಂತ್ರಜ್ಞಾನದ ಜೊತೆಗೆ ಬೆಸೆಯುವುದು ಎಂದರೆ ಏನು ಮತ್ತು ಹೇಗೆ?

ಇದರಲ್ಲಿ ಎರಡು ಸಂಗತಿಗಳು ಅಡಕವಾಗಿವೆ. ಮೊದಲನೆಯದ್ದು, ತಂತ್ರಜ್ಞಾನ. ಅದನ್ನು ಸರ್ಕಾರಗಳು ಮಾಡಲಾಗುವುದಿಲ್ಲ ಮತ್ತು ಬಳಕೆದಾರ ಕೇಂದ್ರಿತವಾಗಿ ರೂಪುಗೊಂಡ ಮಾರುಕಟ್ಟೆಯು ಈ ಕಂದಕವನ್ನು ಅರ್ಥಮಾಡಿಕೊಂಡು ಮಾತೃಭಾಷಾ ಕೇಂದ್ರಿತವಾದ ಡಿಜಿಟಲ್ ಉಪಕರಣಗಳನ್ನು ಉತ್ಪಾದಿಸುವ ಮೂಲಕ ಜನರನ್ನು ಅವರ ಭಾಷೆಯಲ್ಲಿಯೇ ತಲುಪುವ ತಂತ್ರಜ್ಞಾನ ಪ್ರಣೀತ ದಾರಿಗಳನ್ನು ಅನ್ವೇಷಿಸಿಕೊಳ್ಳುತ್ತದೆ. ಜನರಿಗೆ ತಮ್ಮ ಭಾಷೆಯಲ್ಲಿಯೇ ತಮ್ಮ ವಿಚಾರಗಳನ್ನು, ಅಭಿಪ್ರಾಯಗಳನ್ನು ವ್ಯಕ್ತಪಡಿಸುವ ಮತ್ತು ಅದನ್ನು ಸಾಮಾಜಿಕ ಜಾಲತಾಣಗಳನ್ನು ಮೀರಿ ತಮ್ಮದೇ ಡಿಜಿಟಲ್ ಸಮುದಾಯಗಳಲ್ಲಿ ಹಂಚಿಕೊಳ್ಳುವ ಸಾಧ್ಯತೆಗಳು ರೂಪುಗೊಳ್ಳುತ್ತವೆ. ಒಂದು ಭಾಷೆಯ ಜನರ ಅಭಿಪ್ರಾಯ, ಬರವಣಿಗೆಯು ಭಾರತದ ಅನೇಕ ಭಾಷೆಗಳಲ್ಲಿ ಅನುವಾದವಾಗಿ ಅನುರಣಿಸುವ ಸಂತೋಷದ ಜೊತೆಗೆ ಮತ್ತು ಶೇ 80ರಷ್ಟು ಗಿಗ್ ಎಕಾನಮಿಯಾಗಿ ರೂಪುಗೊಳ್ಳುವ ಭವಿಷ್ಯದಲ್ಲಿ ಒಂದು ಆದಾಯವನ್ನು ಗಳಿಸಿಕೊಳ್ಳುವ ಮಾರ್ಗವೂ ಆಗುತ್ತದೆ. ಮಾತೃಭಾಷೆಯ ಮೂಲಕ ತಂತ್ರಜ್ಞಾನಕ್ಕೆ ಒದಗುವುದು ಎಂದರೆ ಇದೇ. ಪಬ್ಲಿಷ್ ಆರ್ ಪೆರಿಶ್ ಎಂಬ ಒತ್ತಾಯದ ಈ ಕಾಲದಲ್ಲಿ ವ್ಯಕ್ತಿಯು ತನ್ನ ಅಭಿಪ್ರಾಯ, ತಿಳಿವಳಿಕೆ, ಜ್ಞಾನಗಳನ್ನು ಜಗತ್ತಿಗೆ ಪ್ರಕಟಪಡಿಸಲೇಬೇಕಾದ ಒತ್ತಾಯವಿದೆ. ಒರಿಜಿನಲ್ ಆದ ಆಲೋಚನೆ ಮಾಡುವುದು ಮತ್ತು ವ್ಯಕ್ತಪಡಿಸುವುದು ಮಾತೃಭಾಷೆಯಲ್ಲಷ್ಟೇ ಸಾಧ್ಯ. ಹೊರಗಿನ ಭಾಷೆಯಲ್ಲಿ ಮಾಡುವ ಚಿಂತನೆ ಡಬಲ್ ಸ್ಪೀಕ್ ಆಗಿ ಬ್ಯಾಡ್ ಫೇತ್ ವಿಚಾರಗಳನ್ನು ಮಾತ್ರವೇ ಉತ್ಪಾದಿಸುತ್ತದೆ. ಸ್ವಂತಿಕೆಯನ್ನು ರೂಪಿಸಿಕೊಳ್ಳಲು ಭಾಷೆಯ ಸಶಕ್ತ ಬಳಕೆಯು ರಹದಾರಿ.

ಎರಡನೆಯ ಸಂಗತಿ ಎಂದರೆ, ಸಮುದಾಯದ ಪಾಲ್ಗೊಳ್ಳುವಿಕೆ. ತಮಿಳುನಾಡಿನಲ್ಲಿ ಯಾಂತ್ರಿಕ ಬುದ್ಧಿಮತ್ತೆ ತಂತ್ರಜ್ಞಾನ ಕೇಂದ್ರಿತವಾದ ಹತ್ತಾರು ಸಮುದಾಯಗಳಿವೆ. ಐಐಟಿ ಮದ್ರಾಸ್‌ನಲ್ಲಿ ಸ್ನಾತಕೋತ್ತರ ಪದವಿ ಮುಗಿಸಿದ ಬಹುತೇಕ ವಿದ್ಯಾರ್ಥಿಗಳು ಅಲ್ಲಿಯೇ ಇರುವ 'ಎಐ ಫಾರ್ ಭಾರತ್' ಯೋಜನೆಯ ಭಾಗವಾಗುತ್ತಾರೆ. ತನ್ನ ಡಯಾಸ್ಪೋರಾದ ಕಾರಣದಿಂದಲೇ ಆಂಧ್ರ ಭಾಷಿಕರಿಗೆ ಅಮೆರಿಕದ ಬೇ ಏರಿಯಾದ ಕೃತಕ ಬುದ್ಧಿಮತ್ತೆಯ ವಲಯದಲ್ಲಿ ಹೊಕ್ಕು ಬಳಕೆಯಿದೆ. ಮೂರು ತಿಂಗಳ ಕೆಳಗೆ ತೆಲಂಗಾಣ ಸರ್ಕಾರವು ಒಂದು ಲಕ್ಷ ವಿದ್ಯಾರ್ಥಿಗಳು ಪಾಲ್ಗೊಂಡ ಜಗತ್ತಿನ ಅತೀ ದೊಡ್ಡ ಸಮ್ಮರ್ ಇಂಟರ್ನ್‌ಶಿಪ್ ಅನ್ನು ಕೂಡ ಆಯೋಜಿಸಿತ್ತು; ತೆಲುಗು ಭಾಷೆಯ ಸಾಹಿತ್ಯ, ಸಾಂಸ್ಕೃತಿಕ ಪ್ರಕಟಣೆಗಳನ್ನು ಅನೋಟೇಟ್ ಮಾಡುವುದು ಅದರ ಉದ್ದೇಶವಾಗಿತ್ತು. ಕೇರಳದಲ್ಲಿರುವ ಎಐ ತಂತ್ರಜ್ಞಾನ ಕ್ಷೇತ್ರದಲ್ಲಿ ತೊಡಗಿಕೊಂಡಿರುವ ಆಸಕ್ತರ ಆನ್-ಲೈನ್ ಕಮ್ಯುನಿಟಿಗಳಿಗೆ ಲೆಕ್ಕವಿಲ್ಲ. ನಾವು, ಕನ್ನಡಿಗರು, ಮಾತ್ರ ಹಾಗೇ ಕುಳಿತಿದ್ದೇವೆ, ಆಕಾಶ ನೋಡುತ್ತ; ಎಂದಿನಂತೆ. ಇದಕ್ಕೆ ಪರಿಹಾರವಾಗಿ, ಬೆಂಗಳೂರಿನಲ್ಲಿರುವ ಐಐಐಟಿ ಅನ್ನು ಕನ್ನಡ ಭಾಷಾ ಸಂಶೋಧನೆ ಮತ್ತು ಅಭಿವೃದ್ಧಿ ಕೇಂದ್ರಿತ ನವೋದ್ಯಮಗಳನ್ನು ಪ್ರೋತ್ಸಾಹಿಸುವುದಕ್ಕೆ, ಉದ್ಯಮಗಳನ್ನು ತರಬೇತು ಮಾಡುವುದಕ್ಕೆ ಬಳಸಿಕೊಳ್ಳುವ ಚಿಂತನೆಯನ್ನು ಸರ್ಕಾರ ಮಾಡಬಹುದು.

ಹತ್ತು ವರ್ಷಗಳ ಕೆಳಗೆ ಸಾಮಾಜಿಕ ಜಾಲತಾಣ ಉದ್ಭವದ ಮೂಲಕ ಬದಲಾಗಿದ್ದ ಕೆನಡಾದ ತತ್ವಜ್ಞಾನಿ ಮಾರ್ಷಲ್ ಮೆಕ್-ಲುಹಾನ್‌ನ 'ಮೀಡಿಯಂ ಈಸ್ ದ ಮೆಸೇಜ್' ಎಂಬ ಉಕ್ತಿ ಎಐ ಜಗಿತದಲ್ಲಿ ಈಗ ಮತ್ತೊಮ್ಮೆ ಅರ್ಥಾಂತರಕ್ಕೆ ಈಡಾಗಬೇಕಿದೆ. ಪ್ರತಿಯೊಬ್ಬ ವ್ಯಕ್ತಿಯೂ ಈಗ ಸೃಷ್ಟಿಕರ್ತ. ಅವನವನೇ, ಅವಳವಳೇ, ಅವರವರೇ ಅವರ ಮಾಧ್ಯಮ. ಅವರ ಭಾಷೆಯ, ಅಭಿವ್ಯಕ್ತಿಯ ಮೇಲಿನ ಹಿಡಿತವೇ ಅವರ ಅಧಿಕೃತತೆಗೆ ಸಾಕ್ಷಿ. ಸಾಮಾಜಿಕ ಸ್ವೀಕೃತಿಗೆ ಮಾತೇ ಮಾನದಂಡ. ಮಾತಾಡುವಂತೆ ಮುಖಕ್ಕೇ ಮೈಕು ಹಿಡಿದು, ವೇದಿಕೆ ಕುರಿತ ಭಯಕ್ಕೇ ಭಯ ಹುಟ್ಟಿಸುವ ಸೃಷ್ಟಿಮಗ್ನ ಕಾಲದಲ್ಲಿ ಪಾಲ್ಗೊಳ್ಳದೇ ಇರುವುದು ಆಯ್ಕೆಯೇ ಅಲ್ಲ. ಎಐ ಎಂಬ ತಂತ್ರಜ್ಞಾನದ ಅಲೆಯಲ್ಲಿ ಎದ್ದ ಈ ಸಾಮಾಜಿಕತೆ, ಸೃಜನಶೀಲತೆಗಳ ಜಾಗತಿಕ ವಾಗ್ವಾದದಲ್ಲಿ ಪ್ರತಿ ಭಾಷೆಯನ್ನಾಡುವ ಪ್ರತಿ ಮನುಷ್ಯನೂ ಪಾಲ್ಗೊಳ್ಳಲೇಬೇಕಾದ್ದು ಅನಿವಾರ್ಯವಾಗಿದೆ. ಕನ್ನಡವು ಕೂಡ ತನ್ನೆಲ್ಲ ಚಿಂತನಶೀಲ, ಮಾನವೀಯ ಸತ್ವವನ್ನು ತನ್ನ ಬರಹಗಾರರ, ವಿಜ್ಞಾನಿಗಳ, ಚಿಂತಕರ ಮೂಲಕ ಅಂತರ್ಜಾಲಕ್ಕೆ ಬೆಸೆಯಬೇಕು. ಹಳಬರ ನೆನಪು, ತಿಳಿವಳಿಕೆ, ವಿವೇಕಗಳನ್ನು ಸ್ಪೀಚ್ ಪ್ರೊಸೆಸಿಂಗ್ ಮೂಲಕವೂ, ಹೊಸ ಹುಡುಗರ ಸೃಜನಶೀಲ ಉತ್ಸಾಹಕ್ಕೆ ಟೆಕ್ಸ್ಟ್ ಪ್ರೊಸೆಸಿಂಗ್ ಮತ್ತು ರಿ-ಪರ್ಪಸಿಂಗ್ ಸಾಧನಗಳುಳ್ಳ ಡಿಜಿಟಲ್ ಪ್ಲಾಟ್‌ಫಾರ್ಮ್‌ಗಳ ಮುಖಾಂತರವೂ ಕನ್ನಡವನ್ನು ತಂತ್ರಜ್ಞಾನದ ಜೊತೆಗೆ ಅಡಕಗೊಳಿಸಬಹುದಾದ ಸಾಧ್ಯತೆಗಳಿವೆ.

ತನ್ನದೇ ಆದ ಅಭಿಪ್ರಾಯ ಇರದ ಪ್ರಜೆಯೇ ಇಲ್ಲ. ಇಲ್ಲದೇ ಇರುವುದು ಅದನ್ನು ವ್ಯಕ್ತಪಡಿಸುವ ಭಾಷಿಕ ಸೌಕರ್ಯ. ಭಾಷಾ ತಂತ್ರಜ್ಞಾನವು ನಿಮ್ಮ ತೊದಲು ತೊದಲಾದ ಅಭಿಪ್ರಾಯವನ್ನು ಒಂದೆರಡು ಪದಗಳಲ್ಲಿ ಪಡೆದು, ಅದನ್ನು ನಿಮ್ಮ ಭಾಷೆಯಲ್ಲಿಯೇ ಹೆಣೆದು, ನಿಮ್ಮ ಒಪ್ಪಿಗೆ ಪಡೆದು ಜಗತ್ತಿಗೆ ಸಾರಲು ಸಹಾಯ ಮಾಡುತ್ತದೆ. ಎಐನ ಅತ್ಯುತ್ತಮ ಉಪಯೋಗ ಎಂದರೆ, ನಿಮ್ಮ ಆಲೋಚನೆಯನ್ನು ಚೂಪುಗೊಳಿಸಿಕೊಳ್ಳಲು, ವಿಮರ್ಶಾತ್ಮಕ ಚಿಂತನೆಯನ್ನು ಹರಿತಗೊಳಿಸಲು ಬಳಕೆಯಾಗುವುದು. ಅದು ನಿಮ್ಮ ಕೆಲಸವನ್ನು ಅರ್ಧ ಹಗುರ ಮಾಡುವ ಏಜೆಂಟ್. ಈ ಎಐ ಪ್ರಣೀತ ಸಾಧನಗಳನ್ನು ಬಳಸಿ ಅಭಿವ್ಯಕ್ತಿಸುವ ಮೂಲಕ ಹಣ ಗಳಿಕೆಯನ್ನು ಮಾಡುವ ಸಾಧ್ಯತೆಗಳೂ ಅಧಿಕವಾಗುತ್ತವೆ.

ಈ ಜಾಗತಿಕ ಅಭಿವ್ಯಕ್ತಿ ಮಥನದ ಕಾಲದಲ್ಲಿ, ಎಐ ಸಹಾಯದಿಂದ ಪ್ರತಿ ಮನುಷ್ಯನೂ ತನ್ನನ್ನು ಮತ್ತಷ್ಟು ಅಭಿವ್ಯಕ್ತಿಸಿಕೊಳ್ಳಲು ಸಾಧ್ಯವಾಗುತ್ತದೆ. ಸುಳ್ಳು, ಸತ್ಯ, ಭ್ರಮೆಗಳೆಲ್ಲ ಮಸೆದು ಕೊನೆಗೊಮ್ಮೆ ಸತ್ಯ ಪ್ರಕಟಗೊಂಡೀತೇ ಎಂದು ನೋಡುವುದು ಈ ತಂತ್ರಜ್ಞಾನಾಧಿಪತ್ಯದ ತುದಿಯಲ್ಲಿ ಕುಳಿತವರ ತತ್ವಚಿಂತನೆ. ಹೀಗೆ ಕೃತಕದ ಸಹಾಯದಿಂದಲೇ ನಿಜವನ್ನು ಉತ್ಪಾದಿಸಬೇಕಾಗಿ ಬಂದಿರುವುದು ಮಾತ್ರ, ಬಹುಶಃ ಜ್ಞಾನದ ಸ್ವರೂಪದಲ್ಲಿಯೇ ಇರುವ ಚೋದ್ಯ.

ಲೇಖಕ: ವರ್ಡ್ ವೈಸ್ ಲ್ಯಾಂಗ್ವೇಜ್ ಲ್ಯಾಬ್ಸ್‌ನ ಸಿಇಒ

ಎ.ಐ ಚಿತ್ರ: ಕಣಕಾಲಮಠ

ಕನ್ನಡ ಧ್ವನಿಯೂ ಕೇಳಲಿ

ಜಗತ್ತಿನ ಶೇ 90ರಷ್ಟು ಜ್ಞಾನಾರ್ಜನೆ ಸಂಭವಿಸುವುದು ಅನುವಾದದ ಮೂಲಕ. ಕನ್ನಡದ ಬರಹಗಾರರಿಗೆ, ಚಿಂತಕರಿಗೆ, ಸೃಷ್ಟಿಕರ್ತರಿಗೆ ಅವರ ಭಾಷೆಯಲ್ಲಿಯೇ ಹೆಚ್ಚು ಕ್ರಿಯಾಶೀಲರಾಗಿರಲು, ಚಿಂತಿಸಲು ಮತ್ತು ತಮ್ಮ ಕೃತಿಗಳನ್ನು, ವಸ್ತುವನ್ನು ಬಹುಮಾಧ್ಯಮದ ಮುಖಾಂತರ ಬಹುಭಾಷೆಗಳಲ್ಲಿ ಪ್ರಕಟಿಸಿಕೊಳ್ಳಲು ಅನುವು ಮಾಡಿಕೊಡುವ ಒಂದು ಪ್ಲಾಟ್‌ಫಾರ್ಮ್ ಅನ್ನು ವರ್ಡ್ ವೈಸ್‌ನಲ್ಲಿ ನಾವು ನಿರ್ಮಿಸುತ್ತಿದ್ದೇವೆ. ಈ ಮೂಲಕ ಕನ್ನಡಕ್ಕೇ ವಿಶಿಷ್ಟವಾದ ದೃಷ್ಟಿಕೋನ ಮತ್ತು ಚಿಂತನೆಗಳು ಭಾರತೀಯ ಚಿಂತನೆಯ ಭಾಗವಾಗಲು ಸಾಧ್ಯವಾಗುತ್ತದೆ. ಮತ್ತು ಜಾಗತಿಕ ವಾಗ್ವಾದದಲ್ಲಿ ಕನ್ನಡ ಸಮುದಾಯದ ಧ್ವನಿಯೂ ಕೇಳುವಂತಾಗುತ್ತದೆ. ಈ ಮೂಲಕ ಕನ್ನಡ ಮತ್ತು ಕರ್ನಾಟಕದ ಭಾಷೆಗಳ ಭಾವಲೋಕಕ್ಕೊಂದು ಅಧಿಕೃತ ಎಲ್.ಎಲ್.ಎಂ ಅನ್ನು ನಿರ್ಮಿಸುವುದೂ ಮುಖ್ಯವಾದ ಗುರಿಯಾಗಿದೆ.

ಕನ್ನಡದ ಹೆಮ್ಮೆ

ಕೆ.ವಿ.ಸುಬ್ಬಣ್ಣ

ಫೆ. 20, 1932 - ಜುಲೈ 16, 2005

ಕನ್ನಡ ಸಾಂಸ್ಕೃತಿಕ ಚರಿತ್ರೆಯಲ್ಲಿ ಹೆಗ್ಗೋಡಿನಂಥ ಪುಟ್ಟ ಊರಿಗೆ ಮಹತ್ವದ ಸ್ಥಾನ ಕಲ್ಪಿಸಿದವರು ಕೆ.ವಿ.ಸುಬ್ಬಣ್ಣ. ಮಲೆನಾಡಿನ ಹಳ್ಳಿಯಲ್ಲಿ ಕುಳಿತೇ ಜಗತ್ತಿನ ಶ್ರೇಷ್ಠ ಸೃಜನಶೀಲ ಮನಸ್ಸುಗಳಿಗೆ ಮಿಡಿಯುವ ಮೂಲಕ ಸಂಸ್ಕೃತಿಯನ್ನು ಕಟ್ಟುವ ಒಂದು ಮಾದರಿಯನ್ನು ತೋರಿಸಿದವರು ಅವರು.

ಕೃಷಿಕರ ಮಗನಾಗಿ ಹುಟ್ಟಿದ ಸುಬ್ಬಣ್ಣ, ಮೈಸೂರಿಗೆ ತೆರಳಿ ಕನ್ನಡ ಸಾಹಿತ್ಯ ಅಧ್ಯಯನ ಮಾಡಿ, ನಂತರ ತಮ್ಮ ಹಳ್ಳಿಗೇ ಹಿಂದಿರುಗಿ ಕೃಷಿಕರಾದರು; ಅದರ ಜತೆಗೆ ಸಾಹಿತ್ಯ ಕೃಷಿಯನ್ನೂ ಮುಂದುವರಿಸಿದರು. ನಾಟಕಗಳ ರಚನೆ, ಅನುವಾದದಲ್ಲಿ ಸುಬ್ಬಣ್ಣ ಮಹತ್ವದ ಕೆಲಸ ಮಾಡಿದರು. ಸಂಸ್ಕೃತ ಮತ್ತು ಜಗತ್ತಿನ ಶ್ರೇಷ್ಠ ನಾಟಕಗಳನ್ನು ಕನ್ನಡಕ್ಕೆ ಅನುವಾದಿಸಿದ, ರಂಗದ ಮೇಲೆ ತಂದ ಹಿರಿಮೆ ಅವರದ್ದು. ನಾಟಕಗಳ ಪ್ರಯೋಗಕ್ಕೆಂದು ನೀಲಕಂಠೇಶ್ವರ ನಾಟ್ಯಸೇವಾ ಸಂಘ (ನೀನಾಸಂ) ಸ್ಥಾಪಿಸಿ, ಅದರ ಮೂಲಕ ಒಂದು ಪರಂಪರೆಯನ್ನೇ ಹುಟ್ಟುಹಾಕಿದರು.

ನೀನಾಸಂ ಮೂಲಕ ರಂಗಭೂಮಿಯಲ್ಲಿ, 'ಸಾಕ್ಷಿ' ಪತ್ರಿಕೆ ಮತ್ತು ಅಕ್ಷರ ಪ್ರಕಾಶನದ ಮೂಲಕ ಸಾಹಿತ್ಯ ಕ್ಷೇತ್ರದಲ್ಲಿ ಹೊಸ ಅಲೆ ಸೃಷ್ಟಿಸಿದವರು ಸುಬ್ಬಣ್ಣ. ರಾಜ್ಯ, ಹೊರರಾಜ್ಯ ಮತ್ತು ವಿದೇಶಗಳಿಂದಲೂ ಸಾಹಿತಿಗಳು, ನಾಟಕಕಾರರು, ಸಿನಿಮಾ ರಂಗದವರು ಹೆಗ್ಗೋಡಿಗೆ ಬಂದು ಸಂಸ್ಕೃತಿ ಶಿಬಿರ, ನಾಟಕ ಪ್ರಯೋಗ, ಸಿನಿಮಾ, ಸಂಸ್ಕೃತಿಗೆ ಸಂಬಂಧಿಸಿದ ಚರ್ಚೆಗಳಲ್ಲಿ ಭಾಗವಹಿಸುತ್ತಿದ್ದದ್ದು ಸುಬ್ಬಣ್ಣ ಅವರ ಲೋಕದೃಷ್ಟಿಗೆ ಮತ್ತು ಶ್ರಮಕ್ಕೆ ನಿದರ್ಶನ. ತಮ್ಮ ಹಳ್ಳಿಯನ್ನೇ ಕೇಂದ್ರವಾಗಿಸಿಕೊಂಡು ಜಗತ್ತಿನ ಅಭಿಜಾತ ಸಾಹಿತ್ಯ, ನಾಟಕ, ಸಿನಿಮಾಗಳೊಂದಿಗೆ ಕನ್ನಡಿಗರಿಗೆ ಸಂವಾದ ಸಾಧ್ಯವಾಗುವಂತೆ ಮಾಡಿದ ಅನನ್ಯ ಸಾಧಕ ಕೆ.ವಿ.ಸುಬ್ಬಣ್ಣ.



ಕೆ.ಎಸ್.ನಾಗರತ್ನಮ್ಮ

(1923-1993)

ರಾಜಕೀಯ ಕ್ಷೇತ್ರದಲ್ಲಿ ಎಲ್ಲರಿಗೂ ಮಾದರಿಯಾಗಿ ನಿಲ್ಲುವವರು ಕೆ.ಎಸ್.ನಾಗರತ್ನಮ್ಮ. ಮಹಿಳೆಯರು ಸಾಮಾಜಿಕ ಕ್ಷೇತ್ರದಲ್ಲಿ ಗುರುತಿಸಿಕೊಳ್ಳಲು ಹಿಂಜರಿಯುತ್ತಿದ್ದ ಕಾಲದಲ್ಲಿ ರಾಜಕೀಯ ಪ್ರವೇಶಿಸಿ, ಕರ್ನಾಟಕದ ಅತಿರಥ ಮಹಾರಥ ರಾಜಕಾರಣಿಗಳ ಸರಿಸಮನಾಗಿ ನಿಂತು, ರಾಜ್ಯ ರಾಜಕಾರಣದಲ್ಲಿ ದೊಡ್ಡ ಛಾಪು ಮೂಡಿಸಿದವರು ಅವರು. ಅವಿಭಜಿತ ಮೈಸೂರು ಜಿಲ್ಲೆಯ ಗುಂಡ್ಲುಪೇಟೆ ವಿಧಾನಸಭಾ ಕ್ಷೇತ್ರದಿಂದ (ಈಗ ಚಾಮರಾಜನಗರ ಜಿಲ್ಲೆಗೆ ಸೇರಿದೆ) ಏಳು ಬಾರಿ ಶಾಸಕರಾಗಿ (1957 ಮತ್ತು 1962ರಲ್ಲಿ ಪಕ್ಷೇತರರಾಗಿ, ನಂತರ ಐದು ಬಾರಿ ಕಾಂಗ್ರೆಸ್ ಅಭ್ಯರ್ಥಿಯಾಗಿ) ಆಯ್ಕೆಯಾಗಿದ್ದ ನಾಗರತ್ನಮ್ಮ ಕರ್ನಾಟಕ ವಿಧಾನಸಭೆಯ ಮೊದಲ ಮಹಿಳಾ ಸ್ಪೀಕರ್ (1972ರಿಂದ 1978) ಎಂಬ ಕೀರ್ತಿಗೆ ಭಾಜನರಾದವರು. ಪಕ್ಷಕ್ಕೆ ನಿಷ್ಠರಾಗಿದ್ದರೂ ಸಭಾಧ್ಯಕ್ಷರ ಪೀಠದಲ್ಲಿ ಕುಳಿತಿದ್ದಾಗ ಆ ಹುದ್ದೆಗೆ ಗೌರವ ತರುವಂತೆ ನಡೆದುಕೊಂಡಿದ್ದು ಅವರ ಹೆಚ್ಚುಗಾರಿಕೆ.

ಸಮಾಜ ಸೇವೆಗೆ ಹೆಸರಾಗಿದ್ದ ಕಬ್ಬಳ್ಳಿ ಸಾಹುಕಾರ್ ಸುಬ್ಬಣ್ಣ ಅವರ ಪತ್ನಿಯಾಗಿದ್ದ ನಾಗರತ್ನಮ್ಮ, ಮದುವೆಯಾಗಿ 10 ವರ್ಷಗಳಲ್ಲಿ ಪತಿಯನ್ನು ಕಳೆದುಕೊಂಡವರು. ನಂತರ ಮನೆಗೆ ಸೀಮಿತವಾಗದೆ ಕುಟುಂಬದ ಸಮಾಜ ಸೇವೆಯನ್ನು ಮುಂದುವರಿಸಿದವರು. ತಾಲ್ಲೂಕಿನ 'ಇಂದಿರಾಗಾಂಧಿ'ಯಾಗಿ ಗುರುತಿಸಿಕೊಂಡಿದ್ದ ಅವರು ಕ್ಷೇತ್ರದ ಜನರ ಪಾಲಿಗೆ 'ಅಮ್ಮ'ನೂ ಆಗಿದ್ದರು. ವಿಧಾನಸಭೆಯ ವಿರೋಧ ಪಕ್ಷದ ನಾಯಕಿಯಾಗಿ, ಎಸ್.ಬಂಗಾರಪ್ಪ ಅವರ ಸಂಪುಟದಲ್ಲಿ ಸಚಿವೆಯಾಗಿಯೂ ಕಾರ್ಯನಿರ್ವಹಿಸಿದ್ದ ನಾಗರತ್ನಮ್ಮ, ಬೆಂಗಳೂರಿನ ಹೃದಯಭಾಗದಲ್ಲಿ ಚಿತ್ರಕಲಾ ಪರಿಷತ್ ಸ್ಥಾಪನೆಗೊಳ್ಳುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಆ ಕಾಲದಲ್ಲೇ ಟೆನಿಸ್, ಕುದುರೆ ಸವಾರಿಯಲ್ಲಿ ಪರಿಣತಿ ಸಾಧಿಸಿದ್ದ ನಾಗರತ್ನಮ್ಮ, ರಾಜಕೀಯದಲ್ಲಿ ಸಾಧನೆ ಮಾಡಬೇಕು ಎನ್ನುವ ಮಹಿಳೆಯರಿಗೆ ದೊಡ್ಡ ಆದರ್ಶ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ

9606038256

ಬಾಂಗ್ಲಾದೇಶದ ಚಟ್ಟೋಗ್ರಾಮದ ನ್ಯಾಯಾಲಯವು ಮಂಗಳವಾರ ಹಿಂದೂ ಮುಖಂಡ ಚಿನ್ಮಯಿ ಕೃಷ್ಣದಾಸ್ ಬ್ರಹ್ಮಚಾರಿ ಅವರನ್ನು ಜೈಲಿಗೆ ಕಳುಹಿಸಿದ ಬೆನ್ನಲ್ಲೇ ನ್ಯಾಯಾಲಯದ ಆವರಣದಲ್ಲಿ ಉಂಟಾದ ಹಿಂಸಾಚಾರದಲ್ಲಿ ಸೈಫುಲ್ ಇಸ್ಲಾಂ ಎಂಬ ವಕೀಲರು ಮೃತಪಟ್ಟಿದ್ದಾರೆ. ಇವರು ಚಿನ್ಮಯಿ ಕೃಷ್ಣದಾಸ್ ಪರ ವಕೀಲ ಎಂಬ ಸುದ್ದಿ ಹರಿದಾಡುತ್ತಿದ್ದು, ಭಾರತದ ಹಲವು ಮಾಧ್ಯಮಗಳೂ ಇದನ್ನು ವರದಿ ಮಾಡಿವೆ. ಆದರೆ, ಇದು ಸುಳ್ಳು.

ಚಟ್ಟೋಗ್ರಾಮ ವಕೀಲರ ಪರಿಷತ್ತಿನ ಸದಸ್ಯರಾಗಿದ್ದ ಇಸ್ಲಾಂ ಅವರು ಕೃಷ್ಣದಾಸ್ ಅವರ ವಕೀಲರಲ್ಲ. ವಕೀಲರ ಪರಿಷತ್ತಿನ ಅಧ್ಯಕ್ಷ ನಜೀಮ್ ಉದ್ದೀನ್ ಚೌಧರಿ ಅವರನ್ನು ಸಂಪರ್ಕಿಸಿದಾಗ ಈ ವಿಚಾರವನ್ನು ಅವರು ಸ್ಪಷ್ಟಪಡಿಸಿದ್ದಾರೆ. ಇಸ್ಲಾಂ ಸ್ನೇಹಿತ, ಚಟ್ಟೋಗ್ರಾಮದಲ್ಲಿ ವಕೀಲರಾಗಿರುವ ಉಮ್ಮುಲ್ ಹಯಾತ್ ಅಪಿ ಕೂಡ ಇದೇ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಬಾಂಗ್ಲಾದ ಮಧ್ಯಂತರ ಸರ್ಕಾರದ ಸಲಹೆಗಾರ ಮೊಹಮ್ಮದ್ ಯೂನುಸ್ ಅವರ ಮಾಧ್ಯಮ ಘಟಕ ಕೂಡ ಫೇಸ್‌ಬುಕ್‌ನಲ್ಲಿ ಈ ಬಗ್ಗೆ ಸ್ಪಷ್ಟನೆ ನೀಡಿದ್ದು, ಚಿನ್ಮಯಿ ಕೃಷ್ಣದಾಸ್ ಅವರು ನ್ಯಾಯಾಲಯಕ್ಕೆ ಸಲ್ಲಿಸಿರುವ ವಕಾಲತ್ ದಾಖಲೆಯಲ್ಲಿ ಅವರ ವಕೀಲ ಸುಭಾಸಿಶ್ ಶರ್ಮಾ ಎಂಬುದಾಗಿ ಇದೆ ಎಂದು ತಿಳಿಸಿರುವುದಾಗಿ ಬೂಮ್ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ಗುಂಡಣ್ಣ

ಹೋಲಿಕೆಯೇ ದುಃಖಕ್ಕೆ ಕಾರಣ

ನುಡಿ ಬೆಳಗು

ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

76

ತಾಪದಿಂದ ದುಃಖ ಆಗತೈತಿ. ದೇವರು ನಮಗೆ ಏನು ಕೊಟ್ಟಾನ ಅದಕ್ಕೆ ನಮಗೆ ತಾಪಾಗಿಲ್ಲ. ಮಗ್ಗುಲ ಮನೆಯವರನ್ನು ನೋಡಿ ನಮಗೆ ತಾಪಾಗೈತಿ. ನಮಗೆ ಇದ್ದಿದ್ದಕ್ಕೆ ತಾಪಾಗಿಲ್ಲ. ಇಲ್ಲಾರದ್ದಕ್ಕೆ ತಾಪಾಗೈತಿ. ನಮಗೂ ಒಂದು ಮನೆ ಐತಿ ಅಂತ ಸುಮ್ಮನಿರಬೇಕಲ್ಲ. ಸಂತೋಷ ಆಗಬೇಕಲ್ಲ. ಆದರೆ ಮಗ್ಗಲ ಮನೆಯವರು ಎರಡು ಅಂತಸ್ತಿನ ಮನೆ ಕಟ್ಟಿಸಿದರೆ ನಮಗೆ ತಾಪ ಆಗತೈತಿ. ಜಗತ್ತಿನಲ್ಲಿ ಎಲ್ಲರಿಗೂ ಎಲ್ಲವನ್ನೂ ಏಕ ಕಾಲಕ್ಕೆ ಕೊಡಾಕೆ ಆಗವಲ್ದು. ಆರಿಸಿ ಬಂದ ಎಲ್ಲರೂ ಮಿನಿಸ್ಟರ್ ಆಗೋಕೆ ಸಾಧ್ಯವಿಲ್ಲ ಅನ್ನೋದ ತಿಳಕೋಬೇಕು ಮನುಷ್ಯ. ಹಣ ಖರ್ಚು ಮಾಡಿ ಚುನಾವಣೆಯಲ್ಲಿ ಗುದ್ದಾಡಿ ಅಗ್ರಿಕಲ್ಚರ್ ಮಿನಿಸ್ಟರ್ ಆಗೋದಕ್ಕಿಂತ ನಿಮ್ಮ ಹೊಲದಲ್ಲಿ ದುಡಿದು ನೀವು ಅಲ್ಲಿಯೇ ಅಗ್ರಿಕಲ್ಚರ್ ಮಿನಿಸ್ಟರ್ ಆದರೆ ನಿಮ್ಮನ್ನು ಕೆಳಕ್ಕೆ ಇಳಿಸೋರೇ ಇರೋದಿಲ್ಲ.

ಎಲ್ಲವೂ ನಾವು ಅಂದುಕೊಳ್ಳೋದರಲ್ಲಿ ಅದ. ಮನುಷ್ಯನಿಗೆ ಯಾಕೆ ತಾಪ ಆಗತೈತಿ ಅಂದರ, ನನ್ನ ರೂಪ, ನನ್ನ ಯೌವನ, ನನ್ನ ಸಂಪತ್ತು, ನನ್ನ ಕೀರ್ತಿಯನ್ನು ಇನ್ನೊಬ್ಬರ ಜೊತೆ ಹೋಲಿಸಿಕೊಳ್ಳುತ್ತೇವಲ್ಲ ಆಗ ಬಹಳ ತಾಪ ಆಗತೈತಿ. ಹೋಲಿಕೆಯೇ ದುಃಖಕ್ಕೆ ಕಾರಣ. ಈ ಜಗತ್ತಿನಲ್ಲಿ ಒಂದರ ತರಹ ಇನ್ನೊಂದಿಲ್ಲ. ನೀವೇ ಬೆಳೆದ ಮಾವಿನ ಮರದಲ್ಲಿ ಒಂದು ಟೊಂಗೆಯ ಮಾವಿನ ಹಣ್ಣಿನ ಹಾಂಗ ಇನ್ನೊಂದು ಟೊಂಗೆಯ ಹಣ್ಣು ಇರವಲ್ದು. ಒಂದು ಟೊಂಗೆಯ ಹೂವಿನ ಹಾಂಗ ಇನ್ನೊಂದು ಟೊಂಗೆಯ ಹೂವು ಇಲ್ಲ. ಎಲ್ಲವೂ ಬ್ಯಾರೆ ಬ್ಯಾರೆ ಅಂದ ಮೇಲೆ ಇನ್ನೊಬ್ಬನ ಹಾಗೆ ನಾನಿರಬೇಕು ಅಂತ ಯಾಕೆ ಬಯಸುತ್ತಿ? ದೇವರ ದೃಷ್ಟಿಯೊಳಗೆ ಕಾರ್ಬನ್ ಕಾಪಿ ಅನ್ನೋದು ಇಲ್ಲ. ಎಲ್ಲವೂ ಹೊಸತೇ ಇರ್ತಾವ.

ಒಬ್ಬರು ಸಂತನ ಹತ್ತಿರ ಒಬ್ಬ ಹೋಗಿ ಕೇಳಿದ. 'ಅಪ್ಪ, ಯಾಕ ನನಗೆ ಬಹಳ ತಾಪ ಐತಿ, ದೇವರು ಎಲ್ಲಾ ಕೊಟ್ಟಾನ ಆದರೂ ತಾಪ ಆಗತೈತಲ್ಲ ಯಾಕೆ? ನೀವು ನೋಡಿ... ಮಠದಲ್ಲಿ ಎಷ್ಟು ಅರಾಂ ಇದ್ದೀರಿ' ಅಂದ. ಆಗ ಗುರುಗಳು 'ನೋಡಪಾ, ಮಠದ ಮುಂದೆ ತೋಟ ಐತಲ್ಲ. ಅಲ್ಲಿ ಹೋಗಿ ಕೂಡು' ಅಂದರು. ಇವ ಹೋಗಿ ತೋಟದಲ್ಲಿ ಒಂದು ತಾಸು ಕುಂತು ಬಂದ. 'ಏನಾರ ಅರ್ಥಾತೇನು?' ಎಂದು ಕೇಳಿದರು. 'ಇಲ್ಲ ಏನೂ ಅರ್ಥ ಆಗಲಿಲ್ಲ' ಎಂದ. ಆವಾಗ ಗುರುಗಳು ಅವನನ್ನ ತೋಟಕ್ಕೆ ಕರಕೊಂಡು ಹೋದರು. 'ನೋಡು, ಈ ತೋಟದಲ್ಲಿ ತೆಂಗಿನ ಮರವೂ ಐತಿ. ಬಳ್ಳಿಯೂ ಐತಿ. ಆ ಬಳ್ಳಿಯ ತುಂಬಾ ಹೂವು ಅದಾವ, ನಿನ್ನ ತಲೆ ತುಂಬಾ ಹುಳ ಅದಾವ. ಯಾಕೆ? ಯಾಕೆ ಅಂದರ 40 ಅಡಿ ತೆಂಗಿನ ಮರದ ಮಗ್ಗುಲಕ್ಕೇ ಹೂವಿನ ಗಿಡ ಇದ್ದರೂ ಅದು, ತನ್ನ ಮಗ್ಗಲಲ್ಲಿ ಇರುವ ತೆಂಗಿನ ಮರ 40 ಅಡಿ ಯಾಕೆ ಬೆಳೀತು? ಹ್ಯಾಂಗ್ ಬೆಳೀತು ಅಂತ ತಲೆ ಕೆಡಿಸಿಕೊಂಡಿಲ್ಲ. ಅದಕ್ಕೆ ಅದರ ತುಂಬಾ ಹೂವು ಬೆಳೆದಾವ. ನೀನು ಮಗ್ಗಲ ಮನೆಯವರು ಯಾಕೆ ದೊಡ್ಡದಾಗಿ ಬೆಳೆದಾರ ಅಂತ ಚಿಂತಿ ಮಾಡತಿ. ಅದಕ್ಕೇ ನಿನ್ನ ತಲೆ ತುಂಬಾ ಹುಳ ತುಂಬಿಕೊಂಡಾವ' ಎಂದರು ಗುರುಗಳು.

ನಿಸರ್ಗದಲ್ಲಿರುವ ಯಾವುದೂ ತನ್ನ ಮಗ್ಗುಲಲ್ಲಿ ಇರುವುದರ ಬಗ್ಗೆ ಹೋಲಿಕೆ ಮಾಡಿಕೊಳ್ಳೋದಿಲ್ಲ. ಮನುಷ್ಯ ಮಾತ್ರ ಹೋಲಿಕೆ ಮಾಡ್ತಾನ. ಅದಕ್ಕೇ ದುಃಖ ಆಗತೈತಿ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಗುರುವಾರ ನವೆಂಬರ್ 28, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಕಾರ್ತಿಕ ಕೃಷ್ಣ ದ್ವಾದಶಿ ಗಂ. 06-24 **ನಕ್ಷತ್ರ:** ಚಿತ್ತಾ ಗಂ. 07-36 **ಯೋಗ:** ಸೌಭಾಗ್ಯ ಗಂ. 16-02 **ಕರಣ:** ತೈತಿಲ ಗಂ. 06-24, ವೃಶ್ಚಿಕ ಮಾಸದ 12 ನೇ ದಿನ, ಮಳೆನಕ್ಷತ್ರ: ಅನುರಾಧ 3.

ರಾಹುಕಾಲ : ಮಧ್ಯಾಹ್ನ 01-30 – 03-00

ಸೂರ್ಯೋದಯ : 06-40 **ಸೂರ್ಯಾಸ್ತ :** 05-57

ಮುಸ್ಲಿಂ ದಿನಾಂಕ : 25 ಜುಮಾದುಲ್ಲಾವಲ್

ಅದೃಷ್ಟ ಸಂಖ್ಯೆ : 7, 12

ಮೇಷ: ಮಿತ್ರವೃಂದದಲ್ಲಿ ಕಂಡು ಬರುವ ಗೊಂದಲ ಹಾಗೂ ಭಿನ್ನಾಭಿಪ್ರಾಯಗಳನ್ನು ಹೋಗಲಾಡಿಸುವುದರಲ್ಲಿ ಯಶಸ್ವಿಯಾಗುವಿರಿ. ಗುರಿ ಮುಟ್ಟುವ ಬಗ್ಗೆ ನಿಮ್ಮ ಶ್ರಮವಿರಲಿ.

ವೃಷಭ: ಆಕಸ್ಮಿಕ ಪ್ರಯಾಣದಿಂದ ಆರೋಗ್ಯದಲ್ಲಿ ಏರುಪೇರಾದರೂ ಆರ್ಥಿಕ ಬೆಳವಣಿಗೆ ಖಂಡಿತ ಸಾಧ್ಯ. ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಬೇಕಾದ ಅಗತ್ಯಗಳನ್ನು ಪೂರೈಸಿ. ಬಂಗಾರದ ಮೇಲಿನ ಹೂಡಿಕೆಯು ಲಾಭದಾಯಕ.

ಮಿಥುನ: ಗೌರವಕ್ಕೆ ಚ್ಯುತಿ ಬರುವಂಥ ಅನಿವಾರ್ಯದ ಸಂದರ್ಭಕ್ಕೆ ಸರಿಯಾಗಿ ಒದಗುವ ಧನಾರ್ಜನೆ ಆಶ್ಚರ್ಯವೆನಿಸುವುದು. ಶ್ರಮವು ಮುಂದಿನ ದಿನಗಳಿಗೆ ಅಡಿಪಾಯವಾಗಲಿದೆ.

ಕರ್ಕಾಟಕ: ಮುಂದಾಲೋಚನೆ ಇಲ್ಲದೇ ಭರವಸೆಯನ್ನೂ ನೀಡಬೇಡಿ. ಆಡಿದ ಮಾತನ್ನು ಉಳಿಸಿಕೊಳ್ಳುವುದು ಕಷ್ಟ. ಆತ್ಮೀಯರೊಂದಿಗೆ ಮನಸ್ಸಿನ ಭಾವನೆಗಳನ್ನು ಹಂಚಿಕೊಳ್ಳುವಿರಿ.

ಸಿಂಹ: ನೈತಿಕವಾಗಿ ಪರಸ್ಪರ ಬೆಂಬಲವಾಗಿರುವ ಸ್ನೇಹ ಸಂಬಂಧಕ್ಕೆ ಪುಷ್ಟಿ ಸಿಗಲಿದೆ. ಮಕ್ಕಳ ವರ್ತನೆಯು ಮನಸ್ಸಿಗೆ ಸಂತೋಷ ತಂದುಕೊಡಲಿದೆ. ಆಲಸ್ಯತನವನ್ನು ದೂರಮಾಡಿ.

ಕನ್ಯಾ: ಗುರು-ಹಿರಿಯರ ನಂಬಿಕೆಯನ್ನು ಉಳಿಸಿಕೊಂಡು ಹೋಗುವ ಬಗ್ಗೆ ಗಮನವಿರಲಿ. ಆತ್ಮೀಯರೊಂದಿಗೆ ಮನೆಯಲ್ಲಿ ನಡೆಯಬೇಕಾಗಿರುವ ಶುಭ ಕಾರ್ಯದ ಬಗ್ಗೆ ಮಾತುಕತೆ ನಡೆಸಿ.

ತುಲಾ: ಜೀವನದಲ್ಲಿ ಅತಿಯಾಗಿ ನಂಬುವ ವ್ಯಕ್ತಿ ಜತೆ ಸಮಯ ಕಳೆಯುವಿರಿ. ಎಣ್ಣೆ, ಬೇಳೆಕಾಳು ವ್ಯಾಪಾರದಲ್ಲಿ ಮಾರಾಟ ಉತ್ತಮವಾಗಿರುವುದು. ಮಾನಸಿಕ ಸ್ಥಿತಿ ಏರುಪೇರಾದ ಸಮಯದಲ್ಲಿ ಹಿರಿಯರ ಸಲಹೆ, ಸಮಾಧಾನ ತರಲಿದೆ.

ವೃಶ್ಚಿಕ: ಕುಟುಂಬದಲ್ಲಿ ವೈವಾಹಿಕ ಜೀವನದ ನಿಲುವುಗಳೇನು ಎಂಬುದನ್ನು ಸ್ಪಷ್ಟಪಡಿಸಬೇಕಾಗುವುದು. ರಸ ಪದಾರ್ಥಗಳ ವ್ಯಾಪಾರಸ್ಥರಿಗೆ ಅನುಕೂಲಕರ ದಿನ.

ಧನು: ಹಿರಿಯರನ್ನು ತೀರ್ಥಯಾತ್ರೆಗೆ ಕಳುಹಿಸುವ ಬಗ್ಗೆ ಸರಿಯಾದ ತೀರ್ಮಾನ ತೆಗೆದುಕೊಳ್ಳಿ. ಸಾಧ್ಯತೆ ಅರಿತು ವ್ಯವಹಾರದಲ್ಲಿ ಮುಂದುವರಿದಲ್ಲಿ ಕೆಲಸಗಳೆಲ್ಲವೂ ನಿರಾತಂಕವಾಗಿ ಸಾಗಲಿದೆ.

ಮಕರ: ಆಯ್ಕೆ ಸರಿಯಾಗಿದ್ದು ಕೆಲಸಗಳನ್ನು ನಿರ್ಭಯವಾಗಿ ಮಾಡಿ ಮುಗಿಸುವಲ್ಲಿ ಯಶಸ್ವಿಯಾಗುವಿರಿ. ಜೀವನ ನಡೆಸಲು ಹಿರಿಯರ ಮಾರ್ಗದರ್ಶನ ಬೇಕೆನಿಸಲಿದೆ. ಅಧಿಕಾರಿಗಳಿಗೆ ಬೇಡಿಕೆಗಳನ್ನು ಸ್ಪಷ್ಟವಾಗಿ ತಿಳಿಸಿ.

ಕುಂಭ: ಕೆಲವೊಂದು ಕಠಿಣ ನಿರ್ಧಾರಗಳನ್ನು ಕೈಗೊಳ್ಳುವ ಪ್ರಸಂಗ ಮುಂದಿದೆ. ಇದಕ್ಕಾಗಿ ವಿಚಲಿತರಾಗಬೇಕಾಗಿಲ್ಲ. ನೂತನ ವಸ್ತುಗಳ ಖರೀದಿ ಸಂತೋಷ ತರಲಿದೆ. ಸಾಧನೆಯಲ್ಲಿ ಮೇಲುಗೈ ನಿಮ್ಮದಾಗಿರುವುದು.

ಮೀನ: ಮುಖ್ಯ ಕೆಲಸವೊಂದಕ್ಕೆ ಸಲಹೆ ಪಡೆಯಲು ಪ್ರಸಿದ್ಧ ವ್ಯಕ್ತಿಯೊಬ್ಬರನ್ನು ಸಂಪರ್ಕಿಸುವ ಕಾರ್ಯದಲ್ಲಿ ತೊಡಗುವಿರಿ. ಕುಶಲಕರ್ಮಿಗಳಿಗೆ ಅಧಿಕ ಆದಾಯ. ಕುಟುಂಬದಲ್ಲಿ ನೆಮ್ಮದಿ ಕಾಣುವಿರಿ.

ಪದಬಂಧ 5875

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಅಪ್ಪನ ಈ ರೂಪ ವಿರಳ! (4)
3.ಗಟ್ಟಿಯಾಗಿ ಕೂಗಿದರೆ ಕೇಳುವಷ್ಟು ದೂರ (4)
5.ಇದು ಅಂತರಂಗ ಸ್ಪರ್ಶಿಯಾದುದು (3)
6.ಅವನಲ್ಲಿ ಕಾಣುತ್ತಿರುವ ಕೆಟ್ಟಗುಣ (4)
8.ಬರದಿಂದ ಕಂಗೆಟ್ಟವನಿಗೆ ನೀಡಿರುವ ಪಾನಕ (4)
10.ಮನದಲ್ಲಿ ಓಟನ್ನು ನೀಡುವಿಕೆ (4)
12.ಗರತಿ ಸೇರಿಕೊಂಡಿರುವ ಇಯತ್ತೆ (4)
13.ಬಲು ವಾಚಾಳಿಯಾಗಿರುವ ವರ (3)
16.ನಡುವೆ ಮಂಜನಿದ್ದರೆ ಇದು ಸೂಕ್ತ (4)
17.ನೂತನ ದಂಪತಿಗಳು ಕೈಗೊಳ್ಳುವ ವಿಹಾರಯಾತ್ರೆ (4)

ಮೇಲಿಂದ ಕೆಳಕ್ಕೆ

1.ಕಡಿಮೆ ಬೆಲೆ ಎನ್ನುವುದೇ ಅಗ್ಗಳಿಕೆ! (2)
2.ಪಣವಿಟ್ಟು ತೋರಿಸಿದ ಅಳತೆ (4)
3.ಮೊದಲಿನಿಂದ ಕೊನೆಯವರೆಗೂ ಇರುವಂಥದ್ದು (4)
4.ಹೊಳೆ ದಾಟಲು ಬಳಸುವ ಸಾಧನ (2)
7.ವರನ ತಗಾದೆಯೇ ಇದು? (3)
9.ಬಹಳ ಆತ್ಮೀಯ ನೆಂಟರ ಸಮೂಹ (3)
11.ವನ ವಾಸದ ಒಂಬತ್ತು ತಿಂಗಳು! (4)
12.ಈ ತರಹ ತೋರಿರುವ ಬೇಧಭಾವ (4)
14.ಆವರಣ ಚಿಹ್ನೆ (2)
15.ದೇವತೆಗಳ ಒಡೆಯನೀತ (2)



5874ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ತುರಗ 3.ಕಂಸ
5.ಹದ್ದು 6.ಮಾದರಿ 7.ಹಲ
8.ವಿಜಯನಗರ 10.ಉತ್ತರಕನ್ನಡ
14.ಕಾಡು 15.ತವಕ
16.ಲಡಿ 17.ರವ
18.ಧಾರಣೆ

ಮೇಲಿಂದ ಕೆಳಕ್ಕೆ:
1.ತುರುಗೆವೆ 2.ಗಯೋನಿವಿ
4.ಸಮಾಧಾನ 5.ಹರಿಹರ 9.ಯಮಕ
10.ಉಡುತಡಿ 11.ರತ್ನಾಕರ
12.ಡವಾರಧಾ 13.ಕಡುಜಾಣೆ

ಸುಡೊಕು 6260

	7			3		1		6
4		9						
	1	8	7		2		5	4
		3	5		6	4		
	4			2			6	7
		5	1		7	3		
	8		6		5	2		3
2		6						
	3	4		7		6	1	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6259 ಸುಡೊಕು

5	2	9	1	3	8	4	7	6
4	7	1	5	6	2	9	8	3
3	6	8	9	4	7	2	5	1
1	9	7	3	5	4	6	2	8
6	3	2	7	8	9	1	4	5
8	5	4	2	1	6	3	9	7
7	8	6	4	2	1	5	3	9
2	1	3	8	9	5	7	6	4
9	4	5	6	7	3	8	1	2

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	24,194
ಇಂದಿನ ಅಂತ್ಯ	24,274
▲	80
ದಿನದ ಗರಿಷ್ಠ	24,354

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹610
12 ಕ್ಕೆ	₹80
ಮೈಸೂರು	
100ಕ್ಕೆ	₹612

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಪ್ರ.ಬಿ) ₹355-666

ದ್ವಿತಳಿ (ಬಿ.ವಿ) ₹345-771

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4 ₹186

ಆರ್‌ಎಸ್‌ಎಸ್-5 ₹179

ಗುಡ್ ಲಾಟ್ ₹174

(ಪ್ರತಿ ಕೆ.ಜಿಗೆ)

ಮುದ್ರೆಮನೆ ಕಾಫಿ

(50 ಕೆಜಿಗೆ)

ಎಪಿ	₹20650
ಎಸಿ	₹11480
ಆರ್‌ಪಿ	₹19000
ಆರ್‌ಸಿ	₹11310

ಅಡಿಕೆ ಧಾರಣೆ (₹ಗಳಲ್ಲಿ)

ಬಂಟ್ವಾಳ		ಕೋಕ	6109-23099	ಸರಕು	51000-82540
ಕೋಕ	20000-27500	ಫ್ಯಾಕ್ಟರಿ	5099-19829	ಸಿದ್ದಾಪುರ	
ಹಳತು	43000-50000	ಹಳೆಚಾಲಿ	36899-39699	ಬಿಳಿಗೋಟು	24069-28199
ಕಾರ್ಕಳ		ಹೊಸಚಾಲಿ	22569-26469	ಚಾಲಿ	32809-36639
ಹೊಸತು	25000-33500	ಶಿವಮೊಗ್ಗ		ಕೋಕ	20609-25699
ಹಳತು	30000-50000	ಬೆಟ್ಟೆ	56119-57429	ಕೆಂಪುಗೋಟು	20900-26309
ಕುಮಟ		ಗೊರಬಲು	47039-49999	ರಾಶಿ	43099-46839
ಚಾಲಿ	32099-36499	ಹೊಸತು	47039-49999	ತಟ್ಟಿಬೆಟ್ಟೆ	26109-32289
ಚಿಪ್ಪು	22890-26589	ರಾಶಿ	18315-31309		

ಮುಂಬೈ ಧಾರಣೆ

ಶೇಂಗಾ

27-11-2024

ಜಾವಾ 70/80(ಹೊಸ)	10700-10800
ಜಾವಾ 80/90(ಹೊಸ)	10200-10300
ದಪ್ಪ ಮಧ್ಯಪ್ರದೇಶ(ಹೊಸ)	8900-9000
ದಪ್ಪ ಗುಜರಾತ್(ಹೊಸ)	9700-9800

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1470 (1470)
ಒಂದು ವಾರದ ಡೆಲಿವರಿ	1465 (1465)
ಪಾಮ್ ವಾರದ ಡೆಲಿವರಿ	1333 (1338)
ಸೂರ್ಯಕಾಂತಿ ಎಣ್ಣೆ ಕಚ್ಚಾ	1325 (1340)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ

ಚಿನ್ನ 10ಗ್ರಾಂ

₹**75,950** (75,400)

ಬೆಳ್ಳಿ ಕೆ.ಜಿ ₹**88,500** (88,400)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1460 (1460)
ಸೋಯಾ (ರಿಫೈನ್ಡ್)	₹1325 (1330)
ಸೂರ್ಯಕಾಂತಿ (ರಿಫೈನ್ಡ್)	₹1375 (1390)
ಪಾಮೋಲಿನ್	₹1335 (1340)

ವಿನಿಮಯ ದರ

$ ಡಾಲರ್	84.40
£ ಪೌಂಡ್	106.45
€ ಯುರೊ	88.82
¥ ಯೆನ್ (100ಕ್ಕೆ)	56

ಈರುಳ್ಳಿ (ಕ್ವಿಂಟಲ್‌ಗೆ)

ದಪ್ಪ	₹5000-6500
ಮಧ್ಯಮ	₹3000-4000
ಸಣ್ಣ	₹1500-3000

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

ಅರಸೀಕೆರೆ	₹14000-14000
ಮಧುಗಿರಿ	₹6800-8000

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com

or

Scan QR code to access booking form

ಚಿರಸ್ಮರಣೆ

ಶ್ರೀಮತಿ ಆರ್. ಜಿ. ಶಾರದ

ಜನನ: 01-01-1947 ನಿಧನ: 20-11-2024

ಇವರು ದಿನಾಂಕ: 20-11-2024 ನೇ ಬುಧವಾರ, ಮಧ್ಯಾಹ್ನ 01:27 ಕ್ಕೆ ಶಿವೈಕ್ಯರಾದರೆಂದು ತಿಳಿಸಲು ವಿಷಾದಿಸುತ್ತೇವೆ. ದಿನಾಂಕ: 28-11-2024 ನೇ ಗುರುವಾರ, ಬೆಳಿಗ್ಗೆ 11:30 ಕ್ಕೆ ಇವರ ಆರಾಧನೆಯನ್ನು ಏರ್ಪಡಿಸಲಾಗಿದೆ, ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಬೇಕಾಗಿ ಪ್ರಾರ್ಥಿಸುತ್ತೇವೆ

ಇಂತಿ ದುಃಖತಪ್ತರು

ಶ್ರೀ ಹೆಚ್ ಎನ್ ಚಂದ್ರಶೇಖರಯ್ಯ, ಹಾಗೂ ಬಂಧು-ಮಿತ್ರರು

ಸ್ಥಳ : ಸ್ವಗೃಹ, # 8, ಅಮೋಘ ಮೆಡಿಕಲ್ಸ್ ನ ಹಿಂಭಾಗ, ನವ್ಯ ನಗರ, ಕೆಂಪೇಗೌಡ ಸರ್ಕಲ್, ಜಕ್ಕೂರು, ಬೆಂಗಳೂರು.

LOOKING FOR JOB OPPORTUNITY

Refer Classifieds on Wednesday

ಭಾವಪೂರ್ಣ ಶ್ರದ್ಧಾಂಜಲಿ

ಶ್ರೀ ಕೆ.ಬಿ.ಜಯರಾಮ್

ಆಡಳಿತ ಮಂಡಳಿ ಸದಸ್ಯರು ಹಾಗೂ ದಾನಿಗಳು, ಜನತಾ ಶಿಕ್ಷಣ ಸಂಸ್ಥೆ

ಜನನ–12.12.1937 ಮರಣ–18.11.2024

ಮೃತರ ಆತ್ಮಕ್ಕೆ ಶಾಂತಿಯನ್ನು ಕೋರುವ ಆಡಳಿತ ಮಂಡಳಿ, ಜನತಾ ಶಿಕ್ಷಣ ಸಂಸ್ಥೆ ಪ್ರಾಂಶುಪಾಲರು,ಮುಖ್ಯೋಪಾಧ್ಯಾಯರು ಮತ್ತು ಸಿಬ್ಬಂದಿ ವರ್ಗ ವಿವೇಕಾನಂದ ಶಾಲಾ ಕಾಲೇಜುಗಳು ಬೆಂಗಳೂರು-560055

ಚಿಲ್ಲರೆ ಬೆಲೆ ನಿಯಂತ್ರಣಕ್ಕೆ ಕ್ರಮ: ಕೇಂದ್ರ ಸರ್ಕಾರ

ತೊಗರಿ, ಉದ್ದು ದರ ಸ್ಥಿರ

ಪ್ರಜಾವಾಣಿ ವಾರ್ತೆ

ನವದೆಹಲಿ: ಕಳೆದ ಮೂರು ತಿಂಗಳಲ್ಲಿ ದೇಶದ ಚಿಲ್ಲರೆ ಮಾರುಕಟ್ಟೆಯಲ್ಲಿ ತೊಗರಿ ಮತ್ತು ಉದ್ದು ಧಾರಣೆಯು ಇಳಿಕೆಯಾಗಿದೆ ಅಥವಾ ಸ್ಥಿರವಾಗಿದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

ಕೇಂದ್ರ ಗ್ರಾಹಕ ವ್ಯವಹಾರಗಳ ಇಲಾಖೆಯು ಬೆಲೆ ನಿಯಂತ್ರಣ ಸಂಬಂಧ ನಿಯಮಿತವಾಗಿ ರಿಟೇಲರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ (ಆರ್‌ಎಐ) ಹಾಗೂ ಸಗಟುದಾರರ ಸಭೆ ನಡೆಸುತ್ತದೆ. ಮಂಡಿ ಹಾಗೂ ಚಿಲ್ಲರೆ ಮಾರುಕಟ್ಟೆಯಲ್ಲಿ ಬೇಳೆಕಾಳುಗಳ ಬೆಲೆ ಬಗ್ಗೆ ಪರಾಮರ್ಶೆ ನಡೆಸುತ್ತದೆ ಎಂದು ಕೇಂದ್ರ ಗ್ರಾಹಕ ವ್ಯವಹಾರ ಮತ್ತು ಆಹಾರ ಖಾತೆಯ ರಾಜ್ಯ ಸಚಿವ ಬಿ.ಎಲ್. ವರ್ಮಾ ಅವರು, ಲೋಕಸಭೆಗೆ ನೀಡಿರುವ ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ.

ಮಾರುಕಟ್ಟೆಯಲ್ಲಿ ಬೇಳೆಕಾಳುಗಳ ಬೆಲೆ ಏರಿಕೆ ನಿಯಂತ್ರಣಕ್ಕೆ ಸರ್ಕಾರ ಮುಂದಾಗಿದೆ. ಭಾರತ್ ಬ್ರ್ಯಾಂಡ್‌ನಡಿ ಗ್ರಾಹಕರಿಗೆ ರಿಯಾಯಿತಿ ದರದಲ್ಲಿ ವಿತರಿಸುತ್ತಿದೆ ಎಂದು ವಿವರಿಸಿದ್ದಾರೆ.

ಅಲ್ಲದೆ, ಗೋಧಿ ಹಿಟ್ಟು ಮತ್ತು ಅಕ್ಕಿಯನ್ನೂ ವಿತರಿಸಲಾಗುತ್ತಿದೆ. ಈರುಳ್ಳಿ ಬೆಲೆ ನಿಯಂತ್ರಣಕ್ಕೂ ಕ್ರಮವಹಿಸಿದೆ. ಚಿಲ್ಲರೆ ಮಳಿಗೆಗಳಲ್ಲಿ ರಿಯಾಯಿತಿ ದರದಡಿ ಈರುಳ್ಳಿ ಮಾರಾಟಕ್ಕೆ ಚಾಲನೆ ನೀಡಿದೆ. ಸರ್ಕಾರದ ಈ ಕ್ರಮದಿಂದ ಚಿಲ್ಲರೆ ಮಾರುಕಟ್ಟೆಯಲ್ಲಿ ಬೆಲೆ ನಿಯಂತ್ರಣಕ್ಕೆ ಬಂದಿದೆ ಎಂದು ತಿಳಿಸಿದ್ದಾರೆ.

ದೇಶೀಯ ಬೇಡಿಕೆಗೆ ಅನುಗುಣವಾಗಿ ಬೇಳೆಕಾಳು ಆಮದಿಗೆ ಕ್ರಮವಹಿಸಿದೆ. 2025ರ ಮಾರ್ಚ್ ಅಂತ್ಯದವರೆಗೆ ತೊಗರಿ ಮತ್ತು ಉದ್ದನ್ನು ಆಮದು ಮುಕ್ತ ವರ್ಗದಲ್ಲಿ ಇರಿಸಿದೆ. ಇದೇ ಅವಧಿವರೆಗೆ ಚೆನ್ನಂಗಿಬೇಳೆ (ಮಸೂರ್ ದಾಲ್) ಮೇಲಿನ ಸುಂಕವನ್ನು ಶೂನ್ಯಕ್ಕೆ ಇಳಿಸಲಾಗಿದೆ. ಕಡಲೆಕಾಳು ಆಮದು ಮೇಲಿನ ಸುಂಕವನ್ನು ರದ್ದುಪಡಿಸಿದೆ ಎಂದು ಹೇಳಿದ್ದಾರೆ.

10.66 ಲಕ್ಷ ರೈತರು ನೋಂದಣಿ

ಬೆಲೆ ಪ್ರೋತ್ಸಾಹ ಯೋಜನೆ ಮತ್ತು ಬೆಲೆ ಸ್ಥಿರತೆ ನಿಧಿಯಡಿ ತೊಗರಿ ಮತ್ತು ಉದ್ದು ಖರೀದಿಗೆ ಕ್ರಮವಹಿಸಲಾಗಿದೆ ಎಂದು ಕೇಂದ್ರ ತಿಳಿಸಿದೆ.

ಕೃಷಿ ಹುಟ್ಟುವಳಿಗಳಿಗೆ ಉತ್ತಮ ಬೆಲೆ ನೀಡುವ ನಿಟ್ಟಿನಲ್ಲಿ ಪ್ರಧಾನ ಮಂತ್ರಿ ಆಯ್ ಸಂರಕ್ಷಣಾ ಅಭಿಯಾನವನ್ನು (ಪಿಎಂ–ಆಶಾ) ಜಾರಿಗೊಳಿಸಲಾಗಿದೆ. ನಾಫೆಡ್ ಮತ್ತು ಎನ್‌ಸಿಸಿಎಫ್‌ನಿಂದ ಖರೀದಿ ಪ್ರಕ್ರಿಯೆ ನಡೆಯಲಿದ್ದು, ನವೆಂಬರ್ 22ರ ವರೆಗೆ 10.66 ಲಕ್ಷ ರೈತರು ನೋಂದಣಿ ಮಾಡಿಕೊಂಡಿದ್ದಾರೆ ಎಂದು ಹೇಳಿದೆ.

ಮುಂಗಾರು ಅವಧಿಯಲ್ಲಿ ಕಾಳುಗಳ ಉತ್ಪಾದನೆ ಉತ್ತಮವಾಗಿದ್ದು, ಹೆಸರುಕಾಳು, ಉದ್ದು ಕೊಯ್ಲು ಮುಗಿದಿದೆ. ತೊಗರಿ ಕೊಯ್ಲು ಆರಂಭವಾಗಿದೆ. ಉತ್ತಮ ಹವಾಮಾನವು ಮಾರುಕಟ್ಟೆಗೆ ಬೇಳೆಕಾಳುಗಳ ಪೂರೈಕೆಗೆ ನೆರವಾಗಲಿದೆ. ಹಾಗಾಗಿ, ಮುಂದಿನ ದಿನಗಳಲ್ಲಿ ಬೇಳೆಕಾಳುಗಳ ಬೆಲೆ ಇಳಿಕೆಯಾಗಲಿದೆ ಎಂದು ತಿಳಿಸಿದೆ.

ಸುದ್ದಿ 2 ನಿಮಿಷ

ಎಸ್‌ಬಿಐ: ₹50 ಸಾವಿರ ಕೋಟಿ ಬಂಡವಾಳ ಸಂಗ್ರಹ

ನವದೆಹಲಿ (ಪಿಟಿಐ): ಪ್ರಸಕ್ತ ಆರ್ಥಿಕ ವರ್ಷದಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (ಎಸ್‌ಬಿಐ) ₹50 ಸಾವಿರ ಕೋಟಿ ಬಂಡವಾಳ ಸಂಗ್ರಹಿಸಿದೆ.

ಪ್ರಸಕ್ತ ತಿಂಗಳಿನಲ್ಲಿ ಮೂಲಸೌಕರ್ಯ ಬಾಂಡ್‌ಗಳ ವಿತರಣೆ ಮೂಲಕ ₹10 ಸಾವಿರ ಕೋಟಿ ಸಂಗ್ರಹಿಸಿತ್ತು.

ಅಡಿಷನಲ್ ಟೈರ್ 1 ಬಾಂಡ್‌ನಡಿ ₹5 ಸಾವಿರ ಕೋಟಿ, ಟೈರ್ 2 ಬಾಂಡ್‌ಗಳ ಮೂಲಕ ₹15 ಸಾವಿರ ಕೋಟಿ ಹಾಗೂ ದೀರ್ಘಾವಧಿ ಬಾಂಡ್ ವಿತರಣೆಯಡಿ ₹30 ಸಾವಿರ ಕೋಟಿ ಬಂಡವಾಳ ಸಂಗ್ರಹಿಸಿದೆ.

ಎಲ್ಲಾ ಬಾಂಡ್‌ಗಳಿಗೂ ಹೂಡಿಕೆದಾರರಿಂದ ಉತ್ತಮ ಸ್ಪಂದನೆ ಸಿಕ್ಕಿದೆ. ಬಾಂಡ್‌ಗಳಿಗೆ ಎರಡು ಪಟ್ಟು ಬೇಡಿಕೆ ಕಂಡುಬಂದಿದೆ ಎಂದು ಎಸ್‌ಬಿಐ ತಿಳಿಸಿದೆ.

‘ಇದು ದೇಶದ ಅತಿದೊಡ್ಡ ಬ್ಯಾಂಕ್‌ನ ಮೇಲೆ ಹೂಡಿಕೆದಾರರು ಇಟ್ಟಿರುವ ನಂಬಿಕೆಗೆ ಸಾಕ್ಷಿಯಾಗಿದೆ’ ಎಂದು ಬ್ಯಾಂಕ್ ಅಧ್ಯಕ್ಷ ಸಿ.ಎಸ್. ಸೆಟ್ಟಿ ಹೇಳಿದ್ದಾರೆ.

ಬೆಳ್ಳಿ ದರ ಕೆ.ಜಿಗೆ ₹5,200 ಏರಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಬುಧವಾರ ನಡೆದ ವಹಿವಾಟಿನಲ್ಲಿ ಬೆಳ್ಳಿ ದರ ಏರಿಕೆಯಾಗಿದೆ.

ಕೆ.ಜಿಗೆ ₹5,200 ಏರಿಕೆಯಾಗಿ, ₹95,800ರಂತೆ ಮಾರಾಟವಾಗಿದೆ.

10 ಗ್ರಾಂ ಚಿನ್ನದ ದರವು (ಶೇ 99.9ರಷ್ಟು ಪರಿಶುದ್ಧತೆ) ₹650 ಏರಿಕೆಯಾಗಿದ್ದು, ₹78,800 ಆಗಿದೆ. ಸ್ಟ್ಯಾಂಡರ್ಡ್ ಚಿನ್ನದ (ಶೇ 99.5 ಶುದ್ಧತೆ) ಬೆಲೆಯು ₹950 ಏರಿಕೆಯಾಗಿದ್ದು, ₹78,700 ಆಗಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ಪ್ರಸಕ್ತ ವರ್ಷದ ಅಕ್ಟೋಬರ್ 21ರಂದು ಬೆಳ್ಳಿ ದರವು ಕೆ.ಜಿಗೆ ₹5 ಸಾವಿರ ಏರಿಕೆಯಾಗಿತ್ತು. ಅದಾದ ಬಳಿಕ ಮತ್ತೆ ಈಗ ಅಷ್ಟೇ ಪ್ರಮಾಣದಲ್ಲಿ ಏರಿಕೆಯಾಗಿದೆ.

ಲಂಚದ ದೂರು ದಾಖಲಾಗಿಲ್ಲ: ಸ್ಪಷ್ಟನೆ

ಸೆಕ್ಯುರಿಟೀಸ್ ಕಾಯ್ದೆ ಉಲ್ಲಂಘನೆ ದಾಖಲು: ಅದಾನಿ ಸಮೂಹ ಹೇಳಿಕೆ

ನವದೆಹಲಿ (ಪಿಟಿಐ): ಅಮೆರಿಕದಲ್ಲಿ ಉದ್ಯಮಿ ಗೌತಮ್ ಅದಾನಿ ಹಾಗೂ ಸಾಗರ್ ಅದಾನಿ ವಿರುದ್ಧ ವಿದೇಶಿ ಭ್ರಷ್ಟಾಚಾರ ಕಾಯ್ದೆಯಡಿ (ಎಫ್‌ಸಿಪಿಎ) ದೂರು ದಾಖಲಾಗಿಲ್ಲ. ಸೆಕ್ಯುರಿಟೀಸ್ ಹಾಗೂ ಹಣಕಾಸು ವಂಚನೆಗೆ ಸಂಬಂಧಿಸಿದ ದೂರುಗಳು ದಾಖಲಾಗಿದ್ದು, ಇದರಡಿ ದಂಡವನ್ನಷ್ಟೇ ವಿಧಿಸಬಹುದಾಗಿದೆ ಎಂದು ಅದಾನಿ ಸಮೂಹ ಬುಧವಾರ ಹೇಳಿದೆ.

ಕಳೆದ ವಾರ ನ್ಯೂಯಾರ್ಕ್ ಕೋರ್ಟ್‌ನಲ್ಲಿ ಅಮೆರಿಕದ ನ್ಯಾಯಾಂಗ ಇಲಾಖೆಯು ಆರೋಪ ಪಟ್ಟಿ ಸಲ್ಲಿಸಿದೆ. ಇದರಲ್ಲಿ ಗೌತಮ್ ಅದಾನಿ, ಸಾಗರ್ ಅದಾನಿ, ಅದಾನಿ ಗ್ರೀನ್ ಎನರ್ಜಿ ಲಿಮಿಟೆಡ್‌ನ (ಎಜಿಇಎಲ್) ವ್ಯವಸ್ಥಾಪಕ ನಿರ್ದೇಶಕ ಮತ್ತು ಸಿಇಒ ವನೀತ್ ಜೈನ್ ಅವರು, ಕಾಯ್ದೆ ಉಲ್ಲಂಘನೆಗೆ ಪಿತೂರಿ ನಡೆಸಿರುವ ಬಗ್ಗೆ ಪ್ರಸ್ತಾಪಿಸಿಲ್ಲ ಎಂದು ಎಜಿಇಎಲ್, ಷೇರುಪೇಟೆಗೆ ಮಾಹಿತಿ ನೀಡಿದೆ.

ಸೌರ ವಿದ್ಯುತ್ ಗುತ್ತಿಗೆ ಪಡೆಯಲು ಭಾರತದಲ್ಲಿ ಸರ್ಕಾರಿ ಅಧಿಕಾರಿಗಳಿಗೆ ಲಂಚ ನೀಡಿದ ಆರೋಪ ಎಜಿಇಎಲ್ ಮೇಲಿದೆ.

ಸೆಕ್ಯುರಿಟೀಸ್ ಕಾಯ್ದೆ 1933, ಸೆಕ್ಯುರಿಟೀಸ್ ಕಾಯ್ದೆ 1934ರ ಉಲ್ಲಂಘನೆ ಆರೋಪದ ಮೇರೆಗೆ ಕಂಪನಿಯ ಮೂವರು ನಿರ್ದೇಶಕರ ವಿರುದ್ಧ ಸಿವಿಲ್ ಪ್ರಕರಣ ದಾಖಲಾಗಿದೆ. ಎಜಿಇಎಲ್ ವಿರುದ್ಧವೂ ಈ ಕಾಯ್ದೆಗಳ ಅಡಿ ಪ್ರಕರಣ ದಾಖಲಾಗಿದೆ ಎಂದು ವಿವರಿಸಿದೆ.

ಗೌತಮ್ ಅದಾನಿ ಮತ್ತು ಸಾಗರ್ ಅದಾನಿ ವಿರುದ್ಧ ಸೆಕ್ಯುರಿಟೀಸ್ ಕಾಯ್ದೆಯ ಸೆಕ್ಷನ್‌ಗಳನ್ನು ಉಲ್ಲಂಘಿಸಿದ ಆರೋಪದ ಬಗ್ಗೆ ಸಿವಿಲ್ ಪ್ರಕರಣ ದಾಖಲಾಗಿದೆ. ಕಾಯ್ದೆಯ ವಿರುದ್ಧ ಕುಮ್ಮಕ್ಕು ನೀಡಿದ ಆರೋಪದ ಮೇಲೆ ಎಜಿಇಎಲ್ ವಿರುದ್ಧ ದೂರು ದಾಖಲಾಗಿದೆ ಎಂದು ಹೇಳಿದೆ.

ಕಾಯ್ದೆ ಹೇಳುವುದು ಏನು?: ಅಮೆರಿಕದ ಷೇರು ಮಾರುಕಟ್ಟೆಯಲ್ಲಿ ಲಿಸ್ಟಿಂಗ್ ಆದ, ಅಮೆರಿಕದ ಹೂಡಿಕೆದಾರರು ಅಥವಾ ಜಂಟಿ ಸಹಭಾಗಿತ್ವ ಹೊಂದಿದ ಕಂಪನಿ ಅಥವಾ ವ್ಯಕ್ತಿಯು ತಮ್ಮ ಅನುಕೂಲಕ್ಕಾಗಿ ಯಾವುದೇ ಸರ್ಕಾರಿ ಅಧಿಕಾರಿಗೆ ಲಂಚ ಅಥವಾ ಉಡುಗೊರೆ ನೀಡುವುದಕ್ಕೆ ಎಫ್‌ಸಿಪಿಎ ಅಡಿ ನಿರ್ಬಂಧ ಹೇರಲಾಗಿದೆ.

ಆದರೆ, ಅಮೆರಿಕದಲ್ಲಿ ಅದಾನಿ ಸಮೂಹದ ಯಾವುದೇ ಕಂಪನಿಯು ವ್ಯಾಪಾರ ನಡೆಸುವುದಿಲ್ಲ.ಆದರೆ, ಅಮೆರಿಕದ ಹೂಡಿಕೆದಾರರು ಎಜಿಇಎಲ್‌ನ ಈಕ್ವಿಟಿ ಅಥವಾ ಡೆಬ್ಟ್‌ನಲ್ಲಿ ಹೂಡಿಕೆ ಮಾಡಿದ್ದಾರೆ.

ವಕೀಲರ ಹೇಳಿಕೆ: ಗೌತಮ್ ಅದಾನಿ ಮತ್ತು ಸಾಗರ್ ಅದಾನಿ ವಿರುದ್ಧ ಲಂಚ ನೀಡಿದ ಆರೋಪ ಕುರಿತು ದೂರು ದಾಖಲಾಗಿಲ್ಲ. ಆರೋಪ ಪಟ್ಟಿಯಲ್ಲಿ ಲಂಚ ಪಡೆದ ಒಬ್ಬ ಅಧಿಕಾರಿಯ ಹೆಸರನ್ನೂ ಪ್ರಸ್ತಾಪಿಸಿಲ್ಲ ಎಂದು ಅದಾನಿ ಸಮೂಹದ ಪರ ವಕೀಲರಾದ ಮುಕುಲ್ ರೋಹಟಗಿ ಹಾಗೂ ಮಹೇಶ್ ಜೇಠ್ಮಲಾನಿ ಹೇಳಿದ್ದಾರೆ.

ಅದಾನಿ ಕಂಪನಿಗಳ ಷೇರಿನ ಮೌಲ್ಯ ಏರಿಕೆ

ನವದೆಹಲಿ (ಪಿಟಿಐ): ಉದ್ಯಮಿ ಗೌತಮ್ ಅದಾನಿ ವಿರುದ್ಧ ಲಂಚ ನೀಡಿದ್ದ ಆರೋಪ ಕೇಳಿಬಂದ ಬೆನ್ನಲ್ಲೇ ಇಳಿಕೆಯ ಹಾದಿ ಹಿಡಿದಿದ್ದ ಅದಾನಿ ಸಮೂಹದ ಎನರ್ಜಿ ಕಂಪನಿಗಳ ಷೇರಿನ ಮೌಲ್ಯದಲ್ಲಿ ಬುಧವಾರ ಏರಿಕೆಯಾಗಿದೆ.

ಅದಾನಿ ಟೋಟಲ್ ಗ್ಯಾಸ್ ಶೇ 19.76, ಅದಾನಿ ಪವರ್ ಶೇ 19.66, ಅದಾನಿ ಎಂಟರ್‌ಪ್ರೈಸಸ್ ಶೇ 11.56, ಅದಾನಿ ಗ್ರೀನ್ ಸಲ್ಯೂಷನ್ಸ್ ಶೇ 10 ಹಾಗೂ ಅದಾನಿ ಗ್ರೀನ್ ಎನರ್ಜಿ ಷೇರಿನ ಮೌಲ್ಯದಲ್ಲಿ ಶೇ 10ರಷ್ಟು ಹೆಚ್ಚಳವಾಗಿದೆ. ಎನ್‌ಡಿಟಿವಿ ಶೇ 9.35, ಅದಾನಿ ವಿಲ್ಮರ್ ಶೇ 8.46, ಅದಾನಿ ಪೋರ್ಟ್ಸ್ ಶೇ 6.29, ಶಾಂಘಿ ಇಂಡಸ್ಟ್ರಿಸ್ ಶೇ 4.73, ಅಂಬುಜಾ ಸಿಮೆಂಟ್ಸ್ ಶೇ 4.40 ಹಾಗೂ ಎಸಿಸಿ ಷೇರಿನ ಮೌಲ್ಯದಲ್ಲಿ ಶೇ 4.16ರಷ್ಟು ಏರಿಕೆಯಾಗಿದೆ.

ಅದಾನಿ ಸಮೂಹದ ಮಾರುಕಟ್ಟೆ ಬಂಡವಾಳ ಮೌಲ್ಯ ₹1.24 ಲಕ್ಷ ಕೋಟಿ ಏರಿಕೆಯಾಗಿದೆ.

ಸಂಕ್ಷಿಪ್ತ ಸುದ್ದಿ

ತ್ರಿಚಕ್ರ ವಾಹನಗಳಿಗೆ ಸಬ್ಸಿಡಿ ವಿಸ್ತರಣೆ

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರವು ಪಿಎಂ ಇ–ಡ್ರೈವ್ ಯೋಜನೆ ಅಡಿ ಎರಡನೇ ಹಂತದಲ್ಲಿ ಸರಕು ಸಾಗಣೆ ಇ–ಆಟೊರಿಕ್ಷಾ ಖರೀದಿದಾರರಿಗೆ ಸಬ್ಸಿಡಿ ಸೌಲಭ್ಯವನ್ನು ವಿಸ್ತರಿಸಿದೆ.

ಪ್ರಸಕ್ತ ಆರ್ಥಿಕ ವರ್ಷದಲ್ಲಿ ಎಲ್5 ವರ್ಗಕ್ಕೆ ಸೇರಿದ (ಸರಕು ಸಾಗಣೆ ತ್ರಿಚಕ್ರ-ವಾಹನ) ವಾಹನಗಳಿಗೆ ಸಬ್ಸಿಡಿ ನೀಡ-ಲಾಗುತ್ತಿದ್ದು, ನವೆಂಬರ್ 7ರ ವರೆಗೆ 80 ಸಾವಿರ ವಾಹನಗಳು ನೋಂದಣಿ ಮಾಡಿಕೊಂಡಿವೆ. ಇ–ಆಟೊರಿಕ್ಷಾ ಸೇರಿ ತ್ರಿಚಕ್ರ ವಾಹನಗಳಿಗೆ ನೀಡುವ ಸಬ್ಸಿಡಿಗೆ 80,546 ವಾಹನಗಳು ನೋಂದಣಿ ಮಾಡಿಕೊಂಡಿವೆ. ವಾಹನಗಳ ಬ್ಯಾಟರಿ ಸಾಮರ್ಥ್ಯ ಆಧಾರದ ಮೇಲೆ ಸಬ್ಸಿಡಿ ದೊರೆಯಲಿದೆ.

ಐ.ಟಿ ನೇಮಕಾತಿ ಏರಿಕೆ ನಿರೀಕ್ಷೆ

ಮುಂಬೈ (ಪಿಟಿಐ): ತಂತ್ರಜ್ಞಾನದ ಕ್ಷಿಪ್ರ ಬೆಳವಣಿಗೆಯಿಂದಾಗಿ ಮುಂದಿನ ಆರು ತಿಂಗಳಿನಲ್ಲಿ ದೇಶದ ಐ.ಟಿ ವಲಯದಲ್ಲಿ ಹೊಸ ನೇಮಕಾತಿ ಪ್ರಮಾಣವು ಶೇ 12ರಷ್ಟು ಏರಿಕೆಯಾಗಲಿದೆ ಎಂದು ಕ್ವೆಸ್ ಕಾರ್ಪ್ ವರದಿ ಬುಧವಾರ ತಿಳಿಸಿದೆ.

2030ರ ವೇಳೆಗೆ ಜನರೇಟಿವ್ ಕೃತಕ ಬುದ್ಧಿಮತ್ತೆ, ಡೀಪ್ ಟೆಕ್, ಕ್ವಾಂಟಂ ಕಂಪ್ಯೂಟಿಂಗ್ ತಂತ್ರಜ್ಞಾನವು 10 ಲಕ್ಷಕ್ಕೂ ಹೆಚ್ಚು ಉದ್ಯೋಗಗಳನ್ನು ಸೃಷ್ಟಿಸಲಿದೆ ಎಂದು ಹೇಳಿದೆ.

ಪ್ರಸಕ್ತ ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಜಾಗತಿಕ ಸಾಮರ್ಥ್ಯ ಕೇಂದ್ರ (ಜಿಸಿಸಿ) ಮತ್ತು ಸೈಬರ್ ಭದ್ರತೆಗೆ ಸಂಬಂಧಿಸಿದ ನೇಮಕಾತಿಯು ಕ್ರಮವಾಗಿ ಶೇ 71 ಮತ್ತು ಶೇ 58ರಷ್ಟು ಏರಿಕೆಯಾಗಿದೆ ಎಂದು ತಿಳಿಸಿದೆ.

ವಿಮಾನಗಳಿಗೆ 994 ಹುಸಿ ಬಾಂಬ್ ಬೆದರಿಕೆ

ನವದೆಹಲಿ (ಪಿಟಿಐ): ಪ್ರಸಕ್ತ ವರ್ಷದ ಆರಂಭದಿಂದ ನವೆಂಬರ್ 13ರ ವರೆಗೆ ವಿಮಾನಯಾನ ಸಂಸ್ಥೆಗಳಿಗೆ ಒಟ್ಟು 994 ಹುಸಿ ಬಾಂಬ್ ಬೆದರಿಕೆ ಕರೆಗಳು ಬಂದಿವೆ ಎಂದು ಕೇಂದ್ರ ಸರ್ಕಾರವು, ಬುಧವಾರ ರಾಜ್ಯಸಭೆಗೆ ತಿಳಿಸಿದೆ.

2022ರ ಆಗಸ್ಟ್‌ನಿಂದ ಈ ವರ್ಷದ ನವೆಂಬರ್ 13ರ ವರೆಗೆ ಒಟ್ಟು 1,143 ಹುಸಿ ಬಾಂಬ್ ಬೆದರಿಕೆ ಕರೆ/ ಸಂದೇಶಗಳನ್ನು ಸ್ವೀಕರಿಸ-ಲಾಗಿದೆ ಎಂದು ಕೇಂದ್ರ ನಾಗರಿಕ ವಿಮಾನಯಾನ ಖಾತೆಯ ರಾಜ್ಯ ಸಚಿವ ಮುರಳೀಧರ್ ಮೊಹೋಲ್ ತಿಳಿಸಿದ್ದಾರೆ. ಈ ಕರೆಗಳನ್ನು ಸಮರ್ಥವಾಗಿ ನಿಭಾಯಿಸಲಾಗಿದೆ. ಇವುಗಳನ್ನು ಹತ್ತಿಕ್ಕಲು ಕಾಯ್ದೆಗೆ ತಿದ್ದುಪಡಿ ತರಲು ಸಚಿವಾಲಯವು ಚಿಂತನೆ ನಡೆಸಿದೆ ಎಂದು ಹೇಳಿದ್ದಾರೆ.

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ:

080 - 45557160 /161/ 162/ 163/ 164

9845114560 / 9731810277/ 9886213331

ಉದ್ಯೋಗಾವಕಾಶ

General

ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th,PUC, ITI, Degree. ಸಂಬಳ 16,000- 86,000. (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಮನೆಯಲ್ಲೇ ಕುಳಿತು ಪುಸ್ತಕ ಬರೆಯುವ ಹಾಗು ಫಾರಂ ತುಂಬುವ ಮೂಲಕ ತಿಂಗಳಿಗೆ 15,000-20,000/- ಸಂಪಾದಿಸಿ. ಕೊರಿಯರ್ ಇದೆ. 9611874742, 9611574742.

Wanted

ಬೆಂಗಳೂರಿನ ದೇವಸ್ಥಾನದಲ್ಲಿ ಕೆಲಸ ಮಾಡಲು ವೇದ ಮಂತ್ರಗಳನ್ನು ಅರಿತಿರುವ ಬ್ರಾಹ್ಮಣ ಸಹಾಯಕ ಅರ್ಚಕರು ಬೇಕಾಗಿದ್ದಾರೆ. ನೈವೇದ್ಯ ಪ್ರಸಾದ ಮಾಡಲು ಗೊತ್ತಿರುವ ಅರ್ಚಕರಿಗೆ ಆದ್ಯತೆ ನೀಡಲಾಗುತ್ತದೆ. ವಯೋಮಿತಿ 50 ವರ್ಷ, ಸಂಪರ್ಕಿಸಿ: 7019132200, 080-25300714

ಪುರುಷ ಸಹಾಯಕರು ತಕ್ಷಣ ಬೇಕಾಗಿದ್ದಾರೆ. ರಾಮನಗರ ಬಳಿಯಿರುವ ರೆಸಾರ್ಟ್‌ಗೆ ಊಟ, ವಸತಿಯೊಂದಿಗೆ ಉತ್ತಮ ಸಂಬಳ, ಸಂಪರ್ಕಿಸಿ: 9663497356/ 8884811114

ಭವಿಷ್ಯ

Astrology

★ಭಾರತದ★ ಪ್ರಖ್ಯಾತ ಬುಡಬುಡಕಿ ಜನಾಂಗದ ಲಕ್ಷಾಂತರ ಸಂತುಷ್ಟಗ್ರಾಹಕರ ಪರಮಶ್ರೇಷ್ಠ ಬಾಬಾ ಶ್ರೀ.ದೇವಾನಂದರವರಿಂದ ನಿಮ್ಮೆಲ್ಲಾ ಸಂಕಷ್ಟಗಳಿಗೆ ಮುಕ್ತಿ,ಮನ್ಮೋಹಿನಿ ಮೂಡಿ ವಶೀಕರಣಗಳಿಗೆ.9353143216

ಒಂದೇ ಕರೆಯಲ್ಲಿ 100% ಶಾಶ್ವತ ಪರಿಹಾರ ಕೆಲವೇ ಗಂಟೆಗಳಲ್ಲಿ ಅಸಾಧ್ಯವಾದದ್ದು ಇಲ್ಲಿ ಸಾಧ್ಯ ಸಮಸ್ಯೆ ನಿಮ್ಮದು ಪರಿಹಾರ ನಮ್ಮದು: 9741637382

ಪ್ರವಾಸ

Travel

★ಶ್ರೇಯಸ್ ಟೂರ್ಸ್★ 24.12.2024 10ದಿನಗಳು ವಿಜಯವಾಡ,ಪಂಚರಾಮ ಅನ್ನಾವರಂ,ಶ್ರೀಕೂರ್ಮಂ,ಅರಕು ಭದ್ರಾಚಲಂ,ಪೀಠಾಪುರಂ ವಾರಂಗಲ್,ಸ್ವರ್ಣಗಿರಿ ರಾಮಾನುಜಾಚಾರ್ಯ. 02.01.2025 7ದಿನಗಳು ಒರಿಸ್ಸಾದ ಪುರಿ,ಕೋನಾರ್ಕ್ ಬುವನೇಶ್ವರ್,ಕಲ್ಕತ್ತಾ ದೇವಘರ್,ಇತರೆ. 02.01.2025 6ದಿನಗಳು ಹೈದರಾಬಾದ್,ರಾಮೋಜಿ ಯಾದಗಿರಿಗುಟ್ಟ,ಸ್ವರ್ಣಗಿರಿ. 21.01.2025 15ದಿನಗಳು ಅಖಂಡ ಮಧ್ಯಪ್ರದೇಶ (ಅಮರಕಂಟಕ ಸಹಿತ).ಅಖಂಡ ಗುಜರಾತ್ 12ದಿನಗಳು. 28.01.2025 10ದಿನಗಳು ಅಖಂಡ ಕೇರಳ ರಾಜ್ಯ ಪ್ರವಾಸ. 18.01.2025 8ದಿನಗಳು ಶ್ರೀಲಂಕಾ ರಾಷ್ಟ್ರ ಪ್ರವಾಸ (ರಾಮಾಯಣ ವಿಶೇಷ). 8073824856 9206979202 6366322639

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

ರಿಯಲ್ ಎಸ್ಟೇಟ್

ಪ್ರತಿ ಶನಿವಾರ + ಭಾನುವಾರ

ಕರ್ನಾಟಕದ ಎಲ್ಲಾ ಆವೃತ್ತಿಯಲ್ಲಿ ನಿಮ್ಮ ಜಾಹೀರಾತು ಬುಕ್ ಮಾಡಿ

@ 2244/-* FOR 15 WORDS

www.dhclassifieds.com

ಬುಕ್ ಮಾಡಿ

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:

+91 9845114560 | +91 9901641752 | 080-45557163/164

*Conditions apply

ಎಸ್‌ಇಸಿಐ: ಒಪ್ಪಂದ ರದ್ದತಿಗೆ ನಿರ್ಧಾರ

ಪ್ರಜಾವಾಣಿ ವಾರ್ತೆ

ಹೈದರಾಬಾದ್: ಕೇಂದ್ರ ಸರ್ಕಾರದ ಸೋಲಾರ್ ಎನರ್ಜಿ ಕಾರ್ಪೊರೇಷನ್ ಆಫ್ ಇಂಡಿಯಾ (ಎಸ್‌ಇಸಿಐ) ಜೊತೆ ರಾಜ್ಯದ ವಿದ್ಯುತ್ ಸರಬರಾಜು ಕಂಪನಿಗಳು (ಡಿಸ್ಕಾಂ) ಮಾಡಿಕೊಂಡಿರುವ ‘ವಿದ್ಯುತ್ ಖರೀದಿ ಒಪ್ಪಂದ’ಗಳನ್ನು (ಪಿಪಿಎ) ರದ್ದು ಮಾಡಲು ಆಂಧ್ರಪ್ರದೇಶ ಸರ್ಕಾರ ತಾತ್ವಿಕವಾಗಿ ನಿರ್ಧರಿಸಿದೆ.

ಹಿಂದಿನ ವೈಎಸ್‌ಆರ್ ಕಾಂಗ್ರೆಸ್ ನೇತೃತ್ವದ ಸರ್ಕಾರದ ವೇಳೆ ಮಾಡಿಕೊಂಡಿದ್ದ ಈ ಒಪ್ಪಂದಗಳನ್ನು ರದ್ದು ಮಾಡುವುದಕ್ಕೆ ಸಂಬಂಧಿಸಿದ ಪ್ರಕ್ರಿಯೆಗೆ ಸರ್ಕಾರ ಚಾಲನೆ ನೀಡಿದೆ ಎಂದು ಈ ಬೆಳವಣಿಗೆ ಕುರಿತು ಮಾಹಿತಿ ಇರುವ ಎರಡು ಮೂಲಗಳು ‘ಪ್ರಜಾವಾಣಿ’ಗೆ ತಿಳಿಸಿವೆ.

ಆಂಧ್ರಪ್ರದೇಶದಲ್ಲಿ ವಿದ್ಯುತ್ ಖರೀದಿ ಒಪ್ಪಂದಕ್ಕಾಗಿ ರಾಜ್ಯ ಸರ್ಕಾರದ ಅಧಿಕಾರಿಗಳಿಗೆ ಉದ್ಯಮಿ ಗೌತಮ್ ಅದಾನಿ ಲಂಚ ನೀಡಿದ್ದಾರೆ ಎಂಬುದಾಗಿ ಅಮೆರಿಕದ ಕೋರ್ಟ್ ಆರೋಪ ಹೊರಿಸಿದ ನಂತರ, ಈ ಒಪ್ಪಂದಗಳು (ಪಿಪಿಎ) ಚರ್ಚೆಯ ವಿಷಯಗಳಾಗಿವೆ.



ಚಂದ್ರಬಾಬು ನಾಯ್ಡು

‘ವಿದ್ಯುತ್ ಖರೀದಿ ಒಪ್ಪಂದಗಳಿಗೆ ವೈ.ಎಸ್.ಜಗನ್ ಮೋಹನ್ ರೆಡ್ಡಿ ನೇತೃತ್ವದ ಹಿಂದಿನ ಸರ್ಕಾರ ತರಾತುರಿಯಲ್ಲಿ ಅನುಮೋದನೆ ನೀಡಿದೆ. ಅನುಮೋದನೆ ನೀಡುವಲ್ಲಿ ಆಗಿರುವ ಗಂಭೀರ ಲೋಪಗಳನ್ನು ಸರ್ಕಾರ ಈಗಾಗಲೇ ಗುರುತಿಸಿದೆ’ ಎಂದು ಮುಖ್ಯಮಂತ್ರಿ ಎನ್.ಚಂದ್ರಬಾಬು ನಾಯ್ಡು ಅವರ ಆಪ್ತ ಮೂಲಗಳು ಹೇಳಿವೆ.

‘ಈ ವಿಚಾರ ಕುರಿತು ನಾಯ್ಡು ಅವರು ಪಕ್ಷದ ಸಭೆಯಲ್ಲಿಯೂ ಚರ್ಚಿಸಿದ್ದಾರೆ. ಸಂಸತ್‌ನ ಚಳಿಗಾಲದ ಅಧಿವೇಶನ ಮುಗಿದ ನಂತರ, ಒಪ್ಪಂದಗಳ ರದ್ದತಿ ಪ್ರಕ್ರಿಯೆಗೆ ಚಾಲನೆ ನೀಡುವ ಬಗ್ಗೆ ಕೆಲ ಮುಖಂಡರಿಗೆ ತಿಳಿಸಿದ್ದಾರೆ. ಹೀಗೆ ಮಾಡುವುದರಿಂದ, ಈ ವಿಚಾರವು ವಿಪಕ್ಷಗಳ ಪಾಲಿಗೆ ಮತ್ತೊಂದು ಅಸ್ತ್ರವಾಗುವುದನ್ನು ತಪ್ಪಿಸಿದಂತಾಗಲಿದೆ ಎಂಬುದಾಗಿ ಹೇಳಿದ್ದರು’ ಎಂದೂ ಮೂಲಗಳು ಹೇಳಿವೆ.

‘ವಿದ್ಯುತ್ ಖರೀದಿ ಒಪ್ಪಂದ’ ವಿಚಾರವನ್ನು ತನ್ನ ರಾಜಕೀಯ ವಿರೋಧಿ ಜಗನ್ ಮೋಹನ್ ರೆಡ್ಡಿ ಅವರನ್ನು ಹಣಿಯಲು ನಾಯ್ಡು ಬಳಸಿಕೊಳ್ಳಲು ಬಯಸುತ್ತಿದ್ದಾರೆ ಎಂದೂ ಹೇಳಲಾಗುತ್ತಿದೆ.

16 ವರ್ಷ ಒಳಗಿನ ಮಕ್ಕಳಿಗೆ ಜಾಲತಾಣ ನಿರ್ಬಂಧ: ಜನಪ್ರತಿನಿಧಿಗಳ ಸಭೆ ಒಪ್ಪಿಗೆ

ಮೆಲ್ಬರ್ನ್ (ಎಪಿ): 16 ವರ್ಷದೊಳಗಿನ ಮಕ್ಕಳು ಸಾಮಾಜಿಕ ಜಾಲತಾಣ ಬಳಸುವುದನ್ನು ನಿರ್ಬಂಧಿಸುವ ಮಸೂದೆಯನ್ನು ಆಸ್ಟ್ರೇಲಿಯಾದ ಜನಪ್ರತಿನಿಧಿಗಳ ಸಭೆ ಬುಧವಾರ ಅಂಗೀಕರಿಸಿದೆ.

ಸೆನೆಟ್‌ನಲ್ಲಿ ಚರ್ಚೆಯಾಗಿ ಮಸೂದೆಗೆ ಒಪ್ಪಿಗೆ ದೊರೆತ ಬಳಿಕ ಕಾನೂನು ಜಾರಿಯಾಗಲಿದೆ. ಈ ರೀತಿಯ ಕಾನೂನು ಜಾರಿಗೊಳಿಸಲಿರುವ ಮೊದಲ ದೇಶ ಆಸ್ಟ್ರೇಲಿಯಾ.

ಈ ಕಾನೂನಿನ ಅನ್ವಯ ಟಿಕ್‌ಟಾಕ್, ಫೇಸ್‌ಬುಕ್, ಸ್ನ್ಯಾಪ್‌ಚಾಟ್, ರೆಡ್ಡಿಟ್, ಎಕ್ಸ್ ಮತ್ತು ಇನ್‌ಸ್ಟಾಗ್ರಾಂ ಸೇರಿದಂತೆ ಎಲ್ಲ ಸಾಮಾಜಿಕ ಜಾಲತಾಣ ಸಂಸ್ಥೆಗಳು ತಮ್ಮ ಜಾಲತಾಣಗಳಲ್ಲಿ ಮಕ್ಕಳು ಖಾತೆ ತೆರೆಯುವುದನ್ನು ನಿರ್ಬಂಧಿಸದಿದ್ದರೆ 50 ಮಿಲಿಯನ್ ಆಸ್ಟ್ರೇಲಿಯಾ ಡಾಲರ್ (₹278 ಕೋಟಿ) ದಂಡ ವಿಧಿಸಲಾಗುತ್ತದೆ ಎಂದು ಮಸೂದೆಯಲ್ಲಿ ಪ್ರಸ್ತಾಪಿಸಲಾಗಿದೆ.

ಹಲವು ಪಕ್ಷಗಳು ಈ ಮಸೂದೆಯನ್ನು ಬೆಂಬಲಿಸಿದ್ದು, ಮಸೂದೆಯ ಪರವಾಗಿ 102 ಮತಗಳು ವಿರುದ್ಧವಾಗಿ 13 ಮತಗಳು ಬಿದ್ದವು.

‘ವಯಸ್ಸಿನ ದೃಢೀಕರಣಕ್ಕಾಗಿ ಬಳಕೆದಾರರು ಪಾಸ್‌ಪೋರ್ಟ್, ವಾಹನ ಚಾಲನಾ ಪರವಾನಗಿ ಸೇರಿದಂತೆ ಇತರ ಅಧಿಕೃತ ದಾಖಲೆಗಳನ್ನು ನೀಡುವಂತೆ ಹಾಗೂ ಸರ್ಕಾರಿ ವ್ಯವಸ್ಥೆಯ ಮೂಲಕ ಡಿಜಿಟಲ್ ಗುರುತು ನೀಡುವಂತೆ ಸಾಮಾಜಿಕ ಜಾಲತಾಣಗಳು ಒತ್ತಾಯಿಸುವಂತಿಲ್ಲ’ ಎಂದು ತಿಳಿಸಲಾಗಿದೆ. ಎಲ್ಲ ಪ್ರಮುಖ ಪಕ್ಷಗಳು ಮಸೂದೆಯ ಪರವಾಗಿವೆ. ಹೀಗಾಗಿ ಸೆನೆಟ್‌ನಲ್ಲಿ ಯಾವುದೇ ಪಕ್ಷ ಬಹುಮತ ಹೊಂದಿರದೇ ಇದ್ದರೂ ಮಸೂದೆಯು ಕಾನೂನಾಗಿ ಜಾರಿಗೊಳ್ಳಲು ಅಡ್ಡಿಯಾಗದು ಎನ್ನಲಾಗಿದೆ.

ಪಾಕಿಸ್ತಾನ: 450ಕ್ಕೂ ಹೆಚ್ಚು ಪ್ರತಿಭಟನಕಾರರ ಬಂಧನ

ನಾಲ್ವರ ಸಾವು: ಪ್ರತಿಭಟನೆ ಕೈಬಿಟ್ಟ ಇಮ್ರಾನ್ ಖಾನ್ ಬೆಂಬಲಿಗರು

ಇಸ್ಲಾಮಾಬಾದ್ (ಪಿಟಿಐ): ಹಿಂಸಾಚಾರದಿಂದಾಗಿ ಸಾವು–ನೋವು ಹೆಚ್ಚಿದ್ದರಿಂದ, ಮಾಜಿ ಪ್ರಧಾನಿ ಇಮ್ರಾನ್ ಖಾನ್ ನೇತೃತ್ವದ ಪಾಕಿಸ್ತಾನ್ ತೆಹ್ರೀಕ್–ಎ–ಇನ್ಸಾಫ್ (ಪಿಟಿಐ) ಪಕ್ಷವು ತನ್ನ ಪ್ರತಿಭಟನೆಯನ್ನು ಬುಧವಾರ ಕೈಬಿಟ್ಟಿದೆ.

ಮಧ್ಯರಾತ್ರಿಯಲ್ಲಿ ಅಧಿಕಾರಿಗಳು ನಡೆಸಿದ ದೌರ್ಜನ್ಯದಿಂದ ಕನಿಷ್ಠ ನಾಲ್ವರ ಹತ್ಯೆಯಾಗಿದ್ದು, 50ಕ್ಕೂ ಹೆಚ್ಚು ಕಾರ್ಯಕರ್ತರು ಗಾಯಗೊಂಡಿದ್ದಾರೆ ಎಂದು ಪಿಟಿಐ ಹೇಳಿಕೊಂಡಿದೆ. ಆದರೆ, ಭದ್ರತಾ ಸಿಬ್ಬಂದಿಯೊಂದಿಗೆ ನಡೆದ ಹಿಂಸಾತ್ಮಕ ಘರ್ಷಣೆಯಲ್ಲಿ ‘ನೂರಾರು’ ಜನರು ಮೃತಪಟ್ಟಿದ್ದಾರೆ ಎನ್ನಲಾಗಿದೆ.

ಮಾಜಿ ಪ್ರಧಾನಿಯ ಪತ್ನಿ ಬುಶ್ರಾ ಬೀಬಿ ಮತ್ತು ಖೈಬರ್ ಪಖ್ತುಂಖ್ವಾ ಪ್ರಾಂತ್ಯದ ಮುಖ್ಯಮಂತ್ರಿ ಅಲಿ ಅಮೀನ್ ಗಂಡಾಪುರ ಅವರು ಇಸ್ಲಾಮಾಬಾದ್ ನತ್ತ ಕಾರ್ಯಕರ್ತರೊಂದಿಗೆ ಪ್ರತಿಭಟನ ರ‍್ಯಾಲಿಯನ್ನು ಮುನ್ನಡೆಸುತ್ತಿದ್ದಾರೆ ಎಂಬ ಸುದ್ದಿಯನ್ನು ಪಿಟಿಐ ಅಲ್ಲಗಳೆದಿದೆ.

ವಾಯವ್ಯ ಪ್ರಾಂತ್ಯದ ಅಬೋಟಾಬಾದ್ ಬಳಿಯ ಮನ್ಸೆಹ್ರಾ ಪಟ್ಟಣದಲ್ಲೇ ಬೀಬಿ ಇದ್ದಾರೆ ಎಂಬುದನ್ನು ಸ್ಪಷ್ಟಪಡಿಸಿರುವ ಪಿಟಿಐ, ‘ಫ್ಯಾಸಿಸ್ಟ್ ಮಿಲಿಟರಿ ಆಡಳಿತ’ದಲ್ಲಿ ಪಕ್ಷದ ಕಾರ್ಯಕರ್ತರ ‘ಹತ್ಯಾಕಾಂಡ’ ನಡೆದಿದೆ ಎಂದು ದೂರಿದೆ.

ಪಿಟಿಐ ಕಾರ್ಯಕರ್ತರ ಪ್ರತಿಭಟನೆಯು ಹಿಂಸಾಚಾರಕ್ಕೆ ತಿರುಗಿದ್ದು, ಟ್ರಕ್‌ವೊಂದಕ್ಕೆ ದುಷ್ಕರ್ಮಿಗಳು ಬೆಂಕಿ ಹಚ್ಚಿದರು —ಎಎಫ್‌ಪಿ ಚಿತ್ರ

450ಕ್ಕೂ ಹೆಚ್ಚು ಪ್ರತಿಭಟನಕಾರರನ್ನು ಬಂಧಿಸಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಪಿಟಿಐ ಕಾರ್ಯಕರ್ತರ ಪ್ರತಿಭಟನೆಯಿಂದಾಗಿ ಎಂಟು ವಿಮಾನಗಳ ಸಂಚಾರ ರದ್ದಾದರೆ, 17 ವಿಮಾನಗಳ ಸಂಚಾರದಲ್ಲಿ ವಿಳಂಬವಾಯಿತು ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಪ್ರತಿಭಟನೆ ಸ್ಥಗಿತಗೊಂಡ ಬಳಿಕ ರಸ್ತೆಗಳು ಸಂಚಾರಕ್ಕೆ ಮುಕ್ತವಾಗಿವೆ.

ಲೆಬನಾನ್‌ನಲ್ಲಿ ಇಸ್ರೇಲ್ ಹಿಜ್ಬುಲ್ಲಾ ಕದನ ವಿರಾಮ ಜಾರಿ

ಜೆರುಸಲೇಂ (ಎಪಿ): ಇಸ್ರೇಲ್ ಮತ್ತು ಲೆಬನಾನ್‌ನ ಹಿಜ್ಬುಲ್ಲಾ ಬಂಡುಕೋರರ ನಡುವೆ ಬುಧವಾರ ನಸುಕಿನಿಂದ ಕದನ ವಿರಾಮ ಜಾರಿಗೆ ಬಂದಿದೆ.

ಯುದ್ಧ ಪ್ರಾರಂಭವಾದಾಗಿನಿಂದ ಇಸ್ರೇಲ್ ಪಡೆಗಳ ತೀವ್ರ ದಾಳಿಯಿಂದ ಬೈರೂತ್ ನಗರದ ನಿವಾಸಿಗಳು ನಲುಗಿಹೋಗಿದ್ದರು. ಯುದ್ಧ ನಿಲ್ಲಿಸುವ ಒಪ್ಪಂದವು ನಿಜಕ್ಕೂ ಏರ್ಪಡಲಿದೆಯೇ ಎಂದು ಹಲವು ಮಂದಿ ಆಶ್ಚರ್ಯ ಕೂಡ ಪಟ್ಟಿದ್ದರು. ಈ ನಡುವೆ ಮಂಗಳವಾರ ಘೋಷಿಸಿರುವ ಕದನ ವಿರಾಮ ಒಪ್ಪಂದವನ್ನು ಹಿಜ್ಬುಲ್ಲಾ ಮುರಿದರೆ ಮರುಗಳಿಗೆಯಲ್ಲೇ ದಾಳಿ ನಡೆಸುವುದಾಗಿ ಇಸ್ರೇಲ್ ಎಚ್ಚರಿಕೆ ನೀಡಿದೆ.

ಇಸ್ರೇಲ್-ಹಿಜ್ಬುಲ್ಲಾ ಕದನ ವಿರಾಮವು, 2023ರ ಅಕ್ಟೋಬರ್ 7ರಂದು ಇಸ್ರೇಲ್ ಮೇಲೆ ಹಮಾಸ್ ನಡೆಸಿದ ದಾಳಿಯಿಂದ ಪ್ರಚೋದಿಸಲ್ಪಟ್ಟ ಪ್ರಾದೇಶಿಕ ಅಶಾಂತಿಯನ್ನು ಕೊನೆಗೊಳಿಸುವ ಮೊದಲ ಪ್ರಮುಖ ಹೆಜ್ಜೆಯಾಗಿದೆ. ಆದರೆ, ಇದು ಗಾಜಾದಲ್ಲಿ ನಡೆಯುತ್ತಿರುವ ವಿನಾಶಕಾರಿ ಯುದ್ಧವನ್ನು ಕೊನೆಗೊಳಿಸುವ ಪ್ರಸ್ತಾವವನ್ನು ಹೊಂದಿಲ್ಲ.

42 ಜನ ಸಾವು: ಮಂಗಳವಾರ ಲೆಬನಾನ್ ಮೇಲೆ ಇಸ್ರೇಲ್ ಪಡೆಗಳು ನಡೆಸಿದ ದಾಳಿಯಲ್ಲಿ 42 ಜನರು ಮೃತಪಟ್ಟಿದ್ದಾರೆ. ಹಿಜ್ಬುಲ್ಲಾ ಬಂಡುಕೋರರು ಇಸ್ರೇಲ್ ಮೇಲೆ ಕ್ಷಿಪಣಿ ದಾಳಿ ನಡೆಸಿದ್ದು, ದೇಶದ ಉತ್ತರ ಭಾಗದಲ್ಲಿ ವಾಯುದಾಳಿಯ ಎಚ್ಚರಿಕೆ ಸಂದೇಶಗಳು ಮೊಳಗಿದವು.

ಗಾಜಾದಲ್ಲಿ, ಇಸ್ರೇಲ್ ಮತ್ತು ಹಮಾಸ್ ನಡುವಿನ ಸುಮಾರು 14 ತಿಂಗಳ ಯುದ್ಧದಲ್ಲಿ 44,000ಕ್ಕೂ ಹೆಚ್ಚು ಜನರು ಮೃತಪಟ್ಟಿದ್ದಾರೆ. 1.04 ಲಕ್ಷಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ ಎಂದು ಗಾಜಾದ ಆರೋಗ್ಯ ಸಚಿವಾಲಯ ತಿಳಿಸಿದೆ.

ಲೆಬನಾನ್‌ನಲ್ಲಿ ಶಾಂತಿ ಆರಂಭ: ಗುಂಡಿನ ಮೊರೆತ, ಬಾಂಬ್ ಸ್ಫೋಟದ ಸದ್ದಿನಲ್ಲಿ ನಲುಗಿದ್ದ ದಕ್ಷಿಣ ಮತ್ತು ಪೂರ್ವ ಲೆಬನಾನ್‌ನಲ್ಲಿ ಕದನ ವಿರಾಮ ಜಾರಿಗೆ ಬರುತ್ತಿದ್ದಂತೆ ಪರಿಸ್ಥಿತಿ ಶಾಂತವಾಗಿತ್ತು. ಆದರೆ, ಸಂಪೂರ್ಣ ಚೇತರಿಕೆಗೆ ಇನ್ನಷ್ಟು ಸಮಯ ಹಿಡಿಯಬಹುದು.

ಇಸ್ರೇಲ್‌ನ ಅರೇಬಿಕ್ ಮಿಲಿಟರಿ ವಕ್ತಾರ ಅವಿಚಾಯ್ ಅಡ್ರೇ ಅವರು ಸ್ಥಳಾಂತರಗೊಂಡಿರುವ ಲೆಬನಾನ್ ಜನರಿಗೆ ದಕ್ಷಿಣ ಲೆಬನಾನ್‌ನಲ್ಲಿರುವ ತಮ್ಮ ಹಳ್ಳಿಗಳಿಗೆ ಹಿಂತಿರುಗದಂತೆ ಎಚ್ಚರಿಕೆ ನೀಡಿದ್ದಾರೆ. ಆದರೆ, ಲೆಬನಾನ್ ಜನರು ಇದನ್ನು ಧಿಕ್ಕರಿಸಿ ದಕ್ಷಿಣದ ಕರಾವಳಿ ನಗರ ಟೈರ್ ಬಳಿಯ ಹಳ್ಳಿಗಳಿಗೆ ಹಿಂದಿರುಗುತ್ತಿರುವ ವಿಡಿಯೊಗಳು ಸಾಮಾಜಿಕ ಮಾಧ್ಯಮದಲ್ಲಿ ಪ್ರಸಾರವಾಗಿವೆ.

ಅಕ್ಟೋಬರ್‌ನಲ್ಲಿ ಇಸ್ರೇಲ್ ಭೂ ಆಕ್ರಮಣ ಪ್ರಾರಂಭಿಸಿದ ನಂತರ, ದಕ್ಷಿಣ ಲೆಬನಾನ್‌ನ ಕೆಲವು ಭಾಗಗಳಲ್ಲಿ ಇನ್ನೂ ಇಸ್ರೇಲ್ ಪಡೆಗಳು ಬೀಡುಬಿಟ್ಟಿವೆ. ಲೆಬನಾನ್ ಸರ್ಕಾರದ ಪ್ರಕಾರ, ಯುದ್ಧದಿಂದಾಗಿ ಸುಮಾರು 12 ಲಕ್ಷ ಜನರು ಸ್ಥಳಾಂತರಗೊಂಡಿದ್ದಾರೆ.

ಕದನ ವಿರಾಮಕ್ಕೆ ಬದ್ಧವಾಗಿರಲು ಇಸ್ರೇಲ್‌ಗೆ ಮನವಿ (ದುಬೈ-ರಾಯಿಟರ್ಸ್): ಇಸ್ರೇಲ್ ಮತ್ತು ಹಿಜ್ಬುಲ್ಲಾ ನಡುವಿನ ಕದನ ವಿರಾಮಕ್ಕೆ ಸಂಪೂರ್ಣವಾಗಿ ಬದ್ಧವಾಗಿರಬೇಕು. ಆಕ್ರಮಿಸಿಕೊಂಡಿರುವ ಎಲ್ಲ ಪ್ರದೇಶಗಳು ಹಾಗೂ ನೆಲೆಗಳಿಂದ ಸೇನೆಯನ್ನು ಹಿಂತೆಗೆದುಕೊಳ್ಳಬೇಕು ಎಂದು ಲೆಬನಾನ್‌ನ ಉಸ್ತುವಾರಿ ಪ್ರಧಾನಿ ನಜೀಬ್ ಮಿಕಾಟಿ ಇಸ್ರೇಲ್‌ಗೆ ಮನವಿ ಮಾಡಿದ್ದಾರೆ.

ತಮಿಳುನಾಡಿನ ಸೆಲ್ವರಾಣಿ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ತೀರ್ಪು

‘ಮೀಸಲಾತಿಗಾಗಿ ಮತಾಂತರ: ವಂಚನೆ’

ನವದೆಹಲಿ (ಪಿಟಿಐ): ‘ಯಾವುದೇ ನಂಬಿಕೆ-ಶ್ರದ್ಧೆ ಇಲ್ಲದೆ, ಮೀಸಲಾತಿ ಪ್ರಯೋಜನ ಪಡೆಯುವ ಏಕೈಕ ಉದ್ದೇಶದಿಂದ ಮತಾಂತರವಾಗುವುದು ಸಂವಿಧಾನಕ್ಕೆ ವಂಚನೆ ಮಾಡಿದಂತೆ’ ಎಂದು ಸುಪ್ರೀಂ ಕೋರ್ಟ್ ಮಹತ್ವದ ತೀರ್ಪು ನೀಡಿದೆ.

‘ಇತರ ಧರ್ಮದಲ್ಲಿ ನಿಜವಾದ ನಂಬಿಕೆಯನ್ನು ಹೊಂದಿಲ್ಲದೇ ಮೀಸಲಾತಿ ಪ್ರಯೋಜನವನ್ನು ಮಾತ್ರ ಪಡೆಯುವುದಕ್ಕಾಗಿ ಮತಾಂತರಗೊಳ್ಳುವುದಕ್ಕೆ ಅವಕಾಶ ಇಲ್ಲ. ಇಂತಹ ದುರುದ್ದೇಶದಿಂದ ಮತಾಂತರವಾಗುವವರಿಗೆ ಮೀಸಲಾತಿ ನೀಡಿದಲ್ಲಿ ಅದು ಈ ವಿಚಾರಕ್ಕೆ ಸಂಬಂಧಿಸಿದ ಸಾಮಾಜಿಕ ತತ್ವಕ್ಕೇ ಕೊಡಲಿ ಪೆಟ್ಟು ನೀಡಿದಂತಾಗುತ್ತದೆ’ ಎಂದು ಸುಪ್ರೀಂ ಕೋರ್ಟ್ ಸ್ಪಷ್ಟಪಡಿಸಿದೆ.

ನ್ಯಾಯಮೂರ್ತಿಗಳಾದ ಪಂಕಜ್ ಮಿತ್ತಲ್ ಹಾಗೂ ಆರ್. ಮಹಾದೇವನ್ ಅವರು ಇದ್ದ ನ್ಯಾಯಪೀಠವು, ತಮಿಳುನಾಡಿನ ಸೆಲ್ವರಾಣಿ ಎಂಬುವವರು ಸಲ್ಲಿಸಿದ್ದ ಮೇಲ್ಮನವಿ ವಿಚಾರಣೆ ನಡೆಸಿ ನ.26ರಂದು ಈ ತೀರ್ಪು ಪ್ರಕಟಿಸಿದೆ.

ಸೆಲ್ವರಾಣಿ ಅವರು ಕ್ರೈಸ್ತ ಧರ್ಮಕ್ಕೆ ಮತಾಂತರಗೊಂಡಿದ್ದರು. ಉದ್ಯೋಗ ಪಡೆಯುವ ಸಲುವಾಗಿ ತಾನು ಹಿಂದೂ ಧರ್ಮಕ್ಕೆ ಸೇರಿದ್ದಾಗಿ ಹೇಳಿಕೊಂಡಿದ್ದರು ಹಾಗೂ ಪರಿಶಿಷ್ಟ ಜಾತಿ ಪ್ರಮಾಣಪತ್ರಕ್ಕೆ ಅರ್ಜಿ ಸಲ್ಲಿಸಿದ್ದರು.

ಕ್ರೈಸ್ತ ಧರ್ಮ ದೀಕ್ಷೆ ಪಡೆದಿದ್ದ ಸೆಲ್ವರಾಣಿ ಅವರಿಗೆ ಪರಿಶಿಷ್ಟ ಜಾತಿ ಪ್ರಮಾಣಪತ್ರ ನೀಡಲು ನಿರಾಕರಿಸಿ ಮದ್ರಾಸ್ ಹೈಕೋರ್ಟ್ ಜನವರಿ 24ರಂದು ತೀರ್ಪು ನೀಡಿತ್ತು.

ಇದನ್ನು ಪ್ರಶ್ನಿಸಿ ಸೆಲ್ವರಾಣಿ, ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದರು. ಅರ್ಜಿ ವಿಚಾರಣೆ ನಡೆಸಿದ ನ್ಯಾಯಪೀಠ ಮದ್ರಾಸ್ ಹೈಕೋರ್ಟ್ ಆದೇಶ ಎತ್ತಿ ಹಿಡಿದು ತೀರ್ಪಿತ್ತಿದೆ.

‘ಒಬ್ಬ ವ್ಯಕ್ತಿ ಮತ್ತೊಂದು ಧರ್ಮಕ್ಕೆ ಮತಾಂತರವಾಗಿದ್ದಾರೆ ಎಂದರೆ, ಆ ಧರ್ಮದ ತತ್ವ, ಸಿದ್ಧಾಂತ ಹಾಗೂ ಅದು ಬೋಧಿಸುವ ಆಧ್ಯಾತ್ಮಿಕ ವಿಚಾರಗಳಿಂದ ಪ್ರೇರಣೆ ಪಡೆದ ನಂತರವೇ ಮತಾಂತರದ ನಿರ್ಧಾರ ಕೈಗೊಂಡಿದ್ದಾನೆ/ಕೈಗೊಂಡಿದ್ದಾಳೆ ಎಂದರ್ಥ’ ಎಂದು ನ್ಯಾಯಮೂರ್ತಿ ಮಹಾದೇವನ್ ಅವರು ಬರೆದಿರುವ 21 ಪುಟಗಳ ತೀರ್ಪಿನಲ್ಲಿ ಹೇಳಲಾಗಿದೆ.

‘ನ್ಯಾಯಪೀಠಕ್ಕೆ ಸಲ್ಲಿಸಿರುವ ಸಾಕ್ಷ್ಯಗಳನ್ನು ಪರಿಶೀಲಿಸಿದಾಗ, ಅರ್ಜಿದಾರರು ಕ್ರೈಸ್ತ ಧರ್ಮ ಪಾಲಿಸುತ್ತಿರುವುದು ಹಾಗೂ ಚರ್ಚ್‌ಗಳಿಗೆ ನಿಯಮಿತವಾಗಿ ತೆರಳಿ, ಅಲ್ಲಿನ ಧಾರ್ಮಿಕ ವಿಧಿಗಳಲ್ಲಿ ಪಾಲ್ಗೊಳ್ಳುತ್ತಿದ್ದರು ಎಂಬುದು ದೃಢಪಡುತ್ತದೆ’ ಎಂದು ನ್ಯಾಯಪೀಠ ಹೇಳಿದೆ.

‘ಅರ್ಜಿದಾರ ಮಹಿಳೆ ಕ್ರೈಸ್ತ ಧರ್ಮ ಪಾಲನೆ ಮಾಡುತ್ತಿದ್ದರೂ, ಉದ್ಯೋಗ ಪಡೆಯುವುದಕ್ಕಾಗಿ ಆಕೆ ತಾನು ಹಿಂದೂ ಎಂಬುದಾಗಿ ಹೇಳಿಕೊಂಡು ಎಸ್‌ಸಿ ಪ್ರಮಾಣಪತ್ರ ಪಡೆಯಲು ಅರ್ಜಿ ಸಲ್ಲಿಸಿದ್ದರು. ಮಹಿಳೆಯ ಇಂತಹ ದ್ವಂದ್ವದಿಂದ ಕೂಡಿದ ಹಕ್ಕು ಪ್ರತಿಪಾದನೆ ಸಮರ್ಥನೀಯವಲ್ಲ. ಕ್ರೈಸ್ತ ಧರ್ಮ ದೀಕ್ಷೆ (ಬ್ಯಾಪ್ಟಿಸಂ) ನಂತರ ಆಕೆ ತನ್ನನ್ನು ಹಿಂದೂ ಎಂಬುದಾಗಿ ಗುರುತಿಸಿಕೊಳ್ಳಲು ಸಾಧ್ಯವಿಲ್ಲ’ ಎಂದಿದೆ.

‘ಅರ್ಜಿದಾರ ಮಹಿಳೆ ಮತ್ತೆ ಹಿಂದೂಧರ್ಮಕ್ಕೆ ಮತಾಂತರವಾಗಿದ್ದಾರೆ ಅಥವಾ ವಲ್ಲುವನ್ ಜಾತಿಯವರು ಅವರನ್ನು ಮತ್ತೆ ಸ್ವೀಕರಿಸಿದ್ದಾರೆ ಎಂಬುದನ್ನು ದೃಢಪಡಿಸುವ ಪುರಾವೆಗಳು ಇಲ್ಲ. ಅವರ ವಾದವನ್ನು ಪುಷ್ಟೀಕರಿಸುವಂತಹ ದಾಖಲೆಗಳು, ಈ ಸಂಬಂಧ ನಡೆದಿದ್ದ ಸಮಾರಂಭಗಳ ಕುರಿತ ಸಾಕ್ಷ್ಯಗಳು ಕೂಡ ಇಲ್ಲ’ ಎಂದು ಪೀಠ ಹೇಳಿದೆ.

ತೀರ್ಪಿನ ಪ್ರಮುಖಾಂಶಗಳು

- ಕ್ರೈಸ್ತ ಧರ್ಮಕ್ಕೆ ಮತಾಂತರಗೊಳ್ಳುವವರು ತಮ್ಮ ಜಾತಿ ಗುರುತನ್ನು ಕಳೆದುಕೊಳ್ಳುತ್ತಾರೆ. ಒಂದು ವೇಳೆ, ಈ ಮೊದಲಿನ ಧರ್ಮಕ್ಕೆ ಮತಾಂತರಗೊಂಡಲ್ಲಿ ಅದನ್ನು ಪುಷ್ಟೀಕರಿಸುವ ಪುರಾವೆ ತೋರಿಸಬೇಕು. ಪರಿಶಿಷ್ಟ ಜಾತಿಗೆ ನೀಡುವ ಪ್ರಯೋಜನಗಳನ್ನು ಪಡೆಯಬೇಕಾದಲ್ಲಿ ಆ ಜಾತಿ ಅವರನ್ನು ಮತ್ತೆ ಸ್ವೀಕರಿಸಿದೆ ಎಂಬ ಬಗ್ಗೆಯೂ ಬಲವಾದ ಸಾಕ್ಷ್ಯ ಒದಗಿಸಬೇಕು
- ಕ್ರೈಸ್ತ ಧರ್ಮಕ್ಕೆ ಮತಾಂತರವಾದ ನಂತರ ವ್ಯಕ್ತಿಯು ಅವರ ಈ ಮೊದಲಿನ ಜಾತಿಯನ್ನು ಕಳೆದುಕೊಳ್ಳುತ್ತಾರೆ. ಈ ಮೊದಲಿನ ಜಾತಿಯಿಂದ ಅವರನ್ನು ಗುರುತಿಸಲೂ ಸಾಧ್ಯ ಇಲ್ಲ

ಪ್ರಕರಣವೇನು?

ಸೆಲ್ವರಾಣಿ ಅವರ ತಂದೆ ಹಿಂದೂ ಧರ್ಮಕ್ಕೆ ಸೇರಿದವರಾದರೆ, ತಾಯಿ ಕ್ರೈಸ್ತ ಧರ್ಮಕ್ಕೆ ಸೇರಿದವರು. ಸೆಲ್ವರಾಣಿ ಜನನದ ನಂತರ ‘ಬ್ಯಾಪ್ಟಿಸಂ’ ವಿಧಿಯನ್ನು ನೆರವೇರಿಸಲಾಗಿತ್ತು.

ಸೆಲ್ವರಾಣಿ ತಂದೆ ವಲ್ಲುವನ್ ಜಾತಿಗೆ ಸೇರಿದವರಾಗಿದ್ದು, ಇದು ಪರಿಶಿಷ್ಟ ಜಾತಿ ಅಡಿ ಬರುತ್ತದೆ. ನಂತರ ತಂದೆ ಕೂಡ ಕ್ರೈಸ್ತ ಧರ್ಮಕ್ಕೆ ಮತಾಂತರವಾಗಿದ್ದು, ಅದನ್ನು ದೃಢೀಕರಿಸುವ ದಾಖಲೆಗಳೂ ಇವೆ. 2015ರಲ್ಲಿ ಪುದುಚೇರಿಯಲ್ಲಿ ಪ್ರಥಮ ದರ್ಜೆ ಗುಮಾಸ್ತೆ ಹುದ್ದೆಗೆ ಅರ್ಜಿ ಹಾಕಿದ್ದ ಸೆಲ್ವರಾಣಿ, ತನಗೆ ಪರಿಶಿಷ್ಟ ಜಾತಿ ಪ್ರಮಾಣಪತ್ರ ನೀಡುವಂತೆ ಕೋರಿದ್ದರು.

ಶಿಕ್ಷೆ ಪ್ರಮಾಣ ಕಡಿಮೆ ಏಕೆ?: ಇ.ಡಿಗೆ ಚಾಟಿ

ಹಣ ಅಕ್ರಮ ವರ್ಗಾವಣೆ ಪ್ರಕರಣಗಳಲ್ಲಿ ಅಪರಾಧಿಗಳಿಗೆ ಶಿಕ್ಷೆಯ ಪ್ರಮಾಣ ಕಡಿಮೆ ಇರುವ ವಿಚಾರವಾಗಿ ಸುಪ್ರೀಂ ಕೋರ್ಟ್, ಜಾರಿ ನಿರ್ದೇಶನಾಲಯವನ್ನು (ಇ.ಡಿ) ಬುಧವಾರ ಪ್ರಶ್ನಿಸಿದೆ.

ಪಶ್ಚಿಮ ಬಂಗಾಳ ಮಾಜಿ ಸಚಿವ ಪಾರ್ಥ ಚಟರ್ಜಿ ಅವರ ಜಾಮೀನು ಅರ್ಜಿ ವಿಚಾರಣೆ ವೇಳೆ, ಇ.ಡಿ ಪರ ಹಾಜರಿದ್ದ ಹೆಚ್ಚುವರಿ ಸಾಲಿಸಿಟರ್ ಜನರಲ್(ಎಎಸ್‌ಜಿ) ಎಸ್.ವಿ.ರಾಜು ಅವರನ್ನು ಈ ಕುರಿತು ಪ್ರಶ್ನಿಸಿದ ಸುಪ್ರೀಂ ಕೋರ್ಟ್, ‘ಶಿಕ್ಷೆ ಪ್ರಮಾಣ ಶೇ 60–70ರಷ್ಟು ಇದ್ದರೂ, ಅದು ಕಳಪೆ ಸಾಧನೆಯೇ’ ಎಂದಿದೆ.

ಶಾಲಾ ನೇಮಕಾತಿಯಲ್ಲಿ ಆಗಿದೆ ಎನ್ನಲಾದ ಭ್ರಷ್ಟಾಚಾರ ಜೊತೆ ನಂಟಿನ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಪಾರ್ಥ ಚಟರ್ಜಿ ಅವರನ್ನು 2022ರ ಜುಲೈ 23ರಂದು ಇ.ಡಿ ಬಂಧಿಸಿತ್ತು.

ನ್ಯಾಯಮೂರ್ತಿಗಳಾದ ಸೂರ್ಯಕಾಂತ್ ಹಾಗೂ ಉಜ್ಜಲ್ ಭುಯಾನ್ ಅವರು ಇದ್ದ ನ್ಯಾಯಪೀಠ, ಚಟರ್ಜಿ ಅವರ ಜಾಮೀನು ಅರ್ಜಿ ವಿಚಾರಣೆ ನಡೆಸಿತು.

‘ಪಾರ್ಥ ಚಟರ್ಜಿ ಅವರು ಎರಡು ವರ್ಷಕ್ಕೂ ಹೆಚ್ಚು ಸೆರೆವಾಸದಲ್ಲಿದ್ದಾರೆ. ಪ್ರಕರಣದ ವಿಚಾರಣೆ ಇನ್ನೂ ಆರಂಭವಾಗಬೇಕಿದೆ. ಪರಿಸ್ಥಿತಿ ಹೀಗಿರುವಾಗ ಇನ್ನೂ ಎಷ್ಟು ವರ್ಷ ಅವರು ಜೈಲಿನಲ್ಲಿರಬೇಕು’ ಎಂದು ಎಎಸ್‌ಜಿ ರಾಜು ಅವರನ್ನು ಪೀಠವು ಪ್ರಶ್ನಿಸಿದೆ.

‘ಪಾರ್ಥ ಚಟರ್ಜಿ ವಿರುದ್ಧ ಗಂಭೀರ ಸ್ವರೂಪದ ಆರೋಪಗಳಿರುವುದನ್ನು ನಿರ್ಲಕ್ಷಿಸುವಂತಿಲ್ಲ. ಹಾಗಂತ ಅವರನ್ನು ಎಷ್ಟು ದಿನ ಜೈಲಿನಲ್ಲಿರಿಸುವುದು? ಅವರಿಗೆ ಜಾಮೀನು ನೀಡದಿದ್ದರೆ ಏನಾಗುತ್ತದೆ’ ಎಂದೂ ಪ್ರಶ್ನಿಸಿದೆ.

‘ಈ ಪ್ರಕರಣದಲ್ಲಿ 183 ಸಾಕ್ಷಿಗಳಿದ್ದು, ವಿಚಾರಣೆಯೂ ಆರಂಭವಾಗಿಲ್ಲ. ಈಗಾಗಲೇ ಮೂರು ವರ್ಷ ಕಳೆದಿದ್ದು, ಇದು ಅಲ್ಪ ಅವಧಿಯೂ ಅಲ್ಲ. ವಿಚಾರಣೆ ಪೂರ್ಣಗೊಂಡು ಅಂತಿಮವಾಗಿ ಅವರಿಗೆ ಶಿಕ್ಷೆಯಾಗದಿದ್ದರೆ ಏನಾಗಬಹುದು ಎಂದು ಜಾರಿ ನಿರ್ದೇಶನಾಲಯವನ್ನು ತರಾಟೆಗೆ ತೆಗೆದುಕೊಂಡಿದೆ.

ಚಟರ್ಜಿ ಪರ ಹಾಜರಿದ್ದ ಹಿರಿಯ ವಕೀಲ ಮುಕುಲ್ ರೋಹಟಗಿ,‘ಬಂಧನಕ್ಕೆ ಒಳಗಾದ ದಿನದಿಂದಲೂ ಪಾರ್ಥ ಚಟರ್ಜಿ ಸೆರೆವಾಸದಲ್ಲಿದ್ದಾರೆ. 73 ವರ್ಷದ ಅವರ ಆರೋಗ್ಯ ಸರಿ ಇಲ್ಲ’ ಎಂದು ಪೀಠಕ್ಕೆ ತಿಳಿಸಿದರು.

‘ಪಾರ್ಥ ವಿರುದ್ಧ ಭಾರಿ ಭ್ರಷ್ಟಾಚಾರದ ಆರೋಪ ಇದ್ದು, 50 ಸಾವಿರಕ್ಕೂ ಹೆಚ್ಚು ಅಭ್ಯರ್ಥಿಗಳಿಗೆ ತೊಂದರೆಯಾಗಿದೆ’ ಎಂದ ಎಎಸ್‌ಜಿ ರಾಜು, ಪಾರ್ಥ ಅವರ ಜಾಮೀನು ಅರ್ಜಿಗೆ ವಿರೋಧ ವ್ಯಕ್ತಪಡಿಸಿದರು.

ವಾದ-ಪ್ರತಿವಾದ ಆಲಿಸಿದ ನ್ಯಾಯಪೀಠ, ಡಿಸೆಂಬರ್ 2ಕ್ಕೆ ವಿಚಾರಣೆ ಮುಂದೂಡಿತು.

ಮತ್ತೆ ಕಲಾಪ ನುಂಗಿದ ‘ಅದಾನಿ ಲಂಚ’

ಪ್ರಜಾವಾಣಿ ವಾರ್ತೆ

ನವದೆಹಲಿ: ಉದ್ಯಮಿ ಗೌತಮ್ ಅದಾನಿ ಲಂಚ ಹಗರಣ, ಮಣಿಪುರ ಜನಾಂಗೀಯ ಬಿಕ್ಕಟ್ಟು ಹಾಗೂ ಉತ್ತರ ಪ್ರದೇಶದ ಸಂಭಲ್‌ನಲ್ಲಿನ ಹಿಂಸಾಚಾರ ಪ್ರಕರಣದ ಚರ್ಚೆಗೆ ‘ಇಂಡಿಯಾ’ ಮೈತ್ರಿಕೂಟದ ಪಕ್ಷಗಳು ಪಟ್ಟು ಹಿಡಿದಿದ್ದರಿಂದ ಸಂಸತ್‌ನ ಉಭಯ ಸದನಗಳ ಕಲಾಪಗಳು ಬುಧವಾರವೂ ನಡೆಯಲಿಲ್ಲ.

ಅದಾನಿ ಪ್ರಕರಣವನ್ನು ಜಂಟಿ ಸಂಸದೀಯ ಸಮಿತಿಗೆ ಒಪ್ಪಿಸಬೇಕು ಎಂದು ವಿಪಕ್ಷಗಳು ಸೋಮವಾರ ಬಿಗಿಪಟ್ಟು ಹಿಡಿದಿದ್ದರಿಂದ ಸೋಮವಾರ ಕಲಾಪ ನಡೆದಿರಲಿಲ್ಲ. ಮಂಗಳವಾರ ಅಧಿವೇಶನ ಇರಲಿಲ್ಲ. ಅದಾನಿ ಲಂಚ ಪ್ರಕರಣವು ಬುಧವಾರದ ಕಲಾಪವನ್ನೂ ಬಲಿ ತೆಗೆದುಕೊಂಡಿತು.

ಲೋಕಸಭೆ ಹಾಗೂ ರಾಜ್ಯಸಭೆಯಲ್ಲಿ ಕಾಗದಪತ್ರಗಳು ಹಾಗೂ ಪ್ರಶ್ನೋತ್ತರವನ್ನು ಮಂಡಿಸಲಾಯಿತು. ಉಳಿದ ಯಾವುದೇ ಚಟುವಟಿಕೆ ನಡೆಯಲಿಲ್ಲ. ಸುಗಮ ಕಲಾಪಕ್ಕೆ ಅನುವು ಮಾಡಿಕೊಡಿ ಎಂಬ ಸಭಾಧ್ಯಕ್ಷರ ಮನವಿಯನ್ನು ವಿಪಕ್ಷಗಳು ಒಪ್ಪಲಿಲ್ಲ.

ಲೋಕಸಭೆಯ ಕಲಾಪ ಬೆಳಿಗ್ಗೆ 11ಕ್ಕೆ ಆರಂಭಗೊಂಡಿತು. ಅದಾನಿ ವಿವಾದ ಮತ್ತು ಉತ್ತರ ಪ್ರದೇಶದ ಸಂಭಲ್‌ನಲ್ಲಿ ಇತ್ತೀಚೆಗೆ ನಡೆದ ಹಿಂಸಾಚಾರವನ್ನು ಖಂಡಿಸಿ ವಿಪಕ್ಷ ಸದಸ್ಯರು ಘೋಷಣೆಗಳನ್ನು ಕೂಗಿದರು. ಸಭಾಧ್ಯಕ್ಷರು ಕಲಾಪವನ್ನು ಕೆಲಕಾಲ ಮುಂದೂಡಿದರು.

ಮತ್ತೆ ಕಲಾಪ ಆರಂಭಗೊಂಡಾಗ ‘ಇಂಡಿಯಾ’ ಸದಸ್ಯರು ಸಭಾಧ್ಯಕ್ಷರ ಪೀಠದ ಎದುರು ಧರಣಿ ನಡೆಸಿದರು. ಸಭಾಧ್ಯಕ್ಷರ ಪೀಠದಲ್ಲಿದ್ದ ಬಿಜೆಪಿಯ ಸಂಸದ ದಿಲೀಪ್ ಸೈಕಿಯಾ ಅವರು ಕಲಾಪವನ್ನು ಗುರುವಾರಕ್ಕೆ ಮುಂದೂಡಿದರು. ಅದಾನಿ ಹಗರಣ ಮತ್ತು ಮಣಿಪುರ ಹಿಂಸಾಚಾರದ ಕುರಿತು ಚರ್ಚಿಸಲು ಸಂಸದರಾದ ಮಾಣಿಕಂ ಟ್ಯಾಗೋರ್, ಬೆನ್ನಿ ಬೆಹೆನಾನ್, ಮನೀಶ್ ತಿವಾರಿ, ಶಫಿ ಪರಂಬಿಲ್ ಮತ್ತು ಕೋಡಿಕುನ್ನಿಲ್ ಸುರೇಶ್ ಅವರು ನೋಟಿಸ್‌ಗಳನ್ನು ಸಲ್ಲಿಸಿದರು.

ಅದಾನಿ ಪ್ರಕರಣ, ಮಣಿಪುರ ಮತ್ತು ಸಂಭಲ್‌ನಲ್ಲಿನ ಹಿಂಸಾಚಾರಗಳ ಬಗ್ಗೆ ಜಂಟಿ ಸಂಸದೀಯ ಸಮಿತಿಯ ತನಿಖೆಗೆ ಒತ್ತಾಯಿಸಿದ ಪ್ರತಿಪಕ್ಷಗಳ ಗದ್ದಲಕ್ಕೆ ರಾಜ್ಯಸಭೆ ಸಾಕ್ಷಿಯಾಯಿತು.

ಈ ವಿಷಯಗಳ ಚರ್ಚೆಗೆ ಅವಕಾಶ ನೀಡಲು ಸಭಾಪತಿ ಜಗದೀಪ್ ಧನಕರ್ ತಿರಸ್ಕರಿಸಿದರು. ಇದನ್ನು ಖಂಡಿಸಿ ವಿಪಕ್ಷ ಸದಸ್ಯರು ಪ್ರತಿಭಟನೆ ನಡೆಸಿದರು. ಕಲಾಪವನ್ನು ಬೆಳಿಗ್ಗೆ 11.30ರ ತನಕ ಮುಂದೂಡಲಾಯಿತು. ಸದನ ಮತ್ತೆ ಸೇರಿದಾಗ ಪ್ರತಿಪಕ್ಷಗಳ ಸಂಸದರು ಪಟ್ಟುಬಿಡದ ಕಾರಣ ಕಲಾಪವನ್ನು ದಿನದ ಮಟ್ಟಿಗೆ ಮುಂದೂಡಲಾಯಿತು.

ಲೋಕಸಭೆಯಲ್ಲಿ ಬುಧವಾರ ನಡೆದ ಚರ್ಚೆಯಲ್ಲಿ ಪಾಲ್ಗೊಂಡಿದ್ದ ಸಂಸದರು – ಪಿಟಿಐ ಚಿತ್ರ

ಅದಾನಿ ಬಂಧಿಸಲು ರಾಹುಲ್ ಆಗ್ರಹ

ನವದೆಹಲಿ: ಮೋದಿ ಸರ್ಕಾರವು ಉದ್ಯಮಿ ಗೌತಮ್ ಅದಾನಿಯವರನ್ನು ರಕ್ಷಿಸುತ್ತಿದೆ ಎಂದು ಆರೋಪಿಸಿರುವ ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ, ಅದಾನಿಯವರನ್ನು ತಕ್ಷಣವೇ ಬಂಧಿಸಬೇಕು ಎಂದು ಬುಧವಾರ ಒತ್ತಾಯಿಸಿದ್ದಾರೆ.

ಅಮೆರಿಕದಲ್ಲಿ ವಂಚನೆ ಆರೋಪ ಹೊರಿಸಲಾಗಿದೆಯೇ ಹೊರತು ಲಂಚದ ಆರೋಪವಲ್ಲ ಎಂದು ಅದಾನಿ ಸಮೂಹ ಹೇಳಿಕೆ ನೀಡಿರುವ ಬೆನ್ನಲ್ಲೇ ಸಂಸತ್ತಿನ ಆವರಣದಲ್ಲಿ ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದ ರಾಹುಲ್, ‘ದೇಶದಲ್ಲಿ ಸಣ್ಣ ಸಣ್ಣ ಆರೋಪಗಳ ಮೇಲೆ ನೂರಾರು ಜನರನ್ನು ಬಂಧಿಸಿದಾಗ ಅದಾನಿಯನ್ನು ಮಾತ್ರ ಜೈಲಿಗೆ ಏಕೆ ಕಳುಹಿಸುತ್ತಿಲ್ಲ’ ಎಂದರು.

ಅದಾನಿ ಸಮೂಹ ಆರೋಪಗಳನ್ನು ನಿರಾಕರಿಸಿದ ಕುರಿತು ಕೇಳಿದ ಪ್ರಶ್ನೆಗೆ ರಾಹುಲ್, ‘ತಮ್ಮ ಮೇಲಿನ ಆರೋಪಗಳನ್ನು ಅದಾನಿ ಒಪ್ಪಿಕೊಳ್ಳುತ್ತಾರೆ ಎಂದು ನೀವು ಭಾವಿಸುತ್ತೀರಾ? ನೀವು ಯಾವ ಜಗತ್ತಿನಲ್ಲಿ ಇದ್ದೀರಿ?’ ಎಂದಿದ್ದಾರೆ.

‘ಅಧಿಕಾರಾವಧಿ ವಿಸ್ತರಣೆ: ವಕ್ಫ್ ಸಂಸದೀಯ ಸಮಿತಿ ನಿರ್ಧಾರ’

ನವದೆಹಲಿ (ಪಿಟಿಐ): ವಕ್ಫ್ (ತಿದ್ದುಪಡಿ) ಮಸೂದೆ ಪರಿಶೀಲಿಸುತ್ತಿರುವ ಜಂಟಿ ಸಂಸದೀಯ ಸಮಿತಿಯು ತನ್ನ ಅಧಿಕಾರಾವಧಿಯನ್ನು ಮುಂದಿನ ಬಜೆಟ್ ಅಧಿವೇಶನದ ಕೊನೆಯ ದಿನದವರೆಗೆ ವಿಸ್ತರಿಸುವ ಸಂಬಂಧ ಮನವಿ ಮಾಡಲು ಬುಧವಾರ ಸರ್ವಾನುಮತದಿಂದ ನಿರ್ಧರಿಸಿದೆ.

ಇದಕ್ಕೂ ಮೊದಲು ಸಮಿತಿಯ ಕರಡು ವರದಿಯನ್ನು ಅಂಗೀಕರಿಸಲು ಸಿದ್ಧವಾಗಿದ್ದ ಜಂಟಿ ಸಂಸದೀಯ ಸಮಿತಿ ಅಧ್ಯಕ್ಷ ಜಗದಾಂಬಿಕಾ ಪಾಲ್ ಅವರ ನಿಲುವಿನಿಂದಾಗಿ, ಸಭೆಯು ವಿಪಕ್ಷಗಳ ಸದಸ್ಯರ ಆಕ್ರೋಶದ ಪ್ರತಿಭಟನೆಗೂ ಸಾಕ್ಷಿಯಾಯಿತು.

ವಿರೋಧ ಪಕ್ಷದ ಸದಸ್ಯರು ಸಭಾತ್ಯಾಗ ಮಾಡಿ, ಪಾಲ್ ಅವರನ್ನು ತರಾಟೆಗೆ ತೆಗೆದುಕೊಂಡಿದ್ದರಿಂದ ಸಭೆಯಲ್ಲಿ ಕೆಲ ಸಮಯ ಗದ್ದಲದ ವಾತಾವರಣ ಉಂಟಾಯಿತು. ಪಾಲ್ ಮತ್ತು ಸಮಿತಿಯ ಬಿಜೆಪಿ ಸದಸ್ಯರು ವಿಪಕ್ಷ ಸದಸ್ಯರನ್ನು ಮನವೊಲಿಸಿದ ನಂತರ ವಾತಾವರಣ ತಿಳಿಯಾಯಿತು.

‘ವಕ್ಫ್ ಮತ್ತು ರಾಜ್ಯ ಸರ್ಕಾರಗಳ ನಡುವೆ ವಿವಾದಗಳಿರುವ 6 ರಾಜ್ಯಗಳು ಸೇರಿದಂತೆ ಇತರ ಕೆಲವು ಮಧ್ಯಸ್ಥಗಾರರ ಅಹವಾಲು ಆಲಿಸಬೇಕಿರುವುದರಿಂದ ಸಮಿತಿಯು ತನ್ನ ಅಭಿಪ್ರಾಯದಲ್ಲಿ ಸರ್ವಾನುಮತವನ್ನು ಹೊಂದಿದೆ. ವರದಿ ಸಲ್ಲಿಸಬೇಕಿರುವ ಗಡುವನ್ನು ವಿಸ್ತರಿಸುವ ಅವಶ್ಯಕತೆಯಿದೆ ಎಂಬುದು ನಮ್ಮ ಭಾವನೆ’ ಎಂದು ಬಿಜೆಪಿ ಸಂಸದ ಪಾಲ್ ಸುದ್ದಿಗಾರರಿಗೆ ತಿಳಿಸಿದರು.

2025ರ ಬಜೆಟ್ ಅಧಿವೇಶನದ ಕೊನೆಯ ದಿನದವರೆಗೆ, ಸದನಕ್ಕೆ ತನ್ನ ವರದಿ ಸಲ್ಲಿಸುವ ಗಡುವು ವಿಸ್ತರಿಸಲು ಸಮಿತಿಯು ಲೋಕಸಭೆಯ ಸ್ಪೀಕರ್ ಓಂ ಬಿರ್ಲಾ ಅವರಿಗೆ ಮನವಿ ಮಾಡಲಿದೆ ಎಂದು ಬಿಜೆಪಿ ಸಂಸದ ಮತ್ತು ಸಮಿತಿಯ ಸದಸ್ಯ ಅಪರಾಜಿತಾ ಸಾರಂಗಿ ಕೂಡ ಹೇಳಿದ್ದಾರೆ.

ಈ ನಿಟ್ಟಿನಲ್ಲಿ ಪಾಲ್ ಅವರು ಲೋಕಸಭೆಯಲ್ಲಿ ನಿರ್ಣಯವನ್ನು ಮಂಡಿಸುವ ಸಾಧ್ಯತೆಯಿದೆ. ಅಲ್ಲದೆ, ಸಮಿತಿಯು ವಿವಿಧ ಮಧ್ಯಸ್ಥಗಾರರನ್ನು ಭೇಟಿ ಮಾಡಲು ಕೆಲವು ರಾಜ್ಯಗಳಿಗೆ ಭೇಟಿ ನೀಡುವ ನಿರೀಕ್ಷೆಯಿದೆ.

ಅನಿಲ ಸೋರಿಕೆ ಅವಘಡ ವ್ಯಕ್ತಿ ಸಾವು, 9 ಜನ ಗಂಭೀರ

ಹೈದರಾಬಾದ್: ಇಲ್ಲಿನ ಔಷಧ ತಯಾರಿಕಾ ಸಂಸ್ಥೆ ಕಾರ್ಖಾನೆಯಲ್ಲಿ ಅನಿಲ ಸೋರಿಕೆಯಿಂದಾದ ಅವಘಡದಲ್ಲಿ ಒಬ್ಬರು ಮೃತಪಟ್ಟಿದ್ದು, 8 ಮಂದಿ ಗಾಯಗೊಂಡಿದ್ದಾರೆ.

ಅನಕಪಲ್ಲೆಯಲ್ಲಿರುವ ಜವಾಹರ ಲಾಲ್ ನೆಹರೂ ಫಾರ್ಮಾ ಸಿಟಿಯ ಟ್ಯಾಗೋರ್ ಲ್ಯಾಬೊರೇಟರಿ ಸಂಸ್ಥೆಯ ಕಾರ್ಖಾನೆಯಲ್ಲಿ ಮಂಗಳವಾರ ರಾತ್ರಿ ಅವಘಡ ಸಂಭವಿಸಿದ್ದು, ಬುಧವಾರ ಬೆಳಿಗ್ಗೆ ಗೊತ್ತಾಗಿದೆ. ಗಾಯಾಳುಗಳಲ್ಲಿ ಇಬ್ಬರ ಸ್ಥಿತಿಯು ಗಂಭೀರವಾಗಿದೆ.

ವಿಷಾನಿಲ ಸೇವಿಸಿ ಒಂಬತ್ತು ಜನ ಗಾಯಗೊಂಡರು. ತಕ್ಷಣ ಆಸ್ಪತ್ರೆಗೆ ಕರೆದೊಯ್ಯಲಾಯಿತು. ಒಡಿಶಾ ಮೂಲದ ಅಭಿತ್ ಬಸು (23) ಮೃತಪಟ್ಟಿದ್ದಾರೆ.

ಜಿಲ್ಲಾಧಿಕಾರಿ ವಿಜಯಾ ಕೃಷ್ಣನ್ ಅವರು, ‘ಗಂಭೀರ ಸ್ಥಿತಿಯಲ್ಲಿ ಇರುವ ಇಬ್ಬರಿಗೆ ವೆಂಟಿಲೇಟರ್ ಅಳವಡಿಸಿದೆ. ಇತರರು ಅಪಾಯದಿಂದ ಪಾರಾಗಿದ್ದಾರೆ. ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಲು ಅಧಿಕಾರಿಗೆ ಸೂಚಿಸಲಾಗಿದೆ’ ಎಂದರು.

ಘಟನೆಯ ವಿವರ ಪಡೆದಿರುವ ಸಿ.ಎಂ ಎನ್.ಚಂದ್ರಬಾಬು ನಾಯ್ಡು, ಗಾಯಾಳುಗಳಿಗೆ ಉತ್ತಮ ಚಿಕಿತ್ಸೆಯನ್ನು ಒದಗಿಸಲು ನಿರ್ದೇಶಿಸಿದ್ದಾರೆ.

‘ಗಾಯಾಳುಗಳಿಗೆ ಗುಣಮಟ್ಟದ ಚಿಕಿತ್ಸೆಯನ್ನು ಒದಗಿಸಬೇಕು’ ಎಂದು ಮಾಜಿ ಮುಖ್ಯಮಂತ್ರಿ ವೈ.ಎಸ್. ಜಗನ್‌ಮೋಹನ್ ರೆಡ್ಡಿ ಒತ್ತಾಯಿಸಿದ್ದಾರೆ.

ಮಹಿಳಾ ಪೈಲಟ್ ಶವ ಪತ್ತೆ

ಮುಂಬೈ: ಮಹಿಳಾ ಪೈಲಟ್ ಒಬ್ಬರು ಇಲ್ಲಿನ ಅಂಧೇರಿ ವಲಯದ ತನ್ನ ಫ್ಲ್ಯಾಟ್‌ನಲ್ಲಿ ಶಂಕಾಸ್ಪದ ರೀತಿಯಲ್ಲಿ ಮೃತಪಟ್ಟಿದ್ದು, ಸೋಮವಾರ ನೇಣು ಬಿಗಿದ ಸ್ಥಿತಿಯಲ್ಲಿ ಶವ ಪತ್ತೆಯಾಗಿದೆ.

ಏರ್ ಇಂಡಿಯಾ ಸಿಬ್ಬಂದಿ, ಮೂಲತಃ ಉತ್ತರ ಪ್ರದೇಶದ ಗೋರಖ್‌ಪುರ್‌ನ ಸೃಷ್ಟಿ ಟುಲಿ (27) ಮೃತರು. ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎನ್ನಲಾಗಿದ್ದು, ತನಿಖೆ ಪ್ರಗತಿಯಲ್ಲಿದೆ.

ಪ್ರಕರಣ ಸಂಬಂಧ ದೆಹಲಿ ನಿವಾಸಿ ಆದಿತ್ಯ ಪಂಡಿತ್ (27) ಎಂಬಾತನನ್ನು ಬಂಧಿಸಲಾಗಿದೆ. ಕಮರ್ಷಿಯಲ್ ಪೈಲಟ್ ಲೈಸೆನ್ಸ್‌ಗಾಗಿ ತರಬೇತಿ ಪಡೆಯುವಾಗ ಈ ಇಬ್ಬರೂ ಪರಿಚಿತರಾಗಿದ್ದರು.

ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ದಿಮೆ)
ನಂ. 8, "ಸಂಪರ್ಕ ಸೌಧ", ಡಾ. ರಾಜ್‌ಕುಮಾರ್ ರಸ್ತೆ, ರಾಜಾಜಿನಗರ 1ನೇ ಬ್ಲಾಕ್, ಬೆಂಗಳೂರು–560010.
ಟೆಲಿಫ್ಯಾಕ್ಸ್: 080–22024000 ಇ-ಮೇಲ್: mdkrdcl@gmail.com, cekrdcl@gmail.com ವೆಬ್‌ಸೈಟ್: http://www.krdcl.in

ಸಂಖ್ಯೆ: ಕರಅನಿನಿ/ಐಎಫ್‌ಬಿ/2024–25/15 ದಿನಾಂಕ: 27–11–2024

ಅಲ್ಪಾವಧಿ ಟೆಂಡರ್ ಪ್ರಕಟಣೆ (ಕೆಪಿಪಿ ಪೋರ್ಟಲ್ ಮೂಲಕ)

ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತವು (ಕೆ.ಆರ್.ಡಿ.ಸಿ.ಎಲ್) ಐಟಂ ದರದ ಆಧಾರದ ಮೇಲೆ ದ್ವಿ ಲಕೋಟೆ ಪದ್ಧತಿಯಲ್ಲಿ ಬೆಂಗಳೂರು ನಗರ ಸಂಚಾರ ಪೊಲೀಸರ ಅಗತ್ಯತೆಯಂತೆ ಈ ಕೆಳಕಂಡ ಸಂಬಂಧಿತ ಕಾಮಗಾರಿಗಳಲ್ಲಿ ಅನುಭವವಿರುವ ಏಜೆನ್ಸಿಗಳಿಂದ ಟೆಂಡರ್‌ಅನ್ನು ಆಹ್ವಾನಿಸಲಾಗಿದೆ.

ಕ್ರ. ಸಂ.	ಕಾಮಗಾರಿಯ ಹೆಸರು	ಟೆಂಡರ್‌ಗಿಟ್ಟ ಅಂದಾಜು ಮೊತ್ತ (ರೂ.ಗಳಲ್ಲಿ)	ಅರ್ನೆಸ್ಟ್ ಠೇವಣಿ ಹಣ (ಇಎಂಡಿ) (ರೂ.ಗಳಲ್ಲಿ)	ಕಾಮಗಾರಿ/ಸೇವೆಗಳು ಪೂರ್ಣಗೊಳ್ಳುವ ಕಾಲಾವಧಿ
1	ಬೆಂಗಳೂರು ನಗರ ಸಂಚಾರ ಪೊಲೀಸ್‌ಗಾಗಿ (ಎ) ವಿವಿಧ 25 ಸ್ಥಳಗಳಲ್ಲಿ ಆಟೋಮೇಟೆಡ್ ಕಾಂಟಾಕ್ಟ್‌ಲೆಸ್ ಟ್ರಾಫಿಕ್ ಎನ್‌ಫೋರ್ಸ್‌ಮೆಂಟ್‌ಗಾಗಿ RLVD+ANPR ಕ್ಯಾಮೆರಾ, (ಬಿ) AI ಆಧಾರಿತ ಆಟೋಮ್ಯಾಟಿಕ್ ವಾಯ್ಲೇಶನ್ ಡಿಟೆಕ್ಷನ್ ಲೈಸೆನ್ಸ್‌ಗಳನ್ನು ಒಳಗೊಂಡಿರುವಂತೆ 5 ವರ್ಷಗಳ ನಿರ್ವಹಣೆ ಸೇರಿದಂತೆ ಇಂಟೆಲಿಜೆಂಟ್ ಟ್ರಾಫಿಕ್ ಮ್ಯಾನೇಜ್‌ಮೆಂಟ್ ಸಿಸ್ಟಮ್ ಒದಗಿಸುವ ಕಾಮಗಾರಿ.	10,16,10,170.00 (ಜಿಎಸ್‌ಟಿ ಹೊರತುಪಡಿಸಿ)	10,50,000.00 ಕೆಪಿಪಿ ಪೋರ್ಟಲ್ ಮೂಲಕ	ಆರು ತಿಂಗಳು (ಸರಬರಾಜು ಮಾಡಿ, ಅಳವಡಿಸಿ, ಪರೀಕ್ಷಿಸಿ, ಕಾರ್ಯಚಾಲನೆ ಮಾಡಿ ತರಬೇತಿ ನೀಡುವುದು)

ಆಸಕ್ತ ಅರ್ಜಿದಾರರು ಬಿಡ್ಡಿಂಗ್ ದಾಖಲೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **www.kppp.karnataka.gov.in** ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ ಹಾಗೂ ಬಿಡ್‌ಗಳು ಮತ್ತು ಇಎಂಡಿಯನ್ನು (ವಿದ್ಯುನ್ಮಾನವಾಗಿ) ಕೆಪಿಪಿ ಪೋರ್ಟಲ್ ಮೂಲಕ ಮಾತ್ರ ಸಲ್ಲಿಸಬೇಕು.

ವಿವಿಧ ಚಟುವಟಿಕೆಗಳಿಗೆ ಟೆಂಡರ್ ದಿನಾಂಕಗಳು: (ಎ) ಟೆಂಡರ್‌ನ ಆಕ್ಷೇಪಣೆ/ವಿಚಾರಣೆಯನ್ನು ಸಲ್ಲಿಸಲು ಕೊನೆ ದಿನಾಂಕ ಮತ್ತು ಸಮಯ: **04.12.2024ರ 17.30 ಗಂಟೆವರೆಗೆ.** ಅರ್ಜಿದಾರರು ಎಲೆಕ್ಟ್ರಾನಿಕ್ ಮೇಲ್ **cekrdcl@gmail.com** ಮುಖಾಂತರ ತಮ್ಮ ಆಕ್ಷೇಪಣೆಗಳನ್ನು ಸಲ್ಲಿಸಬಹುದು. (ಬಿ) ಪೂರ್ವ ಬಿಡ್ ಸಭೆಯ ದಿನಾಂಕ: **05.12.2024ರಂದು ಬೆಳಿಗ್ಗೆ 11.30 ಗಂಟೆಗೆ ಜಂಟಿ ಪೊಲೀಸ್ ಆಯುಕ್ತರವರ ಕಚೇರಿ, ಬೆಂಗಳೂರು ನಗರ ಪೊಲೀಸ್, ನಂ. 5, ಸಂಚಾರ ನಿರ್ವಹಣಾ ಕೇಂದ್ರ, 2ನೇ ಮಹಡಿ, ಇನ್‌ಫೆಂಟ್ರಿ ರಸ್ತೆ, ಬೆಂಗಳೂರು–560001** ಇಲ್ಲಿ ನಿಯೋಜಿಸಲಾಗಿದೆ. (ಸಿ) ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ : **11.12.2024ರ 17.30 ಗಂಟೆವರೆಗೆ.** (ಡಿ) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **13.12.2024ರಂದು ಬೆಳಿಗ್ಗೆ 11.00 ಗಂಟೆಗೆ.**

* ಇನ್ನು ಮುಂದೆ ಟೆಂಡರ್ ಪ್ರಕಟಣೆಯಲ್ಲಿನ ಯಾವುದೇ ಬದಲಾವಣೆಗಳನ್ನು ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಬದಲಾವಣೆಗಳಿದ್ದಲ್ಲಿ ಕೇವಲ ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ ವೆಬ್‌ಸೈಟ್‌ನಲ್ಲಿ ಮಾತ್ರ ಅಪ್‌ಡೇಟ್ ಮಾಡಲಾಗುವುದು.

ಸಹಿ/– ಮುಖ್ಯ ಅಭಿಯಂತರರು
ಕರಅನಿನಿ, ಬೆಂಗಳೂರು

DIPR/CP/YC/3464/2024-25

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

(CIN: U40109KA1999SGCO25521)

ಸಂಖ್ಯೆ: ಮುಇಂವಿ/ಟಿಮತ್ತುಪಿ/ಅಇಂ(ವಿ)–1/2/2024–25/5867–902 ದಿನಾಂಕ : 27-11-2024

ಸಂಕ್ಷಿಪ್ತ ಟೆಂಡರ್ ಪ್ರಕಟಣೆ

(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಮಾತ್ರ)

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ಈ ಕೆಳಕಂಡ ವಿಚಾರಣಾ ಸಂಖ್ಯೆಗಳ ಮೂಲಕ ಕೆಳಕಂಡ ಕಾಮಗಾರಿಗಳಿಗೆ ಎಲೆಕ್ಟ್ರಾನಿಕ್ ವಿಧಾನದ ಮೂಲಕ ಬಿಡ್‌ಗಳನ್ನು ಆಹ್ವಾನಿಸಿದೆ:

ಕ್ರ.ಸಂ	ವಿಚಾರಣಾ ಸಂಖ್ಯೆ / ಕಾಮಗಾರಿಗಳ ವಿವರ
1	**ಕೆಪಿಟಿಸಿಎಲ್/2024–25/ಎಸ್‌ಎಸ್/ವರ್ಕ್_ಇಂಡೆಂಟ್ 1442** ಬಳ್ಳಾರಿ ಜಿಲ್ಲೆ ಸಂಡೂರು ತಾಲ್ಲೂಕಿನ **ಸಂಡೂರು ಪಟ್ಟಣ (ದೌಲತ್‌ಪುರ)**ದಲ್ಲಿ 2x20 ಎಂವಿಎ, 110/11 ಕೆವಿ ವಿದ್ಯುತ್ ಉಪಕೇಂದ್ರವನ್ನು ಸ್ಥಾಪಿಸುವುದು ಹಾಗೂ ಹಾಲಿಯಿರುವ 110ಕೆವಿ ಮುನಿರಾಬಾದ್ ಪವರ್ ಹೌಸ್– ವ್ಯಾಸನಕೆರಿ (ದೋಣಿಮಲೈ) ಡಿಸಿ (DC) ಪ್ರಸರಣ ಮಾರ್ಗದಿಂದ ಒಂದು ಪ್ರಸರಣ ಮಾರ್ಗವನ್ನು ಪ್ರಸ್ತಾವಿತ 110/11 ಕೆವಿ ಸಂಡೂರು ಪಟ್ಟಣ (ದೌಲತ್‌ಪುರ) ಉಪಕೇಂದ್ರದವರೆಗೆ ಲಿಂಕ್ಸ್ ವಾಹಕದಿಂದ **0.416ಕಿ.ಮೀ** ಉದ್ದಕ್ಕೆ 110ಕೆವಿ ಲೀಲೋ (LILO) ಪ್ರಸರಣ ಮಾರ್ಗವನ್ನು **ಭಾಗಶಃ ಟರ್ನ್ ಕೀ ಆಧಾರದ** ಮೇಲೆ ನಿರ್ಮಿಸುವುದು.
2	**ಕೆಪಿಟಿಸಿಎಲ್/2024–25/ಎಸ್‌ಎಸ್/ವರ್ಕ್_ಇಂಡೆಂಟ್ 1518** ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು (ಉತ್ತರ) ತಾಲ್ಲೂಕು **ರಾಘವೇಂದ್ರಧಾಮ (ದೊಡ್ಡಬ್ಯಾಲಕೆರೆ)** ದಲ್ಲಿ 2x20 ಎಂ.ವಿ.ಎ, 66/11 ಕೆ.ವಿ ಉಪಕೇಂದ್ರವನ್ನು ಸ್ಥಾಪಿಸುವುದು ಹಾಗೂ **0.104 ಕಿಮೀ** ಉದ್ದಕ್ಕೆ 66 ಕೆವಿ ಲಿಲೋ ಮಾರ್ಗವನ್ನು ಹಾಲಿಯಿರುವ ಪೀಣ್ಯ ಡಿಜಿ ಪ್ಲಾಂಟ್ 1&2 ಡಿಸಿ ಮಾರ್ಗದಿಂದ ಉದ್ದೇಶಿತ 66/11 ಕೆವಿ ರಾಘವೇಂದ್ರಧಾಮ (ದೊಡ್ಡಬ್ಯಾಲಕೆರೆ) ಉಪಕೇಂದ್ರದವರೆಗೆ ನಿರ್ಮಿಸುವುದು ಹಾಗೂ ಗೋಪುರ ಸಂಖ್ಯೆ 4 ಮತ್ತು 5 (220/66 ಕೆವಿ ಪುಟ್ಟೇನಹಳ್ಳಿ ಉಪಕೇಂದ್ರದಿಂದ 66/11 ಕೆವಿ KHB ಉಪಕೇಂದ್ರದ ಲಿಲೋ ಪಾಯಿಂಟ್‌ಗೆ) ನಡುವೆ **0.161 ಕಿ.ಮೀ.** ಉದ್ದಕ್ಕೆ ಡ್ರೇಕ್ ಎಸಿಎಸ್‌ಆರ್ ಕಂಡಕ್ಟರ್ (Drake ACSR conductor) ನಿಂದ ಅಸ್ತಿತ್ವದಲ್ಲಿರುವ ಕೊಯೊಟ್ ಕಂಡಕ್ಟರ್ ಅನ್ನು ಬಲಪಡಿಸುವ ಕಾಮಗಾರಿಯನ್ನೊಳಗೊಂಡಂತೆ **ಭಾಗಶಃ ಟರ್ನ್ ಕೀ ಆಧಾರದ** ಮೇಲೆ ನಿರ್ಮಿಸುವುದು.
3	**ಕೆಪಿಟಿಸಿಎಲ್/2024–25/ಎಸ್‌ಎಸ್/ವರ್ಕ್_ಇಂಡೆಂಟ್ 1528** ವಿಜಯಪುರ ಜಿಲ್ಲೆ ತಾಳಿಕೋಟಿ ತಾಲ್ಲೂಕಿನ **ನಾವಡಗಿ**ಯಲ್ಲಿ 2x20 ಎಂವಿಎ, 110/11 ಕೆವಿ ವಿದ್ಯುತ್ ಉಪಕೇಂದ್ರವನ್ನು ಸ್ಥಾಪಿಸುವುದು ಹಾಗೂ ಹಾಲಿಯಿರುವ 110ಕೆವಿ ಅಸ್ಕಿ–ತಾಳಿಕೋಟಿ ಎಸ್‌ಸಿ (SC) ಪ್ರಸರಣ ಮಾರ್ಗದಿಂದ ಪ್ರಸ್ತಾವಿತ 110/11 ಕೆವಿ ನಾವಡಗಿ ಉಪಕೇಂದ್ರದವರೆಗೆ ಲಿಂಕ್ಸ್ ವಾಹಕದಿಂದ **10.875 ಕಿ.ಮೀ** 110 ಕೆವಿ ಲೀಲೋ (LILO) ಪ್ರಸರಣ ಮಾರ್ಗವನ್ನು **ಭಾಗಶಃ ಟರ್ನ್ ಕೀ ಆಧಾರದ** ಮೇಲೆ ನಿರ್ಮಿಸುವುದು
4	**ಕೆಪಿಟಿಸಿಎಲ್/2024–25/ಎಸ್‌ಎಸ್/ವರ್ಕ್_ಇಂಡೆಂಟ್ 1532** ಬೆಳಗಾವಿ ಜಿಲ್ಲೆ, ಗೋಕಾಕ್ ತಾಲ್ಲೂಕಿನ **ಖನಗಾಂವ**ನಲ್ಲಿ 2x5ಎಂವಿಎ, 33/11 ಕೆವಿ ಉಪಕೇಂದ್ರವನ್ನು 2x20ಎಂವಿಎ, 110/11ಕೆವಿ ಉಪಕೇಂದ್ರವನ್ನಾಗಿ ಉನ್ನತೀಕರಿಸುವುದು ಹಾಗೂ 110ಕೆವಿ ಮಾಮದಾಪುರ ಉಪಕೇಂದ್ರದಿಂದ ಉದ್ದೇಶಿತ 110ಕೆವಿ ಖನಗಾಂವ ಉಪಕೇಂದ್ರದವರೆಗೆ ಪ್ಯಾಂಥರ್ (Panther) ವಾಹಕವನ್ನು ಬಳಸಿ **15.188 ಕಿ.ಮೀ** ನಷ್ಟು 110ಕೆವಿ ಡಿ ಸಿ ಪ್ರಸರಣ ಮಾರ್ಗದ ನಿರ್ಮಾಣ ಹಾಗೂ 110ಕೆವಿ ಮಾಮದಾಪುರ ಉಪಕೇಂದ್ರದಲ್ಲಿ ಎರಡು(02) ಸಂಖ್ಯೆಗಳ 110ಕೆವಿ ಟರ್ಮಿನಲ್ ಬೇಗಳನ್ನು **ಭಾಗಶಃ ಟರ್ನ್ ಕೀ ಆಧಾರದ** ಮೇಲೆ ನಿರ್ಮಿಸುವುದು.
5	**ಕೆಪಿಟಿಸಿಎಲ್/2024–25/ಎಸ್‌ಎಸ್/ವರ್ಕ್_ಇಂಡೆಂಟ್ 1558** ಹಾಸನ ಜಿಲ್ಲೆ, ಚನ್ನರಾಯಪಟ್ಟಣ ತಾಲ್ಲೂಕು **ಮುಡಿಬೆಟ್ಟ ಕಾವಲ್**ನಲ್ಲಿ 2x12.5 ಎಂ.ವಿ.ಎ, 66/11 ಕೆ.ವಿ ಉಪಕೇಂದ್ರವನ್ನು ಸ್ಥಾಪಿಸುವುದು ಹಾಗೂ ಹಾಲಿಯಿರುವ 66ಕೆವಿ ಹಿರೀಸಾವೆ–ದಿಡಗಾ ಎಸ್‌ಸಿ ಮಾರ್ಗದಿಂದ ಪ್ರಸ್ತಾವಿತ 66/11ಕೆವಿ ಮುಡಿಬೆಟ್ಟ ಕಾವಲ್ ಉಪಕೇಂದ್ರದವರೆಗೆ ಕೊಯೊಟ್ ವಾಹಕ (Coyote Conductor) ಬಳಸಿ 66ಕೆವಿ ಲಿಲೋ ಮಾರ್ಗ ವನ್ನು **0.085 ಕಿಮೀ** ನಷ್ಟು ಉದ್ದಕ್ಕೆ **ಭಾಗಶಃ ಟರ್ನ್ ಕೀ ಆಧಾರದ** ಮೇಲೆ ನಿರ್ಮಿಸುವುದು.
6	**ಕೆಪಿಟಿಸಿಎಲ್/2024–25/ಎಸ್‌ಎಸ್/ವರ್ಕ್_ ಇಂಡೆಂಟ್ 1569** ವಿಜಯನಗರ ಜಿಲ್ಲೆ, ಹರಪನಹಳ್ಳಿ ತಾಲ್ಲೂಕು **ಮದಲಗೆರೆ (ಬಂದ್ರಿ ಕ್ರಾಸ್)**ನಲ್ಲಿ **2x12.5ಎಂ.ವಿ.ಎ, 66/11 ಕೆ.ವಿ** ವಿದ್ಯುತ್ ಉಪಕೇಂದ್ರವನ್ನು ಸ್ಥಾಪಿಸುವುದು ಹಾಗೂ ಹಾಲಿಯಿರುವ 66ಕೆವಿ ಇಟ್ಟಿಗಿ – ಹರಪನಹಳ್ಳಿ SC ಪ್ರಸರಣ ಮಾರ್ಗದಿಂದ ಪ್ರಸ್ತಾವಿತ 66/11 ಕೆವಿ ಮದಲಗೆರೆ ಉಪಕೇಂದ್ರದವರೆಗೆ ಕೊಯೋಟ್ (Coyote) ವಾಹಕದಿಂದ **9.315 ಕಿ.ಮೀ** ನಷ್ಟು 66 ಕೆವಿ (LILO) ಪ್ರಸರಣ ಮಾರ್ಗವನ್ನು **ಭಾಗಶಃ ಟರ್ನ್ ಕೀ ಆಧಾರದ** ಮೇಲೆ ನಿರ್ಮಿಸುವುದು.
7	**ಕೆಪಿಟಿಸಿಎಲ್/2024–25/ಎಸ್‌ಎಸ್/ವರ್ಕ್_ ಇಂಡೆಂಟ್ 1570** ಹಾವೇರಿ ಜಿಲ್ಲೆ, ಹಾನಗಲ್ ತಾಲ್ಲೂಕು **ಬೊಮ್ಮನಹಳ್ಳಿಯಲ್ಲಿ 2x5ಎಂ.ವಿ.ಎ, 33/11 ಕೆ.ವಿ** ವಿದ್ಯುತ್ ಉಪಕೇಂದ್ರವನ್ನು **2x20ಎಂ.ವಿ.ಎ, 110/11 ಕೆ.ವಿ** ಉಪಕೇಂದ್ರಕ್ಕೆ ಉನ್ನತೀಕರಿಸುವುದು ಹಾಗೂ 110 ಕೆವಿ ಅಕ್ಕಿಆಲೂರ್ (ಬಾಳಂಬೀಡ) ಪ್ರಸರಣ ಮಾರ್ಗದಿಂದ ಪ್ರಸ್ತಾವಿತ ಬೊಮ್ಮನಹಳ್ಳಿ ಉಪಕೇಂದ್ರದವರೆಗೆ ಪ್ಯಾಂಥರ್ (Panther) ವಾಹಕದಿಂದ **16.626 ಕಿ.ಮೀ** ನಷ್ಟು 110 ಕೆವಿ ಪ್ರಸರಣ ಮಾರ್ಗ ನಿರ್ಮಾಣ ಮತ್ತು ಚಾಲ್ತಿಯಲ್ಲಿರುವ 110 ಕೆವಿ ಅಕ್ಕಿಆಲೂರ್ (ಬಾಳಂಬೀಡ) ಉಪಕೇಂದ್ರದಲ್ಲಿ ಎರಡು ಸಂಖ್ಯೆಯ 110/11 ಕೆವಿ ಟರ್ಮಿನಲ್ ಬೇಗಳನ್ನು **ಭಾಗಶಃ ಟರ್ನ್ ಕೀ ಆಧಾರದ** ಮೇಲೆ ನಿರ್ಮಿಸುವುದು.
8	**ಕೆಪಿಟಿಸಿಎಲ್/2024–25/ಎಸ್‌ಎಸ್/ವರ್ಕ್_ಇಂಡೆಂಟ್1573** ಬಳ್ಳಾರಿ ಜಿಲ್ಲೆ, ಸಿರಗುಪ್ಪ ತಾಲ್ಲೂಕಿನ **ನಡವಿ (ಮಲ್ಲಾಪುರ) ಗ್ರಾಮ**ದಲ್ಲಿ 1x20ಎಂವಿಎ, 110/33ಕೆವಿ ಮತ್ತು 2x20ಎಂವಿಎ, 110/11ಕೆವಿ ವಿದ್ಯುತ್ ಉಪಕೇಂದ್ರವನ್ನು ಸ್ಥಾಪಿಸುವುದು ಹಾಗೂ ಹಾಲಿಯಿರುವ 110ಕೆವಿ ತೆಕ್ಕಲಕೋಟೆ–ಸಿರಿಗೆರೆ ಕ್ರಾಸ್ ಎಸ್ ಸಿ (SC) ಪ್ರಸರಣ ಮಾರ್ಗದಿಂದ ಪ್ರಸ್ತಾವಿತ 110/33/11ಕೆವಿ ನಡವಿ ಉಪಕೇಂದ್ರದವರೆಗೆ ಲಿಂಕ್ಸ್ (Lynx) ವಾಹಕದಿಂದ **6.981ಕಿಮೀಗಳ** ಉದ್ದಕ್ಕೆ 110ಕೆವಿ ಲಿಲೋ (LILO) ಪ್ರಸರಣ ಮಾರ್ಗವನ್ನು **ಭಾಗಶಃ ಟರ್ನ್ ಕೀ ಆಧಾರದ** ಮೇಲೆ ನಿರ್ಮಿಸುವುದು.
9	**ಕೆಪಿಟಿಸಿಎಲ್/2024–25/ಎಸ್‌ಎಸ್/ವರ್ಕ್_ ಇಂಡೆಂಟ್ 1575** ಶಿವಮೊಗ್ಗ ಜಿಲ್ಲೆ ಮತ್ತು ತಾಲ್ಲೂಕಿನಲ್ಲಿ ಹಾಲಿಯಿರುವ **220ಕೆವಿ** ಎಮ್.ಆರ್.ಎಸ್. ಶಿವಮೊಗ್ಗ ಉಪಕೇಂದ್ರದಲ್ಲಿ 220ಕೆವಿ ಡಬಲ್ ಬಸ್‌ಗೆ **ಬಸ್ ಸೆಕ್ಷನಲೈಸರ್ (Bus Sectionalizer)** ಬೇಯನ್ನು ಒದಗಿಸುವುದು ಹಾಗೂ 220 ಕೆವಿ ನಾರ್ತ್ ಬಸ್‌ನ Split Bus Operation ಗಾಗಿ ಹೆಚ್ಚುವರಿ ರಿಜಿಡ್ ಬಸ್ (additional Rigid Bus tie) ವ್ಯವಸ್ಥೆಯನ್ನು **ಸಂಪೂರ್ಣ ಟರ್ನ್ ಕೀ ಆಧಾರದ** ಮೇಲೆ ಒದಗಿಸುವುದು.
10	**ಕೆಪಿಟಿಸಿಎಲ್/2024–25/ಎಸ್‌ಎಸ್/ವರ್ಕ್_ಇಂಡೆಂಟ್1577** ಕಲಬುರ್ಗಿ ಜಿಲ್ಲೆ, ಸೇಡಂ ತಾಲ್ಲೂಕಿನ **ಮದ್ನ ಗ್ರಾಮ**ದಲ್ಲಿ 2x20 ಎಂವಿಎ, 110/11ಕೆವಿ ವಿದ್ಯುತ್ ಉಪಕೇಂದ್ರವನ್ನು ಸ್ಥಾಪಿಸುವುದು, ಹಾಗೂ ಹಾಲಿಯಿರುವ 110ಕೆವಿ ಸೇಡಂ–ಗುರ್‌ಮಿಟ್ಕಲ್ ಎಸ್‌ಸಿ (SC) ಪ್ರಸರಣ ಮಾರ್ಗದಿಂದ ಪ್ರಸ್ತಾವಿತ 110/11ಕೆವಿ ಮದ್ನ ಗ್ರಾಮ ಉಪಕೇಂದ್ರದವರೆಗೆ ಲಿಂಕ್ಸ್ (Lynx) ವಾಹಕದಿಂದ **4.673ಕಿಮೀಗಳ** ಉದ್ದಕ್ಕೆ 110ಕೆವಿ ಲಿಲೋ(LILO) ಪ್ರಸರಣ ಮಾರ್ಗವನ್ನು **ಭಾಗಶಃ ಟರ್ನ್ ಕೀ ಆಧಾರದ** ಮೇಲೆ ನಿರ್ಮಿಸುವುದು.
11	**ಕೆಪಿಟಿಸಿಎಲ್/2024–25/ಎಸ್‌ಎಸ್/ವರ್ಕ್_ಇಂಡೆಂಟ್1578** ಧಾರವಾಡ ಜಿಲ್ಲೆ, ಹುಬ್ಬಳ್ಳಿ ತಾಲ್ಲೂಕಿನ ಇಂಡಸ್ಟ್ರಿಯಲ್ ಎಸ್ಟೇಟ್, **ಗೋಕುಲ್ ರಸ್ತೆ,** ಹುಬ್ಬಳ್ಳಿಯಲ್ಲಿ 2x5 ಎಂವಿಎ, 33/11ಕೆವಿ ಉಪಕೇಂದ್ರವನ್ನು 2x20 ಎಂವಿಎ, 110/11ಕೆವಿ ಹಾಗೂ 1x20ಎಂವಿಎ, 110/33ಕೆವಿ ಉಪಕೇಂದ್ರಕ್ಕೆ ಉನ್ನತೀಕರಿಸುವುದು ಹಾಗೂ 110ಕೆವಿ ಆನಂದ ನಗರ–ಅಕ್ಷಯ ಕಾಲೋನಿ ಎಸ್‌ಸಿ (SC) ಭೂಗತ (UG) ಕೇಬಲ್ ಪ್ರಸರಣ ಮಾರ್ಗದಿಂದ ಪ್ರಸ್ತಾವಿತ 110/33/11ಕೆವಿ ಇಂಡಸ್ಟ್ರಿಯಲ್ ಎಸ್ಟೇಟ್, ಗೋಕುಲ್ ರಸ್ತೆ, ಹುಬ್ಬಳ್ಳಿ ಉಪಕೇಂದ್ರದವರೆಗೆ 110ಕೆವಿ, 630ಚಮಿಮೀ. ಭೂಗತ (UG) ಕೇಬಲ್ ಬಳಸಿಕೊಂಡು **0.98ಕಿಮೀಗಳ** ಉದ್ದಕ್ಕೆ 110ಕೆವಿ ಲಿಲೋ (LILO) ಪ್ರಸರಣ ಮಾರ್ಗವನ್ನು **ಭಾಗಶಃ ಟರ್ನ್ ಕೀ ಆಧಾರದ** ಮೇಲೆ ನಿರ್ಮಿಸುವುದು.
12	**ಕೆಪಿಟಿಸಿಎಲ್/2024–25/ಎಸ್‌ಎಸ್/ವರ್ಕ್_ಇಂಡೆಂಟ್1579** ದಾವಣಗೆರೆ ಜಿಲ್ಲೆ, ಚನ್ನಗಿರಿ ತಾಲ್ಲೂಕಿನ **ಹೊನ್ನೇಬಾಗಿ (ವಡ್ನಾಳ್)** ಯಲ್ಲಿ 2x12.5ಎಂವಿಎ, 66/11ಕೆವಿ ವಿದ್ಯುತ್ ಉಪಕೇಂದ್ರವನ್ನು ಸ್ಥಾಪಿಸುವುದು ಹಾಗೂ ಹಾಲಿಯಿರುವ 66ಕೆವಿ ಬೆಂಕಿಕೆರೆ–ಗೊಪ್ಪೇನಹಳ್ಳಿ ಎಸ್‌ಸಿ (SC) ಪ್ರಸರಣ ಮಾರ್ಗದಿಂದ ಪ್ರಸ್ತಾವಿತ 66ಕೆವಿ ಹೊನ್ನೇಬಾಗಿ (ವಡ್ನಾಳ್) ಉಪಕೇಂದ್ರದವರೆಗೆ ಕೊಯೋಟ್ (Coyote) ವಾಹಕದಿಂದ **0.757ಕಿಮೀಗಳ** ಉದ್ದಕ್ಕೆ 66ಕೆವಿ ಲಿಲೋ(LILO) ಪ್ರಸರಣ ಮಾರ್ಗವನ್ನು **ಭಾಗಶಃ ಟರ್ನ್ ಕೀ ಆಧಾರದ** ಮೇಲೆ ನಿರ್ಮಿಸುವುದು.
13	**ಕೆಪಿಟಿಸಿಎಲ್/2024–25/ಎಸ್‌ಎಸ್/ವರ್ಕ್_ಇಂಡೆಂಟ್1581** ಕಲಬುರ್ಗಿ ಜಿಲ್ಲೆ, ಚಿಂಚೋಳಿ ತಾಲ್ಲೂಕಿನ **ಕೊಲ್ಲೂರು ಗ್ರಾಮ**ದಲ್ಲಿ 2x20ಎಂವಿಎ, 110/11ಕೆವಿ ವಿದ್ಯುತ್ ಉಪಕೇಂದ್ರವನ್ನು ಸ್ಥಾಪಿಸುವುದು ಹಾಗೂ ಹಾಲಿಯಿರುವ 110ಕೆವಿ ಚಿಂಚೋಳಿ–ಮನ್–ಎ–ಖೇಲಿ ಎಸ್ ಸಿ (SC) ಪ್ರಸರಣ ಮಾರ್ಗದಿಂದ ಪ್ರಸ್ತಾವಿತ 110/11ಕೆವಿ ಕೊಲ್ಲೂರು ಉಪಕೇಂದ್ರದವರೆಗೆ ಲಿಂಕ್ಸ್ (Lynx) ವಾಹಕದಿಂದ **9.723ಕಿಮೀಗಳ** ಉದ್ದಕ್ಕೆ 110ಕೆವಿ ಲಿಲೋ (LILO) ಪ್ರಸರಣ ಮಾರ್ಗವನ್ನು **ಭಾಗಶಃ ಟರ್ನ್ ಕೀ ಆಧಾರದ** ಮೇಲೆ ನಿರ್ಮಿಸುವುದು.

ಬಿಡ್‌ಗಳನ್ನು ಎಲೆಕ್ಟ್ರಾನಿಕ್ ಟೆಂಡರಿಂಗ್ ವಿಧಾನದ ಮೂಲಕ ಮಾತ್ರ ಸ್ವೀಕರಿಸಲಾಗುವುದು. ಇ–ಟೆಂಡರಿಂಗ್ ಪ್ರಕ್ರಿಯೆಯಲ್ಲಿ ಭಾಗವಹಿಸುವುದರ ಕುರಿತಾದ ವಿವರಗಳನ್ನು ಕವಿಪ್ರನಿನಿಯ ವೆಬ್‌ಸೈಟ್ https://kptcl.karnataka.gov.in ನ ಹೈಪರ್‌ಲಿಂಕ್ "ಇ ಪ್ರೊಕ್ಯೂರ್‌ಮೆಂಟ್ ಕವಿಪ್ರನಿನಿ" ಅಥವಾ https://kppp.karnataka.gov.in ನಲ್ಲಿ ಲಾಗಿನ್ ಆಗಿ **ದಿನಾಂಕ 30.11.2024 ರಂದು ಅಪರಾಹ್ನ 15:00 ಗಂಟೆ** ಅಥವಾ ನಂತರದಿಂದ ಪಡೆಯಬಹುದು. ಬಿಡ್ ಸಲ್ಲಿಕೆಗೆ ಕೊನೆಯ **ದಿನಾಂಕ 30.12.2024 ರಂದು ಅಪರಾಹ್ನ 15:00 ಗಂಟೆ. ಬಿಡ್ ಸಲ್ಲಿಕೆಯ ಕೊನೆಯ ದಿನಾಂಕವನ್ನು ವಿಸ್ತರಿಸಿದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ತಿಳಿಸಲಾಗುವುದು.** ಇದಕ್ಕೆ ಸಂಬಂಧಿಸಿದಂತೆ ಇತರೆ ಹೆಚ್ಚಿನ ಮಾಹಿತಿಗಳು ಬೇಕಾದಲ್ಲಿ ಕೆಳಸಹಿದಾರರ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿದೆ. ಬಿಡ್ದುದಾರರು ಬಿಡ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕದ ಮುನ್ನ ಪ್ರಕಟಿಸುವ ಎಲ್ಲಾ ತಿದ್ದುಪಡಿಗಳು / ಸೇರ್ಪಡೆಗಳನ್ನು ಗಮನಿಸತಕ್ಕದ್ದು.

ಸಹಿ/– ಮುಖ್ಯ ಇಂಜಿನಿಯರ್ (ವಿದ್ಯುತ್), ಟೆಂಡರಿಂಗ್ ಮತ್ತು ಪ್ರೊಕ್ಯೂರ್‌ಮೆಂಟ್,
ಕವಿಪ್ರನಿನಿ, 3ನೇ ಮಹಡಿ, ಕಾವೇರಿ ಭವನ, ಬೆಂಗಳೂರು–560009.
ದೂರವಾಣಿ: 080–22274744

ಡೋಪಿಂಗ್ ಟೆಸ್ಟ್: ಮಾದರಿ ನೀಡಲು ನಿರಾಕರಿಸಿದ್ದಕ್ಕೆ ರಾಷ್ಟ್ರೀಯ ಉದ್ದೀಪನ ಮದ್ದು ಸೇವನೆ ತಡೆ ಘಟಕ ಕ್ರಮ

ಕುಸ್ತಿಪಟು ಬಜರಂಗ್ 4 ವರ್ಷ ಅಮಾನತು

ನವದೆಹಲಿ (ಪಿಟಿಐ): ಮಾರ್ಚ್ 10ರಂದು ರಾಷ್ಟ್ರೀಯ ತಂಡದ ಆಯ್ಕೆ ಟ್ರಯಲ್ಸ್ ವೇಳೆ ಉದ್ದೀಪನ ಮದ್ದು ಸೇವನೆ ಪರೀಕ್ಷೆಗೆ ಮಾದರಿ ನೀಡಲು ನಿರಾಕರಿಸಿದ್ದಕ್ಕೆ ಅಂತರರಾಷ್ಟ್ರೀಯ ಕುಸ್ತಿಪಟು ಬಜರಂಗ್ ಪೂನಿಯಾ ಅವರ ಮೇಲೆ ನಾಲ್ಕು ವರ್ಷಗಳ ಅಮಾನತು ಹೇರಲಾಗಿದೆ.

ಟೋಕಿಯೊ ಒಲಿಂಪಿಕ್ಸ್ ಕಂಚಿನ ಪದಕ ವಿಜೇತರಾದ ಬಜರಂಗ್ ಅವರ ಮೇಲೆ ರಾಷ್ಟ್ರೀಯ ಉದ್ದೀಪನ ಮದ್ದು ಸೇವನೆ ತಡೆ ಘಟಕ (ನಾಡಾ) ಈ ಹಿಂದೆ ಏಪ್ರಿಲ್‌ನಲ್ಲಿ ತಾತ್ಕಾಲಿಕವಾಗಿ ಅಮಾನತು ಹೇರಿತ್ತು. ವಿಶ್ವ ಕುಸ್ತಿ ಸಂಸ್ಥೆಯಾದ ಯುನೈಟೆಡ್ ವರ್ಲ್ಡ್ ರೆಸ್ಲಿಂಗ್ (ಯುಡಬ್ಲ್ಯುಡಬ್ಲ್ಯು) ಕೂಡ ಅಮಾನತು ಶಿಕ್ಷೆ ವಿಧಿಸಿತ್ತು.

ಇದರ ವಿರುದ್ಧ ಬಜರಂಗ್ ನಾಡಾದ ಶಿಸ್ತುಸಮಿತಿಗೆ ಮನವಿ ಸಲ್ಲಿಸಿದ್ದರು. ಮೇ 31ರಂದು ತಾತ್ಕಾಲಿಕ ಅಮಾನತನ್ನು ನಾಡಾ ಹಿಂಪಡೆದಿತ್ತು. ನಂತರ ಜೂನ್ 23ರಂದು ನಾಡಾ, ಬಜರಂಗ್ ಅವರಿಗೆ ಆರೋಪಗಳನ್ನು ಹೊಂದಿರುವ ನೋಟಿಸ್ ನೀಡಿತ್ತು.

ಬಜರಂಗ್ ಅವರು ಲಿಖಿತ ಪತ್ರದ ಮುಖೇನ ತಮ್ಮ ವಿರುದ್ಧದ ಆರೋಪಗಳನ್ನು ಅಲ್ಲಗೆಳೆದಿದ್ದರು. ಇದರ ಬೆನ್ನಲ್ಲೇ ಸೆಪ್ಟೆಂಬರ್ 20 ಮತ್ತು ಅಕ್ಟೋಬರ್ 4ರಂದು ವಿಚಾರಣೆ ನಡೆದಿತ್ತು.

'ನಿಯಮ 10.3.1ರ ಪ್ರಕಾರ ಕ್ರೀಡಾಪಟುವು ನಾಲ್ಕು ವರ್ಷಗಳ ಕಾಲ ಯಾವುದೇ ಸ್ಪರ್ಧೆಯಲ್ಲಿ ಭಾಗವಹಿಸುವಂತಿಲ್ಲ' ಎಂದು ನಾಡಾದ ಶಿಸ್ತು ಸಮಿತಿಯಾದ ಎಡಿಡಿಪಿ (ಆ್ಯಂಟಿ ಡಿಸಿಪ್ಲಿನರಿ ಡೋಪಿಂಗ್ ಪಾನೆಲ್) ತನ್ನ ಆದೇಶದಲ್ಲಿ ತಿಳಿಸಿದೆ.

2024ರ ಏಪ್ರಿಲ್ 23ರಿಂದ ಅಮಾನತು ಶಿಕ್ಷೆ ಅನ್ವಯವಾಗಿದೆ. 2028ರ ಏಪ್ರಿಲ್ 22ರವರೆಗೆ ಇರಲಿದೆ. ಹೀಗಾಗಿ ಅವರ ಕ್ರೀಡಾಜೀವನ ಬಹುತೇಕ ಮುಗಿದುಹೋದಂತಾಗಿದೆ.

ಬಜರಂಗ್ ಅವರು ನಾಲ್ಕು ವರ್ಷ ಸ್ಪರ್ಧಾತ್ಮಕ ಕುಸ್ತಿ ಸ್ಪರ್ಧೆಯಲ್ಲಿ ಪಾಲ್ಗೊಳ್ಳುವಂತಿಲ್ಲ. ಹೊರದೇಶದಲ್ಲಿ ಕೋಚಿಂಗ್ ಹೊಣೆ ವಹಿಸಿಕೊಳ್ಳುವಂತಿಲ್ಲ.

ಲೈಂಗಿಕ ಕಿರುಕುಳ ಆರೋಪ ಎದುರಿಸುತ್ತಿದ್ದ ಬ್ರಿಜ್‌ಭೂಷಣ್ ವಿರುದ್ಧ ಹೋರಾಟದ ನೇತೃತ್ವ ವಹಿಸಿದ್ದಕ್ಕೆ ತಮ್ಮ ವಿರುದ್ಧ ಈ ರೀತಿ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಬಜರಂಗ್ ದೂರಿದ್ದರು. ತಮ್ಮ ಮಾದರಿ ತೆಗೆದುಕೊಳ್ಳುವ ಸಂದರ್ಭದಲ್ಲಿ ನಾಡಾ ಅಧಿಕಾರಿಗಳು ಅವಧಿ ಮುಗಿದ (ಎಕ್ಸ್ಪೈರಿ) ಕಿಟ್ ತಂದಿದ್ದರು ಎಂದೂ ಅವರು ದೂರಿದ್ದರು. ಆದರೆ ಪರೀಕ್ಷೆಗೆ ಬಜರಂಗ್ ಅವರು ಮಾತ್ರದ ಮಾದರಿ ನೀಡಲು ನಿರಾಕರಿಸಿದ್ದು ಉದ್ದೇಶಪೂರ್ವಕವಾಗಿತ್ತು ಎಂದು ನಾಡಾ ಹೇಳಿತ್ತು. ತಮ್ಮ ಕರ್ತವ್ಯ ಮತ್ತು ಹೊಣೆಗಾರಿಕೆಯ ಕಡೆ ಅವರು ಅಗೌರವ ತೋರಿದ್ದರು ಎಂದೂ ಹೇಳಿತ್ತು.

ಬಿಜೆಪಿ ಸೇರಿದರೆ ಅಮಾನತು ವಾಪಸು: ಪೂನಿಯಾ ವ್ಯಂಗ್ಯ

ಬಜರಂಗ್ ಪೂನಿಯಾ

ನವದೆಹಲಿ (ಪಿಟಿಐ): 'ಇದು ಆಘಾತಕರ ಎನಿಸಿಲ್ಲ. ನನ್ನ ಮೇಲೆ ಅಮಾನತು ಹೇರಿರುವುದು ಸರ್ಕಾರದ ಸೇಡಿನ ಕ್ರಮ. ನಾನು ಬಿಜೆಪಿ ಸೇರಿದರೆ ಈ ಅಮಾನತು ತೆಗೆದುಹಾಕಲಾಗುತ್ತದೆ' ಎಂದು ಬಜರಂಗ್ ಪೂನಿಯಾ ವ್ಯಂಗ್ಯವಾಗಿ ಪ್ರತಿಕ್ರಿಯಿಸಿದ್ದಾರೆ.

'ಒಂದು ವರ್ಷದಿಂದ ವಿಚಾರಣೆ ನಡೆಯುತಿತ್ತು. ನಾಡಾಕ್ಕೆ ಮಾದರಿ ನೀಡಲು ನಾನು ನಿರಾಕರಿಸುವುದಿಲ್ಲ ಎಂದು ಹಿಂದೆಯೂ ಹೇಳಿದ್ದೇನೆ. ಡೋಪಿಂಗ್ ಪರೀಕ್ಷೆ ನಡೆಸಲು ಈ ಹಿಂದೆ ನನ್ನ ಮನೆಗೆ ಬಂದಾಗ (2023ರ ಡಿಸೆಂಬರ್‌ನಲ್ಲಿ) ಸಿಬ್ಬಂದಿ ಬಳಿ ಅವಧಿ ಮುಗಿದ ಕಿಟ್ ಇತ್ತು. ಈ ವಿಷಯವನ್ನು ಸಾಮಾಜಿಕ ಜಾಲತಾಣದಲ್ಲೂ ಪೋಸ್ಟ್ ಮಾಡಿದ್ದೆ' ಎಂದು ಬಜರಂಗ್ ಸುದ್ದಿಗಾರರಿಗೆ ತಿಳಿಸಿದರು.

ಹರಿಯಾಣ ವಿಧಾನಸಭೆ ಚುನಾವಣೆಗೆ ಮೊದಲು ಬಜರಂಗ್ ಅವರು ಮಹಿಳಾ ಕುಸ್ತಿಪಟು ವಿನೇಶ್ ಫೋಗಟ್ ಅವರೊಂದಿಗೆ ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆ ಆಗಿದ್ದರು. ಬಜರಂಗ್ ಅವರಿಗೆ ಅಖಿಲ ಭಾರತ ಕಿಸಾನ್ ಕಾಂಗ್ರೆಸ್ ನೇತೃತ್ವ ವಹಿಸಲಾಗಿತ್ತು.

ಬಿಜೆಪಿ ಸಂಸದರಾಗಿದ್ದ ಬ್ರಿಜ್ ಭೂಷಣ್ ವಿರುದ್ಧ ಪ್ರತಿಭಟನೆ ನಡೆಸಿದ್ದಕ್ಕೆ ಸರ್ಕಾರ ತಮ್ಮನ್ನು ಸದೆಬಡಿಯಲು ಯತ್ನಿಸುತ್ತಿದೆ ಎಂದು ಬಜರಂಗ್ ದೂರಿದರು.

'10–12 ವರ್ಷಗಳಿಂದ ನಾನು ವಿವಿಧ ಟೂರ್ನಿಗಳಲ್ಲಿ ಸ್ಪರ್ಧಿಸುತ್ತಿದ್ದೇನೆ. ಭಾರತ ತಂಡದ ಶಿಬಿರದಲ್ಲಿ ಇದ್ದೆ. ಆಗೆಲ್ಲಾ ನಾನು ಸ್ಯಾಂಪಲ್ ನೀಡಿದ್ದೇನೆ. ನಾವು ಹೇಳಿದಂತೆ ಕೇಳಿಕೊಂಡಿರಬೇಕೆಂಬುದು ಸರ್ಕಾರ ಉದ್ದೇಶ. ನಾನು ಬಿಜೆಪಿ ಸೇರಿದರೆ ನನ್ನೆಲ್ಲಾ ನಿಷೇಧ ತೆಗೆದುಹಾಕುತ್ತಾರೆ' ಎಂದು ಹೇಳಿದರು.

ಐಸಿಸಿ ಟೆಸ್ಟ್ ರ್‍ಯಾಂಕಿಂಗ್ ಅಗ್ರಸ್ಥಾನಕ್ಕೆ ಮರಳಿದ ಬೂಮ್ರಾ



ದುಬೈ(ಪಿಟಿಐ): ಭಾರತ ಕ್ರಿಕೆಟ್ ತಂಡದ ವೇಗಿ ಜಸ್‌ಪ್ರೀತ್ ಬೂಮ್ರಾ ಅವರು ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ ಟೆಸ್ಟ್ ಬೌಲರ್‌ಗಳ ರ್‍ಯಾಂಕಿಂಗ್‌ನಲ್ಲಿ ಅಗ್ರಸ್ಥಾನಕ್ಕೆ ಮರಳಿದ್ದಾರೆ. ಈ ಹಾದಿಯಲ್ಲಿ ಅವರು ದಕ್ಷಿಣ ಆಫ್ರಿಕಾದ ಕಗಿಸೊ ರಬಾಡ ಅವರನ್ನು ಹಿಂದಿಕ್ಕಿದ್ದಾರೆ.

ಈಚೆಗೆ ಪರ್ತ್‌ನಲ್ಲಿ ಆಸ್ಟ್ರೇಲಿಯಾ ಎದುರು ನಡೆದಿದ್ದ ಟೆಸ್ಟ್ ಪಂದ್ಯದಲ್ಲಿ ಅವರು ಭಾರತ ತಂಡದ ಹಂಗಾಮಿ ನಾಯಕರಾಗಿದ್ದರು. ಎರಡೂ ಇನಿಂಗ್ಸ್ ಸೇರಿ 8 ವಿಕೆಟ್ ಗಳಿಸಿದ್ದರು. ಭಾರತ ತಂಡವು 295 ರನ್‌ಗಳಿಂದ ಜಯಿಸಲು ಕಾರಣರಾಗಿದ್ದರು. ಇದರಿಂದಾಗಿ ಭಾರತ ತಂಡವು ಐದು ಟೆಸ್ಟ್‌ಗಳ ಸರಣಿಯಲ್ಲಿ 1–0 ಮುನ್ನಡೆ ಗಳಿಸಿತು.

ಈ ಪಂದ್ಯಕ್ಕೂ ಮುನ್ನ ಬೂಮ್ರಾ ಅವರು ರ್‍ಯಾಂಕಿಂಗ್ ಪಟ್ಟಿಯಲ್ಲಿ 3ನೇ ಸ್ಥಾನದಲ್ಲಿದ್ದರು. ಈಗ 883 ಅಂಕಗಳೊಂದಿಗೆ ಮೊದಲ ಸ್ಥಾನಕ್ಕೆ ಲಗ್ಗೆ ಇಟ್ಟಿದ್ದಾರೆ. ಕಗಿಸೊ ರಬಾಡ (872) ಮತ್ತು ಆಸ್ಟ್ರೇಲಿಯಾದ ಜೋಷ್ ಹ್ಯಾಜಲ್‌ವುಡ್ (860) ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನದಲ್ಲಿದ್ದಾರೆ. ಭಾರತದ ಮತ್ತೊಬ್ಬ ವೇಗಿ ಮೊಹಮ್ಮದ್ ಸಿರಾಜ್ ಅವರೂ 3 ಸ್ಥಾನ ಬಡ್ತಿ ಪಡೆದು, 25ನೇ ಸ್ಥಾನಕ್ಕೇರಿದ್ದಾರೆ.

ಬ್ಯಾಟಿಂಗ್ ವಿಭಾಗದಲ್ಲಿ ಯಶಸ್ವಿ ಜೈಸ್ವಾಲ್ ಅವರು 825 ಅಂಕಗಳೊಂದಿಗೆ 2ನೇ ಸ್ಥಾನಕ್ಕೇರಿದ್ದಾರೆ. ಪರ್ತ್ ಟೆಸ್ಟ್‌ನಲ್ಲಿ ಅವರು ಅಮೋಘ ಶತಕ (161 ರನ್) ಗಳಿಸಿದ್ದರು. ಇಂಗ್ಲೆಂಡ್ ಬ್ಯಾಟರ್ ಜೋ ರೂಟ್ (903) ಮೊದಲ ಸ್ಥಾನದಲ್ಲಿದ್ದಾರೆ.

ವಿಶ್ವ ಚಾಂಪಿಯನ್‌ಷಿಪ್: ಸಮಯದ ಒತ್ತಡಕ್ಕೆ ಸಿಲುಕಿದ ಲಿರೆನ್‌ಗೆ ಸೋಲು

ಗುಕೇಶ್‌ಗೆ ಮೊದಲ ಗೆಲುವು

ಗುಕೇಶ್ ಫಿಡೆ ವೆಬ್‌ಸೈಟ್ ಚಿತ್ರ

ಸಿಂಗಪುರ (ಪಿಟಿಐ): ಭಾರತದ ಗ್ರ್ಯಾಂಡ್ ಮಾಸ್ಟರ್ ಡಿ.ಗುಕೇಶ್ ವಿಶ್ವ ಚೆಸ್ ಚಾಂಪಿಯನ್‌ಷಿಪ್‌ನ ಫೈನಲ್‌ನಲ್ಲಿ ಹಾಲಿ ಚಾಂಪಿಯನ್ ಡಿಂಗ್ ಲಿರೆನ್ ವಿರುದ್ಧ ತಮ್ಮ ಮೊದಲ ಗೆಲುವು ದಾಖಲಿಸಿದರು. ಬುಧವಾರ ನಡೆದ ಫೈನಲ್‌ನ ಮೂರನೇ ಪಂದ್ಯದಲ್ಲಿ ಗುಕೇಶ್ ವಿರುದ್ಧ ಸಮಯದ ಒತ್ತಡಕ್ಕೆ ಸಿಲುಕಿ ಲಿರೆನ್ ಸೋಲನುಭವಿಸಿದರು.

ಈ ಪಂದ್ಯಕ್ಕೆ ಭಾರತದ ಆಟಗಾರ ಉತ್ತಮ ಸಿದ್ಧತೆ ನಡೆಸಿದ್ದು ಆಟದ ವೇಳೆ ವ್ಯಕ್ತವಾಯಿತು. ಅವರಿಗೆ ಅದರಿಂದ ಅನುಕೂಲವಾಯಿತು. ಕೊನೆಯ 7–8 ನಡೆಗಳಿಗೆ ಲಿರೆನ್ ಗಾಢ ಯೋಚನೆಗೆ ಬಿದ್ದು ಅದರಲ್ಲೇ ಅವರ ಅಮೂಲ್ಯ ಸಮಯ ಕಳೆದುಹೋಯಿತು.

ನಿಯಮದಂತೆ ಆಟಗಾರರು ಮೊದಲ 40 ನಡೆಗಳನ್ನು ನಿಗದಿತ ಎರಡು ಗಂಟೆಯೊಳಗೆ ಇರಿಸಬೇಕಾಗುತ್ತದೆ. ಆಗ ಪಂದ್ಯ 37 ನಡೆಗಳನ್ನು ಕಂಡಿತ್ತು. ಬಿಳಿ ಕಾಯಿಗಳಲ್ಲಿ ಆಡಿದ್ದ ಗುಕೇಶ್ ಬಳಿ ಇನ್ನೂ 9.29 ನಿಮಿಷ ಉಳಿದಿದ್ದವು. ಲಿರೆನ್ ಬಳಿ ಸಮಯ ಇರಲಿಲ್ಲ.

ಈ ಪಂದ್ಯದ ನಂತರ ಇಬ್ಬರೂ ತಲಾ 1.5 ಪಾಯಿಂಟ್ಸ್ ಗಳಿಸಿದ್ದಾರೆ. ಸೋಮವಾರ ನಡೆದ ಮೊದಲ ಪಂದ್ಯದಲ್ಲಿ ಲಿರೆನ್ ಜಯಗಳಿಸಿದ್ದು, ಮಂಗಳವಾರ ನಡೆದ ಎರಡನೇ ಪಂದ್ಯ ಡ್ರಾ ಆಗಿತ್ತು. ಗುರುವಾರ ಮೊದಲ ವಿಶ್ರಾಂತಿ ದಿನವಾಗಿದೆ. ಶುಕ್ರವಾರ ನಾಲ್ಕನೇ ಪಂದ್ಯದೊಡನೆ ಚಾಂಪಿಯನ್‌ಷಿಪ್ ಮುಂದುವರಿಯಲಿದೆ.

'ಖುಷಿಯಾಗಿದೆ. ಎರಡು ದಿನಗಳಿಂದ ನನ್ನ ಆಟದ ಬಗ್ಗೆ ಸಮಾಧಾನವಿತ್ತು. ಇಂದಿನ ನನ್ನ ಆಟ ಇನ್ನಷ್ಟು ಉತ್ತಮವಾಗಿತ್ತು. ಬೋರ್ಡ್ ಮುಂದೆ ಖುಷಿಯಾಗಿ ಕಳೆದೆ. ಎದುರಾಳಿಯ ವಿರುದ್ಧ ಪೂರ್ಣ ಮೇಲುಗೈ ಸಾಧಿಸಿದೆ. ಇದು ಹಿತಕರ ಅನುಭವ' ಎಂದು 18 ವರ್ಷ ವಯಸ್ಸಿನ ಗುಕೇಶ್ ಪಂದ್ಯದ ನಂತರ ಪತ್ರಿಕಾ ಗೋಷ್ಠಿಯಲ್ಲಿ ಪ್ರತಿಕ್ರಿಯಿಸಿದರು.

13ನೇ ನಡೆಯ ನಂತರ ಚೆನ್ನೈ ಆಟಗಾರನ ಬಳಿ ಒಂದು ಗಂಟೆಗೂ ಹೆಚ್ಚು ಸಮಯ ಉಳಿದಿತ್ತು. ಅಷ್ಟು ನಡೆಗಳಿಗೆ ಗುಕೇಶ್ ಕೇವಲ ನಾಲ್ಕು ನಿಮಿಷ ಬಳಸಿದ್ದರೆ, ಚೀನಾದ ಅನುಭವಿ ಒಂದು ಗಂಟೆ ಆರು ನಿಮಿಷ ತೆಗೆದುಕೊಂಡಿದ್ದರು.

ಮೊದಲ ಎರಡು ಗಂಟೆಗಳ ಒಳಗಿನ ನಡೆಗಳಿಗೆ 'ಇಂಕ್ರಿಮೆಂಟ್' (ಹೆಚ್ಚುವರಿ ಅವಧಿ) ಸಿಗುವುದಿಲ್ಲ. ಆದರೆ ನಂತರದ ಪ್ರತಿಯೊಂದು ನಡೆಗೆ ಈ ಅನುಕೂಲ ಇದೆ.

ಆಟ ಮಿಡ್ಲ್‌ಗೇಮ್ ಹಂತ ತಲಪುವ ಮೊದಲೇ 'ಕ್ವೀನ್'ಗಳು ಬೋರ್ಡ್‌ನಿಂದ ಹೊರಬಿದ್ದವು. ಮಧ್ಯಮ ಹಂತದ ಆಟದ ವೇಳೆ ಗುಕೇಶ್ ಬಳಿ ಹೆಚ್ಚುವರಿಯಾಗಿ 'ಬಿಷಪ್' ಉಳಿಯಿತು. ಇದಕ್ಕೆ ಬದಲು ಲಿರೆನ್ ಬಳಿ ಎರಡು ಕಾಲಾಳುಗಳು ಹೆಚ್ಚುವರಿಯಾಗಿದ್ದರೂ, ಅವರು ಹೆಚ್ಚೇನೂ ಮಾಡುವ ಸ್ಥಿತಿಯಲ್ಲಿರಲಿಲ್ಲ. ಸಮಯವೂ ಓಡುತಿತ್ತು. ಕೊನೆಯ 9 ನಡೆಗಳಿಗೆ ಅವರ ಬಳಿ ಉಳಿದಿದ್ದು ಕೇವಲ ಎರಡು ನಿಮಿಷಗಳಷ್ಟೇ.

ಕೊನೆಯ ಆರು ನಡೆಗಳಿಗೆ 10 ಸೆಕೆಂಡುಗಳಷ್ಟೇ ಉಳಿದಿದ್ದು 37ನೇ ನಡೆಯ ನಂತರ ಅವರ ಸಮಯ ಮುಗಿದುಹೋಯಿತು.

ಗುಕೇಶ್ ಅತಿ ಕಿರಿಯ ವಿಶ್ವ ಚಾಂಪಿಯನ್ ಆಗುವ ಪ್ರಯತ್ನದಲ್ಲಿದ್ದಾರೆ.

ಶಾಂತಾ ರಂಗಸ್ವಾಮಿ ಹೆಸರಿಡಲು ಆಗ್ರಹ

ಚಿನ್ನಸ್ವಾಮಿ ಅಂಗಳದ ಸ್ಟ್ಯಾಂಡ್‌ಗಳಿಗೆ ನಾಮಕರಣ: ಮಹಿಳಾ ಕ್ರಿಕೆಟಿಗರ ಕೂಗು

• ಗಿರೀಶ ದೊಡ್ಡಮನಿ

ಶಾಂತಾ ರಂಗಸ್ವಾಮಿ

ಬೆಂಗಳೂರು: ಉದ್ಯಾನನಗರಿಯಲ್ಲಿ ಮೊದಲ ಟೆಸ್ಟ್ ಕ್ರಿಕೆಟ್ ಪಂದ್ಯ ನಡೆದು 50 ವರ್ಷ ತುಂಬಿದ ಸಂದರ್ಭದಲ್ಲಿ ಚಿನ್ನಸ್ವಾಮಿ ಕ್ರೀಡಾಂಗಣದ ಸ್ಟ್ಯಾಂಡ್‌ಗಳಿಗೆ ರಾಜ್ಯದ ದಿಗ್ಗಜ ಕ್ರಿಕೆಟಿಗರ ನಾಮಕರಣ ಮಾಡಲು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ ಯೋಜಿಸಿದೆ. ಆದರೆ ರಾಜ್ಯ ಮತ್ತು ದೇಶದ ಕ್ರಿಕೆಟ್‌ಗೆ ಮಹತ್ವದ ಕೊಡುಗೆ ನೀಡಿರುವ ಮಹಿಳಾ ಕ್ರಿಕೆಟ್ ಆಟಗಾರ್ತಿ ಶಾಂತಾ ರಂಗಸ್ವಾಮಿ ಅವರ ಹೆಸರನ್ನೂ ಸ್ಟ್ಯಾಂಡ್‌ಗೆ ಇಡಲು ಪರಿಗಣಿಸಬೇಕು ಎಂಬ ಆಗ್ರಹ ವ್ಯಕ್ತವಾಗಿದೆ.

ಐದು ದಶಕಗಳ ಹಿಂದೆ ವೆಸ್ಟ್ ಇಂಡೀಸ್ ವಿರುದ್ಧ ನಡೆದಿದ್ದ ಟೆಸ್ಟ್ ಪಂದ್ಯದಲ್ಲಿ ಆಡಿದ್ದ ಭಾರತ ತಂಡದಲ್ಲಿ ಕರ್ನಾಟಕದ ಎರ್ರಪಳ್ಳಿ ಪ್ರಸನ್ನ, ಬಿ.ಎಸ್. ಚಂದ್ರಶೇಖರ್, ಜಿ.ಆರ್. ವಿಶ್ವನಾಥ್ ಮತ್ತು ಬ್ರಿಜೇಶ್ ಪಟೇಲ್ ಅವರೂ ಇದ್ದರು. ಅವರೆಲ್ಲರೂ ಸೇರಿದಂತೆ ಸುಮಾರು ಹತ್ತು ಮಂದಿ ದಿಗ್ಗಜರ ಹೆಸರುಗಳನ್ನು ವಿವಿಧ ಸ್ಟ್ಯಾಂಡ್‌ಗಳಿಗೆ ನಾಮಕರಣ ಮಾಡಲು ಕೆಎಸ್‌ಸಿಎ ಚಿಂತನೆ ನಡೆಸಿದೆ. ಆದರೆ ಈ ಎಲ್ಲ ಮಹನೀಯರಷ್ಟೇ ಸಾಧನೆಯನ್ನು ಶಾಂತಾ ಅವರು ಮಾಡಿದ್ದಾರೆ. ಅವರಿಗೂ ಗೌರವ ಸಲ್ಲಬೇಕು ಎಂದು ಕೆಲವು ಮಹಿಳಾ ಕ್ರಿಕೆಟಿಗರು ಒತ್ತಾಯಿಸಿದ್ದಾರೆ.

'ಶಾಂತಾ ಅವರು ಭಾರತ ಮಹಿಳಾ ಕ್ರಿಕೆಟ್ ತಂಡದ ಪ್ರಥಮ ನಾಯಕಿಯಾಗಿದ್ದರು.

ಹೆಣ್ಣುಮಕ್ಕಳಿಗೆ ಕ್ರಿಕೆಟ್ ಆಡಲು ಯಾವುದೇ ಸೌಲಭ್ಯ, ಅವಕಾಶಗಳಿಲ್ಲದ ಕಾಲದಲ್ಲಿಯೇ ಶಾಂತಾ ಅವರು ಅಂತರರಾಷ್ಟ್ರೀಯಮಟ್ಟದಲ್ಲಿ ಹೆಸರು ಮಾಡಿದ್ದರು. ಆಟಗಾರ್ತಿಯಾಗಷ್ಟೇ ಅಲ್ಲ. ಆಡಳಿತದಲ್ಲಿಯೂ ಅವರು ಹಲವಾರು ಉತ್ತಮ ಕಾಣಿಕೆಗಳನ್ನು ನೀಡಿದ್ದಾರೆ. ದೇಶದ ಮಹಿಳಾ ಕ್ರಿಕೆಟ್ ಬೆಳವಣಿಗೆಗೆ ಶ್ರಮಿಸಿದ್ದಾರೆ. ಅಂತಹವರನ್ನು ಕೆಎಸ್‌ಸಿಎ ಮರೆಯಬಾರದು' ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ಮಾಜಿ ಆಟಗಾರ್ತಿಯೊಬ್ಬರು 'ಪ್ರಜಾವಾಣಿ'ಯೊಂದಿಗೆ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು.

ಶಾಂತಾ ಅವರು 1976 ರಿಂದ 1991ರವರೆಗೆ ಭಾರತ ತಂಡದಲ್ಲಿ ಆಡಿದ್ದರು. 16 ಟೆಸ್ಟ್‌ಗಳಲ್ಲಿ 750 ರನ್ ಗಳಿಸಿದ್ದರು. ಅದರಲ್ಲಿ ಒಂದು ಶತಕ ಮತ್ತು 6 ಅರ್ಧಶತಕಗಳು ಇವೆ. 19 ಅಂತರರಾಷ್ಟ್ರೀಯ ಏಕದಿನ ಪಂದ್ಯಗಳನ್ನು ಆಡಿ 267 ರನ್ ಗಳಿಸಿದ್ದಾರೆ. ಅದರಲ್ಲಿ ಒಂದು ಅರ್ಧಶತಕ ಇದೆ. ಟೆಸ್ಟ್ ನಲ್ಲಿ 21 ಮತ್ತು ಏಕದಿನ ಮಾದರಿಯಲ್ಲಿ 12 ವಿಕೆಟ್‌ಗಳನ್ನೂ ಗಳಿಸಿದ್ದರು.

ಭಾರತದ ಬೇರೆ ಬೇರೆ ಕಡೆ ಮಹಿಳಾ ಕ್ರಿಕೆಟಿಗರ ಹೆಸರುಗಳನ್ನು ಸ್ಟ್ಯಾಂಡ್‌ಗಳಿಗೆ ಇಡಲಾಗಿದೆ. ದೆಹಲಿಯ ಫಿರೋಜ್ ಶಾ ಕೋಟ್ಲಾದಲ್ಲಿ ಅಂಜುಂ ಚೋಪ್ರಾ, ಇಂದೋರಿನ ಹೋಳ್ಕರ್ ಕ್ರೀಡಾಂಗಣದಲ್ಲಿ ಸಂಧ್ಯಾ ಅಗರವಾಲ್, ಕೋಲ್ಕತ್ತದ ಈಡನ್ ಗಾರ್ಡನ್‌ನಲ್ಲಿ ಜೂಲನ್ ಗೋಸ್ವಾಮಿ ಅವರ ಹೆಸರು ಇಡಲಾಗುತ್ತಿದೆ.

ಈ ಸಂಪ್ರದಾಯವು ಬೇರೆ ದೇಶಗಳಲ್ಲಿ ಮೊದಲಿನಿಂದಲೂ ಇದೆ. ಆಯಾ ದೇಶಗಳ ಪ್ರಮುಖ ಕ್ರೀಡಾಂಗಣಗಳ ಸ್ಟ್ಯಾಂಡ್‌ಗಳಲ್ಲಿ ಮಹಿಳಾ ಕ್ರಿಕೆಟಿಗರ ನಾಮಕರಣ ಮಾಡಲಾಗಿದೆ. ಆಸ್ಟ್ರೇಲಿಯಾದ ಕ್ಯಾರೆನ್ ರಾಲ್ಟನ್ (ಅಡಿಲೇಡ್ ಓವಲ್), ಬೆಟ್ಟಿ ಕುತ್‌ಬರ್ಟ್ (ನಾರ್ತ್ ಸಿಡ್ನಿ ಓವೆಲ್), ಇಂಗ್ಲೆಂಡ್‌ನ ರಚೆಲ್ ಹೆಯೋಯಿ (ಫ್ಲಿಂಟ್ ಕೌಂಟಿ ಗ್ರೌಂಡ್, ಡರ್ಬಿ), ಕ್ಲೇರ್ ಟೇಲರ್ (ಚೆಸ್ಟರ್ ಲಿ ಸ್ಟ್ರೀಟ್), ನ್ಯೂಜಿಲೆಂಡ್ ಡೆಬೆ ಹಾಕ್ಲಿ (ಕ್ರೈಸ್ಟ್‌ಚರ್ಚ್, ಹಗ್ಲೆ ಓವೆಲ್), ಪಾಕಿಸ್ತಾನದ ಶೈಜಾ ಖಾನ್ (ಕರಾಚಿಯ ನ್ಯಾಷನಲ್ ಸ್ಟೇಡಿಯಂ), ದಕ್ಷಿಣ ಆಫ್ರಿಕಾದ ಮಿಗ್ನಾನ್ ಡು ಪ್ರೀಜ್ ಸ್ಯೂಟ್ (ಸೆಂಚುರಿಯನ್ ಪಾರ್ಕ್), ಶ್ರೀಲಂಕಾದ ಶ್ರೀಪಾಲಿ ವೀರಕ್ಕೊಡಿ (ಆರ್. ಪ್ರೇಮದಾಸ ಕ್ರೀಡಾಂಗಣ), ವೆಸ್ಟ್ ಇಂಡೀಸ್‌ನ ಸ್ಟೆಫಾನಿ ಪವಾರ್ (ಕಿಂಗ್‌ಸ್ಟನ್ , ಸಬಿನಾ ಪಾರ್ಕ್) ಅವರಿಗೆ ಗೌರವ ನೀಡಲಾಗಿದೆ.

ಸಿಕ್ಸರ್ ಹೊಡೆದ ಸ್ಟ್ಯಾಂಡ್‌ಗೇ ಪರಿಗಣಿಸಿ: ಜಾಹ್ನವಿ

ಚಿನ್ನಸ್ವಾಮಿ ಕ್ರೀಡಾಂಗಣದ ಸ್ಟ್ಯಾಂಡ್‌ಗಳಿಗೆ ದಿಗ್ಗಜ ಕ್ರಿಕೆಟಿಗರ ಹೆಸರಿಡುವುದು ಸ್ವಾಗತಾರ್ಹ. ಆದರೆ ಮಹಿಳಾ ಕ್ರಿಕೆಟ್‌ನಲ್ಲಿ ಹಲವಾರು ಪ್ರಥಮ ಸಾಧನೆಗಳನ್ನು ದಾಖಲಿಸಿರುವ ಶಾಂತಾ ರಂಗಸ್ವಾಮಿ ಅವರ ಹೆಸರು ಪರಿಗಣಸದೇ ಇರುವುದು ಸರಿಯಲ್ಲ. ಶಾಂತಾ ಅವರು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದಿದ್ದ ಪಂದ್ಯವೊಂದರಲ್ಲಿ ಮೊದಲ ಬಾರಿ ಸಿಕ್ಸರ್ ಹೊಡೆದ ಆ ದೃಶ್ಯವನ್ನು ನಾನಿನ್ನೂ ಮರೆತಿಲ್ಲ. ಆ ಚೆಂಡು ಮಿಡ್‌ವಿಕೆಟ್ ಮೇಲಿಂದ ಹೋಗಿ ಬಿದ್ದ ಆ ಸ್ಟ್ಯಾಂಡ್‌ಗೇ ಅವರ ಹೆಸರಿಟ್ಟರೆ ತುಂಬಾ ಅರ್ಥಪೂರ್ಣವಾಗಿರುತ್ತದೆ. ಮಹಿಳಾ ಕ್ರಿಕೆಟ್‌ಗೆ ಯಾವುದೇ ಸೌಲಭ್ಯಗಳು, ಮಾನ್ಯತೆಗಳು ಇಲ್ಲದ ಕಾಲದಲ್ಲಿ ಶಾಂತಾ ಅವರು ಆಡಿದರು. ಅವರ ಸ್ಫೂರ್ತಿಯಿಂದಾಗಿ ಹಲವಾರು ಮಹಿಳಾ ಕ್ರಿಕೆಟಿಗರು ಬೆಳೆದರು. ದೇಶದ ಮಹಿಳಾ ಕ್ರಿಕೆಟ್ ಬೆಳವಣಿಗೆಯಲ್ಲಿ ಅವರ ಕೊಡುಗೆ ಅಮೂಲ್ಯವಾದದ್ದು.

ಜಾಹ್ನವಿ ದೇಸಾಯಿ
ಮಾಜಿ ಕ್ರಿಕೆಟ್ ಆಟಗಾರ್ತಿ

ಸೈಯದ್ ಮುಷ್ತಾಕ್ ಅಲಿ ಟಿ20: ಮಿಂಚಿದ ದೇಸಾಯಿ

ಸೌರಾಷ್ಟ್ರಕ್ಕೆ ಮಣಿದ ಕರ್ನಾಟಕ

ಪ್ರಜಾವಾಣಿ ವಾರ್ತೆ

ಇಂದೋರ್: ಹರ್ವಿಕ್ ದೇಸಾಯಿ ಅವರ ಅಮೋಘ ಬ್ಯಾಟಿಂಗ್ ಬಲದಿಂದ ಸೌರಾಷ್ಟ್ರ ತಂಡವು ಸೈಯದ್ ಮುಷ್ತಾಕ್ ಅಲಿ ಟಿ20 ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಕರ್ನಾಟಕ ತಂಡವನ್ನು ಸೋಲಿಸಿತು.

ಹೋಳ್ಕರ್ ಮೈದಾನದಲ್ಲಿ ಬುಧವಾರ ನಡೆದ ಬಿ ಗುಂಪಿನ ಪಂದ್ಯದಲ್ಲಿ ಸೌರಾಷ್ಟ್ರ 5 ವಿಕೆಟ್‌ಗಳಿಂದ ಗೆದ್ದಿತು. ಆದರೆ ಕರ್ನಾಟಕ ತಂಡಕ್ಕೆ ಟೂರ್ನಿಯಲ್ಲಿ ಇದು ಎರಡನೇ ಸೋಲಾಗಿದೆ. ಅದರಿಂದಾಗಿ ಅಂಕಪಟ್ಟಿಯಲ್ಲಿ 6ನೇ ಸ್ಥಾನಕ್ಕೆ ಕುಸಿದಿದೆ.

ಟಾಸ್ ಗೆದ್ದ ಸೌರಾಷ್ಟ್ರ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ನಾಯಕ ಜಯದೇವ್ ಉನದ್ಕತ್ (17ಕ್ಕೆ2) ಆರಂಭದಲ್ಲಿಯೇ ಪೆಟ್ಟು ಕೊಟ್ಟರು. ಇದರಿಂದಾಗಿ ಕರ್ನಾಟಕ ತಂಡವು ಕೇವಲ 3.3 ಓವರ್‌ಗಳಲ್ಲಿ 16 ರನ್‌ಗಳಿಗೆ 3 ವಿಕೆಟ್ ಕಳೆದುಕೊಂಡಿತು. ಈ ಹಂತದಲ್ಲಿ ಕೃಷ್ಣನ್ ಶ್ರೀಜಿತ್ (31; 27ಎ, 4X3, 6X1), ಶ್ರೇಯಸ್ ಗೋಪಾಲ್ (36; 22ಎ, 4X4, 6X2) ಹಾಗೂ ಶುಭಾಂಗ್ ಹೆಗ್ಡೆ (43; 22ಎ, 4X2, 6X3) ಅವರ ಆಟದಿಂದಾಗಿ ತಂಡವು 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 171 ರನ್‌ಗಳನ್ನು ಗಳಿಸಿತು.

ಈ ಸ್ಪರ್ಧಾತ್ಮಕ ಮೊತ್ತದ ಗುರಿಯನ್ನು ಮುಟ್ಟದಂತೆ ಸೌರಾಷ್ಟ್ರಕ್ಕೆ ತಡೆಯೊಡ್ಡುವಲ್ಲಿ ಕರ್ನಾಟಕದ ಬೌಲರ್‌ಗಳು ಯಶಸ್ವಿಯಾಗಲಿಲ್ಲ. ಆರಂಭಿಕ ಬ್ಯಾಟರ್ ಹರ್ವಿಕ್ ದೇಸಾಯಿ (60; 43ಎ, 4X6, 6X2) ಅವರ ನೆರವಿನಿಂದ ತಂಡವು 18.1 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 173 ರನ್ ಗಳಿಸಿತು.

ಈಚೆಗೆ ದಕ್ಷಿಣ ಆಫ್ರಿಕಾ ಎದುರಿನ ಸರಣಿಯಲ್ಲಿ ಆಡಿದ್ದ ಭಾರತ ತಂಡದೊಂದಿಗೆ ಪ್ರವಾಸ ಮಾಡಿದ್ದ ವೈಶಾಖ ವಿಜಯಕುಮಾರ್ ಅವರು ಈ ಪಂದ್ಯದಲ್ಲಿಯೂ ದುಬಾರಿಯಾದರು. ಅವರು 12.90ರ ಎಕಾನಮಿಯಲ್ಲಿ ರನ್ ಬಿಟ್ಟುಕೊಟ್ಟರು. ಶ್ರೇಯಸ್ ಗೋಪಾಲ್ ಅವರು 5.80ರ ಸರಾಸರಿಯಲ್ಲಿ ಬೌಲಿಂಗ್ ಮಾಡಿದರು. ಈ ಪಂದ್ಯದಲ್ಲಿ ವಿ.ಕೌಶಿಕ್ ಮತ್ತು ಮನೀಷ್ ಪಾಂಡೆ ಅವರಿಗೆ ವಿಶ್ರಾಂತಿ ನೀಡಲಾಗಿತ್ತು.

ಸಂಕ್ಷಿಪ್ತ ಸ್ಕೋರು: ಕರ್ನಾಟಕ: 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 171 (ಕೆ.ಎಲ್. ಶ್ರೀಜಿತ್ 31, ಶ್ರೇಯಸ್ ಗೋಪಾಲ್ 36, ಶುಭಾಂಗ್ ಹೆಗ್ಡೆ 43, ಮನೋಜ್ ಭಾಂಡಗೆ 24, ಜಯದೇವ್ ಉನದ್ಕತ್ 17ಕ್ಕೆ2, ಚಿರಾಗ್ ಜಾನಿ 38ಕ್ಕೆ2, ಪ್ರೇರಕ್ ಮಂಕಡ್ 29ಕ್ಕೆ2) ಸೌರಾಷ್ಟ್ರ: 18.1 ಓವರ್‌ಗಳಲ್ಲಿ 5ಕ್ಕೆ173 (ಹರ್ವಿಕ್ ದೇಸಾಯಿ 60, ಪ್ರೇರಕ್ ಮಂಕಡ್ 25, ವಿಶ್ವರಾಜ್ ಜಡೇಜ ಔಟಾಗದೆ 18, ಜಯ್ ಗೋಹಿಲ್ ಔಟಾಗದೆ 15, ವಿದ್ಯಾಧರ್ ಪಾಟೀಲ 39ಕ್ಕೆ2) ಫಲಿತಾಂಶ: ಸೌರಾಷ್ಟ್ರ ತಂಡಕ್ಕೆ 5 ವಿಕೆಟ್‌ಗಳ ಜಯ. ಪಂದ್ಯಶ್ರೇಷ್ಠ: ಹರ್ವಿಕ್ ದೇಸಾಯಿ.

ಊರ್ವಿಲ್ ಪಟೇಲ್ ಶರವೇಗದ ಶತಕ

ಗುಜರಾತ್ ತಂಡದ ವಿಕೆಟ್‌ಕೀಪರ್–ಬ್ಯಾಟರ್ ಊರ್ವಿಲ್ ಪಟೇಲ್ 28 ಎಸೆತಗಳಲ್ಲಿ ಶತಕ ಹೊಡೆದರು. ಸೈಯದ್ ಮುಷ್ತಾಕ್ ಅಲಿ ಟಿ20 ಟೂರ್ನಿಯಲ್ಲಿ ವೇಗದ ಶತಕ ದಾಖಲಿಸಿದ ಆಟಗಾರನಾದರು.

ಬುಧವಾರ ನಡೆದ ಬಿ ಗುಂಪಿನ ಪಂದ್ಯದಲ್ಲಿ ತ್ರಿಪುರ ವಿರುದ್ಧ ಪಟೇಲ್ (ಅಜೇಯ 113; 35ಎ, 4X7, 6X12) ಈ ಸಾಧನೆ ಮಾಡಿದರು. ಅವರ ಆಟದಿಂದಾಗಿ ತಂಡವು 8 ವಿಕೆಟ್‌ಗಳಿಂದ ಜಯಿಸಿತು. ಬರೋಬ್ಬರಿ ಒಂದು ವರ್ಷದ ಹಿಂದೆ ಅವರು ಲಿಸ್ಟ್ ಎ ಕ್ರಿಕೆಟ್‌ನಲ್ಲಿ ಎರಡನೇ ಅತಿ ವೇಗದ ಶತಕವನ್ನು ದಾಖಲಿಸಿದ್ದರು. 26 ವರ್ಷದ ಊರ್ವಿಲ್ ಅವರು ಭಾರತ ತಂಡದ ವಿಕೆಟ್‌ಕೀಪರ್ ರಿಷಭ್ ಪಂತ್ ಅವರ ದಾಖಲೆಯನ್ನು ಮೀರಿದರು. 2018ರ ಟೂರ್ನಿಯಲ್ಲಿ ಪಂತ್ ದೆಹಲಿ ತಂಡದ ಪರ ಹಿಮಾಚಲಪ್ರದೇಶ ವಿರುದ್ಧ 32 ಎಸೆತಗಳಲ್ಲಿ ಶತಕ ದಾಖಲಿಸಿದ್ದರು.

ಸಂಕ್ಷಿಪ್ತ ಸ್ಕೋರು: ತ್ರಿಪುರ: 20 ಓವರ್‌ಗಳಲ್ಲಿ 8ಕ್ಕೆ155 (ಶ್ರೀಧಾಮ ಪಾಲ್ 57, ಶರತ್ ಶ್ರೀನಿವಾಸ್ 29, ಚಿಂತನ್ ಗಜಾ 18ಕ್ಕೆ2, ನಾಗವಸಾವಲಾ 35ಕ್ಕೆ3) ಗುಜರಾತ್:10.2 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 156 (ಆರ್ಯ ದೇಸಾಯಿ 38, ಊರ್ವಿಲ್ ಪಟೇಲ್ ಔಟಾಗದೆ 113, ಮಣಿಶಂಕರ್ ಮುರಾಸಿಂಗ್ 41ಕ್ಕೆ1) ಫಲಿತಾಂಶ: ಗುಜರಾತ್ ತಂಡಕ್ಕೆ 8 ವಿಕೆಟ್‌ಗಳ ಜಯ. ಪಂದ್ಯಶ್ರೇಷ್ಠ: ಊರ್ವಿಲ್ ಪಟೇಲ್.

ಹೇ ಬಾಲ್ ಟೂರ್ನಿ ಮಯಂಕ್ ಕಾರ್ತಿಕ್, ನತಾಶಾಗೆ ಜಯ

ಬೆಂಗಳೂರು: ಆತಿಥೇಯ ಭಾರತದ ಮಯಂಕ್ ಕಾರ್ತಿಕ್ ಮತ್ತು ನತಾಶಾ ಚೇತನ್ ಅವರು ಇಲ್ಲಿ ನಡೆಯುತ್ತಿರುವ ಪ್ರಥಮ ವಿಶ್ವ ಜೂನಿಯರ್ ಹೇ ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಕ್ರಮವಾಗಿ ಬಾಲಕ ಮತ್ತು ಬಾಲಕಿಯರ ವಿಭಾಗದಲ್ಲಿ ಮುನ್ನಡೆ ಸಾಧಿಸಿತು.

ಕರ್ನಾಟಕ ರಾಜ್ಯ ಬಿಲಿಯರ್ಡ್ಸ್ ಸಂಸ್ಥೆ (ಕೆಎಸ್‌ಬಿಎ) ಯಲ್ಲಿ ನಡೆಯುತ್ತಿರುವ ಟೂರ್ನಿಯ ಬಾಲಕರ ಡಿ ಗುಂಪಿನಲ್ಲಿ ಮಯಂಕ್ 7–4ರಿಂದ ದಕ್ಷಿಣ ಆಫ್ರಿಕಾದ ಇಸೇತು ದೈಯುಮ್ನಿ ವಿರುದ್ಧ ಜಯಿಸಿದರು. ಇನ್ನೊಂದು ಪಂದ್ಯದಲ್ಲಿ ಮಯಂಕ್ 7–0ಯಿಂದ ನಾರ್ವೆಯ ಬೆಂಜಮಿನ್ ಅರಾಲ್ಡೆನ್ ವಿರುದ್ಧ ಹಾಗೂ ಮತ್ತೊಂದು ಪಂದ್ಯದಲ್ಲಿ ಮಯಂಕ್ 7–0ಯಿಂದ ಮೆಕ್ಸಿಕೊದ ಲೂಯಿಸ್ ಒಕೆಂಪೊ ವಿರುದ್ಧ ಗೆದ್ದರು.

ಬಾಲಕರ ಜಿ ಗುಂಪಿನಲ್ಲಿ ಇಂಗ್ಲೆಂಡ್‌ನ ಆಷ್ಟನ್ ರಿಡ್ 7–3ರಿಂದ ಭಾರತದ ಲಕ್ಷ್ಮೀನಾರಾಯಣ ಶೇಷಾದ್ರಿ ವಿರುದ್ಧ ಗೆದ್ದರು. ಉಕ್ರೇನ್‌ನ ಇವಾನ್ ರುಡೆಂಕೊ 7–3ರಿಂದ ಶೇಷಾದ್ರಿ ಅವರನ್ನು ಸೋಲಿಸಿದರು. ಬಾಲಕಿಯರ ಬಿ ಗುಂಪಿನಲ್ಲಿ ಭಾರತದ ನತಾಶಾ 6–0 ಯಿಂದ ಕೆನಡಾದ ದೆಸಿರಿ ಪೊಲಾರ್ಡ್ ವಿರುದ್ಧ ಹಾಗೂ ಮತ್ತೊಂದು ಪಂದ್ಯದಲ್ಲಿ ನತಾಶಾ 6–0ಯಿಂದ ಇರಾನಿನ ಫರ್ಯಾಲ್ ತಹೆರಿ ವಿರುದ್ಧ ಜಯಿಸಿದರು.

ಚೆಟ್ರಿ ಕಾಲ್ಚಳಕ: ಅಗ್ರಸ್ಥಾನಕ್ಕೆ ಬಿಎಫ್‌ಸಿ

ಬಿಎಫ್‌ಸಿ ಆಟಗಾರರ ಸಂಭ್ರಮ

ಕೋಲ್ಕತ್ತ (ಪಿಟಿಐ): ನಾಯಕ ಸುನಿಲ್ ಚೆಟ್ರಿ ಅವರ ಕಾಲ್ಚಳಕದ ಬಲದಿಂದ ಬೆಂಗಳೂರು ಫುಟ್‌ಬಾಲ್ ಕ್ಲಬ್ ತಂಡವು ಇಂಡಿಯನ್ ಸೂಪರ್ ಲೀಗ್ ಟೂರ್ನಿಯ ಪಂದ್ಯದಲ್ಲಿ ಜಯಿಸಿತು.

ಬುಧವಾರ ಇಲ್ಲಿ ನಡೆದ ಪಂದ್ಯದಲ್ಲಿ ಬಿಎಫ್‌ಸಿಯು 2–1ರಿಂದ ಮೊಹಮ್ಮಡನ್ ಸ್ಪೋರ್ಟಿಂಗ್ ಕ್ಲಬ್ ಎದುರು ಜಯಿಸಿತು.

ಮೊದಲಾರ್ಧದಲ್ಲಿ ಮೊಹಮ್ಮಡನ್ ಸ್ಪೋರ್ಟಿಂಗ್ 1–0 ಮುನ್ನಡೆಯಲ್ಲಿತ್ತು. 8ನೇ ನಿಮಿಷದಲ್ಲಿಯೇ ಲಾಬಿ ಮಂಝೋಕಿ ಗೋಲು ಗಳಿಸಿದ್ದರು.

ದ್ವಿತಿಯಾರ್ಧದಲ್ಲಿ ಬಹುತೇಕ ಸಮಯದವರೆಗೂ ಬೆಂಗಳೂರು ತಂಡಕ್ಕೆ ಗೋಲು ಹೊಡೆಯಲು ಆತಿಥೇಯರು ಬಿಟ್ಟಿರಲಿಲ್ಲ. ಆದರೆ 82ನೇ ನಿಮಿಷದಲ್ಲಿ ಲಭಿಸಿದ ಪೆನಾಲ್ಟಿ ಅವಕಾಶದಲ್ಲಿ ಚೆಟ್ರಿ ಗೋಲು ಹೊಡೆದರು. ಇದರಿಂದಾಗಿ 1–1ರ ಸಮಬಲ ಸಾಧ್ಯವಾಯಿತು.

ಅದೃಷ್ಟ ಬಿಎಫ್‌ಸಿಯೊಂದಿಗೆ ಇರುವುದು ಮತ್ತೊಮ್ಮೆ ಸಾಬೀತಾಯಿತು. ಮೊಹಮ್ಮಡನ್ ತಂಡದ ಫ್ಲಾರೆಂಟ್ ಒಗೀರ್ (90+9ನಿ) ಗೋಲಿನ ಉಡುಗೊರೆ ನೀಡಿದರು. ಇದರಿಂದಾಗಿ ಬೆಂಗಳೂರು ಜಯವು ಸುಲಭವಾಯಿತು.

ಈ ಜಯದೊಂದಿಗೆ ಬೆಂಗಳೂರು ತಂಡವು ಅಂಕಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿತು. 9 ಪಂದ್ಯಗಳನ್ನು ಆಡಿರುವ ತಂಡವು 6ರಲ್ಲಿ ಗೆದ್ದಿದೆ. ಒಂದು ಸೋತು ಎರಡರಲ್ಲಿ ಡ್ರಾ ಮಾಡಿಕೊಂಡಿದೆ. ಇದರಿಂದಾಗಿ ಒಟ್ಟು 20 ಅಂಕಗಳಿಸಿದೆ.

ಮೊಹಮ್ಮಡನ್ ತಂಡದ ಕಾಸಿಮೊವ್, ಇರ್ಷಾದ್ ಹಾಗೂ ಮಂಝೋಕಿ ಹಳದಿಕಾರ್ಡ್ ದರ್ಶನ ಮಾಡಿದರು. ಬಿಎಫ್‌ಸಿಯ ಎ. ನಾಗ್ವೆರಾ ಮತ್ತು ರಾಹುಲ್ ಭೆಕೆ ಅವರಿಗೂ ರೆಫರಿ ಹಳದಿ ಕಾರ್ಡ್ ದರ್ಶನ ಪಡೆದರು.

ಸಂಕ್ಷಿಪ್ತ ಸುದ್ದಿ

ಏಷ್ಯಾ ಜೂನಿಯರ್ ಹಾಕಿ: ಭಾರತಕ್ಕೆ ಭರ್ಜರಿ ಗೆಲುವು

ಮಸ್ಕತ್ (ಒಮಾನ್): ಭಾರತ ತಂಡವು, ಬುಧವಾರ ಪುರುಷರ ಜೂನಿಯರ್ ಏಷ್ಯಾ ಕಪ್ ಹಾಕಿ ಟೂರ್ನಿಯಲ್ಲಿ ಥಾಯ್ಲೆಂಡ್ ತಂಡವನ್ನು 11–0 ಗೋಲುಗಳಿಂದ ಸದೆಬಡಿದು ತನ್ನ ಅಭಿಯಾನವನ್ನು ಆರಂಭಿಸಿತು.

ಅರಿಜಿತ್ ಸಿಂಗ್ ಹುಂಡಲ್ (2, 24ನೇ ನಿಮಿಷ), ಸೌರಭ್ ಆನಂದ್ ಕುಶ್ವಾಹ (19, 52ನೇ ನಿಮಿಷ), ಗುರುಜೋತ್ ಸಿಂಗ್ (18, 45ನೇ ನಿಮಿಷ) ತಲಾ ಎರಡು ಗೋಲುಗಳನ್ನು ಗಳಿಸಿದರು. ಅರ್ಷದೀಪ್ ಸಿಂಗ್ (8ನೇ ನಿಮಿಷ), ಶಾರದಾನಂದ ತಿವಾರಿ (10ನೇ), ದಿಲರಾಜ್ ಸಿಂಗ್ (21ನೇ ನಿಮಿಷ), ರೋಹಿತ್ (29ನೇ ನಿಮಿಷ) ಮತ್ತು ಮುಕೇಶ್ ಟೊಪ್ಪೊ (59ನೇ ನಿಮಿಷ) ಅವರು ತಲಾ ಒಂದೊಂದು ಗೋಲುಗಳನ್ನು ತಂದಿತ್ತರು.

ಹಾಕಿ: ಲಿಯೊಗೆ ಜಯ

ಬೆಂಗಳೂರು: ಲಿಯೊ ಸ್ಪೋರ್ಟ್ಸ್ ಕ್ಲಬ್ ತಂಡವು ಕೆಎಸ್‌ಎಚ್‌ಎ 'ಸಿ' ಡಿವಿಷನ್ ಹಾಕಿ ಲೀಗ್ ಚಾಂಪಿಯನ್‌ಷಿಪ್ ಪಂದ್ಯದಲ್ಲಿ ಜಯಿಸಿತು. ಬುಧವಾರ ನಡೆದ ಪಂದ್ಯದಲ್ಲಿ ಲಿಯೊ ತಂಡವು 3–2ರಿಂದ ಬಾಷ್ ಸ್ಪೋರ್ಟ್ಸ್ ಕ್ಲಬ್ ವಿರುದ್ಧ ಜಯಿಸಿತು. ಲಿಯೊ ತಂಡದ ಸಾದಿಕ್ (15ನೇ ನಿಮಿಷ), ಪಶುಪತಿ (17ನಿ) ಮತ್ತು ಮೈಕೆಲ್ (22ನಿ), ಬಾಷ್ ತಂಡದ ಮನೋಜ್ (7ನಿ), ಕಿರಣಕುಮಾರ್ (28ನಿ) ಗೋಲು ಗಳಿಸಿದರು. ಗುರುವಾರ ಮಧ್ಯಾಹ್ನ 1.30ಕ್ಕೆ ಆರಂಭವಾಗುವ ಪಂದ್ಯದಲ್ಲಿ ಐಐಎಸ್‌ಸಿ ಜಿಮ್ಖಾನಾ ಕ್ಲಬ್ ಮತ್ತು ಜರ್ಮನೈಟ್ ಹಾಕಿ ಅಕಾಡೆಮಿ ಮುಖಾಮುಖಿಯಾಗಲಿವೆ.

ನಿಧನ ವಾರ್ತೆ

ಗೋಪಾಲ್ ಗಾಗ್ಡೆ

ಬೆಂಗಳೂರು: ಬಿಇಎಂಎಲ್ ಸ್ಪೋರ್ಟ್ಸ್ ಕ್ಲಬ್ ಮತ್ತು ಕೆಜಿಎಫ್ ಹಾಕಿ ಆಟಗಾರ ಗೋಪಾಲ್ ಗಾಗ್ಡೆ (53) ಬುಧವಾರ ಅನಾರೋಗ್ಯದಿಂದಾಗಿ ನಿಧನರಾದರು.

ಅವರು ತಮ್ಮ ವಿದ್ಯಾರ್ಥಿ ದೆಸೆಯಲ್ಲಿ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯ ತಂಡವನ್ನು ರಾಷ್ಟ್ರೀಯ ಅಂತರ ವಿವಿ ಟೂರ್ನಿಯಲ್ಲಿ ಪ್ರತಿನಿಧಿಸಿದ್ದರು. ಮೃತರ ಅಂತಿಮ ಸಂಸ್ಕಾರವು ಅವರ ತವರೂರು ಗದಗ–ಬೆಟಗೇರಿಯಲ್ಲಿ ಗುರುವಾರ ನೆರವೇರಲಿದೆ ಎಂದು ಕರ್ನಾಟಕ ರಾಜ್ಯ ಹಾಕಿ ಸಂಸ್ಥೆ (ಕೆಎಸ್‌ಎಚ್‌ಎ) ಪ್ರಕಟಣೆಯಲ್ಲಿ ತಿಳಿಸಿದೆ.

ಬ್ಯಾಸ್ಕೆಟ್‌ಬಾಲ್ ಹರ್ಷನ್, ನಿಧಿ ಆಯ್ಕೆ

ಬೆಂಗಳೂರು: ಕೋಲ್ಕತ್ತದಲ್ಲಿ ಇದೇ 29 ರಿಂದ ಡಿ.5ರವರೆಗೆ ನಡೆಯಲಿರುವ ರಾಷ್ಟ್ರೀಯ ಯೂತ್ ಬ್ಯಾಸ್ಕೆಟ್ ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಆಡಲಿರುವ ಕರ್ನಾಟಕದ ಬಾಲಕ ಮತ್ತು ಬಾಲಕಿಯರ ತಂಡಗಳನ್ನು ಪ್ರಕಟಿಸಲಾಗಿದೆ.

ತಂಡಗಳು ಇಂತಿವೆ: ಬಾಲಕರು: ಹರ್ಷನ್ ಯತೀಶ್, ಆದಿತ್ಯ ವಿಠಲ್ ಶೆಣೈ, ವೈಭವಗೌಡ, ಕುಶಾಲ ಸಿಂಗ್, ದೇವಚರಣ, ಅಕ್ಷತ್, ದೀಕ್ಷಿತ್ ಅಮಿನ್, ದೇವ್ ಪೂರ್ಣಿಯಾ, ಸಮರ್ಥ್ ಮಣ್ಣೂರ, ಹರ್ಷಿತ್, ರಮೇಶ್ ಬೆಕೆರಿ, ಸಮ್ವೇಗ್ ರಾಥೋಡ್. ಕೋಚ್: ಬಿ.ಸಿ. ಉಮಾಶಂಕರ್, ಸಹಾಯಕ ಕೋಚ್: ಎಸ್.ಕೆ. ಪ್ರಮೋದ್, ಮ್ಯಾನೇಜರ್: ಬಿ.ಎಸ್. ಶ್ರೀಧರ್.

ಬಾಲಕಿಯರು: ನಿಧಿ ಉಮೇಶ್, ದೇವಪ್ರಿಯಾ, ಶ್ರಾವಣಿ ಎಸ್, ಪಿ. ಆಂಚಲ್, ತರುಶ್ರೀ ತರುಣ್, ನಿಲಯಾ ರೆಡ್ಡಿ, ಪಿ. ಸ್ವಾತಿ, ಎಸ್. ಅದಿತಿ, ಆರ್. ಸಮೀಹಾ, ಪಿ. ದೀಪಿಕಾ, ಎಸ್. ಮೆಹೆಕ್, ವಿ. ಶ್ರೇಯಾ. ಕೋಚ್: ಕೆ. ಸತ್ಯನಾರಾಯಣ, ಮ್ಯಾನೇಜರ್: ಪವಿತ್ರಾ ಎನ್. ಗೌಡ.

ಸಿಂಧು, ಲಕ್ಷ್ಯ ಸೇನ್ ಶುಭಾರಂಭ

ಲಕ್ಷ್ಯ ಸೇನ್

ಲಖನೌ (ಪಿಟಿಐ): ಅಗ್ರ ಶ್ರೇಯಾಂಕದ ಪಿ.ವಿ.ಸಿಂಧು ಮತ್ತು ಲಕ್ಷ್ಯ ಸೇನ್ ಅವರು ಬುಧವಾರ ನೇರ ಗೇಮ್‌ಗಳ ಗೆಲುವಿನೊಡನೆ, ಸೈಯದ್ ಮೋದಿ ಅಂತರರಾಷ್ಟ್ರೀಯ ಸೂಪರ್ 300 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಕ್ರಮವಾಗಿ ಮಹಿಳಾ ಮತ್ತು ಪುರುಷರ ಸಿಂಗಲ್ಸ್ ಎರಡನೇ ಸುತ್ತನ್ನು ತಲುಪಿದರು.

ಎರಡು ಬಾರಿಯ ಒಲಿಂಪಿಕ್ ಪದಕ ವಿಜೇತೆ ಸಿಂಧು ಮೊದಲ ಸುತ್ತಿನ್ಲಿ 21–17, 21–15 ರಿಂದ ಸ್ವದೇಶದ ಉದಯೋನ್ಮುಖ ಆಟಗಾರ್ತಿ ಅನ್ಮೋಲ್ ಖಾರ್ಬ್ ಅವರನ್ನು ಸೋಲಿಸಿದರು.

2021ರ ವಿಶ್ವ ಚಾಂಪಿಯನ್‌ಷಿಪ್ ಕಂಚಿನ ಪದಕ ವಿಜೇತ ಲಕ್ಷ್ಯ ಪುರುಷರ ಸಿಂಗಲ್ಸ್‌ನಲ್ಲಿ 21–12, 21–12ರಲ್ಲಿ ಮಲೇಷ್ಯಾದ ಕ್ವಾಲಿಫೈಯರ್ ಶೋಲೇ ಐದಿಲ್ ಅವರನ್ನು ಹಿಮ್ಮೆಟ್ಟಿಸಿದರು.

ಸಿಂಧು ಎರಡನೇ ಸುತ್ತಿನಲ್ಲಿ ಸ್ವದೇಶದವರೇ ಆದ ಇರಾ ಶರ್ಮ ಅವರನ್ನು ಎದುರಿಸಲಿದ್ದಾರೆ. ಇರಾ ಇನ್ನೊಂದು ಪಂದ್ಯದಲ್ಲಿ 21–13, 21–19 ರಿಂದ ದೀಪ್ತಿಕಾ ಸಿಂಗ್ ಅವರನ್ನು ಮಣಿಸಿದರು. ಲಕ್ಷ್ಯ ಎರಡನೆ ಸುತ್ತಿನಲ್ಲಿ ರವಿ ಅಥವಾ ಇಸ್ರೇಲ್‌ನ ಡೇನಿಯಲ್ ಡುಬೊವೆಂಕೊ ಅವರನ್ನು ಎದುರಿಸಲಿದ್ದಾರೆ.

ಪುರುಷರ ಸಿಂಗಲ್ಸ್‌ನಲ್ಲಿ ಮೂರನೇ ಶ್ರೇಯಾಂಕದ ಕಿರಣ್ ಜಾರ್ಜ್, ಎಂಟನೇ ಶ್ರೇಯಾಂಕದ ಆಯುಷ್ ಶೆಟ್ಟಿ ಮತ್ತು ಮೀರಬಾ ಲುವಾಂಗ್ ಮೈಸ್ನಮ್ ಅವರೂ ಎರಡನೇ ಸುತ್ತು ತಲುಪಿದರು.

ಮಹಿಳೆಯರ ಸಿಂಗಲ್ಸ್‌ನಲ್ಲಿ ಎರಡನೇ ಶ್ರೇಯಾಂಕದ ಮಾಳವಿಕಾ ಬನ್ಸೋಡ್, ಐದನೇ ಶ್ರೇಯಾಂಕದ ಅನುಪಮಾ ಉಪಾಧ್ಯಾಯ, ಇಶಾರಾಣಿ ಬರೂವಾ, ದೇವಿಕಾ ಸಿಹಾಗ್, ಉನ್ನತಿ ಹೂಡ ಮತ್ತು ಶ್ರೀಯಾಂಶಿ ವಲಿಶೆಟ್ಟಿ ಅವರೂ ಮುನ್ನಡೆದರು.

ಪ್ರೊ ಕಬಡ್ಡಿ: ಡಿಸೆಂಬರ್ 26ರಿಂದ 29ರವರೆಗೆ ಪಂದ್ಯಗಳ ನಿಗದಿ

ಪುಣೆಯಲ್ಲಿ ಪ್ಲೇಆಫ್, ಫೈನಲ್

ಪುಣೇರಿ ಪಲ್ಟನ್ ಆಟಗಾರರಿಂದ ತಪ್ಪಿಸಿಕೊಂಡು 'ಗಡಿರೇಖೆ' ಮುಟ್ಟುವ ಯತ್ನದಲ್ಲಿರುವ ಹರಿಯಾಣ ಸ್ಟೀಲರ್ಸ್ ತಂಡದ ರೈಡರ್

ಪುಣೆ: ಪ್ರೊ ಕಬಡ್ಡಿ ಲೀಗ್‌ನ 11ನೇ ಆವೃತ್ತಿಯ ಪ್ಲೇ ಆಫ್ ಮತ್ತು ಫೈನಲ್ ಪಂದ್ಯಗಳು ಡಿಸೆಂಬರ್ 26ರಿಂದ 29ರವರೆಗೆ ಪುಣೆಯ ಬಾಲೇವಾಡಿ ಸ್ಪೋರ್ಟ್ಸ್ ಕಾಂಪ್ಲೆಕ್ಸ್‌ನ ಬ್ಯಾಡ್ಮಿಂಟನ್ ಹಾಲ್‌ನಲ್ಲಿ ನಡೆಯಲಿದೆ ಎಂದು ಪಿಕೆಎಲ್ ಆಯೋಜಕರಾದ ಮಶಾಲ್ ಸ್ಪೋರ್ಟ್ಸ್ ಬುಧವಾರ ತಿಳಿಸಿದೆ. ಫೈನಲ್ ಪಂದ್ಯ ಡಿಸೆಂಬರ್ 29ರಂದು ನಡೆಯಲಿದೆ.

ಲೀಗ್‌ನಲ್ಲಿ ಮೊದಲ ಎರಡು ಸ್ಥಾನ ಪಡೆಯುವ ತಂಡಗಳು ನೇರವಾಗಿ ಸೆಮಿಫೈನಲ್‌ಗೆ ಅರ್ಹತೆ ಪಡೆಯಲಿವೆ. ಮೂರರಿಂದ ಆರರವರೆಗಿನ ಸ್ಥಾನ ಪಡೆದ ತಂಡಗಳು ಎಲಿಮಿನೇಷನ್ ಹಂತದಲ್ಲಿ ಆಡಲಿವೆ ಮೂರನೇ ಸ್ಥಾನ ಗಳಿಸಿದ ತಂಡವು, ಆರನೇ ಸ್ಥನ ಗಳಿಸಿದ ತಂಡವನ್ನು ಮೊದಲ ಎಲಿಮಿನೇಟರ್ ಪಂದ್ಯದಲ್ಲಿ ಎದುರಿಸಲಿದೆ. ನಾಲ್ಕನೇ ಸ್ಥಾನ ಗಳಿಸಿದ ತಂಡ ಮತ್ತು ಐದನೇ ಸ್ಥಾನ ಗಳಿಸಿದ ತಂಡ ಎಲಿಮಿನೇಟರ್ 2 ಪಂದ್ಯದಲ್ಲಿ ಮುಖಾಮುಖಿ ಆಗಲಿವೆ.

ಎಲಿಮಿನೇಟರ್ 1ರ ವಿಜೇತ ತಂಡವು ಮೊದಲ ಸೆಮಿಫೈನಲ್ ನಲ್ಲಿ, ಲೀಗ್‌ನಲ್ಲಿ ಮೊದಲ ಸ್ಥಾನ ಗಳಿಸಿದ ತಂಡವನ್ನು ಎದುರಿಸಲಿದೆ. ಎಲಿಮಿನೇಟರ್ 2ರಲ್ಲಿ ವಿಜೇತ ತಂಡವು ಎರಡನೇ ಸೆಮಿಫೈನಲ್‌ನಲ್ಲಿ ಲೀಗ್‌ನಲ್ಲಿ ಎರಡನೇ ಸ್ಥಾನ ಗಳಿಸಿದ ತಂಡದ ಎದುರು ಆಡಲಿದೆ. ಈ ಪಂದ್ಯಗಳು ಡಿಸೆಂಬರ್ 27ರಂದು ನಡೆಯಲಿವೆ. 29ರಂದು ಗ್ರ್ಯಾಂಡ್ ಫಿನಾಲೆ ನಡೆಯಲಿದೆ.

ಎರಡನೇ ಹಂತದ ಲೀಗ್ ಈಗ ನೊಯ್ಡಾದಲ್ಲಿ ನಡೆಯುತ್ತಿದ್ದು ಡಿಸೆಂಬರ್ 1ರಂದು ಕೊನೆಗೊಳ್ಳಲಿದೆ. ನಂತರ ಪುಣೆಯಲ್ಲಿ ಲೀಗ್ ಮತ್ತು ನಂತರ ಪ್ಲೇಆಫ್ ನಡೆಯಲಿವೆ.

'ಗುಣಮಟ್ಟದ ಕಬಡ್ಡಿ ಆಟದ ಹಿನ್ನೆಲೆಯನ್ನು ಹೊಂದಿರುವ ಪುಣೆಯಲ್ಲಿ ಪ್ಲೇ ಆಫ್, ಫೈನಲ್ ಪಂದ್ಯಗಳನ್ನು ನಡೆಸುತ್ತಿರುವುದರಿಂದ ನಮಗೆ ಸಂತಸವಾಗಿದೆ' ಎಂದು ಮಶಾಲ್ ಸ್ಪೋರ್ಟ್ಸ್‌ನ ಬಿಸಿನೆಸ್ ಹೆಡ್ ಅನುಪಮ್ ಗೋಸ್ವಾಮಿ ತಿಳಿಸಿದರು.

ಸ್ಟೀಲರ್ಸ್ ಅಗ್ರಸ್ಥಾನ ಭದ್ರ

ನೊಯ್ಡಾ: ಲೆಫ್ಟ್ ರೈಡರ್ ಶಿವಂ ಪತಾರೆ (13) ಅವರ ಸೂಪರ್ ಟೆನ್ ಸಾಹಸದಿಂದ ಹರಿಯಾಣ ಸ್ಟೀಲರ್ಸ್ ತಂಡ, ಪ್ರೊ ಕಬಡ್ಡಿ ಲೀಗ್ ಪಂದ್ಯದಲ್ಲಿ ಬುಧವಾರ ಪುಣೇರಿ ಪಲ್ಟನ್ ತಂಡವನ್ನು 38–28 ರಲ್ಲಿ ಹತ್ತು ಅಂಕಗಳಿಂದ ಸೋಲಿಸಿತು. ಲೀಗ್‌ನಲ್ಲಿ 11ನೇ ಗೆಲುವಿನೊಡನೆ ಅಗ್ರಸ್ಥಾನವನ್ನು ಇನ್ನಷ್ಟು ಬಲಪಡಿಸಿಕೊಂಡಿತು.

ಸ್ಟೀಲರ್ಸ್ ತಂಡ 14 ಪಂದ್ಯಗಳನ್ನಾಡಿದ್ದು ಒಟ್ಟು 56 ಪಾಯಿಂಟ್ಸ್ ಕಲೆಹಾಕಿದೆ. ಹಾಲಿ ಚಾಂಪಿಯನ್ ಪುಣೇರಿ ತಂಡ ಐದನೇ ಸೋಲಿನೊಡನೆ ಆರನೇ ಸ್ಥಾನಕ್ಕಿಳಿಯಿತು.ಪುಣೇರಿ ಪರ ಪಂಕಜ್ ಮೋಹಿತೆ 11 ಪಾಯಿಂಟ್ಸ್ ಗಳಿಸಿದರು.

ಗುಜರಾತ್ ಜೈಂಟ್ಸ್ ತಂಡ ಇನ್ನೊಂದು ಪಂದ್ಯದಲ್ಲಿ 39–37 ಪಾಯಿಂಟ್‌ಗಳಿಂದ ಬೆಂಗಾಲ್ ವಾರಿಯರ್ಸ್ ತಂಡವನ್ನು ಸೋಲಿಸಿತು.